ಶುಕ್ರವಾರ, ಮೇ 3, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ ‘ಹೀರಾಮಂಡಿ: ದಿ ಡೈಮಂಡ್ ಬಜಾರ್’ ವೆಬ್‌ಸಿರೀಸ್‌ನ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಸೋನಾಕ್ಷಿ ಸಿನ್ಹಾ ಪಾಲ್ಗೊಂಡಿದ್ದರು



ಪ್ರಜ್ವಲ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ • ಕಾರ್ತಿಕ್ ಮಲೇಷ್ಯಾಗೆ ಕಳುಹಿಸಿದ್ದು ಏಕೆ: ಕುಮಾರಸ್ವಾಮಿ

ಡಿಕೆಎಸ್, ಎಚ್‌ಡಿಕೆ ವಾಕ್ಸಮರ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ಕುರಿತಂತೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ, ಸಂಸದ ಡಿ.ಕೆ. ಸುರೇಶ್ ಮಧ್ಯೆ ವಾಕ್ಸಮರ ಮುಂದುವರಿದಿದೆ.

‘ಪೆನ್‌ಡ್ರೈವ್ ಪ್ರಕರಣದ ಪ್ರಮುಖ ಸೂತ್ರಧಾರ, ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ಅವರನ್ನು ಮಲೇಷ್ಯಾಕ್ಕೆ ಕಳುಹಿಸಿದ್ದು ಏಕೆ? ಅಲ್ಲಿಗೆ ಹೋಗಲು ಸಹಾಯ ಮಾಡಿದ್ದು ಯಾರು ಎಂದು ಪ್ರಶ್ನಿಸಿರುವ ಕುಮಾರಸ್ವಾಮಿ, ಇದೆಲ್ಲ ಚಿಲ್ಲರೆ ಬ್ರದರ್ಸ್ ಕೆಲಸ. 420ಗಳಷ್ಟೇ ಇಂತಹ ಕೆಲಸ ಮಾಡಲು ಸಾಧ್ಯ’ ಎಂದು ಆರೋಪಿಸಿದ್ದಾರೆ.

‘ಪ್ರಕರಣದ ಹಿಂದೆ ಯಾರಿದ್ದಾರೆ ಎನ್ನುವುದು ಗೊತ್ತಿದೆ. ಮಲೇಷ್ಯಾಕ್ಕೆ ಕಳುಹಿಲು ಯೋಜನೆ ಸಿದ್ಧಪಡಿಸಿದವರು ಯಾರು ಎನ್ನುವುದನ್ನು ಮೊದಲು ಬಹಿರಂಗಪಡಿಸಲಿ’ ಎಂದು ಸವಾಲು ಹಾಕಿದ್ದಾರೆ.

ಕುಮಾರಸ್ವಾಮಿ ಮಾತಿಗೆ ಪ್ರತಿಕ್ರಿಯೆ ನೀಡಿರುವ ಡಿ.ಕೆ.ಸುರೇಶ್, ‘ರಾಜ್ಯವೇ ತಲೆ ತಗ್ಗಿಸುವ 420 ಕೆಲಸ ಮಾಡಿರುವುದು ಅವರ ಮಗ. ಇದು ಚಿಲ್ಲರೆ ಕೆಲಸವಾ’ ಎಂದು ಮರು ಪ್ರಶ್ನಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಕುಮಾರಸ್ವಾಮಿ ಮೊದಲು ಹೆಣ್ಣು-ಮಕ್ಕಳಿಗೆ ಗೌರವ ಕೊಡುವುದನ್ನು ಕಲಿಯಲಿ. ನಮ್ಮ ಬಗ್ಗೆ ಮಾತನಾಡದೆ ಇದ್ದರೆ ಅವರಿಗೆ ಊಟ ಸೇರುವುದೇ ಇಲ್ಲ. ಪ್ರತಿ ವಿಷಯಕ್ಕೂ ನಮ್ಮ ಹೆಸರು ತರುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜತಾಂತ್ರಿಕ ಪಾಸ್‌ಪೋರ್ಟ್: ಜರ್ಮನಿಗೆ ವೀಸಾ ಅಗತ್ಯವಿಲ್ಲ

ನವದೆಹಲಿ (ಪಿಟಿಐ): ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು ಜರ್ಮನಿಗೆ ಪ್ರಯಾಣಿಸುವ ಕುರಿತು ಯಾವುದೇ ಅನುಮತಿಯನ್ನು ಕೇಳಿಲ್ಲ ಅಥವಾ ನೀಡಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಗುರುವಾರ ಸ್ಪಷ್ಟಪಡಿಸಿದೆ.

ಸಂಸದರು ರಾಜತಾಂತ್ರಿಕ ಪಾಸ್‌ಪೋರ್ಟ್ ಹೊಂದಲು ಅರ್ಹರಾಗಿರುತ್ತಾರೆ. ಈ ರೀತಿಯ ಪಾಸ್‌ಪೋರ್ಟ್ ಹೊಂದಿರುವವರು ಜರ್ಮನಿಗೆ ಪ್ರಯಾಣಿಸಲು ಯಾವುದೇ ವೀಸಾ ಅಗತ್ಯವಿಲ್ಲ ಎಂದು ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪ್ರಜ್ವಲ್ ಅವರ ಪ್ರಯಾಣಕ್ಕೆ ಸಂಬಂಧಿಸಿದಂತೆ ಸಚಿವಾಲಯ ಯಾವುದೇ ವೀಸಾ ಟಿಪ್ಪಣಿಯನ್ನು ನೀಡಿಲ್ಲ. ಅವರು ತಮ್ಮ ರಾಜತಾಂತ್ರಿಕ ಪಾಸ್‌ಪೋರ್ಟ್ ಬಳಸಿಕೊಂಡೇ ಜರ್ಮನಿಗೆ ಪ್ರಯಾಣಿಸಿದ್ದಾರೆ. ಸಚಿವಾಲಯ ಅವರಿಗೆ ಬೇರೆ ಯಾವುದೇ ದೇಶಕ್ಕೆ ವೀಸಾ ಟಿಪ್ಪಣಿ ನೀಡಿಲ್ಲ’ ಎಂದು ಅವರು ಪ್ರತಿಕ್ರಿಯಿಸಿದರು.

ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸುವಂತೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೇಡಿಕೆಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಯಾವುದೇ ವ್ಯಕ್ತಿಯ ಪಾಸ್‌ಪೋರ್ಟ್‌ನ ಸಂಭವನೀಯ ರದ್ದತಿಗೆ ಸಂಬಂಧಿಸಿದಂತೆ ಪಾಸ್‌ಪೋರ್ಟ್ ಕಾಯ್ದೆ 1967ರಲ್ಲಿ ಕೆಲ ನಿಬಂಧನೆಗಳಿವೆ. ಅದರ ಪ್ರಕಾರ ನ್ಯಾಯಾಲಯದ ನಿರ್ದೇಶನದ ಮೇರೆಗೆ ಮಾತ್ರ ಇಂತಹ ಕ್ರಮ ಕೈಗೊಳ್ಳಲು ಸಾಧ್ಯ’ ಎಂದರು.

‘ಈ ನಿಟ್ಟಿನಲ್ಲಿ ಯಾವುದೇ ನ್ಯಾಯಾಲಯದಿಂದ ಯಾವುದೇ ನಿರ್ದೇಶನಗಳನ್ನು ಸಚಿವಾಲಯ ಸ್ವೀಕರಿಸಿಲ್ಲ’ ಎಂದು ಅವರು ಉತ್ತರಿಸಿದರು.

ಅಂತರರಾಷ್ಟ್ರೀಯ ಮಾಧ್ಯಮಗಳಲ್ಲೂ ಪ್ರಜ್ವಲ್ ರೇವಣ್ಣ ಸುದ್ದಿ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪಗಳು ಅಂತರರಾಷ್ಟ್ರೀಯ ಸುದ್ದಿಮಾಧ್ಯಮಗಳಲ್ಲಿಯೂ ವಿಸ್ತೃತವಾಗಿ ವರದಿಯಾಗಿವೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕ ಓದುಗರನ್ನು, ವೀಕ್ಷಕರನ್ನು ಹೊಂದಿರುವ ಬಿಬಿಸಿ ಹಾಗೂ ಅಲ್‌ಜಜೀರಾ ತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರಜ್ವಲ್ ಪ್ರಕರಣದ ಬಗ್ಗೆ ವಿವರವಾದ ವರದಿ ಪ್ರಕಟಿಸಿವೆ. ಪ್ರಜ್ವಲ್ ಪ್ರಕರಣವು ಬಹಿರಂಗವಾದ ದಿನದಿಂದಲೂ ರಾಷ್ಟ್ರ ಮಟ್ಟದ ಸುದ್ದಿಮಾಧ್ಯಮಗಳಲ್ಲಿ ವರದಿ-ಯಾಗುತ್ತಲೇ ಇದೆ. ಆದರೆ, ಅಂತರರಾಷ್ಟ್ರೀಯ ಸುದ್ದಿ ಮಾಧ್ಯಮಗಳು ಕೂಡ ಇದನ್ನು ವರದಿ ಮಾಡಿವೆ. ಅಲ್ ಜಜೀರಾ ಸುದ್ದಿವಾಹಿನಿಯು, ಈ ಪ್ರಕರಣದಿಂದಾಗಿ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗಬಹುದು ಎಂಬ ಬಗ್ಗೆ ರಾಜಕೀಯ ತಜ್ಞರ ಅಭಿಪ್ರಾಯವನ್ನು ಕೂಡ ಪ್ರಕಟಿಸಿದೆ.

ಕೇಂದ್ರವೇ ರಾಜತಾಂತ್ರಿಕ ಪಾಸ್‌ಪೋರ್ಟ್ ಕೊಟ್ಟಿದೆ: ಪರಮೇಶ್ವರ ತಿರುಗೇಟು

ಕಲಬುರಗಿ: ‘ಲೈಂಗಿಕ ಹಗರಣದ ಆರೋಪಿ, ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಕೇಂದ್ರ ಸರ್ಕಾರ ರಾಜತಾಂತ್ರಿಕ (ಡಿಪ್ಲೊಮ್ಯಾಟಿಕ್) ಪಾಸ್‌ಪೋರ್ಟ್ ಕೊಟ್ಟಿದ್ದರಿಂದಾಗಿ ರಾತ್ರೋರಾತ್ರಿ ದೇಶ ಬಿಟ್ಟು ಹೋಗಿದ್ದಾರೆ. ಇಲ್ಲಿಯೇ ಇದ್ದಿದ್ದರೆ ಇಷ್ಟೊತ್ತಿಗೆ ಬಂಧಿಸುತ್ತಿದ್ದೆವು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ತಿರುಗೇಟು ನೀಡಿದರು.

‘ಇಲ್ಲಿ ನಿಮ್ಮ ಸರ್ಕಾರ ಇದೆ. ನೀವು ಕ್ರಮ ಕೈಗೊಳ್ಳಬೇಕಾಗಿತ್ತು’ ಎಂದ ಅಮಿತ್ ಶಾ ಅವರ ಹೇಳಿಕೆಗೆ ನಗರದಲ್ಲಿ ಗುರುವಾರ ಪ್ರತಿಕ್ರಿಯಿಸಿದ ಪರಮೇಶ್ವರ, ‘ದೂರು ಕೊಡುವುದು ಗಮನಕ್ಕೆ ಬರುತ್ತಿದ್ದಂತೆ ರಾಜತಾಂತ್ರಿಕ ಪಾಸ್‌ಪೋರ್ಟ್ ನೆರವಿನಿಂದ ದೇಶ ಬಿಟ್ಟು ಹೋಗಿದ್ದಾರೆ. ವಿದೇಶಕ್ಕೆ ಹೋಗಿರುವ ಟಿಕೆಟ್‌ಗಳು ಲಭ್ಯವಾಗಿವೆ. ಕೇಂದ್ರ ಸರ್ಕಾರವು ಮುಖ್ಯಮಂತ್ರಿಗಳ ಮನವಿ ಪತ್ರವನ್ನು ಪರಿಗಣಿಸಿ, ಪ್ರಜ್ವಲ್ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಮಾಡಿದರೆ ತನಿಖೆಗೆ ಅನುಕೂಲವಾಗುತ್ತದೆ’ ಎಂದರು. ‘ಲುಕ್‌ಔಟ್ ನೋಟಿಸ್ ಗಡುವು ಮುಗಿಯುವುದರ ಒಳಗೆ ಆರೋಪಿಗಳು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳ ಮುಂದೆ ಹಾಜರಾಗದಿದ್ದರೆ ಬಂಧಿಸಲಾಗುವುದು ಎಂದು ಹೇಳಿದರು.

ಸುದ್ದಿ 2 ನಿಮಿಷ

‘ಮೋದಿ ಸಾವು ಬಯಸುವಷ್ಟು ನೀಚತನಕ್ಕೆ ಇಳಿದ ಕಾಂಗ್ರೆಸ್’

ಹಾವೇರಿ: ‘ಪ್ರಧಾನಿ ನರೇಂದ್ರ ಮೋದಿಯವರ ಸಾವು ಬಯಸುವಷ್ಟು ನೀಚಮಟ್ಟಕ್ಕೆ ಕಾಂಗ್ರೆಸ್ ಪಕ್ಷ ಇಳಿದಿದೆ. ಪ್ರತಿಸ್ಪರ್ಧಿಯ ಸಾವು ಬಯಸಬಾರದು. ಕೀಳು ಮಟ್ಟದ ಟೀಕೆ ಮಾಡಿದಷ್ಟೂ ಮೋದಿ ದೊಡ್ಡವರಾಗಿದ್ದಾರೆ. ಮತ್ತೆ ಮತ್ತೆ ಗೆದ್ದು, ಅವರ ಆಯಸ್ಸು ಹೆಚ್ಚಾಗುತ್ತದೆ’ ಎಂದು ಹಾವೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದರು.



‘ಮೋದಿ ಸತ್ತರೆ ಯಾರೂ ಪ್ರಧಾನಿ ಆಗಲ್ಲವೇ’ ಎಂಬ ಕಾಂಗ್ರೆಸ್ ಶಾಸಕ ರಾಜು ಕಾಗೆ ಅವರ ಹೇಳಿಕೆಗೆ ತಾಲ್ಲೂಕಿನ ಕೋಣನತಂಬಿಗಿ ಗ್ರಾಮದಲ್ಲಿ ಪ್ರತಿ-ಕ್ರಿಯಿಸಿದ ಅವರು, ‘ಮೋದಿ ಅಲೆ ಈಗ ಸುನಾಮಿಯಾಗಿದೆ. ಅವರು ಕೊಚ್ಚಿ ಹೋಗುತ್ತಾರೆ’ ಎಂದರು.

‘ಸಂವಿಧಾನ ಬದಲಾವಣೆಗೆ ಬಿಜೆಪಿ ಮುಂದಾಗಿದೆ’ ಎಂಬ ಮಾಜಿ ಶಾಸಕ ನೆಹರು ಓಲೇಕಾರ ಹೇಳಿಕೆಗೆ, ‘ಓಲೇಕಾರ ಮೊದಲು ನಮ್ಮ ಪಕ್ಷದಲ್ಲೇ ಇದ್ದರು. ಆಗ ಸಂವಿಧಾನ ಬದಲಾಗಿತ್ತಾ? ಸಂವಿಧಾನ ಬದಲಿಸುವ ಪ್ರಶ್ನೆಯೇ ಇಲ್ಲ’ ಎಂದರು.

ಬೆಳಗಾವಿ ವರದಿ: ಬೆಳಗಾವಿಯಲ್ಲಿ ಬಿಜೆಪಿ ಮುಖಂಡ ಸಿ.ಟಿ.ರವಿ ಮಾತನಾಡಿ, ‘ಚುನಾವಣೆ ಗೆಲ್ಲಲು ಸಾಧ್ಯವಾಗದೇ, ಶಾಸಕ ಕಾಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಸಾವು ಬಯಸುತ್ತಿರುವುದು ಆಘಾತಕಾರಿ’ ಎಂದು ಪ್ರತಿಕ್ರಿಯಿಸಿದರು.

ಧೈರ್ಯವಿದ್ದರೆ ಉಪ ಚುನಾವಣೆ ಎದುರಿಸಿ: ಸುನೀಲ್ ಕುಮಾರ್

ಶಿರಸಿ (ಉತ್ತರ ಕನ್ನಡ): ‘ಯಲ್ಲಾಪುರ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ್‌ಗೆ ಬಿಜೆಪಿಯಲ್ಲಿ ಇರಲು ಇಷ್ಟವಿಲ್ಲದಿದ್ದರೆ, ರಾಜೀನಾಮೆ ನೀಡಿ ಉಪಚುನಾವಣೆ ಎದುರಿಸಲಿ’ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ, ಶಾಸಕ ವಿ.ಸುನೀಲ್ ಕುಮಾರ್ ಸವಾಲು ಹಾಕಿದರು.

‘ಹೆಬ್ಬಾರಗೆ ಬಿಜೆಪಿ ಎಲ್ಲ ಅವಕಾಶ ನೀಡಿದೆ. ಏಕೆ ಪ್ರಚಾರಕ್ಕೆ ಬರುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು. ಬಿಜೆಪಿಗೆ ಕಾರ್ಯಕರ್ತರೇ ಶಕ್ತಿಯಾಗಿದ್ದು, ಹೆಬ್ಬಾರ್‌ಗೆ ಬೇರೆಡೆ ಹೋಗಿ ಗೆಲ್ಲುವ ವಿಶ್ವಾಸವಿದ್ದರೆ ಹೋಗಲಿ’ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.



ಪಂಜಿನ ಕಿಡಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸುವಂತೆ ಆಗ್ರಹಿಸಿ ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿಯ ಸದಸ್ಯರು ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ಗುರುವಾರ ಪಂಜಿನ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ

ಹಾಸನ: ಕಾಂಗ್ರೆಸ್, ಜೆಡಿಎಸ್ ಮಧ್ಯೆ ಆರೋಪ, ಪ್ರತ್ಯಾರೋಪ

ಪೆನ್‌ಡ್ರೈವ್ ಹಂಚಿದ್ದು ಯಾರು?

ಪ್ರಜಾವಾಣಿ ವಾರ್ತೆ

ಹಾಸನ: ಪ್ರಜ್ವಲ್ ರೇವಣ್ಣ ಅವರಿಗೆ ಸೇರಿದ್ದೆನ್ನಲಾದ ಲೈಂಗಿಕ ದೌರ್ಜನ್ಯದ ವಿಡಿಯೊಗಳನ್ನು ಪೆನ್‌ಡ್ರೈವ್ ಮೂಲಕ ಹಂಚಿದ್ದು ಯಾರೆಂಬ ಚರ್ಚೆ ಜಿಲ್ಲೆಯಲ್ಲಿ ಜೋರಾಗಿದೆ.

‘ನನ್ನ ಬಳಿ ಇದ್ದ ಪೆನ್‌ಡ್ರೈವ್ ಅನ್ನು ವಕೀಲ ದೇವರಾಜೇಗೌಡ-ರಿಗೆ ಬಿಟ್ಟರೆ ಯಾರಿಗೂ ನೀಡಿಲ್ಲ’ ಎಂದು ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್, ವಿಡಿಯೊ ಸಂದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಅದನ್ನು ನಿರಾಕರಿಸಿರುವ ದೇವರಾಜೇಗೌಡ, ‘ವಿಡಿಯೊ ಹಂಚುವುದಿದ್ದರೆ, ವಿಧಾನಸಭೆ ಚುನಾವಣೆ ಸಂದರ್ಭದಲ್ಲಿಯೇ ಮಾಡುತ್ತಿದ್ದೆ. ಎಸ್‌ಐಟಿ ತನಿಖೆಯಿಂದ ಸತ್ಯ ಹೊರಬರಲು ಸಾಧ್ಯವಿಲ್ಲ. ಈ ಬಗ್ಗೆ ಸಿಬಿಐ ತನಿಖೆಯಾಗಬೇಕು’ ಎಂದು ಒತ್ತಾಯಿಸಿದ್ದಾರೆ.

ಈ ಮಧ್ಯೆ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಲಿಂಗೇಶ್, ‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೊಳೆನರಸೀಪುರ ತಾಲ್ಲೂಕಿನ ಪೊಲೀಸರ ಮೇಲೆ ಒತ್ತಡ ಹೇರಿ, ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅವರೇ ಇದಕ್ಕೆಲ್ಲ ಕಾರಣ’ ಎಂದು ಆರೋಪಿಸಿದ್ದಾರೆ. ಆದರೆ, ಇದನ್ನು ಕಾಂಗ್ರೆಸ್ ಜಿಲ್ಲಾ ಘಟಕದ ವಕ್ತಾರ ದೇವರಾಜೇಗೌಡ ನಿರಾಕರಿಸಿದ್ದಾರೆ.

ಪ್ರತಿಭಟನೆ, ಜೆಡಿಎಸ್ ಮುಖಂಡರ ಖಂಡನೆ: ‘ಪ್ರಜ್ವಲ್ ಅವರನ್ನು ಬಂಧಿಸಬೇಕು’ ಎಂದು ಆಗ್ರಹಿಸಿ ನಗರದಲ್ಲಿ ಗುರುವಾರ ಬಿಎಸ್ಪಿ, ಅಂಬೇಡ್ಕರ್ ಬ್ರಿಗೇಡ್, ಎಬಿವಿಪಿ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಈ ನಡುವೆ, ಜೆಡಿಎಸ್ ಮುಖಂಡರು ನಗರದಲ್ಲಿ ಸಭೆ ನಡೆಸಿದ್ದು, ‘ಪೆನ್‌ಡ್ರೈವ್ ಹರಿದಾಡಲು ಕಾರಣರಾದವರು, ಅದಕ್ಕೆ ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸಿದವ-ರನ್ನು ಪಕ್ಷಾತೀತವಾಗಿ ಪತ್ತೆ ಹಚ್ಚಿ ಶಿಕ್ಷೆ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ಹೊಳೆನರಸೀಪುರದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ವಕೀಲರಾದ ಸೂರನಹಳ್ಳಿ ಮೋಹನ್, ಎಸ್.ಎನ್. ಶ್ರೀನಿವಾಸ್, ಎಚ್.ಆರ್. ಮಂಜುನಾಥ್, ಆರ್. ಶಿವರಾಂ, ‘ಶಾಸಕ ಎಚ್.ಡಿ.ರೇವಣ್ಣ ಹಾಗೂ ಸಂಸದ ಪ್ರಜ್ವಲ್ ಅವರ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತೆ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿಲ್ಲ. ದೂರಿನ ಅನ್ವಯ ಕಲಂಗಳನ್ನು ಹಾಕಿಲ್ಲ’ ಎಂದು ದೂರಿದ್ದಾರೆ.

ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ‘ಜಿಲ್ಲೆಯ ರಾಜಕಾರಣದಲ್ಲಿ ರೇವಣ್ಣ ಅವರಿಗೆ ಪ್ರತಿಸ್ಪರ್ಧಿಯೇ ಇಲ್ಲ. ಅವರನ್ನು ಸಿಲುಕಿಸಬೇಕು, ದುರ್ಬಲಗೊಳಿಸಬೇಕೆಂದು ಈ ಷಡ್ಯಂತ್ರ ನಡೆದಿದೆ’ ಎಂದು ಹೇಳಿದ್ದಾರೆ.

‘ಆ ಪ್ರಕರಣದ ಬಗ್ಗೆ ನಾಲ್ಕು ತಿಂಗಳ ಹಿಂದೆಯೇ ಹೇಳಿದ್ದೆ. ಯಾರೋ ಒಬ್ಬರು ಅಶ್ಲೀಲ ಚಿತ್ರ ತೋರಿಸಲು ಬಂದಿದ್ದರು. ನೋಡುವುದಿಲ್ಲ ಎಂದಿದ್ದೆ. ಸಿಕ್ಕಿರುವ ಅಧಿಕಾರವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಅಧಿಕಾರದ ದುರಹಂಕಾರ, ಹಣ, ಮದದ ಪಿತ್ತ ಏರಿ ಇವೆಲ್ಲಾ ಆಗಿವೆ’ ಎಂದು ಬಿಜೆಪಿ ಮುಖಂಡ ಎ.ಟಿ. ರಾಮಸ್ವಾಮಿ ಪ್ರತಿಕ್ರಿಯಿಸಿದ್ದಾರೆ

ಕಾರ್ತಿಕ್ ವಿರುದ್ಧ ಎಫ್‌ಐಆರ್

ಬೆಂಗಳೂರು: ‘ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಪಟ್ಟ ವಿಡಿಯೊಗಳನ್ನು ಸೃಷ್ಟಿಸಿ ಪೆನ್‌ಡ್ರೈವ್ ಸಿದ್ಧಪಡಿಸಿದ್ದ ಆರೋಪದಡಿ, ಮಾಜಿ ಚಾಲಕ ಕಾರ್ತಿಕ್ ವಿರುದ್ಧ ಹಾಸನದ ಸೆನ್ (ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್-ಬಿಜೆಪಿ ಪಕ್ಷದ ಮೈತ್ರಿ ಅಭ್ಯರ್ಥಿಯ ಚುನಾವಣೆ ಏಜೆಂಟ್ ಆಗಿರುವ ಎಂ.ಜಿ.ಪೂರ್ಣಚಂದ್ರ ತೇಜಸ್ವಿ ದೂರು ನೀಡಿದ್ದಾರೆ. ಹೊಳೆನರಸೀಪುರ ತಾಲ್ಲೂಕಿನ ಕಡವಿನ ಕೋಟೆಯ ಕಾರ್ತಿಕ್, ಪುಟ್ಟರಾಜು, ಕ್ವಾಲಿಟಿ ಬಾರ್ ಶರತ್, ನವೀನ್ ಗೌಡ ಹಾಗೂ ಚೇತನ್ ಗೌಡ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳು, ಕಾಂಗ್ರೆಸ್ ಅಭ್ಯರ್ಥಿ ಹಾಗೂ ಕಾರ್ಯಕರ್ತರ ಜೊತೆ ಸೇರಿಕೊಂಡು ಸಂಚು ರೂಪಿಸಿದ್ದರು. ಅದರಂತೆ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಪಟ್ಟ ಭಾವಚಿತ್ರ ಹಾಗೂ ವಿಡಿಯೊಗಳನ್ನು ಅಶ್ಲೀಲವಾಗಿ ಚಿತ್ರೀಕರಿಸಿ ಮಾರ್ಫಿಂಗ್ ಮಾಡಿ ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿದ್ದಾರೆ. ಇದೇ ಫೋಟೊ, ವಿಡಿಯೊಗಳನ್ನು ಹಂಚಿಕೆ ಮಾಡಿರುವುದಾಗಿ ದೂರುದಾರರು ಆರೋಪಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಪ್ರಜ್ವಲ್ ಹೆಸರು ಕೆಡಿಸಲು ಹಾಗೂ ಮತದಾರರು ಮತದಾನ ಮಾಡದಂತೆ ತಪ್ಪಿಸುವ ಉದ್ದೇಶದಿಂದ ಆರೋಪಿಗಳು ಕೃತ್ಯ ಎಸಗಿರುವುದಾಗಿ ದೂರುದಾರರು ತಿಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಪ್ರಕರಣ ಹಸ್ತಾಂತರಕ್ಕೆ ಪ್ರಕ್ರಿಯೆ: ಲೈಂಗಿಕ ದೌರ್ಜನ್ಯ ಆರೋಪ ದಡಿ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಹಾಗೂ ಪ್ರಜ್ವಲ್ ವಿರುದ್ಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ.

ಇದೀಗ, ಚಾಲಕ ಕಾರ್ತಿಕ್ ಹಾಗೂ ಇತರರ ಮೇಲೆ ದಾಖಲಾಗಿರುವ ಪ್ರಕರಣವೂ ಸದ್ಯದಲ್ಲೇ ಎಸ್‌ಐಟಿಗೆ ಹಸ್ತಾಂತರವಾಗುವ ಸಾಧ್ಯತೆ ಇದೆ. ಇದಕ್ಕೆ ಸಂಬಂಧಪಟ್ಟಂತೆ ಕಾನೂನು ಪ್ರಕ್ರಿಯೆ ನಡೆಯುತ್ತಿರುವುದಾಗಿ ಮೂಲಗಳು ತಿಳಿಸಿವೆ.

ಕೆ–ಸೆಟ್: ತಾತ್ಕಾಲಿಕ ಅಂಕಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ (ಕೆ-ಸೆಟ್) ಅಭ್ಯರ್ಥಿಗಳು ಗಳಿಸಿದ ವಿಷಯವಾರು ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಗುರುವಾರ ಪ್ರಕಟಿಸಿದೆ.

ಪತ್ರಿಕೆ-1 ಮತ್ತು ಪತ್ರಿಕೆ-2ರ ಎಲ್ಲಾ 41 ವಿಷಯಗಳ ವಿಷಯವಾರು ತಾತ್ಕಾಲಿಕ ಅಂಕಪಟ್ಟಿಯನ್ನು ಪ್ರಕಟಿಸಿದ್ದು, ಆಕ್ಷೇಪಣೆಗಳಿದ್ದಲ್ಲಿ ಮೇ 10ರ ಒಳಗೆ ಪ್ರಾಧಿಕಾರದ ಇ-ಮೇಲ್ keakset2023@gmail.com ಗೆ ಸಲ್ಲಿಸಬೇಕು.

ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಅರ್ಹತಾ ಪಟ್ಟಿ ಪ್ರಕಟಿ-ಸಲಾಗುವುದು ಎಂದು ಕೆಇಎ ಕಾರ್ಯ-ನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಕೆ-ಸೆಟ್ ಪರೀಕ್ಷೆ ಕಳೆದ ಜ.13ರಂದು ನಡೆದಿತ್ತು. ಏ.4ರಂದು ಅಂತಿಮ ಕೀ ಉತ್ತರಗಳನ್ನು ಬಿಡುಗಡೆ ಮಾಡಲಾಗಿತ್ತು.

ಪ್ರಜ್ವಲ್‌ನ ಕತ್ತರಿಸಬೇಕು ನೇಹಾ ತಂದೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೈಂಗಿಕ ದೌರ್ಜನ್ಯದ ಆರೋಪಿ, ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ತುಂಡರಿಸಬೇಕು..’ ಎಂದು ಹತ್ಯೆಯಾದ ವಿದ್ಯಾರ್ಥಿನಿ ನೇಹಾ ಅವರ ತಂದೆ ನಿರಂಜನಯ್ಯ ಹಿರೇಮಠ ಇಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪ್ರಜ್ವಲ್ ವಿಚಾರದಲ್ಲಿ ನಾನೂ ಹೋರಾಟ ಮಾಡುವೆ. ಸ್ವಯಂ ಪ್ರೇರಿತವಾಗಿ ದೂರು ನೀಡಿ ಎಂದರೂ ಅಲ್ಲಿನ ಸಂತ್ರಸ್ತೆಯರು ಹೆದರುತ್ತಿದ್ದಾರೆ. ಪ್ರಜ್ವಲ್‌ಗೆ ಯಾವ ಶಿಕ್ಷೆ ಕೊಟ್ಟರೂ ಕಡಿಮೆಯೇ. ಅವರನ್ನು ತುಂಡರಿಸಿದರೆ ಮಾತ್ರ ಸಂತ್ರಸ್ತೆಯರ ಮನಸ್ಸು ಶಾಂತವಾಗುತ್ತದೆ’ ಎಂದರು.

ಇದಕ್ಕೂ ಮುನ್ನ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಪತ್ನಿ ಗೀತಾ ಜೊತೆ ಭೇಟಿಯಾದ ಅವರು, ನ್ಯಾಯ ಕೊಡಿಸಲು ಮನವಿ ಮಾಡಿದರು. ನನ್ನ ಮಗಳನ್ನು ಕೊಂದ ಆರೋಪಿ ಕಠಿಣ ಶಿಕ್ಷೆಗೆ ಗುರಿಪಡಿಸಿ’ ಎಂದು ಕೋರಿದರು.

‘ಲಕ್ಷ್ಮಿ ಹೆಬ್ಬಾಳಕರ ಸಹೋದರಿ ಸ್ಥಾನದಲ್ಲಿ ನಿಂತು ನಮಗೆ ನ್ಯಾಯ ಕೊಡಿಸಲು ಮುಂದಾಗಿದ್ದಾರೆ. ಮುಖ್ಯಮಂತ್ರಿ ಅವರ ಬಳಿ ಮಾತನಾಡಿ ಪ್ರಕರಣವನ್ನು ಸಿಐಡಿಗೆ ವಹಿಸಿದ್ದಾರೆ. ವಿಶೇಷ ನ್ಯಾಯಾಲಯ ಕೂಡ ಸ್ಥಾಪನೆಗೆ ಕಾರಣರಾಗಿ-ದ್ದಾರೆ. ಖುದ್ದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮನೆಗೆ ಬಂದು ಸಾಂತ್ವನ ಹೇಳಿದರು. ಅವರ ನೆರವನ್ನು ಎಂದಿಗೂ ಮರೆಯಲ್ಲ’ ಎಂದರು.

ಬೆಂಗಳೂರು ನಗರ, ಕೆಜಿಎಫ್ ಸೇರಿ ವಿವಿಧೆಡೆ ಮಳೆ

ಬಿಸಿಲ ಬೇಗೆಗೆ ಮಳೆಯ ಸಿಂಚನ

ಪ್ರಜಾವಾಣಿ ವಾರ್ತೆ



ಕೆಜಿಎಫ್‌ನ ರಾಬರ್ಟಸನ್‌ಪೇಟೆ ಬಸ್ ನಿಲ್ದಾಣದ ಪಾದಚಾರಿ ರಸ್ತೆಯಲ್ಲಿ ಮಳೆ ನೀರು ಸಂಗ್ರಹವಾಗಿತ್ತು

ಕೆಜಿಎಫ್ (ಕೋಲಾರ): ಬಿಸಿಲಿನ ಬೇಗೆಯಿಂದ ಬಸವಳಿದ ತಾಲ್ಲೂಕಿನ ಜನತೆ ಗುರುವಾರ ಸಂಜೆ ಸುರಿದ ಮಳೆಯಿಂದ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ತಾಲ್ಲೂಕಿನಾದ್ಯಂತ ಸಂಜೆ ನಾಲ್ಕು ಗಂಟೆ ವೇಳೆಗೆ ಗುಡುಗು ಸಹಿತ ಸಣ್ಣಗೆ ಮಳೆ ಸುರಿಯಲಾರಂಭಿಸಿತು. ಹಲವು ದಿನಗಳಿಂದ ಹೆಚ್ಚಾದ ಬಿಸಿಲಿನ ತಾಪದಿಂದ ಪರಿತಪಿಸುತ್ತಿದ್ದ ಜನರು ಉಲ್ಲಾಸದ ನಗೆ ಬೀರಿದರು.

ತಾಲ್ಲೂಕಿನಾದ್ಯಂತ ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಇತ್ತು. ಕೆಜಿಎಫ್ ಹಾಗೂ ಸುತ್ತಮುತ್ತ ಸುಮಾರು 15 ನಿಮಿಷ ಸಾಧಾರಣ ಮಳೆ ಸುರಿಯಿತು. ಕೆಲವೆಡೆ ಕೇವಲ ಗುಡುಗಿನ ಶಬ್ದ ಮಾತ್ರ ಕೇಳಿತು. ಮಳೆ ಸುರಿಯಲಿಲ್ಲ. ಹವಾಮಾನ ಇಲಾಖೆಯು ಸೋಮವಾರ ಕೋಲಾರ ಜಿಲ್ಲೆಯಲ್ಲಿ ‘ಆರೆಂಜ್ ಅಲರ್ಟ್‌’ ಘೋಷಿಸಿತ್ತು. ನಾಲ್ಕೈದು ದಿನ ಒಣ ಹವೆ ಇರುತ್ತದೆ ಎಂದು ತಿಳಿಸಿತ್ತು. ಕೆಲವೇ ನಿಮಿಷ ಬಿದ್ದ ಮಳೆ ಮತ್ತು ತಂಗಾಳಿ ಜನರಿಗೆ ನೆಮ್ಮದಿ ತಂದಿವೆ.

ಬಿಳಿಗಿರಿರಂಗಬೆಟ್ಟದಲ್ಲಿ ಮಳೆ

(ಚಾಮರಾಜನಗರ ವರದಿ:) ಜಿಲ್ಲೆಯ ಯಳಂದೂರು, ಹನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಗುರುವಾರ ಗುಡುಗು, ಗಾಳಿ ಸಹಿತ ಮಳೆಯಾಗಿದೆ.

ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತ ಸಂಜೆ ವರ್ಷದ ಮೊದಲ ಮಳೆಯಾಗಿದೆ. ಅರ್ಧ ಗಂಟೆ ಕಾಲ ಉತ್ತಮ ಮಳೆಯಾಯಿತು. ಬಿಸಿಲಿನಿಂದ ಪರಿತಪಿಸಿದ್ದ ಜನ ಕೊಂಚ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಹನೂರು ತಾಲ್ಲೂಕಿನ ವಿವಿಧ ಭಾಗಗಳಲ್ಲೂ ಗುರುವಾರ ಮಧ್ಯಾಹ್ನ ಗುಡುಗು ಗಾಳಿ ಸಹಿತ ಮಳೆಯಾಯಿತು. ತಾಲ್ಲೂಕಿನ ಚನ್ನೂರಿನಲ್ಲಿ ಕೊಟ್ಟಿಗೆಯಲ್ಲಿದ್ದ ಮೂರು ಹಸುಗಳು ಸಿಡಿಲಿನ ಹೊಡೆತದಿಂದ ಮೃತಪಟ್ಟವು.

(ಬೆಂಗಳೂರು ವರದಿ): ಬೆಂಗಳೂರಿನ ವಿವಿಧ ಭಾಗಗಳಲ್ಲಿ ಸಂಜೆ 7.30 ರ ಸುಮಾರಿಗೆ ಮಳೆಯಾಗಿದೆ. ಸಂಜೆ ಆರಂಭವಾದ ಮಳೆ ಕೆಲವೆಡೆ ಕೆಲ ನಿಮಿಷಗಳ ಕಾಲ ಬಿರುಸಾಗಿ ಸುರಿಯಿತು.

ಬನಶಂಕರಿ, ಹಂಪಿನಗರ, ವಿಜಯನಗರ, ರಾಜರಾಜೇಶ್ವರಿನಗರ ಹಾಗೂ ನಾಯಂಡಹಳ್ಳಿ ಸುತ್ತಮುತ್ತ ಉತ್ತಮ ಮಳೆಯಾಯಿತು. ನಗರದ ಬಹುತೇಕ ಪ್ರದೇಶಗಳಲ್ಲಿ ಸುಮಾರು 10 ನಿಮಿಷ ಸಾಧಾರಣ ಮಳೆಯಾಗಿದೆ.

ಗರುಡಾಚಾರ್ಯಪಾಳ್ಯ, ಎಚ್. ಗೊಲ್ಲಹಳ್ಳಿ, ವಿಶ್ವೇಶಪುರ, ಕಾಟನ್‌ಪೇಟೆ, ಸಂಪಂಗಿರಾಮನಗರ, ಪುಲಕೇಶಿನಗರ, ಹೆಬ್ಬಾಳ, ಕುಶಾಲನಗರ, ವಿದ್ಯಾರಣ್ಯ-ಪುರ, ಜಕ್ಕೂರು, ಹೂಡಿ 0.5 ಮಿ.ಮೀ ರಿಂದ 1.5 ಮಿ.ಮೀ ಮಳೆಯಾದ ವರದಿಯಾಗಿದೆ.

ಪಠ್ಯಕ್ಕೆ ಹೊರತಾದ ಪ್ರಶ್ನೆ ಸೇರ್ಪಡೆ ಪ್ರಕರಣ: ಕೆಇಎ ವರದಿ ಸಲ್ಲಿಕೆ

ಬೆಂಗಳೂರು: ಎಂಜನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ ಪ್ರಶ್ನೆಪತ್ರಿಕೆಯಲ್ಲಿ ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಸೇರಿದ್ದ ಪ್ರಕರಣ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಉನ್ನತ ಶಿಕ್ಷಣ ಇಲಾಖೆಗೆ ವರದಿ ಸಲ್ಲಿಸಿದೆ.

ವೈದ್ಯಕೀಯ ಶಿಕ್ಷಣ ಹೊರತುಪಡಿಸಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಪ್ರತಿ ವರ್ಷ ಸರಾಸರಿ 3 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಬರೆಯತ್ತಾರೆ. ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುಸಂಗೋಪನೆ, ಯೋಗ ಮತ್ತು ನ್ಯಾಚುರೋಪಥಿ, ಬಿ ಫಾರ್ಮಾ, ಡಿ ಫಾರ್ಮಾ ಹಾಗೂ ನರ್ಸಿಂಗ್ ಕೋರ್ಸ್‌ಗಳಿಗೆ ಈ ಪ್ರವೇಶ ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳ ಆಳವಾದ ಜ್ಞಾನ ಪರೀಕ್ಷಿಸಲು ವಿಸ್ತೃತ ಪಠ್ಯಕ್ರಮ ಅನುಸರಿಸಲಾಗುತ್ತದೆ ಹೊರತು ಆಯಾ ಶೈಕ್ಷಣಿಕ ವರ್ಷದ ಪಠ್ಯಪುಸ್ತಕವನ್ನಲ್ಲ ಎಂದು ವರದಿಯಲ್ಲಿ ವಿವರಿಸಿದೆ.

ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ನಡೆಸುವ ನೀಟ್, ಐಐಟಿ ಮತ್ತಿತರ ಪ್ರವೇಶಕ್ಕೆ ನಡೆಸುವ ಜೆಇಇ ಪರೀಕ್ಷೆಗಳಿಗೆ ಇಂತಹ ಕ್ರಮವನ್ನೇ ಅನುಸರಿಸಲಾಗು-ತ್ತದೆ. ತರಬೇತಿ ಕೇಂದ್ರಗಳೂ ವಿಸ್ತೃತ ಪಠ್ಯಕ್ರಮದ ಆಧಾರದಲ್ಲೇ ವಿದ್ಯಾರ್ಥಿ-ಗಳಿಗೆ ಮಾರ್ಗದರ್ಶನ ನೀಡುತ್ತವೆ. ಆದರೆ, ಪದವಿಪೂರ್ವ ಕಾಲೇಜುಗಳಲ್ಲಿ ಮಾತ್ರ ಪಠ್ಯಪುಸ್ತಕ ಅನುಸರಿಸುತ್ತವೆ. ಪ್ರಾಧಿಕಾರದಿಂದ ಯಾವುದೇ ಲೋಪವಾಗಿಲ್ಲ ಎಂದು ವಿವರಿಸಲಾಗಿದೆ.

ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಪ್ರಕರಣ ಸಿಐಡಿಗೆ

ಕಲಬುರಗಿ: ‘ಕೋಟನೂರು (ಡಿ) ಗ್ರಾಮದ ಲುಂಬಿನಿ ಉದ್ಯಾನದಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿದ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗುವುದು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

‘ಮೂರು ತಿಂಗಳ ಹಿಂದೆ ನಡೆದಿದ್ದ ಘಟನೆಯನ್ನು ಚುನಾವಣೆಯಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಿಡುವುದಿಲ್ಲ. ಪುತ್ಥಳಿಗೆ ಅಪಮಾನ ಮಾಡಿದ್ದು ಯಾರು? ಏಕೆ ದುಷ್ಕೃತ್ಯ ಎಸಗಿದ್ದರು ಎಂಬುದು ತನಿಖೆಯಿಂದ ಬಯಲಾಗಲಿದೆ. ಅಂದು ನಡೆದಿದ್ದ ಗಲಾಟೆಯ ಬಗ್ಗೆಯೂ ತನಿಖೆಯಾಗಲಿದೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸಾಕ್ಷಿ, ಪುರಾವೆಗಳ ಕಲೆ ಹಾಕುವಲ್ಲಿ ಪೊಲೀಸ್ ತನಿಖಾ ಅಧಿಕಾರಿಗಳು ಎಡವಿ, ಸುಲಭವಾಗಿ ಜಾಮೀನು ಸಿಗುವಂತೆ ಮಾಡಿದ್ದು ಕಂಡುಬಂದರೆ, ಅವರ ಮೇಲೂ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು. ‘ಹುಸಿ ಜಾತಿ ನಿಂದನೆ ಪ್ರಕರಣಗಳು ಕೇಳಿಬರುತ್ತಿವೆ. ದೂರು ದಾಖಲಿಸುವ ಮುನ್ನ ವಸ್ತುಸ್ಥಿತಿ ಪರಿಶೀಲಿಸುವಂತೆ ಅಧಿಕಾರಿಗಳಲ್ಲಿ ಸಂವೇದನೆ ಮೂಡಿಸುತ್ತೇವೆ. ಸುಳ್ಳು ಪ್ರಕರಣ ದಾಖಲಿಸುವವರನ್ನು ವಿಚಾರಣೆಗೆ ಒಳಪಡಿಸಲಾಗುವುದು’ ಎಂದು ಎಚ್ಚರಿಸಿದರು.

ಸಂಜೆ ಡಿಸಿಪಿ ಅಲೋಕ್ ಮೋಹನ್ ಈ ಸಂಬಂಧ ಆದೇಶ ಹೊರಡಿಸಿದರು.

ಕಾಯ್ದೆ ಉಲ್ಲಂಘನೆ ಆರೋಪ • ವಿಚಾರಣೆ ವೇಳೆ ಹೈಕೋರ್ಟ್ ಅಭಿಪ್ರಾಯ

‘ಕನಿಷ್ಠ ವೇತನ: ಕಂಪನಿಯೂ ಪ್ರತಿವಾದಿಯಾಗಬೇಕು’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕನಿಷ್ಠ ವೇತನ ಕಾಯ್ದೆ–1948ರ ಉಲ್ಲಂಘನೆಯ ಅಪರಾಧ ಪ್ರಕರಣಗಳಲ್ಲಿ ಕಂಪನಿಯನ್ನೂ ಅಗತ್ಯ ಪ್ರತಿವಾದಿಯನ್ನಾಗಿ ಮಾಡಬೇಕು’ ಎಂದು ಆದೇಶಿಸಿರುವ ಹೈಕೋರ್ಟ್, ‘ಕ್ರಿಮಿನಲ್ ಪ್ರಕರಣಗಳಲ್ಲಿ ಕಂಪನಿಯನ್ನು ಪ್ರತಿವಾದಿಯನ್ನಾಗಿ ಮಾಡದೆ ಅದರ ನಿರ್ದೇಶಕರನ್ನು ಪ್ರತ್ಯೇಕವಾಗಿ ವಿಚಾರಣೆಗೆ ಒಳಪಡಿಸಲಾ-ಗದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ನನ್ನ ವಿರುದ್ಧ ಶಿವಮೊಗ್ಗ ಜೆಎಂಎಫ್‌ಸಿ 2ನೇ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ನಗರದ ಪಿ.ಪಿ.ಸೈಯದ್ ಪಾಷ ಅಲಿಯಾಸ್ ಪಿ.ಎಸ್.ಅಯೂಬ್ ಮತ್ತು ಸಮೀರ್ ಸುಲ್ತಾನಾ ಅಲಿಯಾಸ್ ಶಮೀಮ್ ಸುಲ್ತಾನಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಅರ್ಜಿದಾರರು ಅಟಿಕಾ ಗೋಲ್ಡ್ ಕಂಪನಿಯಲ್ಲಿ ನಿರ್ದೇಶಕರಾಗಿ ತಮ್ಮ ಹೊಣೆಗಾರಿಕೆ ನಿರ್ವಹಿಸಿದ್ದಾರೆ. ಅವರು ಕಂಪನಿಯ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಕಾರಣ ಮೊದಲಿಗೆ ಕಂಪನಿಯನ್ನು ಪ್ರತಿವಾದಿಯನ್ನಾಗಿ ಮಾಡಬೇಕಾಗಿದೆ. ಕಂಪನಿಯನ್ನು ಪ್ರತಿ-ವಾದಿಯನ್ನಾಗಿ ಮಾಡದೆ ಅರ್ಜಿದಾರರ ವಿರುದ್ಧ ಪ್ರಕರಣ ದಾಖಲಿಸಿದರೆ ಊರ್ಜಿತವಾಗುವುದಿಲ್ಲ’ ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ಮೊಹಮದ್ ತಾಹಿರ್ ವಾದ ಮಂಡಿಸಿದ್ದರು.

ಪ್ರಕರಣವೇನು?: ‘ಅಟಿಕಾ ಗೋಲ್ಡ್ ಕಂಪನಿಯಲ್ಲಿ ಕಾರ್ಮಿಕರಿಗೆ ಸರಿಯಾದ ವೇತನ ನೀಡುತ್ತಿಲ್ಲ’ ಎಂಬ ದೂರುಗಳ ಹಿನ್ನೆಲೆಯಲ್ಲಿ ಶಿವಮೊಗ್ಗದ ಕಾರ್ಮಿಕ ಅಧಿಕಾರಿ ಸ್ಥಳೀಯ ನ್ಯಾಯಾಲಯದಲ್ಲಿ ಅದರ ನಿರ್ದೇಶಕರ ವಿರುದ್ಧ; ಕನಿಷ್ಠ ವೇತನ ಕಾಯ್ದೆ–1948ರ ಕಲಂ 25ರ ನಿಯಮ 7,9 ಹಾಗೂ 21ರ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಇದನ್ನು ವಿಚಾರಣೆಗೆ ಪರಿಗಣಿಸಿದ್ದ ನ್ಯಾಯಾಲಯ ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿತ್ತು.

ಅಕ್ರಮ ಭ್ರೂಣ ಹತ್ಯೆ ಆರೋಪ: ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಕಾರ

ಬೆಂಗಳೂರು: ಭಾರಿ ಸಂಖ್ಯೆಯಲ್ಲಿ ಅಕ್ರಮವಾಗಿ ಭ್ರೂಣ ಹತ್ಯೆ ಮಾಡಿದ ಆರೋಪ ಎದುರಿಸುತ್ತಿರುವ ನೆಲಮಂಗಲದ ‘ಆಸರೆ’ ಆಸ್ಪತ್ರೆ ವೈದ್ಯ ಡಾ.ಎನ್.ಕೆ. ರವಿಕುಮಾರ್ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಎನ್.ಕೆ.ರವಿಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ವಕೀಲೆ ಕೆ.ಪಿ.ಯಶೋದಾ, ‘ರಾಜ್ಯದಾದ್ಯಂತ ವಿವಿಧೆಡೆ ಇಂತಹ ಕಾನೂನುಬಾಹಿರ ಕೃತ್ಯಗಳು ನಡೆದಿರುವ ಶಂಕೆಯಿದೆ. ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಬೇಕಿದೆ. ಅಂತೆಯೇ, ಅರ್ಜಿದಾರರ ಮಾಲೀಕತ್ವದ ಆಸ್ಪತ್ರೆಯಲ್ಲಿ ಸುಮಾರು 74 ಗರ್ಭಪಾತ ನಡೆಸಲಾಗಿದೆ ಎಂಬುದು ತನಿಖೆ ವೇಳೆ ಬಯಲಾಗಿದೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು.

ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠ, ‘ಪ್ರಕರಣ ತನಿಖಾ ಹಂತದಲ್ಲಿದ್ದು, ಅರ್ಜಿದಾರರ ವಿರುದ್ಧದ ಆರೋಪಗಳು ಜೀವಾವಧಿ ಶಿಕ್ಷೆಗೆ ಒಳಗಾಗುವಂತಹದ್ದು. ಹಾಗಾಗಿ, ಈ ಹಂತದಲ್ಲಿ ಪ್ರಕರಣ ರದ್ದುಗೊಳಿಸಲು ಸಾಧ್ಯವಿಲ್ಲ’ ಎಂದು ತಿಳಿಸಿದೆ.

ಕೋರಿಕೆ ಏನಿತ್ತು?: ‘ನನ್ನ ವಿರುದ್ಧ ನೆಲಮಂಗಲ ಟೌನ್ ಪೊಲೀಸ್ ಠಾಣೆಯಲ್ಲಿ; ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 312, 313, 315 ಹಾಗೂ 316 ಮತ್ತು ವೈದ್ಯಕೀಯ ಗರ್ಭಪಾತ ಕಾಯ್ದೆ–1971ರ ಕಲಂ 5 (ಬಿ), 5(1)(2) ಮತ್ತು (3)ರ ಅನ್ವಯ ದಾಖಲಾಗಿರುವ ದೂರು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ವೇಣುಗೋಪಾಲ್ ಮನೆಯಲ್ಲಿ ಐ.ಟಿ ದಾಳಿ

ಬೆಂಗಳೂರು: ಗೃಹ ಸಚಿವ ಜಿ.ಪರಮೇಶ್ವರ ಆಪ್ತ ಎಂ.ಸಿ ವೇಣುಗೋಪಾಲ್ ಅವರ ಮನೆ ಮೇಲೆ ಗುರುವಾರ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು (ಐಟಿ) ದಾಳಿ ನಡೆಸಿದ್ದಾರೆ.

ಕಾಂಗ್ರೆಸ್ ಮುಖಂಡ, ವಿಧಾನ ಪರಿಷತ್‌ನ ಮಾಜಿ ಸದಸ್ಯರೂ ಆದ ವೇಣುಗೋಪಾಲ್ ಅವರ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಮನೆಗೆ ಮುಂಜಾನೆ 6ಕ್ಕೆ ನಾಲ್ಕು ಇನ್ನೋವಾ ಕಾರಿನಲ್ಲಿ ಬಂದ 15ಕ್ಕೂ ಹೆಚ್ಚು ಮಂದಿ ಇದ್ದ ಅಧಿಕಾರಿಗಳ ತಂಡ ವಿವಿಧ ದಾಖಲೆ ಪತ್ರಗಳ ಪರಿಶೀಲನೆ ನಡೆಸಿತು.

ದಾಳಿ ವೇಳೆ ವೇಣುಗೋಪಾಲ್ ಮನೆಯಲ್ಲೇ ಇದ್ದರು.

‘ಕಳಸಾ–ಬಂಡೂರಿಗೆ ಅನುಮತಿ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾ-ಗುತ್ತಿದ್ದಂತೆಯೆ ಕಳಸಾ–ಬಂಡೂರಿ ಯೋಜನೆಗೆ ಅನುಮತಿ ನೀಡಿ, ಕೆಲಸ ಆರಂಭಿಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಕಳಸಾ–ಬಂಡೂರಿ ನಾಲಾ ಜಾರಿ ಆಗದಿರುವುದಕ್ಕೆ ಕೇಂದ್ರವೇ ಕಾರಣ. ಟೆಂಡರ್ ಕರೆದಿದ್ದರೂ, ಪರಿಸರ ಇಲಾಖೆ ಅನುಮತಿ ಕೊಟ್ಟಿಲ್ಲ. ಇದರ ಬಗ್ಗೆ ಯಾವತ್ತಾದರೂ ಗದ್ದಿಗೌಡರ ಮಾತನಾ-ಡಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ಗೋವಾ, ಕರ್ನಾಟಕ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದಾ-ಗಲೂ ಇತ್ಯರ್ಥ ಮಾಡಲಿಲ್ಲ. ಅವರು ಯಾವತ್ತೂ ಜನರ ಕೆಲಸ ಮಾಡಿಲ್ಲ, ಮಾಡುವುದೂ ಇಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ನೋಟಿಫಿಕೇಷನ್ ಆಗಿಲ್ಲ. ನೋಟಿಫಿಕೇಷನ್ ಕೊಡಿಸುವ ಕೆಲಸವನ್ನೂ ಮಾಡುತ್ತೇವೆ’ ಎಂದರು.

‘ಸುಳ್ಳು ಹೇಳುವುದಕ್ಕೂ ಇತಿ-ಮಿತಿ ಇರಬೇಕು. ಬಜೆಟ್‌ನಲ್ಲಿ ₹52 ಸಾವಿರ ಕೋಟಿ ಗ್ಯಾರಂಟಿಗೆ, ₹68 ಸಾವಿರ ಕೋಟಿ ಅಭಿವೃದ್ಧಿಗೆ ತೆಗೆದಿರಿಸಿದ್ದೇನೆ. ಗ್ಯಾರಂಟಿ ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಲೂಟಿ ಹೊಡೆಯುತ್ತಾರೆ ಎಂದಿದ್ದಾರೆ. ನಾವು ಲೂಟಿ ಹೊಡೆಯಲು ಬಂದಿಲ್ಲ. ಬಿಜೆಪಿಯವರೇ ಲೂಟಿ ಹೊಡೆದಿದ್ದಾರೆ’ ಎಂದು ತಿರುಗೇಟು ನೀಡಿದರು.

‘ಕೆಎಎಸ್: ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಿ’

ಬೆಂಗಳೂರು: 384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಬೇಕು ಎಂದು ಮೈಸೂರು ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪಿ.ವಿ. ನಾಗರಾಜ ಮನವಿ ಮಾಡಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗವು ಈಚೆಗೆ ಗ್ರೂಪ್ ಎ ವೃಂದದ 159 ಹಾಗೂ ಗ್ರೂಪ್ ಬಿ ವೃಂದದ 225 ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿತ್ತು. ಅರ್ಜಿ ಸಲ್ಲಿಸಲು ಮೇ 15ರವರೆಗೆ ಅವಕಾಶ ನೀಡಲಾಗಿದೆ. ಜೂನ್ 21ಕ್ಕೆ ಪೂರ್ವಭಾವಿ ಪರೀಕ್ಷೆ ನಡೆಯಲಿದೆ. ಆದರೆ, ಚುನಾವಣಾ ಸಮಯವಾದ ಕಾರಣ ಗ್ರಾಮೀಣ ಪ್ರದೇಶದ ಬಹುತೇಕ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ಸಾಕಷ್ಟು ಪದವೀಧರರು ಉದ್ಯೋಗ ನಿರೀಕ್ಷೆಯಲ್ಲಿ ಇದ್ದಾರೆ. ಸರ್ವರ್ ಮತ್ತಿತರ ತಾಂತ್ರಿಕ ಸಮಸ್ಯೆಗಳಿಂದಾಗಿ ಅರ್ಜಿ ಸಲ್ಲಿಕೆ ಸಾಧ್ಯವಾಗಿಲ್ಲ. ಹಾಗಾಗಿ, ಅವಧಿ ವಿಸ್ತರಿಸಬೇಕು ಹಾಗೂ ಪೂರ್ವಭಾವಿ ಪರೀಕ್ಷೆಯ ದಿನಾಂಕ ಮುಂದೂಡಬೇಕು ಎಂದು ಕೋರಿದ್ದಾರೆ.

ಶುಕ್ರವಾರ, ಮೇ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 123 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಶ್ರೀಜಿತ ಘೋಷ್ ಹಾಗೂ ರಾಜೀವ್ ನಟನೆಯ 'ಉಸಿರೇ ಉಸಿರೇ' ಸಿನಿಮಾ ತೆರೆಕಂಡಿದೆ

ಆಳ–ಅಗಲ
ಹವಾಮಾನ ವೈಪರೀತ್ಯ ಒಂದೆಡೆ ಬಿಸಿಗಾಳಿ, ಇನ್ನೊಂದೆಡೆ ಬಿರುಮಳೆ
ಅದಾನಿ ಬಂದರು ಕಂಪನಿಗೆ ₹2,014 ಕೋಟಿ ಲಾಭ 10
'ಕೇಂದ್ರದ ನಿಯಂತ್ರಣದಲ್ಲಿ ಸಿಬಿಐ ಇಲ್ಲ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,611	22,648	₹74,050 (ಬೆಂಗಳೂರು)	₹82,700 (ಬೆಂಗಳೂರು)	83.46

ಪೆನ್‌ಡ್ರೈವ್ ವಿಡಿಯೊದಲ್ಲಿದ್ದ ಸಂತ್ರಸ್ತೆಯಿಂದ ದೂರು • ದುಬೈನಲ್ಲಿ ಆರೋಪಿ?

ಪ್ರಜ್ವಲ್ ವಿರುದ್ಧ ಅತ್ಯಾಚಾರ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆನ್‌ಡ್ರೈವ್ ವಿಡಿಯೊ ಪ್ರಕರಣ ಹೊಸ ತಿರುವು ಪಡೆದಿದ್ದು, 'ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದ' ಆರೋಪದಡಿ ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಹೊಸದಾಗಿ ಅತ್ಯಾಚಾರ (ಐಪಿಸಿ 376) ಪ್ರಕರಣ ದಾಖಲಾಗಿದೆ.

ಮನೆ ಕೆಲಸದ ಮಹಿಳೆ ಹಾಗೂ ಅವರ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಹಾಗೂ ಪ್ರಜ್ವಲ್ ವಿರುದ್ಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಏಪ್ರಿಲ್ 28ರಂದು ಎಫ್‌ಐಆರ್ ದಾಖಲಾಗಿತ್ತು. ಹಾಸನದ ಸಂತ್ರಸ್ತೆಯೊಬ್ಬರು ಪ್ರತ್ಯೇಕ ದೂರು ನೀಡಿದ್ದಾರೆ. ತಮ್ಮ ಮೇಲೆ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿರುವುದಾಗಿ ಆರೋಪಿಸಿದ್ದು, ಎಸ್‌ಐಟಿ ಅಧಿಕಾರಿಗಳು ಚಾಲ್ತಿಯಲ್ಲಿರುವ ಪ್ರಕರಣದಲ್ಲಿ ಐಪಿಸಿ ಸೆಕ್ಷನ್ 376 ಸೇರ್ಪಡೆ ಮಾಡಿಕೊಂಡು ತನಿಖೆ ಮುಂದುವರಿಸಿದ್ದಾರೆ.

'ಮೊದಲ ಪ್ರಕರಣದಲ್ಲಿ ರೇವಣ್ಣ ಹಾಗೂ ಪ್ರಜ್ವಲ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪವಿತ್ತು. ಇದೀಗ, ಪ್ರಜ್ವಲ್ ವಿರುದ್ಧ ಮಾತ್ರ ಅತ್ಯಾಚಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಈ ಬೆಳವಣಿಗೆಗಳ ಮಧ್ಯೆಯೇ, ಬಂಧನದ ಭೀತಿಯಲ್ಲಿರುವ ಶಾಸಕ ರೇವಣ್ಣ, ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಜರ್ಮನಿಯಲ್ಲಿ ಇದ್ದಾರೆ ಎನ್ನಲಾಗಿದ್ದ ಪ್ರಜ್ವಲ್, ದುಬೈಗೆ ಸ್ಥಳಾಂತರಗೊಂಡಿದ್ದು, ಅವರ ಪತ್ತೆಗೆ ಎಸ್‌ಐಟಿ ಬಲೆ ಬೀಸಿದೆ.

ಪ್ರಜ್ವಲ್‌ಗೆ ಲುಕ್‌ಔಟ್ ನೋಟಿಸ್



ಪ್ರಜ್ವಲ್ ರೇವಣ್ಣ

ತಲೆಮರೆಸಿಕೊಂಡಿರುವ ಪ್ರಜ್ವಲ್ ರೇವಣ್ಣ ಪತ್ತೆಗಾಗಿ ಎಸ್‌ಐಟಿ ಅಧಿಕಾರಿಗಳು ಲುಕ್‌ಔಟ್ ಸುತ್ತೋಲೆ (ಎಲ್‌ಒಸಿ) ಹೊರಡಿಸಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಅಧಿಕಾರಿಗಳು, ವಲಸೆ ಅಧಿಕಾರಿಗಳು ಹಾಗೂ ತನಿಖಾ ಸಂಸ್ಥೆಗಳ ಮುಖ್ಯಸ್ಥರಿಗೆ, ಪ್ರಜ್ವಲ್ ಫೋಟೊ ಸಮೇತ ಮಾಹಿತಿ ನೀಡಿದ್ದಾರೆ. ವಿಮಾನ ನಿಲ್ದಾಣ ಹಾಗೂ ಇತರೆಡೆ ಪ್ರಜ್ವಲ್ ಪತ್ತೆಯಾದರೆ, ತನಿಖಾ ಸಂಸ್ಥೆಗಳು ವಶಕ್ಕೆ ಪಡೆಯುವ ಸಾಧ್ಯತೆ ಇದೆ.

'ಅತ್ಯಾಚಾರ' ಪ್ರಕರಣ ದಾಖಲಾಗುತ್ತಿದ್ದಂತೆಯೇ, ಬಂಧನ ಭೀತಿಯಲ್ಲಿರುವ ರೇವಣ್ಣ, ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಎಸ್‌ಐಟಿ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದೆ.

ಏನಿದು ಲುಕ್‌ಔಟ್ ಸುತ್ತೋಲೆ?



ಎಚ್‌.ಡಿ. ರೇವಣ್ಣ

ಕ್ರಿಮಿನಲ್ ಅಥವಾ ದಂಡದ ಪ್ರಕರಣಗಳಲ್ಲಿ ತಲೆಮರೆಸಿಕೊಂಡಿರುವ ಹಾಗೂ ದೇಶ ತೊರೆದ ಆರೋಪಿಗಳನ್ನು ಪತ್ತೆ ಮಾಡಲು ಲುಕ್‌ಔಟ್ ಸುತ್ತೋಲೆ (ಎಲ್‌ಒಸಿ) ಹೊರಡಿಸಲು ಅವಕಾಶವಿದೆ.

ವ್ಯಕ್ತಿಯ ಸಂಚಾರವನ್ನು ನಿರ್ಬಂಧಿಸಲು ಹಾಗೂ ನಿಯಂತ್ರಿಸಲು ವಲಸೆ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸುವ ಸುತ್ತೋಲೆ ಇದಾಗಿದೆ. ಆರೋಪಿಯ ಫೋಟೊ ಹಾಗೂ ವೈಯಕ್ತಿಕ ಮಾಹಿತಿಯನ್ನು ಒಳಗೊಂಡ ಸುತ್ತೋಲೆಯನ್ನು ಎಲ್ಲರಿಗೂ ಕಳುಹಿಸಲಾಗುತ್ತದೆ. ವಿಮಾನ ನಿಲ್ದಾಣ ಹಾಗೂ ಇತರೆಡೆ ಅಂಟಿಸಲಾಗುತ್ತದೆ. ಆರೋಪಿ ಪತ್ತೆಯಾದರೆ ವಶಕ್ಕೆ ಪಡೆದು ಸಂಬಂಧಪಟ್ಟವರ ಸುಪರ್ದಿಗೆ ನೀಡಲು ಅಧಿಕಾರಿಗಳಿಗೆ ಅವಕಾಶವಿದೆ.

ನ್ಯಾಯಾಧೀಶರ ಎದುರು ಸಂತ್ರಸ್ತೆ ಹೇಳಿಕೆ

'ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ವಿಡಿಯೊಗಳನ್ನು ಆಧರಿಸಿ ತನಿಖೆ ನಡೆಸಿದ್ದ ಎಸ್‌ಐಟಿ ಅಧಿಕಾರಿಗಳು, ವಿಡಿಯೊದಲ್ಲಿದ್ದ ಕೆಲ ಮಹಿಳೆಯರನ್ನು ಸಂಪರ್ಕಿಸಿ ದೂರು ನೀಡುವಂತೆ ಕೋರಿದ್ದರು. ಈ ಪೈಕಿ ಮಹಿಳೆಯೊಬ್ಬರು, ಎಸ್‌ಐಟಿ ಅಧಿಕಾರಿಗಳಿಗೆ ಹೇಳಿಕೆ ನೀಡಿದ್ದಾರೆ. ಅದೇ ಹೇಳಿಕೆ ಆಧರಿಸಿ ಹೊಸ ಸೆಕ್ಷನ್ ಸೇರ್ಪಡೆ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

'ಪ್ರಜ್ವಲ್ ರೇವಣ್ಣ ಹಲವು ಆಮಿಷವೊಡ್ಡಿ ಅತ್ಯಾಚಾರ ಎಸಗಿರುವ ಬಗ್ಗೆ ಸಂತ್ರಸ್ತೆ ಮಾಹಿತಿ ನೀಡಿದ್ದಾರೆ. ಸಂತ್ರಸ್ತೆಯ ವೈಯಕ್ತಿಕ ಮಾಹಿತಿಯನ್ನು ಗೌಪ್ಯವಾಗಿರಿಸಲಾಗಿದೆ. ಅವರನ್ನು ನ್ಯಾಯಾಧೀಶರ ಎದುರು ಕರೆದೊಯ್ದು ಸಿಆರ್‌ಪಿಸಿ 164 ಅಡಿ ಹೇಳಿಕೆ ಸಹ ದಾಖಲಿಸಲಾಗಿದೆ. ಈ ಹೇಳಿಕೆಯು ಪ್ರಕರಣದಲ್ಲಿ ಮಹತ್ವದ ಪುರಾವೆ ಆಗಿದೆ' ಎಂದೂ ಮೂಲಗಳು ತಿಳಿಸಿವೆ.



ಶಿವಮೊಗ್ಗದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ–2 ಸಮಾವೇಶದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಚಿತ್ರನಟ ಶಿವರಾಜಕುಮಾರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ / ಶಿವಮೊಗ್ಗ ನಾಗರಾಜ್

ಪ್ರಜ್ವಲ್ ಪರವಾಗಿ ಮತ ಯಾಚನೆಗೆ ಆಕ್ರೋಶ

ಮೋದಿ, ಮಹಿಳೆಯರ ಕ್ಷಮೆ ಕೇಳಲಿ: ರಾಹುಲ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: '400ಕ್ಕೂ ಅಧಿಕ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿರುವ ಮಾಸ್ ರೇಪಿಸ್ಟ್ ಪ್ರಜ್ವಲ್ ರೇವಣ್ಣನ ದುಷ್ಕೃತ್ಯಗಳ ಅರಿವಿದ್ದರೂ ಆತನ ಪರ ಮತ ಯಾಚಿಸಿರುವ ಪ್ರಧಾನಿ ನರೇಂದ್ರ ಮೋದಿ ದೇಶದ ಮಹಿಳೆಯರ ಕ್ಷಮೆ ಕೇಳಬೇಕು' ಎಂದು ಎಐಸಿಸಿ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದರು.

ಇಲ್ಲಿ ಗುರುವಾರ ಕಾಂಗ್ರೆಸ್‌ನಿಂದ ಹಮ್ಮಿಕೊಳ್ಳಲಾಗಿದ್ದ ಲೋಕಸಭೆ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮಾತಿನುದ್ದಕ್ಕೂ ಪ್ರಜ್ವಲ್ ರೇವಣ್ಣನನ್ನು 'ಮಾಸ್ ರೇಪಿಸ್ಟ್' ಎಂದು ಹರಿಹಾಯ್ದರು.

'ಪ್ರಜ್ವಲ್ ರೇವಣ್ಣನಿಗೆ ಮತ ಕೊಟ್ಟರೆ ನನಗೇ ಮತ ಕೊಟ್ಟಂತೆ ಎಂದು ಹೇಳುವ ಮೂಲಕ ನರೇಂದ್ರ ಮೋದಿ ದೇಶದ ಎಲ್ಲ ಮಹಿಳೆಯರನ್ನೂ ಅಪಮಾನಿಸಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಪ್ರಜ್ವಲ್ ರೇವಣ್ಣ ಮಾಸ್ ರೇಪಿಸ್ಟ್ ಎಂಬುದು ಮೋದಿ ಮಾತ್ರವಲ್ಲ ಅಮಿತ್ ಶಾ ಹಾಗೂ ಬಿಜೆಪಿಯ ಎಲ್ಲ ನಾಯಕರಿಗೆ ಗೊತ್ತಿತ್ತು. ಆದರೂ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡರು.'

5ನೇ ಪುಟ ನೋಡಿ

'ಪ್ರಜ್ವಲ್ ಪಲಾಯನ, ಮೋದಿ ಗ್ಯಾರಂಟಿ'


'ಇಂಟೆಲಿಜೆನ್ಸ್, ಕಸ್ಟಮ್ಸ್ ಎಲ್ಲ ನಿಮ್ಮ (ಬಿಜೆಪಿ) ಕೈಯಲ್ಲಿಯೇ ಇದ್ದರೂ ಮಾಸ್ ರೇಪಿಸ್ಟ್ ಪ್ರಜ್ವಲ್ ರೇವಣ್ಣನನ್ನು ದೇಶದಿಂದ ಜರ್ಮನಿಗೆ ಪಲಾಯನ ಮಾಡಲು ಅವಕಾಶ ಮಾಡಿಕೊಟ್ಟಿದ್ದು ಯಾಕೆ' ಎಂದು ರಾಹುಲ್ ಗಾಂಧಿ ಪ್ರಶ್ನಿಸಿದರು.

'ದುಷ್ಕೃತ್ಯ ಎಸಗುವವರನ್ನು ರಕ್ಷಿಸುವುದು ನಂತರ ಅವರು ದೇಶದಿಂದ ಹೊರಗೆ ಹೋಗಲು ಅವಕಾಶ ಮಾಡಿಕೊಡುವುದು ಪ್ರಧಾನಿ ಮೋದಿ ಗ್ಯಾರಂಟಿ' ಎಂದು ಛೇಡಿಸಿದ ರಾಹುಲ್, ಆ ಮಾಸ್ ರೇಪಿಸ್ಟ್‌ನನ್ನು ಬಿಜೆಪಿಯು ಮುಂದೆಯೂ ರಕ್ಷಣೆ ಮಾಡಬಹುದು. ಇದು ರಾಜ್ಯದ ಮಹಿಳೆಯರಿಗೆ ಗೊತ್ತಿರಲಿ' ಎಂದು ಎಚ್ಚರಿಸಿದರು.

> **ಪ್ರಜ್ವಲ್ ಪಕ್ಕದಲ್ಲಿ ನಿಂತು ಮತ ಯಾಚಿಸಿರುವ ಮೋದಿ ಅಧಿಕಾರಕ್ಕೆ ಬರಲು ಏನು ಮಾಡಲೂ ಸಿದ್ಧ ಎಂಬುದನ್ನು ನಿರೂಪಿಸಿದ್ದಾರೆ. ಇದು ಬಿಜೆಪಿಯ ನಿಜವಾದ ಮುಖ**
> **ರಾಹುಲ್ ಗಾಂಧಿ,** ಎಐಸಿಸಿ ನಾಯಕ

ಚಿನಕುರುಳಿ

ಪ್ರಕಾಶ್ ಶೆಟ್ಟಿ



4 ಜಿಲ್ಲೆ: 46 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತೀವ್ರ ಬಿಸಿ ಗಾಳಿ ಮುಂದುವರಿದಿದ್ದು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ ಗರಿಷ್ಠ ಉಷ್ಣಾಂಶ ಗುರುವಾರ ನಾಲ್ಕು ಜಿಲ್ಲೆಗಳಲ್ಲಿ 46 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಮಂಡ್ಯದಲ್ಲಿ 47.6 ಡಿಗ್ರಿ ಸೆಲ್ಸಿಯಸ್, ರಾಯಚೂರಿನಲ್ಲಿ 46.7 ಡಿಗ್ರಿ ಸೆಲ್ಸಿಯಸ್, ಕಲಬುರಗಿಯಲ್ಲಿ 46.1 ಡಿಗ್ರಿ ಸೆಲ್ಸಿಯಸ್ ಹಾಗೂ ಯಾದಗಿರಿಯಲ್ಲಿ 46 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ವರದಿಯಾಗಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು ಹಾಗೂ ಹಾಸನ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ ಎಂದು ಕೆಎಸ್‌ಎನ್‌ಡಿಎಂಸಿ ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ಬೆಂಗಳೂರು ಘಟಕದ ಪ್ರಕಾರ ಬೀದರ್, ಬೆಳಗಾವಿ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ಯಾದಗಿರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಬಳ್ಳಾರಿ, ಬೆಂಗಳೂರು ನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಶುಕ್ರವಾರವೂ ತೀವ್ರ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಇದೇ 5ರವರೆಗೂ ಒಣ ಹವೆ ಇರುವ ಬಗ್ಗೆ ಘಟಕ ಮುನ್ಸೂಚನೆ ನೀಡಿದೆ.

ಕೊಡಗು ಹಾಗೂ ಮೈಸೂರಿನ ಕೆಲವೆಡೆ ಶುಕ್ರವಾರ ಮಳೆಯಾಗುವ ಸಂಭವವಿದೆ. ಮುಂದಿನ ನಾಲ್ಕು ದಿನಗಳು ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ರಾತ್ರಿಯ ಅವಧಿಯು ಬಿಸಿ ವಾತಾವರಣದಿಂದ ಕೂಡಿರುವ ಸಾಧ್ಯತೆಯಿದೆ. ಇದೇ 7ರಿಂದ 9ರವರೆಗೆ ರಾಜ್ಯದ ವಿವಿಧೆಡೆ ಮಳೆಯಾಗುವ ಸಂಭವವಿದೆ ಎಂದು ಐಎಂಡಿ ಬೆಂಗಳೂರು ಘಟಕ ತಿಳಿಸಿದೆ.

ಅಂಕಿ ಅಂಶಗಳು

47.6 ಡಿಗ್ರಿ ಸೆಲ್ಸಿಯಸ್
ಮಂಡ್ಯದಲ್ಲಿ ಗರಿಷ್ಠ ಉಷ್ಣಾಂಶ

46.7 ಡಿಗ್ರಿ ಸೆಲ್ಸಿಯಸ್
ರಾಯಚೂರಿನಲ್ಲಿ ದಾಖಲಾದ ಉಷ್ಣಾಂಶ

ರಾಯಬರೇಲಿಗೆ ರಾಹುಲ್ ಅಭ್ಯರ್ಥಿ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಉತ್ತರ ಪ್ರದೇಶದ ರಾಯಬರೇಲಿ ಕ್ಷೇತ್ರದಿಂದಲೂ ಲೋಕಸಭೆಗೆ ಸ್ಪರ್ಧಿಸುವ ಸಾಧ್ಯತೆಗಳಿವೆ. ಆದರೆ, ಪ್ರಿಯಾಂಕಾ ಗಾಂಧಿ ಅವರು ಲೋಕಸಭೆಗೆ ಸ್ಪರ್ಧಿಸುವ ಸಾಧ್ಯತೆ ಇಲ್ಲ ಎಂದು ಪಕ್ಷದ ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

ಒಳಪುಟದಲ್ಲಿ
'ಕೃಷ್ಣ ಜನ್ಮಭೂಮಿ ದೇಗುಲ ಸಂರಕ್ಷಿತ ಸ್ಮಾರಕ' 5

ಆರು ತಿಂಗಳ ನಂತರ ನಗರದಲ್ಲಿ ಮಳೆ • ಗರಿಗೆದರಿದ ಜನರ ಸೆಲ್ಫಿ ಸಂಭ್ರಮ

‘ಬೆಂದ’ಕಾಳೂರಿಗೆ ಮಳೆಹನಿಗಳ ಸಿಂಚನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲ ಬೇಗೆಯಲ್ಲಿ ಬೇಯುತ್ತಿದ್ದ ಬೆಂಗಳೂರಿಗೆ ಸುಮಾರು ಆರು ತಿಂಗಳ ನಂತರ ನಗರದ ಬಹುತೇಕ ಕಡೆ ಗುರುವಾರ ಸಂಜೆ, ಗುಡುಗು–ಮಿಂಚು ಸಹಿತ ಹಗುರವಾಗಿ ಮಳೆಯಾಗಿದೆ.

ಬನಶಂಕರಿ, ಹಂಪಿನಗರ, ವಿಜಯನರ, ರಾಜರಾಜೇಶ್ವರಿನಗರ ಹಾಗೂ ನಾಯಂಡಹಳ್ಳಿ ಸುತ್ತಮುತ್ತ ಉತ್ತಮ ಮಳೆಯಾಯಿತು. ನಗರದ ಬಹುತೇಕ ಪ್ರದೇಶಗಳಲ್ಲಿ ಸುಮಾರು 10 ನಿಮಿಷ ಸಾಧಾರಣ ಮಳೆಯಾಗಿದೆ.

ಈ ವರ್ಷದಲ್ಲಿ ನಗರದ ಎಲ್ಲೆಡೆಯೂ ಮಳೆಯಾಗಿರುವುದು ಇದೇ ಮೊದಲು. ಗುರುವಾರ ಬೆಳಿಗ್ಗೆಯಿಂದಲೇ ಮೋಡ ಹಾಗೂ ಬಿಸಿಲಿನ ವಾತಾವರಣವಿತ್ತು. ಸಂಜೆ ವೇಳೆಗೆ ಮೋಡ ಕವಿದು ಮಳೆಯ ವಾತಾವರಣ ಸೃಷ್ಟಿಯಾಗಿತ್ತು. ಸುಮಾರು 7.30ರ ವೇಳೆಯಲ್ಲಿ ನಗರದಲ್ಲಿ ಮಳೆಯಾಯಿತು.

ಗರುಡಾಚಾರ್ಯಪಾಳ್ಯ, ಎಚ್. ಗೊಲ್ಲಹಳ್ಳಿ, ವಿಶ್ವೇಶಪುರ, ಕಾಟನ್‌ಪೇಟೆ, ಸಂಪಂಗಿರಾಮನಗರ, ಪುಲಕೇಶಿನಗರ, ಹೆಬ್ಬಾಳ, ಕುಶಾಲನಗರ, ವಿದ್ಯಾರಣ್ಯಪುರ, ಜಕ್ಕೂರು, ಹೂಡಿ, ವಿಜ್ಞಾನನಗರ, ಅರೆಕೆರೆ, ಬೆಳ್ಳಂದೂರು, ಚೊಕ್ಕಸಂದ್ರಗಳಲ್ಲಿ 0.5 ಮಿ.ಮೀನಿಂದ 1.5 ಮಿ.ಮೀವರೆಗೆ ಮಳೆಯಾಗಿದೆ.

ಫೋಟೊ ಸಂಭ್ರಮ: ವರ್ಷದಲ್ಲಿ ಮೊದಲ ಬಾರಿಗೆ ನಗರಕ್ಕೆ ಮಳೆಯ ಸಿಂಚನವಾಗಿದ್ದು, ನಾಗರಿಕರು ಹರ್ಷಪಟ್ಟರು. ಸಾಮಾಜಿಕ ಜಾಲತಾಣಗಳಲ್ಲಿ ಮಳೆಯ ಚಿತ್ರ ಹಾಗೂ ಮಳೆಯಲ್ಲಿ ನಿಂತ ಚಿತ್ರಗಳನ್ನು ಹಂಚಿಕೊಂಡರು.

ಮಳೆ ಇನ್ನಷ್ಟು ಸುರಿಯಲಿ, ರಾತ್ರಿಯೆಲ್ಲ ಸುರಿಯಲಿ... ಎಂಬ ಅಭಿಲಾಷೆ ವ್ಯಕ್ತವಾಗಿತ್ತು. ಆದರೆ, ಗುಡುಗು, ಮಿಂಚಿನ ಅರ್ಭಟವಿದ್ದರೂ ಸುಮಾರು 10 ನಿಮಿಷ ಮಾತ್ರ ಮಳೆಯಾಯಿತು. ಹೀಗಾಗಿ, ‘ಕಾದ ಹೆಂಚಿನ ಮೇಲೆ ನೀರೆರಿಚಿದಂತಾಯಿತು ನಗರದ ಸ್ಥಿತಿ’ ಎಂಬ ಮಾತುಗಳೂ ಕೇಳಿಬಂದವು.



ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಗುರುವಾರ ದಿಢೀರನೆ ಮಳೆ ಸುರಿದಾಗ ಅಜ್ಜ–ಅಜ್ಜಿಗೆ ಕೊಡೆಯ ಆಸರೆ ಸಿಕ್ಕ ಮಾನವೀಯ ಕ್ಷಣ –ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್



ಕಂದನಿಗೆ ಶೀತ ಆಗದಿರಲಿ ಎಂದು ಮಹಿಳೆಯ ಕಾಳಜಿ



ಡಿಕನ್ಸನ್ ರಸ್ತೆಯಲ್ಲಿ ಸ್ಕೂಟರ್ ಸವಾರ ರೈನ್ ಕೋಟ್ ಧರಿಸಿ ಮಳೆಗೆ ಸನ್ನದ್ಧರಾಗಿ ಬಂದಂತೆ ಕಂಡರು –ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್



ಎಂ.ಜಿ. ರಸ್ತೆಯಲ್ಲಿ ಸ್ವಲ್ಪ ಮಟ್ಟಿಗೆ ತಂಪೆರೆದ ಮಳೆಯಲ್ಲಿ ಮಾನಿನಿಯರು – ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಎಲ್ಲೆಲ್ಲಿ ಎಷ್ಟು ಮಳೆ (ಮಿಮೀ)	
ವಿದ್ಯಾಪೀಠ	20
ಹಂಪಿನಗರ	12.5
ಮಾರುತಿ ಮಂದಿರ	12
ರಾಜರಾಜೇಶ್ವರಿನಗರ	7.5
ನಾಯಂಡಹಳ್ಳಿ	7.5
ಬಸವನಪುರ	5.5
ದೊಡ್ಡನೆಕ್ಕುಂದಿ	5
ಎಚ್‌ಎಸ್‌ಆರ್	5
ಉತ್ತರಹಳ್ಳಿ	5
ಮಹದೇವಪುರ	4
ರಾಮಮೂರ್ತಿನಗರ	4
ಹೆಮ್ಮಿಗೆಪುರ	4.5
ಕೆಂಗೇರಿ	4.5
ಯಲಹಂಕ ಉಪನಗರ	3.5
ಹೊರಮಾವು	3.5
ಪಟ್ಟಾಭಿನಗರ	2.5
ವನ್ನಾರಪೇಟೆ	2.5
ಚಾಮರಾಜಪೇಟೆ	2.5
ಕಮ್ಮನಹಳ್ಳಿ	2
ಮಾರತ್‌ಹಳ್ಳಿ	2
ಎಚ್‌ಎಎಲ್ ವಿಮಾನನಿಲ್ದಾಣ	3
ಬಿಳೇಕಹಳ್ಳಿ	3
ಬಾಗಲಗುಂಟೆ	3
ಕೋರಮಂಗಲ	2.5
ಬಿಟಿಎಂ ಲೇಔಟ್	2.5

ಸುದ್ದಿ 2 ನಿಮಿಷ

ಬಂಗಾಳ ರಾಜ್ಯಪಾಲರಿಂದ ಲೈಂಗಿಕ ದೌರ್ಜನ್ಯ: ಆರೋಪ

ಕೋಲ್ಕತ್ತ: ಇಲ್ಲಿನ ರಾಜಭವನದ ಮಹಿಳಾ ನೌಕರರೊಬ್ಬರು ರಾಜ್ಯಪಾಲ ಸಿ.ವಿ. ಆನಂದ ಬೋಸ್ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಸೋಮವಾರ ಠಾಣೆಯೊಂದಕ್ಕೆ ದೂರು ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಕ್ಕೆ ಗುರುವಾರ ಬಂದಿಳಿದ ಸಂದರ್ಭದಲ್ಲಿ ಈ ಪ್ರಕರಣ ಬೆಳಕಿಗೆ ಬಂದಿದ್ದು, ಪಶ್ಚಿಮ ಬಂಗಾಳ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಇಂಬುಗೊಟ್ಟಿದೆ. ಮೋದಿ ಅವರು ರಾಜಭವನದಲ್ಲೇ ಗುರುವಾರ ರಾತ್ರಿ ಉಳಿದುಕೊಂಡಿದ್ದು, ಶುಕ್ರವಾರ ಅವರು ಮೂರು ಕಡೆ ರ‍್ಯಾಲಿ ನಡೆಸಲಿದ್ದಾರೆ.



ಮೇ 7 ಹಾಗೂ ಜೂನ್ 1ರ ಅವಧಿಯಲ್ಲಿ ಪಶ್ಚಿಮ ಬಂಗಾಳದ 42 ಲೋಕಸಭಾ ಕ್ಷೇತ್ರಗಳ ಪೈಕಿ 36ರಲ್ಲಿ ಚುನಾವಣೆ ನಡೆಯಲಿದೆ. ‘ರಾಜಭವನದಲ್ಲೇ ಮಹಿಳೆಗೆ ಸುರಕ್ಷಿತ ವಾತಾವರಣ ಇಲ್ಲ’ ಎಂಬ ವಿಷಯವನ್ನೇ ಈಗ ಆಡಳಿತದಲ್ಲಿರುವ ಟಿಎಂಸಿ ಪಕ್ಷವು ಪ್ರಚಾರಕ್ಕೆ ಬಳಸಿಕೊಳ್ಳುತ್ತಿದೆ.

ಮಹಿಳೆಯು ಪೊಲೀಸ್ ಠಾಣೆಗೆ ದೂರು ನೀಡಿದ ನಂತರ ರಾಜಭವನವು ಪ್ರಕಟಣೆ ಹೊರಡಿಸಿದೆ. ‘ಇದೊಂದು ಸಂಚು. ನನ್ನ ಹೆಸರಿಗೆ ಕಳಂಕ ತಂದು, ಯಾರಾದರೂ ಚುನಾವಣಾ ಲಾಭ ಪಡೆಯಬಹುದು ಎಂದುಕೊಂಡಿದ್ದರೆ ದೇವರು ಅಂತಹವರಿಗೆ ಒಳ್ಳೆಯದನ್ನು ಮಾಡಲಿ’ ಎಂದು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಪ್ರಕಟಣೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಟಿಎಂಸಿ ಪಕ್ಷವನ್ನು ರಾಜ್ಯಪಾಲರು ಪದೇ ಪದೇ ಟೀಕಿಸುತ್ತಾರೆ. ಈ ಕಾರಣಕ್ಕೆ ಅವರು ಬಿಜೆಪಿ ಕೈಗೊಂಬೆ ಎಂದೇ ಟಿಎಂಸಿ ಹೇಳುತ್ತಾ ಬಂದಿದೆ.

ನಿಯಮಾನುಸಾರ ಪಟ್ಟಿ ಪ್ರಕಟ ಸಮಾಜ ಕಲ್ಯಾಣ ಇಲಾಖೆ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭ್ಯರ್ಥಿಗಳಿಗೆ ನೀಡಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಕರ್ನಾಟಕ ಲೋಕಸೇವಾ ಆಯೋಗದ ಮೀಸಲಾತಿ ನಿಯಮಾನುಸಾರವೇ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ ಎಂದು ಕೇಂದ್ರದ ನಿರ್ದೇಶಕರು ಸ್ಪಷ್ಟನೆ ನೀಡಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಯಲ್ಲಿ ಮೇ 1ರ ಸಂಚಿಕೆಯಲ್ಲಿ ಪ್ರಕಟಗೊಂಡ ವರದಿಗೆ ಅವರು ಪ್ರತಿಕ್ರಿಯಿಸಿದ್ದಾರೆ.

‘ರಾಜೇಶ್‌ಕುಮಾರ್ ದರಿಯಾ ವರ್ಸಸ್ ರಾಜಸ್ಥಾನ ಲೋಕಸೇವಾ ಆಯೋಗದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿ ಸಮತಳ ಮೀಸಲಾತಿ ಮಾದರಿಯಲ್ಲಿ ಆಯ್ಕೆ ಮಾಡಲಾಗಿದೆ. ಅದರಂತೆ ಪರಿಶಿಷ್ಟರಲ್ಲೇ ಮೊದಲಿಗೆ ಅಂಗವಿಕಲರು, ಹಾಸ್ಟೆಲ್ ವಿದ್ಯಾರ್ಥಿಗಳು, ವಸತಿ ಶಾಲೆಗಳಲ್ಲಿ ಓದಿದವರು, ಮಹಿಳೆಯರು, ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗಿದೆ. ಉಳಿದ ಶೇ 38ರಷ್ಟು ಸೀಟುಗಳಿಗೆ ಈ ಯಾವುದೇ ವರ್ಗದಲ್ಲಿ ಬಾರದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗಿದೆ’ ಎಂದು ಸಮಜಾಯಿಷಿ ನೀಡಿದ್ದಾರೆ.

ವಿಶ್ವೇಶ್ವರ ಹೆಗಡೆ ಕಾಗೇರಿ ಪರ ಮಹಾರಾಷ್ಟ್ರ ಮುಖ್ಯಮಂತ್ರಿ ಪ್ರಚಾರ

‘ಇಂಡಿ’ ರಾವಣಸೇನೆ: ಏಕನಾಥ ಶಿಂದೆ

ಪ್ರಜಾವಾಣಿ ವಾರ್ತೆ

ಖಾನಾಪುರ: ‘ಪ್ರಧಾನಿ ನರೇಂದ್ರ ಮೋದಿ ಅವರು ರಾಮಸೇನೆ ಮುನ್ನಡೆಸುತ್ತಿದ್ದಾರೆ. ಆದರೆ ‘ಇಂಡಿ’ ಒಕ್ಕೂಟ ಹತ್ತು ತಲೆಯ ರಾವಣ ಸೇನೆಯನ್ನು ಒಳಗೊಂಡಿದೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಗುರುವಾರ ಟೀಕಿಸಿದರು.

ಉತ್ತರ ಕನ್ನಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಪರವಾಗಿ ಖಾನಾಪುರದಲ್ಲಿ ಪ್ರಚಾರ ಸಭೆಯಲ್ಲಿ ಅವರು, ‘ದೇಶಕ್ಕಾಗಿ ತಮ್ಮ ಜೀವನ ಸಮರ್ಪಿಸಿದ ಮೋದಿ ಎಲ್ಲಿ? ವಿದೇಶಗಳಲ್ಲಿ ಭಾರತದ ಮಾನಹಾನಿ ಮಾಡುವ ಕಾಂಗ್ರೆಸ್ ‘ಯುವರಾಜ’ ಎಲ್ಲಿ’ ಎಂದು ರಾಹುಲ್ ಗಾಂಧಿ ಹೆಸರು ಹೇಳದೆ ಲೇವಡಿ ಮಾಡಿದರು.

‘ಮೋದಿ 10 ವರ್ಷಗಳಲ್ಲಿ ದೇಶವನ್ನು ಪ್ರಗತಿಪಥದತ್ತ ಮುನ್ನಡೆಸಿದ್ದಾರೆ. ಭ್ರಷ್ಟರಹಿತ ಆಡಳಿತ ನೀಡಿದ್ದಾರೆ. ಯಾವುದೇ ಅಜೆಂಡಾ ಇಲ್ಲದ ‘ಇಂಡಿ’ ಮೈತ್ರಿ ಕೂಟದಿಂದ ಮೋದಿ ಅವರನ್ನು ಸೋಲಿಸುವುದು ಅಸಾಧ್ಯ’ ಎಂದರು.

‘60 ವರ್ಷಗಳಲ್ಲಿ ಆಗದಷ್ಟು ಅಭಿವೃದ್ಧಿ ಕೆಲಸಗಳನ್ನು ಮೋದಿ ಸರ್ಕಾರ ಹತ್ತೇ ವರ್ಷಗಳಲ್ಲಿ ಮಾಡಿದೆ. ಕಾಂಗ್ರೆಸ್ ಅಧಿಕಾರವಧಿಯಲ್ಲಿ ಹಗರಣಗಳು, ಭ್ರಷ್ಟಾಚಾರ ಮತ್ತು ಬಾಂಬ್ ಸ್ಫೋಟ ಸಾಮಾನ್ಯವಾಗಿದ್ದವು. ಇಂದು ದೇಶ ಅಭಿವೃದ್ಧಿಯತ್ತ ಹೆಜ್ಜೆಹಾಕುತ್ತಿದೆ’ ಎಂದರು.

‘ಕಾಂಗ್ರೆಸ್ ಸುಡುವ ಮನೆ ಎಂದಿದ್ದು ಅಂಬೇಡ್ಕರ್’: ‘ಮೋದಿ ಅವರು ಸಂವಿಧಾನ ಬದಲಿಸುತ್ತಿದ್ದಾರೆ ಎಂದು ಕಾಂಗ್ರೆಸ್‌ನವರು ಪ್ರಚಾರ ಮಾಡುತ್ತಿದ್ದಾರೆ. ಇಂತಹ ಅಪಪ್ರಚಾರಕ್ಕೆ ಜನತೆ ಬಲಿ ಆಗಬಾರದು. ಬಾಬಾಸಾಹೇಬ ಕಾಂಗ್ರೆಸ್ ಪಕ್ಷವನ್ನು ಸುಡುವ ಮನೆ ಎಂದು ಅಂಬೇಡ್ಕರ್ ಟೀಕಿಸಿದ್ದರು’ ಎಂದು ಶಿಂದೆ ಹೇಳಿದರು.



ಖಾನಾಪುರದಲ್ಲಿ ಗುರುವಾರ ನಡೆದ ಉತ್ತರ ಕನ್ನಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಪರ ಪ್ರಚಾರ ಸಭೆಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಮಾತನಾಡಿದರು

ಶಿಂದೆ ಹತ್ತಿರ ಸುಳಿಯದ ಎಂಇಎಸ್

ಉತ್ತರ ಕನ್ನಡ ಕ್ಷೇತ್ರದಲ್ಲಿ ಎಂಇಎಸ್ ಅಭ್ಯರ್ಥಿ ಕೂಡ ಕಣದಲ್ಲಿದ್ದಾರೆ. ಆದರೆ, ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಗುರುವಾರ ಬಿಜೆಪಿ ಪರವಾಗಿ ಬಹಿರಂಗ ಪ್ರಚಾರ ಮಾಡಿದರು.

ಶಿಂದೆ ಬಿಜೆಪಿ ಪರ ಪ್ರಚಾರಕ್ಕೆ ಬಂದರೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು ಎಂದು ಎಂಇಎಸ್ ಮುಖಂಡರು ಹೇಳಿದ್ದರು. ಆದರೆ, ಗುರುವಾರ ಯಾರೂ ಹತ್ತಿರ ಸುಳಿಯಲಿಲ್ಲ.

‘ಶಬ್ದ’ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಇಲ್ಲಿನ ಶಬ್ದ್ ಸಂಸ್ಥೆಯು ಹಿಂದಿ ಸಾಹಿತ್ಯ ಕ್ಷೇತ್ರ ಹಾಗೂ ಹಿಂದಿ ಪ್ರಚಾರ ಸೇವೆಗೆ ನೀಡಿದ ಕೊಡುಗೆಗಾಗಿ ಪ್ರಾರಂಭಿಸಿದ್ದ ‘ಅಗ್ಯೇಯ ಶಬ್ದ ಸೃಜನ್ ಸಮ್ಮಾನ್’ ಹಾಗೂ ‘ದಕ್ಷಿಣ ಭಾರತ ಶಬ್ದ ಹಿಂದಿ ಸೇವಾ ಸಮ್ಮಾನ್’ ಪ್ರಶಸ್ತಿಗಳಿಗೆ ಪ್ರವೇಶಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಗಳು ಕ್ರಮವಾಗಿ ₹1 ಲಕ್ಷ ಹಾಗೂ ₹21 ಸಾವಿರ ನಗದು ಒಳಗೊಂಡಿವೆ. ‘ಅಗ್ಯೇಯ ಶಬ್ದ ಸೃಜನ್ ಸಮ್ಮಾನ್’ ಪ್ರಶಸ್ತಿಗೆ ಸಾಹಿತಿಗಳು, ಕವಿಗಳು, ಬರಹಗಾರರನ್ನು ಸಾಹಿತ್ಯಿಕ ಕೊಡುಗೆಗಳ ಆಧಾರದ ಮೇಲೆ ಶಿಫಾರಸು ಮಾಡಬಹುದಾಗಿದೆ. 2021ರಿಂದ 2023ರವರೆಗೆ ಪ್ರಕಟವಾದ ಅವರ ಕೃತಿಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಿ, ಆಯ್ಕೆ ಮಾಡಲಾಗುತ್ತದೆ ಎಂದು ಶಬ್ದ ಲಿಟರರಿ ಸೊಸೈಟಿ ಅಧ್ಯಕ್ಷ ಶ್ರೀನಾರಾಯಣ ಸಮೀರ್ ತಿಳಿಸಿದ್ದಾರೆ.

ಶಿಫಾರಸು ಮಾಡಲಾದ ಲೇಖಕರ ಹೆಸರಿನ ಜತೆಗೆ ಸಂಪರ್ಕ ವಿಳಾಸ ಹಾಗೂ ಮೂರು ವರ್ಷಗಳಲ್ಲಿ ಪ್ರಕಟವಾದ ಅವರ ಪುಸ್ತಕಗಳ ವಿವರ ಸಹಿತ ಸಂಕ್ಷಿಪ್ತ ವಿವರಣೆಯನ್ನು ಸಲ್ಲಿಸಬೇಕು. ಪ್ರವೇಶದೊಂದಿಗೆ ಪುಸ್ತಕದ ನಾಲ್ಕು ಪ್ರತಿಗಳನ್ನು ಕಳುಹಿಸಬೇಕು ಎಂದು ಹೇಳಿದ್ದಾರೆ.

ಶಿಫಾರಸು ನಮೂದುಗಳನ್ನು ಜೂನ್ 30ರೊಳಗೆ ಅಧ್ಯಕ್ಷರು, ಶಬ್ದ್, ಬಿ-8/403, ಶ್ರೀರಾಮ್ ಸ್ಪಂದನ್, ಚೆಲ್ಲಘಟ್ಟ, ಬೆಂಗಳೂರು- 560037 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.



ಸಂಗೀತೋತ್ಸವ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್ ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ ‘86ನೇ ಶ್ರೀ ರಾಮನವಮಿ ಸಂಗೀತೋತ್ಸವ’ದಲ್ಲಿ ಮಲ್ಲಾಡಿ ಸಹೋದರರು ವಿಶೇಷ ಕರ್ನಾಟಕ ಸಂಗೀತ ಕಛೇರಿಯನ್ನು ಗುರುವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಅಂಗವಿಕಲರಿಗೆ ‘ಉದ್ಯೋಗ ಮೇಳ’ ನಾಳೆ

ಬೆಂಗಳೂರು: ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ ವತಿಯಿಂದ ಇದೇ 4ರಂದು ಅಂಗವಿಕಲರಿಗಾಗಿ ‘ನಮ್ಮ ಜೊಬಾಥನ್–2024‘ ಉದ್ಯೋಗ ಮೇಳ’ವನ್ನು ಬಸವನಗುಡಿಯಲ್ಲಿರುವ ಎಪಿಎಸ್ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಆಯೋಜಿಸಲಾಗಿದೆ.

ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯ ಜೊತೆಗೆ, ಬೆಂಗಳೂರಿನ ರೋಟರಿ ಎಬಿಲಿಟೀಸ್, ಸಾಹಿರ ಜಾಬ್ಸ್.ವಿನ್ ಮತ್ತು ವಿನ್ಯಾಸ ಫೌಂಡೇಷನ್ ಸಹಯೋಗವಿದೆ. ಪದವಿ, ಪದವಿಪೂರ್ವ, 10ನೇ ತರಗತಿ ಉತ್ತೀರ್ಣರಾದ ಅಂಗವಿಕಲರು ಭಾಗವಹಿಸಬಹುದು. ಆಸಕ್ತರು https://nammajobathon2024.wordpress.com/ ಲಿಂಕ್ ಮೂಲಕ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ: 63607 52091 ಸಂಪರ್ಕಿಸಿ.

‘ವಿಗೌರಾ’ ಹೆಸರು ಬಳಸದಂತೆ ಔಷಧ ಕಂಪನಿಗೆ ನಿರ್ದೇಶನ

ನವದೆಹಲಿ(ಪಿಟಿಐ): ಲೈಂಗಿಕ ಸಮಸ್ಯೆಗಳಿಗೆ ನೀಡುವ ಚಿಕಿತ್ಸೆಯಲ್ಲಿ ಬಳಸುವ ಔಷಧವನ್ನು ‘ವಿಗೌರಾ’ ಎಂಬ ಹೆಸರಿನಡಿ ಇನ್ನು ಮುಂದೆ ಮಾರಾಟ ಮಾಡದಂತೆ ಹೋಮಿಯೋಪತಿ ಔಷಧ ತಯಾರಕ ಕಂಪನಿ ರಿನೊವಿಷನ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ಗೆ ದೆಹಲಿ ಹೈಕೋರ್ಟ್ ಆದೇಶಿಸಿದೆ.

ಅಲೋಪತಿ ಔಷಧಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಫೈಜರ್ ಪ್ರಾಡಕ್ಟ್ಸ್ ಕಂಪನಿಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜೀವ್ ನರೂಲಾ, ಬುಧವಾರ ಈ ಆದೇಶ ಹೊರಡಿಸಿದ್ದಾರೆ.

ನಿಮಿರುವಿಕೆ ಸಮಸ್ಯೆ ಚಿಕಿತ್ಸೆಯಲ್ಲಿ ಬಳಸುವ ‘ವಯಾಗ್ರ’ ಔಷಧವನ್ನು ಫೈಜರ್ ಕಂಪನಿ ಉತ್ಪಾದಿಸಿ, ಮಾರಾಟ ಮಾಡುತ್ತಿದೆ.

‘ವಯಾಗ್ರ ಎಂಬುದು ಕಂಪನಿಯ ಉತ್ಪನ್ನದ ಟ್ರೇಡ್‌ಮಾರ್ಕ್ ಆಗಿದ್ದು, ಈ ಹೆಸರನ್ನೇ ಧ್ವನಿಸುವಂತಹ ‘ವಿಗೌರಾ’ ಎಂಬ ಹೋಮಿಯೋಪತಿ ಔಷಧವನ್ನು ಮಾರಾಟ ಮಾಡುತ್ತಿರುವುದು ಕಾನೂನಿನ ಉಲ್ಲಂಘನೆ’ ಎಂದು ಫೈಜರ್ ಕಂಪನಿ ಅರ್ಜಿ ಸಲ್ಲಿಸಿತ್ತು.



‘ಈ ಎರಡೂ ಔಷಧಗಳ ಉಚ್ಚಾರಣೆಯಲ್ಲಿ ಬಹಳಷ್ಟು ಸಾಮ್ಯತೆ ಇದ್ದು, ಗ್ರಾಹಕರಲ್ಲಿ ಗೊಂದಲವನ್ನು ಸೃಷ್ಟಿಸುವ ಸಾಧ್ಯತೆಯೂ ಇದೆ. ಹಾಗಾಗಿ, ವಿಗೌರಾ ಅಥವಾ ಫೈಜರ್‌ನ ಟ್ರೇಡ್‌ಮಾರ್ಕ್ ‘ವಯಾಗ್ರ’ ಹೋಲುವಂತಹ ಹೆಸರನ್ನು ಬಳಸಬಾರದು’ ಎಂದು ರಿನೊವಿಷನ್ ಎಕ್ಸ್‌ಪೋರ್ಟ್ಸ್ ಕಂಪನಿಗೆ ನ್ಯಾಯಮೂರ್ತಿ ನರೂಲಾ ನಿರ್ದೇಶನ ನೀಡಿದ್ದಾರೆ.

‘ತನಗೆ ಉಂಟಾಗಿರುವ ಹಾನಿಗೆ ಸಂಬಂಧಿಸಿ ಫೈಜರ್ ಕಂಪನಿಯು ಪ್ರತಿವಾದಿಯಿಂದ ₹3 ಲಕ್ಷ ಪರಿಹಾರ ವಸೂಲಿ ಮಾಡಲು ಅರ್ಹವಾಗಿದೆ’ ಎಂದೂ ಆದೇಶದಲ್ಲಿ ತಿಳಿಸಿದ್ದಾರೆ.

ಚಿತ್ರಕಲಾ ವಿದ್ಯಾಲಯದ ಪ್ರವೇಶಾತಿ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಚಿತ್ರಕಲಾ ಮಹಾವಿದ್ಯಾಲಯದಲ್ಲಿ 2024–25ನೇ ಸಾಲಿನ ಪ್ರವೇಶಾತಿ ಪ್ರಾರಂಭವಾಗಿದೆ.

ಬನಶಂಕರಿ 6ನೇ ಹಂತದ ಡಾ. ವಿಷ್ಣುವರ್ಧನ್ ರಸ್ತೆಯಲ್ಲಿಯುವ ಮಹಾವಿದ್ಯಾಲಯ, ರಾಜರಾಜೇಶ್ವರಿ ನಗರದಲ್ಲಿ ಕ್ಯಾಂಪಸ್ ಹೊಂದಿದೆ. ನಾಲ್ಕು ವರ್ಷಗಳ ಬ್ಯಾಚುಲರ್ ಆಫ್ ವಿಶ್ಯುವಲ್ ಆರ್ಟ್ಸ್ (ಬಿವಿಎ) ಪದವಿಗೆ ಪ್ರವೇಶ ಪಡೆಯುವವರು ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಈ ಪದವಿಯಡಿ ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ಮೇಕಿಂಗ್, ಅನ್ವಯಿಕ ಕಲೆ, ಸೆರಾಮಿಕ್ಸ್, ಅನಿಮೇಶನ್ ಹಾಗೂ ಕಲಾ ಇತಿಹಾಸ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು ಎಂದು ಚಿತ್ರಕಲಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಶಿಧರ್ ರಾವ್ ತಿಳಿಸಿದ್ದಾರೆ.

ಅರ್ಜಿಯ ಪ್ರತಿಗಳು thecfa.artನಲ್ಲಿ ದೊರೆಯಲಿವೆ. ವಿವರಕ್ಕೆ ಮೊ. 6364917676ಕ್ಕೆ ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ರಾಮನಗರ: ನೈಸ್ ರಸ್ತೆ ಬಳಿ ದ್ವಿಚಕ್ರ ವಾಹನಕ್ಕೆ ಕಂಟೇನರ್ ಡಿಕ್ಕಿ ಹೊಡೆದು ಸ್ಕೂಟರ್ ಸವಾರ ಮೋಹನ್ ಎನ್. (57) ಬುಧವಾರ ಮೃತಪಟ್ಟಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾತಗುಣಿ ನಿವಾಸಿಯಾದ ಮೋಹನ್ ಕಾರ್ಯ ನಿಮಿತ್ತ ಕಾಮಾಕ್ಷಿಪಾಳ್ಯಕ್ಕೆ ಹೋಗಿ ಬರುವುದಾಗಿ ಹೇಳಿ ಬೆಳಿಗ್ಗೆ ಮನೆಯಿಂದ ಹೊರಟಿದ್ದರು.

ಸ್ಕೂಟರ್‌ನಲ್ಲಿ ಹೊರಟಿದ್ದ ಮೋಹನ್ ಅವರಿಗೆ ಹಿಂದಿನಿಂದ ವೇಗವಾಗಿ ಬಂದ ಕಂಟೇನರ್ ಡಿಕ್ಕಿ ಹೊಡಿದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು. ಮೋಹನ್ ಅವರಿಗೆ ಪತ್ನಿ ಮತ್ತು ಮೂವರು ಪುತ್ರಿಯರಿದ್ದಾರೆ. ಘಟನೆ ಕುರಿತು ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಹಿಂಬದಿ ಸವಾರ ಸಾವು (ರಾಮನಗರ): ತಾಲ್ಲೂಕಿನ ಮಾಯಗಾನಹಳ್ಳಿ ಬಳಿಯ ಬೆಂಗಳೂರು–ಮೈಸೂರು ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಈಚೆಗೆ ಕಾರು ಡಿಕ್ಕಿ ಹೊಡೆದು ಬೈಕ್ ಹಿಂಬದಿ ಸವಾರ ಮೃತಪಟ್ಟಿದ್ದು, ಸವಾರ ಗಾಯಗೊಂಡಿದ್ದಾನೆ.

ರಾಮನಗರದ ಯಾರಬ್‌ನಗರ ನಿವಾಸಿ ನವೀದ್ ಖಾನ್ (22) ಮೃತಪಟ್ಟಿದ್ದು, ಬೈಕ್ ಸವಾರ ತೌಸಿಫ್ ಪಾಷಾ ಎಂಬುವರ ಕೈ, ಕಾಲುಗಳಿಗೆ ಗಾಯಗಳಾಗಿವೆ.

ಮಾಯಗಾನ ಹಳ್ಳಿಯ ಚಾಮುಂಡೇಶ್ವರಿ ನರ್ಸರಿ ಬಳಿ ಸರ್ವೀಸ್ ರಸ್ತೆಯಲ್ಲಿ ವೇಗವಾಗಿ ಬಂದ ಕಾರು ಚಾಲಕ, ಬೈಕ್‌ಗೆ ಗುದ್ದಿ ಪರಾರಿಯಾಗಿದ್ದಾನೆ.

ನಿಧನ ವಾರ್ತೆ

ಯಕ್ಷಗಾನ ಕಲಾವಿದ ಗಂಗಾಧರ ಪುತ್ತೂರು




ಮಂಗಳೂರು: ಶ್ರೀ ಧರ್ಮಸ್ಥಳ ಯಕ್ಷಗಾನ ಮೇಳದಲ್ಲಿ 42 ವರ್ಷ ತಿರುಗಾಟ ನಿರ್ವಹಿಸಿದ ಸವ್ಯಸಾಚಿ ಕಲಾವಿದ ಗಂಗಾಧರ ಪುತ್ತೂರು (59) ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.

ಗುರುವಾರ ಕೋಟ ಗಾಂಧಿ ಮೈದಾನದಲ್ಲಿ ನಡೆದ ಯಕ್ಷಗಾನದಲ್ಲಿ ‘ಧರ್ಮಸ್ಥಳ ಕ್ಷೇತ್ರ ಮಹಾತ್ಮೆ’ ಪ್ರಸಂಗದ ಕುಕ್ಕಿತ್ತಾಯನ ವೇಷ ನಿರ್ವಹಿಸಿ, ಚೌಕಿಗೆ ಮರಳಿ ಕಿರೀಟ, ಆಭರಣಗಳನ್ನು ತೆಗೆದಿಟ್ಟು ಮುಖದ ಬಣ್ಣ ತೆಗೆಯುತ್ತಿರುವಾಗ ಅವರಿಗೆ ತೀವ್ರ ಹೃದಯಾಘಾತವಾಗಿ, ಮೃತಪಟ್ಟಿದ್ದಾರೆ.

ನಾರಾಯಣ ಮಯ್ಯ ಮತ್ತು ಲಕ್ಷ್ಮಿ ದಂಪತಿಯ ಪುತ್ರನಾಗಿ 1964ರಲ್ಲಿ ಪುತ್ತೂರು ತಾಲ್ಲೂಕಿನ ಸೇಡಿಯಾಪು ಮನೆಯಲ್ಲಿ ಜನಿಸಿದ ಅವರು, ಏಳನೇ ತರಗತಿವರೆಗೆ ವಿದ್ಯಾಭ್ಯಾಸ ಪಡೆದು, ನಂತರ ಕೆ.ಗೋವಿಂದ ಭಟ್, ಕರ್ಗಲ್ಲು ವಿಶ್ವೇಶ್ವರ ಭಟ್ ಅವರಲ್ಲಿ ನಾಟ್ಯಾಭ್ಯಾಸ ಕಲಿತರು. 18ನೇ ವಯಸ್ಸಿನಿಂದ ಮೇಳ ತಿರುಗಾಟ ಆರಂಭಿಸಿದ ಅವರು, ಸ್ತ್ರೀ ವೇಷ, ಪುಂಡು ವೇಷ, ರಾಜ ವೇಷ ನಿರ್ವಹಿಸುವಲ್ಲಿ ಎತ್ತಿದ ಕೈಯಾಗಿದ್ದರು.

ಮಾಲಿನಿ, ಚಿತ್ರಾಂಗದೆ, ಮೋಹಿನಿ, ದಾಕ್ಷಾಯಿಣಿ, ಪ್ರಮೀಳೆ, ಶ್ರೀದೇವಿ, ಸೀತೆ, ದೇವೇಂದ್ರ, ದುಶ್ಯಾಸನ ಮೊದಲಾದ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಾಸ್ಯದ ಸ್ತ್ರೀ ಪಾತ್ರಗಳನ್ನು ನಿರ್ವಹಿಸುವ ಪ್ರೌಢಿಮೆ ಅವರಲ್ಲಿತ್ತು.

ಅಯ್ಯಪ್ಪ ಮಸಗಿ



ಬೆಂಗಳೂರು: ಜಲತಜ್ಞ ಅಯ್ಯಪ್ಪ ಮಸಗಿ (67) ಹೃದಯಾಘಾತದಿಂದ ಗುರುವಾರ ನಿಧನರಾದರು.

ಮೃತರಿಗೆ ಪತ್ನಿ, ಮೂವರು ಪುತ್ರಿಯರು ಹಾಗೂ ಒಬ್ಬ ಪುತ್ರರಿದ್ದಾರೆ.

ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನ ಹೊಲವನಹಳ್ಳಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಯ್ಯಪ್ಪ ಮಸಗಿಯವರು ಮೂರು ದಶಕಗಳಿಗೂ ಹೆಚ್ಚು ಕಾಲ ನಾಡಿನ ಉದ್ದಗಲಕ್ಕೂ ಜಲಸಂರಕ್ಷಣೆ ಕುರಿತು ಜಾಗೃತಿ ಮೂಡಿಸಿದ್ದಾರೆ. ಇವರ ಜಲ ಸಂರಕ್ಷಣೆಯ ಕಾರ್ಯಕ್ಕಾಗಿ ಹಲವು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ.


ನಗರದಲ್ಲಿ ಇಂದು

ಡಾ. ವೀಣಾ ಸ್ಮರಣ, ಉಪನ್ಯಾಸ ಮಾಲಿಕೆ ಮತ್ತು ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಡಾ.ಎಂ. ನಾರಾಯಣಸ್ವಾಮಿ, ‘ಫಾರ್ ದಿ ಟ್ರುಥ್ ಆಫ್ ಲೈಫ್’ ಕುರಿತು ಉಪನ್ಯಾಸ: ಡಾ.ಆರ್. ಉಮಾ ಶಂಕರ್, ಪ್ರಶಸ್ತಿ ಪುರಸ್ಕೃತರು: ಸಿ.ಎಸ್. ಪಲ್ಲವಿ, ಜಿ.ಎಸ್. ಚಂದನ್, ಆಯೋಜನೆ: ಪಶುವೈದ್ಯಕೀಯ ಶರೀರ ವಿಜ್ಞಾನ ವಿಭಾಗ, ಸ್ಥಳ: ಕರ್ನಾಟಕ ಪಶುವೈದ್ಯಕೀಯ ಕೌನ್ಸಿಲ್‌ನ ಸಭಾಂಗಣ, ಪಶುವೈದ್ಯಕೀಯ ಕಾಲೇಜಿನ ಆವರಣ, ಹೆಬ್ಬಾಳ, ಬೆಳಿಗ್ಗೆ 10.30

ದತ್ತಿ ಉಪನ್ಯಾಸ ಮತ್ತು ಕಾಯಕ ದಿನಾಚರಣೆ: ಅಧ್ಯಕ್ಷತೆ: ರವಿಶಂಕರ್, ‘ಕಾಯಕ ಶರಣೆಯರು’ ಉಪನ್ಯಾಸ: ಪದ್ಮಾ ಟಿ. ಚಿನ್ಮಯಿ, ಸನ್ಮಾನ: ಮಾಲಾ, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, 1ನೇ ಮುಖ್ಯರಸ್ತೆ, 8ನೇ ವಿಭಾಗ, ಜಯನಗರ, ಸಂಜೆ 5.30

ಅಂತರರಾಷ್ಟ್ರೀಯ ಜಾನಪದ ಕಲಾ ಜಾಥಾ: ಪ್ರಸ್ತುತಿ: ಜಪಾನೀಸ್ ಹಿಬಿಕಿ ತಂಡ, ಇಂಡಿಯನ್ ಫೋಕ್ ಬ್ಯಾಂಡ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

‘ಕೆರೆಗಳ ನಗರಿಯಿಂದ ಟ್ಯಾಂಕರ್ ನಗರದೆಡೆಗೆ’ ಕುರಿತು ಸಂವಾದ: ಭಾಷಣಕಾರರು: ಸುರೇಶ್ ಹೆಬ್ಳೀಕರ್, ವಿಜಯ್ ನಿಶಾಂತ್, ರಾಘವೇಂದ್ರ ಪಚ್ಚಾಪುರ್, ಆರ್. ಮಂಜುನಾಥ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ



ಸುರೇಶ್ ಹೆಬ್ಳೀಕರ್

ರಾಮನವಮಿ ಸಂಗೀತೋತ್ಸವ: **ಗಾಯನ:** ವರ್ಷಾ ಶೆಣೈ, ಅಮೇಯ ವಿಧ್ವಾತ್ರಿ, ಪಿಟೀಲು: ನಿಮಿಷ ಸಂಜಯ್, ಮೃದಂಗ: ಸುಧೀಂದ್ರ ಆಪ್ಟೆ, ಯುಗಳ ವೇಣು ವಾದನ: ಜಿ. ಮೋಹನ್ ರಂಗನ್, ಜಿ. ರವಿಕಿರಣ್, ಪಿಟೀಲು: ಅದಿತಿ ಕೃಷ್ಣಪ್ರಕಾಶ್, ಮೃದಂಗ: ಕೆ.ಯು. ಜಯಚಂದ್ರ ರಾವ್, ಖಂಜಿರ: ಅನಿಲ್ ಪರಾಶರ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ–2024: ವಿಶೇಷ ಸಂಗೀತ ಕಛೇರಿ: ದತ್ತಪ್ರಸಾದ್ ಅವಧೂತ್ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಹರೀಶ್ ಶಿವರಾಮಕೃಷ್ಣನ್, ಮೈಸೂರು ಕಾರ್ತಿಕ್, ರಾಜೇಶ್ ನಾಥ್, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಆಮಂತ್ರಣವನ್ನು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕೋಲ್ಕತ್ತದಿಂದ ಬಂದ ಯುವಕನ ವಿರುದ್ಧ ಪ್ರಕರಣ

ವಿಮಾನದ ತುರ್ತು ಬಾಗಿಲು ತೆಗೆಯಲು ಯತ್ನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಕೋಲ್ಕತ್ತಾದಿಂದ ಸೋಮವಾರ ರಾತ್ರಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಇಂಡಿಗೊ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಪಶ್ಚಿಮ ಬಂಗಾಳದ ಯುವಕನೊಬ್ಬ ವಿಮಾನ ನಿಲ್ಲುವ ಮೊದಲೇ ತುರ್ತು ನಿರ್ಗಮನ ಬಾಗಿಲು ತೆಗೆಯಲು ಯತ್ನಿಸಿದ್ದಾನೆ.

ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಯ ಕೌಶಿಕ್ ಕರಣ್ (22) ಎಂಬ ಪ್ರಯಾಣಿಕನ ವಿರುದ್ಧ ಇಂಡಿಗೊ ವಿಮಾನಯಾನ ಸಂಸ್ಥೆಯು ಕೆಂಪೇಗೌಡ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ಐಪಿಸಿ ಸೆಕ್ಷನ್ 336 (ಇತರರ ಜೀವ, ವೈಯಕ್ತಿಕ ಸುರಕ್ಷತೆಗೆ ಅಪಾಯ ತಂದೊಡ್ಡುವ ಕೃತ್ಯ) ಅಡಿ ಯುವಕನ ವಿರುದ್ಧ ಪ್ರಕರಣ ದಾಖಲಾಗಿದೆ.

ವಿಮಾನದ ತುರ್ತು ನಿರ್ಗಮನ ಬಾಗಿಲು ಬಳಿಯ ಆಸನ ಸಂಖ್ಯೆ 18ರಲ್ಲಿ ಕುಳಿತಿದ್ದ ಕೌಶಿಕ್ ವಿಮಾನ ನಿಲ್ಲುವ ಮೊದಲೇ ಬಾಗಿಲು ತೆಗೆಯಲು ಯತ್ನಿಸುತ್ತಿರುವುದು ಕ್ಯಾಬಿನ್ ಸಿಬ್ಬಂದಿ ಗಮನಕ್ಕೆ ಬಂದಿದೆ. ತಕ್ಷಣ ಆತನನ್ನ ಭದ್ರತಾ ಸಿಬ್ಬಂದಿ ವಶಕ್ಕೆ ಒಪ್ಪಿಸಿದ್ದಾರೆ.

ಈ ಯುವಕ ಮೊದಲ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿರುವುದರಿಂದ ಗೊತ್ತಿಲ್ಲದೆ ಈ ಘಟನೆ ನಡೆದಿದೆ ಎಂಬ ವಿಷಯ ಪ್ರಾಥಮಿಕ ವಿಚಾರಣೆಯಲ್ಲಿ ತಿಳಿದುಬಂದಿದೆ.

ವಿಮಾನದಿಂದ ನಿರ್ಗಮಿಸುವಾಗ ಅನುಸರಿಸಬೇಕಾದ ನಿಯಮಗಳ ಬಗ್ಗೆ ಯುವಕನಿಗೆ ಗೊತ್ತಿರಲಿಲ್ಲ. ಉದ್ದೇಶಪೂರ್ವಕವಾಗಿ ಆತ ಈ ಕೃತ್ಯ ಎಸಗಿಲ್ಲ ಎಂಬುವುದು ಮೇಲ್ನೋಟಕ್ಕೆ ಕಂಡುಬಂದಿದೆ. ತಾನು ಕುಳಿತ ಆಸನದಿಂದ ಮೇಲೇಳುವಾಗ ಆತ ಮುಂದಿದ್ದ ತುರ್ತು ನಿರ್ಗಮನದ ಬಾಗಿಲು ಹಿಡಿದು ಕೊಂಡಿದ್ದಾನೆ. ಬೆಂಗಳೂರಿನಲ್ಲಿರುವ ಸಂಬಂಧಿಕರನ್ನು ಭೇಟಿ ಮಾಡಲು ಆತ ಕೋಲ್ಕತ್ತಾದಿಂದ ಬಂದಿದ್ದಾನೆ ಎಂದು ವಿಚಾರಣೆ ವೇಳೆ ತಿಳಿದುಬಂದಿದೆ.

‘ಸಮನ್ಸ್ ಬಂದಾಗ ತನಿಖಾಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗುವಂತೆ ತಿಳಿಸಿ, ಆತನನ್ನು ಬಿಟ್ಟು ಕಳುಹಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸುರಕ್ಷಿತ ನಗರ' ಯೋಜನೆ ಅಡಿ 60 ಕೇಂದ್ರಗಳ ಸ್ಥಾಪನೆ • ಸಂಕಷ್ಟಕ್ಕೆ ಸ್ಪಂದಿಸಲಿರುವ ಪೊಲೀಸರು

ಮಹಿಳಾ ಸುರಕ್ಷತೆಗೆ ಬಹೂಪಯೋಗಿ 'ನೆರವು'

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದಲ್ಲಿ ಮಹಿಳೆಯರು, ಮಕ್ಕಳು ಹಾಗೂ ವೃದ್ಧರ ಸುರಕ್ಷತೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವ ಪೊಲೀಸ್ ಇಲಾಖೆ, ವಿವಿಧ ಕಡೆಗಳಲ್ಲಿ 'ನೆರವು' ಬಹೂಪಯೋಗಿ ಸಹಾಯ ಕೇಂದ್ರವನ್ನು ತೆರೆದಿದೆ.

'ಸುರಕ್ಷಿತ ನಗರ' ಯೋಜನೆ ಅಡಿ ನೆರವು ಕೇಂದ್ರ ತೆರೆಯಲಾಗಿದ್ದು, ಮಹಿಳೆಯರಿಗೆ ನೆರವಾಗಲು ಪ್ರತ್ಯೇಕ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ.

ನಗರದ ಕಮಿಷನರೇಟ್ ವ್ಯಾಪ್ತಿಯಲ್ಲಿ 60 ಸ್ಥಳಗಳಲ್ಲಿ ಪೊಲೀಸ್ 'ನೆರವು' ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮಹಿಳೆಯರ ಮೇಲೆ ದೌರ್ಜನ್ಯ ಸೇರಿದಂತೆ ಯಾವುದೇ ರೀತಿಯ ತೊಂದರೆಯಾದ ಸಂದರ್ಭದಲ್ಲಿ ತುರ್ತಾಗಿ ಸ್ಪಂದಿಸುವ ಉದ್ದೇಶದಿಂದ ಈ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೊದಲ ಹಂತದಲ್ಲಿ ಮಹಿಳೆಯರು ಹೆಚ್ಚಾಗಿ ಸಂಚರಿಸುವ, ಸಾಫ್ಟ್‌ವೇರ್ ಕಂಪನಿಗಳಿರುವ ಹಾಗೂ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲಾದ ಸ್ಥಳಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

'ನಗರದ ಮೆಜೆಸ್ಟಿಕ್, ಕಾರ್ಪೊರೇಷನ್ ವೃತ್ತ, ಸ್ವಾತಂತ್ರ್ಯ ಉದ್ಯಾನ, ರೇಸ್‌ಕೋರ್ಸ್ ರಸ್ತೆ, ಮಲ್ಲೇಶ್ವರ, ಮೌರ್ಯ ವೃತ್ತ, ಪುರಭವನ, ಶಾಂತಿನಗರ ಬಸ್ ನಿಲ್ದಾಣ ಸೇರಿದಂತೆ ನಗರದ 60 ಪ್ರದೇಶಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ತಲಾ ₹5 ಲಕ್ಷ ವೆಚ್ಚದಲ್ಲಿ 20 ಅಡಿ ಉದ್ದ, 10 ಅಡಿ ಅಗಲದ ವಿಸ್ತೀರ್ಣದಲ್ಲಿ ಈ ಕೇಂದ್ರಗಳನ್ನು ನಿರ್ಮಿಸಲಾಗಿದ್ದು, ಅಗತ್ಯ ಸೌಲಭ್ಯಗಳನ್ನು ಒಳಗೊಂಡಿವೆ. ಈ ಕೇಂದ್ರದಲ್ಲಿ ಮಹಿಳಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ' ಎಂದು ಪೊಲೀಸರು ತಿಳಿಸಿದರು.

'ನಗರದಲ್ಲಿ ಮಹಿಳೆಯರ ಓಡಾಟ ಹೆಚ್ಚಿರುವ ಪ್ರದೇಶಗಳಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ. ದೇಶದ ಬೇರೆ ಬೇರೆ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಮಹಿಳೆಯರ ಓಡಾಟ ಹೆಚ್ಚಿರುತ್ತದೆ. ಬಸ್‌ಗಳಿಗಾಗಿ ಕಾಯುವವರು, ಬಸ್‌ಗಳನ್ನು ತಪ್ಪಿಸಿಕೊಳ್ಳುವ ಮಹಿಳೆಯರು ಈ ಕೇಂದ್ರಗಳಿಗೆ ಭೇಟಿ ನೀಡಿ ವಿಶ್ರಾಂತಿ ಪಡೆದುಕೊಳ್ಳಬಹುದು. ನಗರಕ್ಕೆ ಹೊಸದಾಗಿ ಬಂದವರು, ಕಾಣೆಯಾದವರ ಬಗ್ಗೆ ಹೆಚ್ಚು ದೂರುಗಳು ಬರುತ್ತವೆ. ಅಂತಹ ದೂರುಗಳನ್ನು ಸ್ವೀಕರಿಸಿ, ಅವರಿಗೆ ಸಹಾಯ ಮಾಡುತ್ತೇವೆ. ಲೈಂಗಿಕ ದೌರ್ಜನ್ಯ, ಅಪಹರಣ ಸೇರಿದಂತೆ ಗಂಭೀರ ಪ್ರಕರಣಗಳಿಗೆ ಸಂಬಂಧಿಸಿದ ದೂರುಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಕೇಂದ್ರದ ಸಿಬ್ಬಂದಿ ಮಾಹಿತಿ ನೀಡಿದರು.



ಶಾಂತಿನಗರ ಬಸ್ ನಿಲ್ದಾಣದ ಬಳಿ ಇರುವ ಪೊಲೀಸ್ ನೆರವು ಕೇಂದ್ರ –ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಮಹಿಳೆಯರು ಸಂಕಷ್ಟದಲ್ಲಿರುವ ಸಂದರ್ಭ ಹಾಗೂ ತುರ್ತು ಪರಿಸ್ಥಿತಿಯಲ್ಲಿ ರಕ್ಷಣೆ ನೀಡಲು ನೆರವು ಕೇಂದ್ರ ಆರಂಭಿಸಲಾಗಿದೆ

ಬಿ. ದಯಾನಂದ್
ಬೆಂಗಳೂರು ಪೊಲೀಸ್ ಕಮೀಷನರ್

'ನೆರವು' ಕೇಂದ್ರದ ವಿಶೇಷ

ನೆರವು ಕೇಂದ್ರದಲ್ಲಿ ನಾಲ್ಕು ಬೆಡ್‌ಗಳು, ಶೌಚಾಲಯ, ಎಲ್‌ಇಡಿ ದೀಪಗಳು, ಎರಡು ಸೀಲಿಂಗ್ ಫ್ಯಾನ್, 300 ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ ಹಾಗೂ ತುರ್ತು ಚಿಕಿತ್ಸಾ ಪೆಟ್ಟಿಗೆ ಇವೆ ಎಂದು ಪೊಲೀಸರು ತಿಳಿಸಿದರು.

'ನಗರದಲ್ಲಿ ಮಳೆಯಾದ ಸಂದರ್ಭದಲ್ಲಿ ಮಹಿಳೆಯರು ಈ ಕೇಂದ್ರದಲ್ಲಿ ನೆರವು ಪಡೆದುಕೊಳ್ಳಬಹುದು. ರಾತ್ರಿ ಸಮಯದಲ್ಲಿ ಬೇರೆ ಪ್ರದೇಶಗಳಿಂದ ಬೆಂಗಳೂರಿಗೆ ಬರುವ ಮಹಿಳೆಯರು ಈ ಕೇಂದ್ರದಲ್ಲಿ ಆಶ್ರಯ ಪಡೆಯಬಹುದು. ಸಾರ್ವಜನಿಕರಿಗೆ ತೊಂದರೆಯಾದ ಸಂದರ್ಭದಲ್ಲಿ ಈ ಕೇಂದ್ರದ ಮೂಲಕ ಪೊಲೀಸರನ್ನು ಸಂಪರ್ಕಿಸಬಹುದು' ಎಂದರು.

ಚಾಕು ತೋರಿಸಿ ದಂಪತಿಗೆ ಬೆದರಿಕೆ: ಸರ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಟಿ. ದಾಸರಹಳ್ಳಿಯ ಮನೆಯೊಂದರ ಬಳಿ ದಂಪತಿಯನ್ನು ಬೆದರಿಸಿ ಚಿನ್ನದ ಸರ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಟಿ. ದಾಸರಹಳ್ಳಿಯಲ್ಲಿ ವಾಸವಿರುವ ಪತಿ–ಪತ್ನಿ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮದುವೆ ವಾರ್ಷಿಕೋತ್ಸವ ನಿಮಿತ್ತ ದಂಪತಿ ಮನೆಯಿಂದ ಹೊರಗಡೆ ಊಟಕ್ಕೆ ಹೋಗಿದ್ದರು. ಊಟ ಮುಗಿಸಿಕೊಂಡು ರಾತ್ರಿ ವಾಪಸು ಮನೆ ಸಮೀಪದಲ್ಲಿ ಬಂದಿದ್ದರು. ಇದೇ ಸಂದರ್ಭದಲ್ಲಿ ಸ್ಥಳಕ್ಕೆ ಬಂದಿದ್ದ ದುಷ್ಕರ್ಮಿಗಳು, ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ನಂತರ, ಪತ್ನಿಯ 50 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ' ಎಂದರು.

ದೂರು ನೀಡಲು ಮುಂದಾಗಿದ್ದಕ್ಕೆ ಪತ್ನಿ ಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 'ನನ್ನ ಪತಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಪೊಲೀಸ್ ಠಾಣೆಗೆ ದೂರು ನೀಡಲು ಮುಂದಾಗಿದ್ದ ಇಂದು (28) ಎಂಬುವವರನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ಮೈಕಲ್ ಫ್ರಾನ್ಸಿಸ್ (30) ವಿರುದ್ಧ ಪ್ರಕರಣ ದಾಖಲಾಗಿದೆ.

'ಮಡಿವಾಳ ಬಳಿಯ ವೆಂಕಟಪುರದ ಇಂದು, ಕೋರಮಂಗಲದ ಮಾಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ವಿವೇಕನಗರದ ಮೈಕಲ್‌ನನ್ನು ಕೆಲ ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ' ಎಂದು ಪೊಲೀಸರು ಹೇಳಿದರು.

'ವಿವೇಕನಗರದಲ್ಲಿ ದಂಪತಿ ವಾಸವಿದ್ದರು. ಇತ್ತೀಚೆಗೆ ದಂಪತಿ ನಡುವೆ ಜಗಳ ಶುರುವಾಗಿತ್ತು. ಪತಿಯ ಕಿರುಕುಳದಿಂದ ಬೇಸತ್ತ ಇಂದು, ವೆಂಕಟಪುರದಲ್ಲಿರುವ ತವರು ಮನೆಗೆ ಬಂದು ವಾಸವಿದ್ದರು. ಕೋರಮಂಗಲದ ಮಾಲ್‌ನಲ್ಲಿ ಕೆಲಸಕ್ಕೆ ಹೋಗಿ, ಜೀವನ ಸಾಗಿಸುತ್ತಿದ್ದರು' ಎಂದು ತಿಳಿಸಿದರು.

ಮಾಲ್ ಬಳಿ ಪತಿ ಗಲಾಟೆ: 'ಪತ್ನಿ ಇಂದು ಮನೆ ಬಿಟ್ಟು ಹೋಗಿದ್ದರಿಂದ ಸಿಟ್ಟಾಗಿದ್ದ ಪತಿ, ವಾಪಸು ಬರುವಂತೆ ಹಲವು ಬಾರಿ ತಾಕೀತು ಮಾಡಿದ್ದರು. ಆದರೆ, ಪತ್ನಿ ಅದಕ್ಕೆ ಒಪ್ಪಿರಲಿಲ್ಲ. ಕೋರಮಂಗಲದಲ್ಲಿರುವ ಮಾಲ್ ಬಳಿ ಹೋಗಿದ್ದ ಆರೋಪಿ, ಪತ್ನಿ ಜೊತೆ ಜಗಳ ಮಾಡಿ ಹಲ್ಲೆ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ಪತಿಯ ವರ್ತನೆಯಿಂದ ಬೇಸತ್ತ ಪತ್ನಿ, ಗುರುವಾರ ಮಧ್ಯಾಹ್ನ ದೂರು ನೀಡಲು ಕೋರಮಂಗಲ ಠಾಣೆಗೆ ಬಂದಿದ್ದರು. ವಿಚಾರಣೆ ನಡೆಸಿದ್ದ ಸಿಬ್ಬಂದಿ, ಪತಿಗೆ ಕರೆ ಮಾಡಿ ಠಾಣೆಗೆ ಬರುವಂತೆ ಸೂಚಿಸಿದ್ದರು. ಆದರೆ, ಆತ ಸಂಜೆ ಬರುವುದಾಗಿ ಹೇಳಿ ಕಾಲಾವಕಾಶ ಪಡೆದುಕೊಂಡಿದ್ದ. ಹೀಗಾಗಿ, ಸಂಜೆ ಬರುವಂತೆ ಹೇಳಿ ಇಂದು ಅವರನ್ನು ಠಾಣೆಯಿಂದ ವಾಪಸು ಕಳುಹಿಸಲಾಗಿತ್ತು' ಎಂದು ತಿಳಿಸಿದರು.

ಅಡ್ಡಗಟ್ಟಿ ಚಾಕುವಿನಿಂದ ಹಲ್ಲೆ: 'ಠಾಣೆ ಹಾಗೂ ಈಶಾನ್ಯ ವಿಭಾಗದ ಡಿಸಿಪಿ ಕಚೇರಿಯಿಂದ ಅರ್ಧ ಕಿ.ಮೀ ದೂರದಲ್ಲಿರುವ ಕೋರಮಂಗಲ 6ನೇ ಹಂತದ 19ನೇ ಮುಖ್ಯರಸ್ತೆಯಲ್ಲಿ ಇಂದು ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿ, ಜಗಳ ತೆಗೆದಿದ್ದ. ಚಾಕುವಿನಿಂದ ದೇಹದ ಹಲವು ಭಾಗಗಳಿಗೆ ಇರಿದು ಪರಾರಿಯಾಗಿದ್ದಾನೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಇಂದು ಅವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಪತ್ನಿಯ ಶೀಲ ಶಂಕಿಸಿ ಪತಿ ಪದೇ ಪದೇ ಜಗಳ ಮಾಡುತ್ತಿದ್ದನೆಂದು ಗೊತ್ತಾಗಿದೆ. ಇದೇ ಕಾರಣಕ್ಕೆ ಕೊಲೆ ನಡೆದಿರುವ ಅನುಮಾನವಿದೆ. ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಹೇಳಿದರು.

ಮದುವೆಗೆ ಒಪ್ಪದಿದ್ದಕ್ಕೆ ಮನೆಗೆ ಬೆಂಕಿ

ಬೆಂಗಳೂರು: ತನ್ನನ್ನು ಮದುವೆಯಾಗಲು ಒಪ್ಪಲಿಲ್ಲವೆಂಬ ಕಾರಣಕ್ಕೆ ವಿವಾಹಿತ ಮಹಿಳೆಯೊಬ್ಬರ ಮನೆಗೆ ಬೆಂಕಿ ಹಚ್ಚಿ ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ಪೀಠೋಪಕರಣ ಸುಟ್ಟುಹಾಕಿದ್ದ ಆರೋಪದಡಿ ಅರ್ಬಾಜ್ (24) ಎಂಬುವವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಾಡುಗೊಂಡನಹಳ್ಳಿಯ (ಕೆ.ಜಿ.ಹಳ್ಳಿ) ಅರ್ಬಾಜ್, ಏಪ್ರಿಲ್ 11ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಮಹಿಳೆ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಸೆರೆಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಅರ್ಬಾಜ್, ದೂರುದಾರ ಮಹಿಳೆಯ ಸಂಬಂಧಿಕ. ಮಹಿಳೆಗೆ ಮದುವೆಯಾಗಿದ್ದು, ಅಷ್ಟಾದರೂ ಆರೋಪಿ ತನ್ನನ್ನು ಎರಡನೇ ಮದುವೆಯಾಗುವಂತೆ ಪೀಡಿಸುತ್ತಿದ್ದ. ಅದಕ್ಕೆ ಒಪ್ಪದ ಮಹಿಳೆ, ಪತಿಗೆ ವಿಷಯ ತಿಳಿಸಿದ್ದರು. ನಂತರ, ಹಿರಿಯರ ಸಮ್ಮುಖದಲ್ಲಿ ಆರೋಪಿಗೆ ಬುದ್ಧಿವಾದ ಹೇಳಲಾಗಿತ್ತು. ವಿವಾಹಿತೆ ಮಹಿಳೆ ತಂಟೆಗೆ ಹೋಗದಂತೆ ತಾಕೀತು ಮಾಡಲಾಗಿತ್ತು' ಎಂದು ತಿಳಿಸಿದರು.

'ಹಳೇ ಚಾಳಿ ಮುಂದುವರಿಸಿದ್ದ ಆರೋಪಿ, ಮಹಿಳೆಯನ್ನು ಹಿಂಬಾಲಿಸಲಾರಂಭಿಸಿದ್ದ. ಮದುವೆಯಾಗುವಂತೆ ಪುನಃ ಪೀಡಿಸಲಾರಂಭಿಸಿದ್ದ. ದೂರುದಾರ ಮಹಿಳೆ ಹಾಗೂ ಕುಟುಂಬದವರು, ಏಪ್ರಿಲ್ 10ರಂದು ರಾತ್ರಿ ಸಂಬಂಧಿಕರ ಮನೆಗೆ ಹೋಗಿದ್ದರು. ಮನೆಯಲ್ಲಿ ಯಾರೂ ಇರಲಿಲ್ಲ. ಏಪ್ರಿಲ್ 11ರಂದು ನಸುಕಿನಲ್ಲಿ ಮನೆಗೆ ಬಂದಿದ್ದ ಆರೋಪಿ, ಬೆಂಕಿ ಹಚ್ಚಿ ಪರಾರಿಯಾಗಿದ್ದ. ಬೆಂಕಿ ನೋಡಿದ್ದ ಅಕ್ಕ–ಪಕ್ಕದ ಮನೆಯವರು ದೂರುದಾರ ಮಹಿಳೆಗೆ ವಿಷಯ ತಿಳಿಸಿದ್ದರು. ಅವರು ಮನೆಗೆ ಬರುವಷ್ಟರಲ್ಲಿ ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ಪೀಠೋಪಕರಣ ಸುಟ್ಟುಹೋಗಿದ್ದವು' ಎಂದು ಹೇಳಿದರು.

ಪಿಎಚ್‌.ಡಿ. ವಿದ್ಯಾರ್ಥಿ ಅಸಹಜ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್‌.ಡಿ. ವಿದ್ಯಾರ್ಥಿ ರಂಗನಾಥ್ ನಾಯಕ್ (27) ಅವರು ಬುಧವಾರ ಮೃತಪಟ್ಟಿದ್ದು, ಅವರ ಸಾವಿನ ಕುರಿತು ಅನುಮಾನ ವ್ಯಕ್ತವಾಗಿದೆ. ಸಾವಿನ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು) ದಾಖಲಾಗಿದೆ.

'ಗೌರಿಬಿದನೂರಿನ ರಂಗನಾಥ್, ಭೂಗೋಳ ವಿಜ್ಞಾನ ವಿಷಯದ ಪಿಎಚ್‌.ಡಿ. ವಿದ್ಯಾರ್ಥಿ. ವಿಶ್ವವಿದ್ಯಾಲಯದ ವಸತಿನಿಲಯದ ಕೊಠಡಿಯಲ್ಲಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು.

'ಬುಧವಾರ ಬೆಳಿಗ್ಗೆ ಕ್ಯಾಂಟೀನ್‌ನಲ್ಲಿ ತಿಂಡಿ ತಿಂದಿದ್ದ ಅವರು, ಕೊಠಡಿಗೆ ವಾಪಸು ಹೋಗಿ ಮಲಗಿದ್ದರು. ಬಾಗಿಲು ಒಳಗಿನಿಂದ ಲಾಕ್ ಮಾಡಿಕೊಂಡಿದ್ದರು. ಸಹಪಾಠಿಗಳು ಕೊಠಡಿಗೆ ಬಂದಾಗ, ಬಾಗಿಲು ತೆರೆದಿರಲಿಲ್ಲ. ಅನುಮಾನಗೊಂಡ ಸಹಪಾಠಿಗಳು, ವಸತಿ ನಿಲಯದ ಸಿಬ್ಬಂದಿ ಮೂಲಕ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ತಿಳಿಸಿದರು.

'ಸಿಬ್ಬಂದಿ ವಸತಿನಿಲಯಕ್ಕೆ ಹೋಗಿ ಬಾಗಿಲು ತೆರೆದಿದ್ದರು. ಮಲಗಿದ್ದ ಸ್ಥಳದಲ್ಲಿಯೇ ರಂಗನಾಥ್ ಮೃತಪಟ್ಟಿದ್ದು ಗೊತ್ತಾಗಿತ್ತು. ನಂತರ, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ಮಾಡಿಸಲಾಗಿದೆ. ವರದಿ ಬಂದ ಬಳಿಕವೇ ಸಾವಿನ ಬಗ್ಗೆ ನಿಖರ ಕಾರಣ ತಿಳಿಯಲಿದೆ' ಎಂದು ಹೇಳಿದರು.

ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾತಗುಣಿಯ ಕಾವೇರಿ ನಗರದಲ್ಲಿ ಏ. 30ರಂದು ನಿರ್ಮಾಣ ಹಂತದ ಕಟ್ಟಡದಿಂದ ಬಿದ್ದು ಕಾರ್ಮಿಕ ಮರಿಯಪ್ಪ (28) ಎಂಬುವರು ಮೃತಪಟ್ಟಿದ್ದಾರೆ.

ರಾಯಚೂರಿನ ವಿದ್ಯಾನಗರದ ಮರಿಯಪ್ಪ ಕಾವೇರಿನಗರದ ರಾಮಕೃಷ್ಣಪ್ಪ ಎಂಬುವರ ಮನೆ ನಿರ್ಮಾಣ ಕೆಲಸ ಮಾಡುವಾಗ ದುರ್ಘಟನೆ ಸಂಭವಿಸಿದೆ.

ತಲೆ ಮತ್ತು ದೇಹದ ಇತರ ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿದ್ದ ಅವರನ್ನು ಬೆಂಗಳೂರಿನ ಶಂಕರ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ.

ಆನ್‌ಲೈನ್ ಸಾಲ: ರೈತನಿಗೆ ₹84 ಸಾವಿರ ವಂಚನೆ

ರಾಮನಗರ: ಸಾಲ ಕೊಡಿಸುವುದಾಗಿ ರೈತರೊಬ್ಬರಿಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿಯೊಬ್ಬ ಪ್ರಕ್ರಿಯೆ ಶುಲ್ಕದ ಹೆಸರಲ್ಲಿ ₹84 ಸಾವಿರ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾನೆ. ಈ ಕುರಿತು ನಗರದ ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ಪ್ರಕರಣ ದಾಖಲಾಗಿದೆ.

ಚನ್ನಪಟ್ಟಣದ ಅರುಣ್ ವಂಚನೆಗೊಳಗಾದ ರೈತ. ಇಂಡಿಯಾ ಬುಲ್ಸ್ ಧನಿ ಲೋನ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ, ಕಂಪನಿಯಿಂದ ₹5 ಲಕ್ಷದವರೆಗೆ ಸಾಲ ನೀಡಲಾಗುವುದು, ಅಗತ್ಯವಿದ್ದರೆ ಪಡೆಯಬಹುದು ಎಂದು ಹೇಳಿದ್ದಾರೆ. ಹಣದ ಅವಶ್ಯಕತೆ ಇದ್ದ ಅರುಣ್ ₹5 ಲಕ್ಷ ಸಾಲಕ್ಕೆ ಬೇಡಿಕೆ ಇಟ್ಟಿದ್ದಾರೆ.

ಸಾಲ ಬಿಡುಗಡೆಗಾಗಿ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಹಾಗೂ ಭಾವಚಿತ್ರ ಪಡೆದ ವ್ಯಕ್ತಿ, ಪ್ರಕ್ರಿಯೆ ಶುಲ್ಕವಾಗಿ ಮೊದಲಿಗೆ ₹ 3,200, ಟಿಡಿಎಸ್ ಶುಲ್ಕದ ಹೆಸರಲ್ಲಿ ₹ 7,850, ಆರ್‌ಟಿಜಿಎಸ್ ಶುಲ್ಕ ₹ 16,100 ಸೇರಿದಂತೆ ಒಟ್ಟು ₹ 84,264 ವಸೂಲಿ ಮಾಡಿದ್ದಾನೆ.

ಆತ ಹೇಳಿದಂತೆ ಅರುಣ್, ಹಣ ವರ್ಗಾವಣೆ ಆ್ಯಪ್ ಮೂಲಕ ಹಣ ಪಾವತಿಸಿದ್ದಾರೆ. ನಂತರ ಅಪರಿಚಿತ ವ್ಯಕ್ತಿ ಸಾಲವನ್ನೂ ಕೊಡದೆ, ಇವರಿಂದ ಪಡೆದ ಹಣವನ್ನೂ ಸಹ ಹಿಂದಿರುಗಿಸದೆ ವಂಚಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಜ್ಞಾನಭಾರತಿ: ಕಾನ್‌ಸ್ಟೆಬಲ್ ಕಪಾಳಕ್ಕೆ ಹೊಡೆದ ಮಹಿಳೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಣಕಾಸು ವಿಚಾರಕ್ಕೆ ದೂರು ನೀಡಲು ಬಂದಾಗ ನಡೆದ ಘಟನೆ
- ದೂರು ಸ್ವೀಕರಿಸಲು ಕಾಯುವಂತೆ ತಿಳಿಸಿದರೂ ಕೇಳದ ಮಹಿಳೆಯರ ಗುಂಪು
- ಗಲಾಟೆ ಬಿಡಿಸಲು ಹೋದ ಇನ್‌ಸ್ಪೆಕ್ಟರ್ ಮೇಲೆಯೂ ಹಲ್ಲೆ

ಬೆಂಗಳೂರು: ಹಣಕಾಸು ವ್ಯವಹಾರಕ್ಕೆ ಸಂಬಂಧಪಟ್ಟಂತೆ ದೂರು ನೀಡಲು ಜ್ಞಾನಭಾರತಿ ಠಾಣೆಗೆ ಬಂದಿದ್ದ ಮಹಿಳೆಯರ ಗುಂಪು ಪೊಲೀಸರ ಮೇಲೆಯೇ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು, ಈ ಸಂಬಂಧ ಮೂವರು ಮಹಿಳೆಯರನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿಗಳಾದ ಆಯೇಷಾ ತಾಜ್, ಫೌಜೀಯಾ ಖಾನಂ ಹಾಗೂ ಅರ್ಬಿನಾ ತಾಜ್ ಬಂಧಿತರು. ಮೇ 1ರಂದು ಸಂಜೆ ನಡೆದಿರುವ ಘಟನೆ ಸಂಬಂಧ ಪಿಎಸ್‌ಐ ಸುರೇಖಾ ನೀಡಿರುವ ಹೇಳಿಕೆ ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹಣಕಾಸು ವಿಚಾರಕ್ಕೆ ಸಂಬಂಧಪಟ್ಟಂತೆ ಎರಡು ಕುಟುಂಬಗಳ ನಡುವೆ ಜಗಳವಾಗಿತ್ತು. ಆರೋಪಿ ಆಯೇಷಾ ತಾಜ್ ಹಾಗೂ ಇತರರು, ಠಾಣೆಗೆ ಬಂದಿದ್ದರು. ಠಾಣೆಯಲ್ಲಿ ಹೆಚ್ಚಿನ ಜನರಿದ್ದರು. ಅವರಿಂದ ದೂರು ಪಡೆಯುವುದರಲ್ಲಿ ಪೊಲೀಸರು ನಿರತರಾಗಿದ್ದರು. ಕೆಲ ನಿಮಿಷ ಕಾಯುವಂತೆ ಆಯೇಷಾ ಹಾಗೂ ಇತರರಿಗೆ ಹೇಳಿದ್ದರು' ಎಂದು ತಿಳಿಸಿದರು.

ಅವಾಚ್ಯ ಶಬ್ದಗಳಿಂದ ನಿಂದನೆ, ಕಪಾಳಕ್ಕೆ ಏಟು: 'ಠಾಣೆ ಮುಂಭಾಗದಲ್ಲಿ ಪುನಃ ಗುಂಪು ಸೇರಿದ್ದ ಆರೋಪಿಗಳು, ಪರಸ್ಪರ ಕೈ ಕೈ ಮಿಲಾಯಿಸಲು ಮುಂದಾಗಿದ್ದರು. ಅದನ್ನು ಪ್ರಶ್ನಿಸಿದ್ದ ಮಹಿಳಾ ಕಾನ್‌ಸ್ಟೆಬಲ್ ಒಬ್ಬರು, ಗಲಾಟೆ ಮಾಡದಂತೆ ವಿನಂತಿಸಿದ್ದರು. ಅವರ ಮೇಲೆಯೇ ಹರಿದಾಯ್ದಿದ್ದ ಆರೋಪಿ ಮಹಿಳೆ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಕಾನ್‌ಸ್ಟೆಬಲ್ ಕಪಾಳಕ್ಕೆ ಹೊಡೆದಿದ್ದರು. ಉಗುರುಗಳಿಂದ ಪರಚಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗಲಾಟೆ ಬಿಡಿಸಲು ಹೋದ ಇನ್‌ಸ್ಪೆಕ್ಟರ್ ಎಂ.ಎಸ್. ರವಿ, ಪಿಎಸ್‌ಐ ಸುರೇಖಾ, ಹೆಡ್ ಕಾನ್‌ಸ್ಟೆಬಲ್ ಚನ್ನಮ್ಮ, ಕಾನ್‌ಸ್ಟೆಬಲ್‌ಗಳಾದ ರೇಖಾ ಹಾಗೂ ಅಕ್ಕಮ್ಮ ಅವರ ಮೇಲೂ ಆರೋಪಿಗಳು ಹಲ್ಲೆ ಮಾಡಿದ್ದರು. 'ನಾವು ಮಾನವ ಹಕ್ಕು ಸಂಘದವರು. ನಮ್ಮನ್ನು ಮುಟ್ಟಿದರೆ, ನಿಮ್ಮನ್ನು ಕೆಲಸದಿಂದ ತೆಗೆಸುತ್ತೇವೆ' ಎಂಬುದಾಗಿಯೂ ಆರೋಪಿಗಳು ಬೆದರಿಸಿದ್ದರು' ಎಂದು ತಿಳಿಸಿವೆ.

'ಹಲ್ಲೆಯಿಂದ ಗಾಯಗೊಂಡಿರುವ ಸಿಬ್ಬಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಎಲ್ಲರಿಂದಲೂ ಹೇಳಿಕೆ ಪಡೆದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಬಿಟ್ ಕಾಯಿನ್ ಪ್ರಕರಣ: 8ರಂದು ತನಿಖಾಧಿಕಾರಿ ಮುಂದೆ ಹಾಜರಾಗಲು ಶ್ರೀಧರ್‌ಗೆ ಸೂಚನೆ

‘ಘೋಷಿತ ಆರೋಪಿ’ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದಲ್ಲಿ ಆರೋಪಿಗಳನ್ನು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡು ಹ್ಯಾಕಿಂಗ್, ಬಿಟ್ ಕಾಯಿನ್ ವರ್ಗಾವಣೆ ಮತ್ತು ಪಾಸ್‌ವರ್ಡ್ ಬದಲಾವಣೆ ಮಾಡಿದ ಆರೋಪ ಎದುರಿಸುತ್ತಿರುವ ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಧರ್ ಕೆ.ಪೂಜಾರ್ ವಿರುದ್ಧದ ‘ಘೋಷಿತ ಆರೋಪಿ’ ಎಂಬ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಹಾಗೂ ಘೋಷಿತ ಆರೋಪಿ ಎಂದು ವಿಚಾರಣಾ ನ್ಯಾಯಾಲಯ ವಾರಂಟ್ ಜಾರಿಗೊಳಿಸಿರುವುದನ್ನು ಪ್ರಶ್ನಿಸಿ ಶ್ರೀಧರ್ ಕೆ.ಪೂಜಾರ್ ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ವಿ.ಶ್ರೀಶಾನಂದ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಶ್ರೀಧರ್ ಪೂಜಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಅರ್ಜಿದಾರರು ಕಾನೂನು ಪರಿಪಾಲಕರಾಗಿದ್ದು, ಉನ್ನತ ಹುದ್ದೆಯಲ್ಲಿದ್ದಾರೆ. ಅವರು ಯಾವುದೇ ಅಪರಾಧ ಮಾಡಿಲ್ಲ. ಆದರೆ, ರಾಜಕೀಯ ಉದ್ದೇಶಕ್ಕಾಗಿ ಅವರ ವೃತ್ತಿಪರ ಘನತೆಯನ್ನು ಹಾಳು ಮಾಡಲು ಅವರನ್ನು ಪ್ರಕರಣದಲ್ಲಿ ಆರೋಪಿ ಎಂಬಂತೆ ಬಿಂಬಿಸಲಾಗಿದೆ’ ಎಂದರು.

‘ಮಧ್ಯಂತರ ಆದೇಶದ ಮೇರೆಗೆ ಅರ್ಜಿದಾರರು ವಿಚಾರಣೆಗೆ ಹಾಜರಾಗಿದ್ದು, ತನಿಖೆಗೂ ಸಹಕರಿಸಿದ್ದಾರೆ ಆದರೆ, ಪ್ರತಿವಾದಿಗಳು ಅವರು ತನಿಖೆಗೆ ಹಾಜರಾಗಿಲ್ಲ ಎಂದು ಹೇಳಿರುವುದು ಆಧಾರರಹಿತ ಆಪಾದನೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಗೊಳಿಸಬೇಕು’ ಎಂದು ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಮೂರ್ತಿಗಳು, ‘ಆರೋಪಿ ಶ್ರೀಧರ್ ಕೆ. ಪೂಜಾರ್ ಪೊಲೀಸರ ತನಿಖೆಗೆ ಸಹಕರಿಸಬೇಕು. ಜಾಮೀನು ಅರ್ಜಿ ಸಲ್ಲಿಸಿದ್ದರೆ ಪೊಲೀಸರು ಆಕ್ಷೇಪಿಸಬಾರದು. ಇದೇ 8ರಂದು ಬೆಳಿಗ್ಗೆ 9 ಗಂಟೆಗೆ ತನಿಖಾಧಿಕಾರಿ ಮುಂದೆ ಹಾಜರಾಗಬೇಕು. ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ಅವರನ್ನು ಕಸ್ಟಡಿಗೆ ಪಡೆದು ತನಿಖೆ ನಡೆಸಬೇಕು. ನಂತರ ₹2 ಲಕ್ಷ ಮೊತ್ತದ ಬಾಂಡ್ ಪಡೆದು ಬಿಡುಗಡೆ ಮಾಡಬೇಕು’ ಎಂದು ಆದೇಶಿಸಿ ಅರ್ಜಿ ವಿಲೇವಾರಿ ಮಾಡಿದರು.

ಏನಿದು ಪ್ರಕರಣ?: ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ತನಿಖೆ ನಡೆಸುತ್ತಿದ್ದ ತಂಡದಲ್ಲಿ ಶ್ರೀಧರ್ ಪೂಜಾರ್ ಕೂಡ ಇದ್ದರು. ಈ ವೇಳೆ ಅವರು ಅಕ್ರಮ ಎಸಗಿರುವ ಆರೋಪ ಕೇಳಿಬಂದಿತ್ತು. ಅದರಂತೆ ಪ್ರಕರಣ ದಾಖಲಿಸಿಕೊಂಡಿದ್ದ ಎಸ್‌ಐಟಿ ಫೆಬ್ರುವರಿ 17 ರಂದು ಶ್ರೀಧರ್ ಪೂಜಾರ್ ಬಂಧನಕ್ಕೆ ಮುಂದಾಗಿತ್ತು. ಈ ವೇಳೆ ಅಧಿಕಾರಿಗಳ ಮೇಲೆ ಕಾರು ಹತ್ತಿಸಲು ಯತ್ನಿಸಿ ಶ್ರೀಧರ್ ಪೂಜಾರಿ ಪರಾರಿಯಾಗಿದ್ದರು.

ಪಶು ವೈದ್ಯಕೀಯ ಚಿಕಿತ್ಸಾಲಯ ಪರಭಾರೆಗೆ ಹೈಕೋರ್ಟ್ ತಡೆ

ಬೆಂಗಳೂರು: ಚಾಮರಾಜಪೇಟೆಯ ಚಲವಾದಿ ಪಾಳ್ಯದಲ್ಲಿನ ಪಶು ವೈದ್ಯಕೀಯ ಚಿಕಿತ್ಸಾಲಯವನ್ನು ಅಲ್ಪಸಂಖ್ಯಾತ ಇಲಾಖೆಗೆ ಪರಭಾರೆ ಮಾಡಿರುವ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಸರ್ಕಾರದ ಕ್ರಮವನ್ನು ಪ್ರಶ್ನಿಸಿ, ‘ಚಾಮರಾಜಪೇಟೆ ನಾಗರಿಕರ ಒಕ್ಕೂಟ’ದ ಅಧ್ಯಕ್ಷ ಶ್ರೀರಾಮೇಗೌಡ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ರಜಾಕಾಲದ ವಿಭಾಗೀಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಮತ್ತು ಟಿ.ಜಿ.ಶಿವಶಂಕರೇ ಗೌಡ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಿದ್ದ ಹೈಕೋರ್ಟ್ ವಕೀಲ ಶಶಿಧರ ಬೆಳಗುಂಬ, ‘ಮೈಸೂರು ಒಡೆಯರ್ ಕಾಲದಲ್ಲಿ ಈಗ್ಗೆ 200 ವರ್ಷಗಳ ಹಿಂದೆ ಚಾಮರಾಜಪೇಟೆಯನ್ನು ಅಭಿವೃದ್ಧಿಪಡಿಸಲಾಯಿತು. ಆಗ 1860ರಲ್ಲಿ ಎಂ.ಮುತ್ತೋಜಿ ರಾವ್ ಶಿಂಧೆ ಎಂಬುವರು ಪಶು ವೈದ್ಯಕೀಯ ಮತ್ತು ಚಿಕಿತ್ಸಾಲಯ ನಿರ್ಮಾಣಕ್ಕಾಗಿ ಈ ಜಾಗವನ್ನು ದಾನವಾಗಿ ನೀಡಿದ್ದರು. ಇಂತಹ ಜಾಗವು ಅನೂಚಾನವಾಗಿ ಪಶು ಸಂಗೋಪನೆ ಇಲಾಖೆಯ ಸುಪರ್ದಿಯಲ್ಲಿದ್ದು, ಈಗ ಇದನ್ನು ಅಲ್ಪಸಂಖ್ಯಾತ ಇಲಾಖೆಗೆ ಹಸ್ತಾಂತರ ಮಾಡಿರುವ ಸರ್ಕಾರದ ನಿರ್ಧಾರ ದಾನ ನೀಡಿದವರ ಇಚ್ಛೆಗೆ ವಿರುದ್ಧವಾಗಿದೆ’ ಎಂದು ಪ್ರತಿಪಾದಿಸಿದರು.

‘ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಅಧೀನದಲ್ಲಿನ ಗೂಡ್‌ಶೆಡ್ ರಸ್ತೆಗೆ ಹೊಂದಿಕೊಂಡಂತಿರುವ ಎರಡು ಎಕರೆ ಜಾಗವನ್ನು ಪರಭಾರೆ ಮಾಡಿ ಸರ್ಕಾರ ಹೊರಡಿಸಿರುವ 2024ರ ಫೆಬ್ರುವರಿ 26ರ ಆದೇಶವನ್ನು ರದ್ದುಪಡಿಸಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

‘ಕಪ್ಪುಪಟ್ಟಿಗೆ ಸೇರ್ಪಡೆ: ನ್ಯಾಯತತ್ವ ಪರಿಪಾಲನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಜ ನ್ಯಾಯತತ್ವ ಪಾಲಿಸದೆ ಯಾವುದೇ ವ್ಯಕ್ತಿ ಅಥವಾ ಗುತ್ತಿಗೆ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸುವಂತಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನಗರದ ಮೆಸರ್ಸ್ ಸುಜಲಾ ಫಾರ್ಮಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ. ಕೋವಿಡ್-19ರ ಸಾಂಕ್ರಾಮಿಕ ಸಂದರ್ಭದಲ್ಲಿ ಕಳಪೆ ಗುಣಮಟ್ಟದ ಸ್ಯಾನಿಟೈಜರ್ ಪೂರೈಸಿದ ಆರೋಪದಡಿ ಸುಜಲ್ ಫಾರ್ಮಾ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಿದ್ದ ‘ಕರ್ನಾಟಕ ರಾಜ್ಯ ವೈದ್ಯಕೀಯ ಪೂರೈಕೆ ನಿಗಮ ನಿಯಮಿತ’ದ ಕ್ರಮವನ್ನು ರದ್ದುಪಡಿಸಿದೆ.

‘ಅರ್ಜಿದಾರರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿಲ್ಲ. ಎರಡು ನೋಟಿಸ್ ನೀಡಿದ್ದರೂ ಅದರಲ್ಲಿ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸುವ ಯಾವುದೇ ಇಂಗಿತ ವ್ಯಕ್ತಪಡಿಸಿಲ್ಲ. ನಿಯಮದಂತೆ ಶೋಕಾಸ್ ನೋಟಿಸ್ ನೀಡಬೇಕು. ಅದರಲ್ಲಿ ನಿಮ್ಮನ್ನು ಕಪ್ಪುಪಟ್ಟಿಗೆ ಯಾಕೆ ಸೇರಿಸಬಾರದು ಎಂಬುದನ್ನು ಕಾರಣಗಳ ಸಹಿತ ವಿವರಿಸಬೇಕು ಎಂದು ಕೇಳಿರಬೇಕು. ತದನಂತರವೇ ಅಂತಿಮ ಆದೇಶ ಹೊರಡಿಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ನಿಯಮಗಳನ್ನು ಪಾಲನೆ ಮಾಡದೇ ಇರುವುದರಿಂದ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸುವ ಆದೇಶ ರದ್ದುಗೊಳಿಸಲಾಗುತ್ತಿದೆ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ವೇಣೂರು: ನಾಳೆ ಮಸ್ತಕಾಭಿಷೇಕ

ಮೂಡುಬಿದಿರೆ: ವೇಣೂರು ಭಗವಾನ್ ಬಾಹುಬಲಿ ಸ್ವಾಮಿ ಮಸ್ತಕಾಭಿಷೇಕದ ಈ ಬಾರಿಯ ಕೊನೆಯ ಅಭಿಷೇಕವು ಮೇ 4ರಂದು ನಡೆಯಲಿದೆ ಎಂದು ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅಂದು ಸಂಜೆ 3ರಿಂದ 7ರವರೆಗೆ ಜಲಾಭಿಷೇಕ ನಡೆಯಲಿದೆ. ರಾತ್ರಿ 8ರಿಂದ 11ರವರೆಗೆ ಪಂಚಾಮೃತ ಅಭಿಷೇಕವು ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಸ್ವಾಮೀಜಿ ಮಾರ್ಗದರ್ಶನದಲ್ಲಿ ನಡೆಯಲಿದೆ. ಭಗವಾನ್ ವೀರ ನಿರ್ವಾಣ ವರ್ಷ 2550ರ ನೆನಪಿಗೆ ನಡೆಯುವ ಈ ಮಸ್ತಕಾಭಿಷೇಕದಲ್ಲಿ ವಿವಿಧ ಭಾಗಗಳ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ಜಯಪ್ಪಗೌಡಗೆ ‘ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗ ನೀಡುವ 2024ನೇ ಸಾಲಿನ ‘ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ’ಗೆ ಸಂಶೋಧಕ ಡಿ.ಎಸ್. ಜಯಪ್ಪಗೌಡ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹5ಸಾವಿರ ನಗದು ಒಳಗೊಂಡಿದೆ ಸಂಶೋಧಕ ಎಂ. ಚಿದಾನಂದಮೂರ್ತಿ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ.

ಮೈಸೂರಿನ ಜಯಪ್ಪಗೌಡ ಅವರು ಸಂಶೋಧನೆ, ಇತಿಹಾಸ, ಹಸ್ತಪ್ರತಿ, ಶಾಸನ, ಅನುವಾದ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕೊಡುಗೆ ನೀಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಸಂಶೋಧನಾ ಸಹಾಯಕರಾಗಿರುವ ಅವರು, ‘ಕರ್ನಾಟಕ ಕಡಲಾಚೆಯ ಸಂಬಂಧಗಳು’, ‘ಮೂಡಿಗೆರೆ ತಾಲ್ಲೂಕಿನ 5 ಶಾಸನಗಳ ಶೋಧ’, ‘ಮೈಸೂರು ಒಡೆಯರ್’ ಸೇರಿ ವಿವಿಧ ಗ್ರಂಥಗಳನ್ನು ರಚಿಸಿದ್ದಾರೆ.



ಡಿ.ಎಸ್ ಜಯಪ್ಪಗೌಡ

ಚಿದಾನಂದಮೂರ್ತಿ ಅವರ ಜನ್ಮದಿನವಾದ ಮೇ 10ರಂದು ಮೈಸೂರಿನ ಸರಸ್ವತಿಪುರದಲ್ಲಿರುವ ಜಯಪ್ಪಗೌಡ ಅವರ ಸ್ವಗೃಹದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಿದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಂಶೋಧಕ ಆರ್. ಶೇಷಶಾಸ್ತ್ರಿ ಅಧ್ಯಕ್ಷತೆ ವಹಿಸುತ್ತಾರೆ. ಸ.ರ. ಸುದರ್ಶನ, ಕ್ಯಾತನಹಳ್ಳಿ ರಾಮಣ್ಣ, ವ.ಚ. ಚನ್ನೆಗೌಡ ಮತ್ತು ಸ್ಮಿತಾ ರೆಡ್ಡಿ ಉಪಸ್ಥಿತರಿರುತ್ತಾರೆ ಎಂದು ಬಳಗದ ಸಂಚಾಲಕ ರಾ. ನಂ.ಚಂದ್ರಶೇಖರ ಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

40 ಐಟಿ ಪಾರ್ಕ್‌ಗಳಿಂದ ‘ಝೀರೊ ಬ್ಯಾಕ್ಟೀರಿಯಲ್’ ನೀರಿಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ 40 ಐಟಿ ಪಾರ್ಕ್‌ಗಳಿಂದ ‘ಝೀರೊ ಬ್ಯಾಕ್ಟೀರಿಯಲ್’ ನೀರಿಗೆ ಬೇಡಿಕೆ ಬಂದಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಅವರು ತಿಳಿಸಿದರು.

ಐಐಎಸ್‌ಸಿ ವಿಜ್ಞಾನಿಗಳ ಸಹಯೋಗದಲ್ಲಿ ಬೆಂಗಳೂರು ಜಲಮಂಡಳಿಯ ಎಂಜಿನಿಯರ್‌ಗಳು ತ್ಯಾಜ್ಯ ನೀರು ಸಂಸ್ಕರಣೆಯಲ್ಲಿ ದೇಶೀಯ ತಂತ್ರಜ್ಞಾನವನ್ನು ರೂಪಿಸಿ, ಅಳವಡಿಸಿಕೊಂಡಿದ್ದಾರೆ. ಎರಡು ವಾರಗಳ ಹಿಂದೆ ಪ್ರಾರಂಭಿಸಲಾದ ಈ ಯೋಜನೆಯ ಮೂಲಕ ಪ್ರತಿದಿನ ಸುಮಾರು ಒಂದು ಕೋಟಿ ಲೀಟರ್‌ನಷ್ಟು ‘ಝೀರೊ ಬ್ಯಾಕ್ಟೀರಿಯಲ್’ ಸಂಸ್ಕರಿಸಿದ ನೀರನ್ನು ಉತ್ಪಾದಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವಿಪ್ರೊ ಕಂಪನಿಯು ಕೆಲವು ದಿನಗಳ ಹಿಂದೆ ಸಂಸ್ಕರಿಸಿದ ನೀರನ್ನು ಸರಬರಾಜು ಮಾಡುವಂತೆ ಜಲಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ‘ಝೀರೊ ಬ್ಯಾಕ್ಟೀರಿಯಲ್’ ಉತ್ತಮ ಗುಣಮಟ್ಟದ ಸಂಸ್ಕರಿಸಿದ ನೀರನ್ನು ಗುರುವಾರದಿಂದ ಸರಬರಾಜು ಮಾಡಲಾಗುತ್ತಿದೆ. ಪ್ರತಿ ದಿನ ಸುಮಾರು ಮೂರು ಲಕ್ಷ ಲೀಟರ್ ನೀರನ್ನು ಪೂರೈಕೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಜಲಮಂಡಳಿ ನಿರ್ವಹಣಾ ವಿಭಾಗದ ಮುಖ್ಯ ಎಂಜಿನಿಯರ್ ಕುಮಾರ್ ನಾಯ್ಕ್, ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳಾದ ನಾಗರಾಜ್, ರಾಹುಲ್ ಪ್ರಿಯದರ್ಶಿ, ಹಾಗೂ ಕೃಷ್ಣಕುಮಾರ್ ಅವರು ಉಪಸ್ಥಿತರಿದ್ದರು.



ವಿಪ್ರೊ ಕಂಪನಿಗೆ ‘ಝೀರೊ ಬ್ಯಾಕ್ಟೀರಿಯಲ್’ ನೀರು ಸರಬರಾಜಿಗೆ ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಗುರುವಾರ ಚಾಲನೆ ನೀಡಿದರು

ಜಲಮಂಡಳಿ ಅಧ್ಯಕ್ಷರ ಫೋನ್ ಇನ್ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್‌ಪ್ರಸಾತ್ ಮನೋಹರ್ ಅವರೊಂದಿಗೆ ಮೇ 3ರಂದು ಶುಕ್ರವಾರ ಬೆಳಿಗ್ಗೆ 9.30ರಿಂದ 10:30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಬಗೆಹರಿಸಿಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದಾಗಿದೆ. ದೂರವಾಣಿ 080-22945119 ಮತ್ತು 080-22229639.


ಐಜೂರು: ರಾತ್ರಿ ಓಡಾಡಿದ ಕರಡಿ

ಪ್ರಜಾವಾಣಿ ಚಿತ್ರ

ರಾಮನಗರ: ನಗರದ ಐಜೂರಿನ ಜನವಸತಿ ಪ್ರದೇಶದಲ್ಲಿ ಮೂರು ದಿನಗಳ ಹಿಂದೆ ಕರಡಿಯೊಂದು ರಾತ್ರಿ ನಿರ್ಭೀತಿಯಿಂದ ಓಡಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಏ. 30ರಂದು ರಾತ್ರಿ ಸುಮಾರು 11.30ರಿಂದ 12 ಗಂಟೆ ಅವಧಿಯಲ್ಲಿ ಜನವಸತಿ ಪ್ರದೇಶ ಪ್ರವೇಶಿಸಿದ ಕರಡಿ ರಸ್ತೆಯಲ್ಲಿ ಓಡಾಡುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ.

ಕರಡಿಯನ್ನು ಕಂಡು ಬೀದಿನಾಯಿಗಳು ಬೊಗಳತೊಡಗಿದವು. ಇದರಿಂದ ಹೆದರಿ ಕರಡಿ ಓಡಲಾರಂಭಿಸಿದೆ.



ರಾಮನಗರದ ಐಜೂರಿನಲ್ಲಿ ರಾತ್ರಿ ಕಾಣಿಸಿಕೊಂಡ ಕರಡಿ

ನಾಯಿಗಳು ಕೆಲ ದೂರ ಅದನ್ನು ಹಿಂಬಾಲಿಸಿದಾಗ ವಸತಿ ಪ್ರದೇಶದಂಚಿನಲ್ಲಿ ಓಡಿ ಮರೆಯಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಐಜೂರು ಗುಡ್ಡದಾಚೆಗಿರುವ ಅರಣ್ಯ ಪ್ರದೇಶದಿಂದ ಕರಡಿ ಆಹಾರ ಅರಸಿಕೊಂಡು ಐಜೂರಿನ ಜನವಸತಿ ಪ್ರದೇಶ ಪ್ರವೇಶಿಸಿದೆ. ಅದನ್ನು ಗಮನಿಸಿರುವ ಕೆಲ ಸ್ಥಳೀಯರು ಅರಣ್ಯ ಇಲಾಖೆ ಸಿಬ್ಬಂದಿಗೆ ಕರೆ ಮಾಡಿ ತಿಳಿಸಿದ್ದಾರೆ. ನಾಯಿಗಳು ಬೊಗಳತೊಡಗಿದಾಗ ಗಾಬರಿಗೊಂಡು ಮತ್ತೆ ಅರಣ್ಯದತ್ತ ಓಡಿದ್ದು ಯಾರಿಗೂ ತೊಂದರೆಯಾಗಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಕರಡಿ ಕಾಣಿಸಿಕೊಂಡಿರುವುದು ಸ್ಥಳೀಯರಲ್ಲಿ ಭಯ ಉಂಟುಮಾಡಿದೆ. ಕಾಡು ಪ್ರಾಣಿಗಳು ಜನವಸತಿ ಪ್ರದೇಶ ಪ್ರವೇಶಿಸಿದಾಗ ಏನಾದರೂ ತೊಂದರೆಯಾದರೆ ಯಾರು ಹೊಣೆ? ಕರಡಿ ಐಜೂರು ಪಕ್ಕದ ಗುಡ್ಡದಲ್ಲಿ ಇರುವ ಸಾಧ್ಯತೆ ಇದ್ದು, ಮತ್ತೆ ಅದು ಜನವಸತಿಯತ್ತ ಬಾರದಂತೆ ಅರಣ್ಯ ಇಲಾಖೆಯವರು ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದರು.

ಧಗೆ: ಪ್ರಾಣಿ– ಪಕ್ಷಿಗೂ ಜಲಸಂಕಷ್ಟ

ಬಿಸಿಲ ಬೇಗೆಗೆ ದಾಹ ನೀಗಿಸಿಕೊಳ್ಳಲು ವನ್ಯಜೀವಿಗಳ ಪರದಾಟ ● ಕೆಳಗೆ ಬೀಳುತ್ತಿರುವ ಪಕ್ಷಿಗಳು

● ವರುಣ ಹೆಗಡೆ



ನಗರದ ಸಿವಿಲ್ ಕೋರ್ಟ್ ಬಳಿ ಇರಿಸಲಾದ ಮಣ್ಣಿನ ಮಡಕೆಯಲ್ಲಿ ನೀರು ಖಾಲಿಯಾಗಿದ್ದರಿಂದ ಪಾರಿವಾಳಗಳು ನೀರಿಗಾಗಿ ಪರಿತಪಿಸಿದ ದೃಶ್ಯ ಗುರುವಾರ ಕಂಡುಬಂದಿತು –ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಬಿಸಿಲ ಬೇಗೆಗೆ ಜಲಮೂಲಗಳು ಬರಿದಾಗಿರುವುದರಿಂದ ಪ್ರಾಣಿ–ಪಕ್ಷಿಗಳು ಹನಿ ನೀರಿಗೂ ಪರದಾಡುತ್ತಿವೆ. ದಾಹ ನೀಗಿಸಿಕೊಳ್ಳಲು ನೀರು ಸಿಗದೇ ಅಸ್ವಸ್ಥಗೊಳ್ಳುತ್ತಿರುವ ಪಕ್ಷಿಗಳು, ರಸ್ತೆ ಸೇರಿದಂತೆ ಎಲ್ಲೆಂದರಲ್ಲಿ ಬೀಳುತ್ತಿವೆ.

ನಗರದಲ್ಲಿ ತಾಪಮಾನ ದಿನದಿಂದ ದಿನಕ್ಕೆ ಏರುತ್ತಿದೆ. ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಮಳೆ ಬರದಿದ್ದರಿಂದ ವಾತಾವರದಲ್ಲಿ ಬಿಸಿ ಗಾಳಿ ಹೆಚ್ಚಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ ನಗರದಲ್ಲಿ ಇದೇ ಮೊದಲ ಬಾರಿಗೆ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ. ಉಷ್ಣಾಂಶ ಹೆಚ್ಚಳದಿಂದ ಪ್ರಾಣಿ–ಪಕ್ಷಿಗಳು ನೀರಿಗಾಗಿ ಅಲೆದಾಡಿ, ಅಸ್ವಸ್ಥಗೊಳ್ಳುತ್ತಿವೆ. ಇದರಿಂದಾಗಿ ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಸಂಘ–ಸಂಸ್ಥೆಗಳಿಗೆ ಪ್ರತಿನಿತ್ಯ ನೂರಕ್ಕೂ ಅಧಿಕ ದೂರವಾಣಿ ಕರೆಗಳು ಬರುತ್ತಿವೆ.

ನಗರದ ಕೆಲವೆಡೆ ಮಡಕೆ, ಪ್ಲಾಸ್ಟಿಕ್ ಟ್ರೇಗಳಂತಹವುಗಳಲ್ಲಿ ನೀರು ಇರಿಸಿದ್ದರೂ ನಿಯಮಿತವಾಗಿ ಆ ನೀರನ್ನು ಬದಲಾಯಿಸದಿದ್ದರಿಂದ ಪಾರಿವಾಳ ಸೇರಿ ವಿವಿಧ ಪಕ್ಷಿಗಳಿಗೆ ಅಗತ್ಯ ನೀರು ಸಿಗದಂತಾಗಿದೆ. ಇನ್ನೂ ಕೆಲವೆಡೆ ಪಕ್ಷಿಗಳು ಕಿರಿದಾದ ಮಡಕೆಗಳಲ್ಲಿ ನೀರು ಕುಡಿಯುವಾಗ ಬಿದ್ದು ಅಸ್ವಸ್ಥಗೊಳ್ಳುತ್ತಿವೆ. ಈ ಅವಧಿಯಲ್ಲಿ ಪಕ್ಷಿಗಳು ಹೆಚ್ಚಾಗಿ ಮರಿಗಳಿಗೆ ಜನ್ಮ ನೀಡುತ್ತಿದ್ದು, ಮರಿಗಳು ಹಾರುವ ವೇಳೆ ಅಸ್ವಸ್ಥಗೊಂಡು ಬೀಳುತ್ತಿವೆ.

‘ಅತಿಯಾದ ತಾಪಮಾನದಿಂದ ಪ್ರಾಣಿ–ಪಕ್ಷಿಗಳು ತತ್ತರಿಸಿವೆ. ನೀರು ಸಿಗದೆ ಪಕ್ಷಿಗಳು ಪ್ರಾಣ ಕಳೆದುಕೊಳ್ಳುತ್ತಿವೆ. ನಗರದ ವಿವಿಧೆಡೆ ಅಲ್ಲಲ್ಲಿ ನೀರಿನ ಪಾತ್ರೆಗಳನ್ನು ಇರಿಸಿ, ಎರಡು ದಿನಗಳಿಗೊಮ್ಮೆ ನೀರನ್ನು ಬದಲಾಯಿಸಿದಲ್ಲಿ ಪ್ರಾಣಿ–ಪಕ್ಷಿಗಳನ್ನು ರಕ್ಷಿಸಬಹುದು’ ಎನ್ನುತ್ತಾರೆ ವನ್ಯಜೀವಿ ಸಂರಕ್ಷರು.

ಜೀವನ ಕ್ರಮದಲ್ಲಿ ವ್ಯತ್ಯಾಸ: ಗಿಡ–ಮರಗಳ ನಾಶದಿಂದಾಗಿ ನೀರು ಹಾಗೂ ಆಹಾರದ ಸಮಸ್ಯೆಯಿಂದ ಪ್ರಾಣಿ–ಪಕ್ಷಿಗಳ ಜೀವನ ಕ್ರಮದಲ್ಲಿ ವ್ಯತ್ಯಾಸವಾಗುತ್ತಿದೆ. ನಗರದ ಪ್ರಮುಖ ರಸ್ತೆ ಸೇರಿ ವಿವಿಧೆಡೆ ಇರಿಸಲಾದ ಪಾತ್ರೆಗಳಲ್ಲಿನ ನೀರು ಕುಡಿಯಲು ಪಕ್ಷಿಗಳು ಗುಂಪು ಗುಂಪಾಗಿ ಬಂದು, ವಾಹನಗಳಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿರುವ ಘಟನೆಗಳೂ ವರದಿಯಾಗುತ್ತಿವೆ. ಬೀದಿ ನಾಯಿಗಳು, ದನ–ಕರುಗಳು ಹಾಗೂ ಮಂಗಗಳಿಗೂ ಈ ಬೇಸಿಗೆ ಸಂಕಷ್ಟವನ್ನು ತಂದೊಡ್ಡಿದೆ.

‘ನಗರದಲ್ಲಿ ಪಕ್ಷಿಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರತಿನಿತ್ಯ ಸರಾಸರಿ 150 ದೂರವಾಣಿ ಕರೆಗಳು ಬರುತ್ತಿವೆ. ಈ ಅವಧಿಯಲ್ಲಿ ಹದ್ದುಗಳು ಹೆಚ್ಚಾಗಿ ಮರಿ ಮಾಡಿವೆ. ಶಾಖ ತಡೆಯಲಾಗದೆ ಆ ಮರಿಗಳು ಕೆಳಗಡೆ ಬೀಳುತ್ತಿವೆ. ಅಸ್ವಸ್ಥಗೊಂಡ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮೃತಪಡುತ್ತಿವೆ. ಮಾನವ ಚಟುವಟಿಕೆಗಳಿಂದ ನಗರದ ಪರಿಸರಕ್ಕೆ ಹಾನಿಯಾಗಿ, ಪ್ರಾಣಿ–ಪಕ್ಷಿಗಳ ಜೀವನ ಕ್ರಮದಲ್ಲಿ ವ್ಯತ್ಯಾಸವಾಗಿದೆ. ಆದ್ದರಿಂದ ಜನರು ಈ ಅವಧಿಯಲ್ಲಿ ಪ್ರಾಣಿ–ಪಕ್ಷಿಗಳಿಗೆ ನೆರವಾಗಬೇಕು’ ಎಂದು ಬೆಂಗಳೂರು ನಗರ ಜಿಲ್ಲೆಯ ಪ್ರಾಣಿ ಕಲ್ಯಾಣ ಪರಿಪಾಲಕ ಪ್ರಸನ್ನ ಕುಮಾರ್ ತಿಳಿಸಿದರು.

ವನ್ಯಜೀವಿ ಸಂರಕ್ಷರ ಸಲಹೆಗಳು

- ಪ್ರಾಣಿ–ಪಕ್ಷಿಗಳಿಗೆ ಅಗಲವಾದ ಮಡಕೆಗಳಲ್ಲಿ ಅಲ್ಲಲ್ಲಿ ನೀರನ್ನು ಇಡಬೇಕು
- ಮಡಕೆಗಳ ಮೇಲ್ಭಾಗದಲ್ಲಿ ಅಡ್ಡಲಾಗಿ ಎರಡು ಕೋಲನ್ನು ಹಾಕಬೇಕು. ಇಲ್ಲವಾದಲ್ಲಿ ನೀರು ಕುಡಿಯುವ ವೇಳೆ ಪಕ್ಷಿಗಳು ಕೆಳಗಡೆ ಬೀಳುವ ಸಾಧ್ಯತೆ ಇರುತ್ತದೆ. ಕೋಲು ಇದ್ದಲ್ಲಿ ಅದರ ನೆರವಿನಿಂದ ಮಡಕೆಯ ತಳದಲ್ಲಿನ ನೀರನ್ನೂ ಕುಡಿಯಬಹುದಾಗಿದೆ
- ಪ್ರತಿ ಎರಡು ದಿನಕ್ಕೆ ಒಮ್ಮೆ ಮಡಕೆಯಲ್ಲಿನ ನೀರನ್ನು ಬದಲಾಯಿಸಬೇಕು
- ನೀರನ್ನು ಇಡಲು ಪ್ಲಾಸ್ಟಿಕ್ ಮತ್ತು ಸ್ಟೀಲ್ ಪಾತ್ರೆಯನ್ನು ಬಳಸಬಾರದು. ಈ ಪಾತ್ರೆಗಳು ಸದ್ದು ಬರುವುದರಿಂದ ಪಕ್ಷಿಗಳು ಭಯಬೀಳುವ ಸಾಧ್ಯತೆ ಇರುತ್ತದೆ

ವನ್ಯಜೀವಿ ಸಂರಕ್ಷಣೆಗೆ ಯಾರನ್ನು ಸಂಪರ್ಕಿಸಬೇಕು?

ಪ್ರಸನ್ನ ಕುಮಾರ್ (ವನ್ಯಜೀವಿ ಸಂರಕ್ಷಕ); 9902794711
ಪೀಪಲ್ ಫಾರ್ ಅನಿಮಲ್ (ಪಿಎಫ್‌ಎ); 9900025370

ಟ್ಯಾಂಕರ್ ಮೂಲಕ ನೀರು ಪೂರೈಕೆ

ಪೀಪಲ್ ಫಾರ್ ಅನಿಮಲ್ ಸಂಸ್ಥೆ ಪ್ರಾಣಿ–ಪಕ್ಷಿಗಳ ಸಂರಕ್ಷಣೆಯಲ್ಲಿ ತೊಡಗಿಕೊಂಡಿದೆ. ‘ಆಪರೇಷನ್ ಕ್ವೆಂಚ್’ ಶೀರ್ಷಿಕೆಯಡಿ ವನ್ಯಜೀವಿಗಳ ದಾಹ ತಣಿಸಲು ಶ್ರಮಿಸುವ ಜತೆಗೆ ನೀರನ್ನು ಒದಗಿಸುವ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ತುರಹಳ್ಳಿ ಅರಣ್ಯ ಹಾಗೂ ಬಿಎಂ ಕಾವಲ್ ಮೀಸಲು ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳಿಗೆ ನೀರು ಒದಗಿಸಲು ಕ್ರಮವಾಗಿ 15 ಹಾಗೂ 10 ಸಿಮೆಂಟ್ ರಿಂಗ್‌ಗಳನ್ನು ಜೋಡಿಸಿದೆ. ಇವುಗಳಿಗೆ ಪ್ರತಿನಿತ್ಯ ಎರಡು ಟ್ಯಾಂಕರ್ ಮೂಲಕ ಸಂಸ್ಥೆಯೇ ನೀರನ್ನು ತುಂಬಿಸುತ್ತಿದೆ. ಪಕ್ಷಿಗಳು ಹಾಗೂ ನಾಯಿಗಳಿಗೆ ಅಗತ್ಯ ನೀರನ್ನು ಒದಗಿಸಲು ಸಂಸ್ಥೆಯು ಉಚಿತವಾಗಿ ಬಟ್ಟಲುಗಳನ್ನೂ ವಿತರಿಸುತ್ತಿದೆ.

‘ಏಪ್ರಿಲ್ ತಿಂಗಳಲ್ಲಿ ಸುಮಾರು 500 ವನ್ಯಜೀವಿಗಳನ್ನು ಸಂರಕ್ಷಿಸಿದ್ದೇವೆ. ಇವುಗಳಲ್ಲಿ ಶೇ 60ರಷ್ಟು ವನ್ಯಜೀವಿಗಳು ನಿರ್ಜಲೀಕರಣಗೊಂಡಿದ್ದವು. ಬಿಸಿ ಗಾಳಿಗೆ ಪಕ್ಷಿಗಳೂ ಮರಗಳಿಂದ ಕೆಳಗೆ ಬೀಳುತ್ತಿವೆ. ಅವುಗಳಿಗೂ ನಾವು ನೆರವಾಗುತ್ತಿದ್ದೇವೆ. ಮಳೆ ಬರುವವರೆಗೂ ವನ್ಯಜೀವಿಗಳಿಗೆ ನೀರನ್ನು ಒದಗಿಸುತ್ತೇವೆ. ಜನರು ಸಹ ಸ್ವಯಂ ಪ್ರೇರಿತರಾಗಿ ನೀರನ್ನು ಒದಗಿಸುವ ಕಾರ್ಯ ಮಾಡಬೇಕು’ ಎಂದು ಪೀಪಲ್ ಫಾರ್ ಅನಿಮಲ್ (ಪಿಎಫ್‌ಎ) ವೈಡ್‌ಲೈಫ್ ಆಸ್ಪತ್ರೆಯ ಮುಖ್ಯ ಪಶುವೈದ್ಯ ಡಾ. ನವಾಜ್ ಶರೀಫ್ ತಿಳಿಸಿದರು.

ಕುಕ್ಕೆ ದೇವಸ್ಥಾನ: ಎಇಒ ಧರ್ಮದ ಬಗ್ಗೆ ಚರ್ಚೆ, ಗೊಂದಲ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ನೂತನ ಸಹಾಯಕ ಕಾರ್ಯ ನಿರ್ವಹಣಾಧಿಕಾರಿ (ಎಇಒ) ಆಗಿ ನೇಮಕಗೊಂಡಿರುವ ಯೇಸುರಾಜ್ ಅವರ ಧರ್ಮ ಯಾವುದು ಎಂಬುದು ಈಗ ಚರ್ಚೆಗೆ ಗ್ರಾಸವಾಗಿದೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಚರ್ಚೆ ನಡೆದಿದ್ದು, ‘ಯೇಸುರಾಜ್ ಹಿಂದೂ ಧರ್ಮಕ್ಕೆ ಸೇರಿದವರು’ ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.


ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಎಇಒ ಆಗಿದ್ದ ಪುಷ್ಪಲತಾ ರಾವ್ ಅವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ ಈಚೆಗೆ ರಾಮನಗರ ಜಿಲ್ಲಾಧಿಕಾರಿ ಕಚೇರಿಯ ಮುಜರಾಯಿ ವಿಭಾಗದ ಅಧೀಕ್ಷಕರಾಗಿದ್ದ ಯೇಸುರಾಜ್ ಅವರನ್ನು ಸರ್ಕಾರ ನೇಮಕ ಮಾಡಿತ್ತು.

ಅವರು ಮಂಗಳವಾರವಷ್ಟೇ ಅಧಿಕಾರ ಸ್ವೀಕರಿಸಿದ್ದರು. ಅಧಿಕಾರ ಸ್ವೀಕರಿಸಿದ ಬಳಿಕ ಅವರ ಧರ್ಮದ ವಿಚಾರವಾಗಿ ಸ್ಪಷ್ಟನೆ ನೀಡಬೇಕು ಎಂಬ ಬರಹಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

‘ಹಿಂದೂ ಧಾರ್ಮಿಕ ದತ್ತಿ ಕಾಯ್ದೆಯಡಿ ದೇವಸ್ಥಾನಗಳಿಗೆ ಹಿಂದೂ ಅಧಿಕಾರಿಗಳನ್ನು ಮಾತ್ರ ನೇಮಿಸಬೇಕು. ಯೇಸುರಾಜ್ ಅವರು ಹಿಂದೂವೇ ಅಥವಾ ಮತಾಂತರಗೊಂಡ ಕ್ರೈಸ್ತರೇ ಎಂಬುದನ್ನು ದೃಢೀಕರಿಸಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇನೆ’ ಎಂದು ಹಿಂದೂ ಮುಖಂಡ ಶರಣ್ ಪಂಪ್‌ವೆಲ್ ಸಾಮಾಜಿಕ ಜಾಲತಾಣದಲ್ಲಿ ಒತ್ತಾಯಿಸಿದ್ದರು.

ಯೇಸುರಾಜ್ ಅವರ ಧರ್ಮದ ಬಗ್ಗೆ ವಿವಿಧ ರೀತಿಯ ಚರ್ಚೆಗಳು ನಡೆಯುತ್ತಿರುವ ಮಧ್ಯೆಯೇ ಕುಕ್ಕೆ ದೇವಳದ ಅಧಿಕಾರಿಗಳು, ‘ಯೇಸುರಾಜ್ ಹಿಂದೂ ಧರ್ಮದವರು’ ಎಂದು ಸ್ಪಷ್ಟನೆ ನೀಡಿದ್ದರು. ಯೇಸುರಾಜ್ ಮೈಸೂರು ಜಿಲ್ಲೆಯ ಅಂಬೇಡ್ಕರ್ ನಗರದವರು. ಗೊಂದಲ ಆರಂಭವಾದ ಬಳಿಕ ಯೇಸುರಾಜ್ ಅವರ ಶೈಕ್ಷಣಿಕ, ಇತರ ದಾಖಲೆಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿವೆ.

ಗೊಂದಲಗಳಿಗೆ ಬಿಜೆಪಿ ಕಾರಣ ರಾಮಲಿಂಗಾ ರೆಡ್ಡಿ ಆರೋಪ



ರಾಮಲಿಂಗಾ ರೆಡ್ಡಿ

ಸುಬ್ರಹ್ಮಣ್ಯ: ‘ಈ ಗೊಂದಲಗಳಿಗೆ ಬಿಜೆಪಿ ಕಾರಣ’ ಎಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಆರೋಪಿಸಿದ್ದಾರೆ.

‘ರಾಜ್ಯದಲ್ಲಿ ಇನ್ನೊಂದು ಹಂತದ ಚುನಾವಣೆಯ ಕಾರಣ ಜನರನ್ನು ದಾರಿ ತಪ್ಪಿಸಿ, ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳಲು ಯತ್ನಿಸುತ್ತಿದೆ. ಬಿಜೆಪಿಗೆ ಸೋಲಿನ ಭಯ ಶುರುವಾಗಿರುವುದು ಸ್ಪಷ್ಟ’ ಎಂದು ಸಚಿವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

‘ಯೇಸುರಾಜ್ ಅವರು ಕ್ರೈಸ್ತ ಸಮುದಾಯವರು ಎಂಬ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಇದು ಬಿಜೆಪಿಯು ಕರ್ನಾಟಕದ ಕುರಿತು ಹರಡಿರುವ ಮತ್ತೊಂದು. ಯೇಸುರಾಜ್, ಹಿಂದುಳಿದ ಜಾತಿಗೆ ಸೇರಿದವರಾಗಿದ್ದು, ದಾಖಲೆಗಳು ಇವೆ’ ಎಂದು ತಿಳಿಸಿದ್ದಾರೆ.

ದೂರು ನೀಡುವ ಎಚ್ಚರಿಕೆ: ‘ಈ ರೀತಿಯ ಅಪಪ್ರಚಾರ ಮುಂದುವರಿಸಿದರೆ ಅಂಥವರ ವಿರುದ್ಧ ಕಾನೂನು ಕ್ರಮಕ್ಕೆ ಸಂಬಂಧಿಸಿದವರಿಗೆ ದೂರು ನೀಡಲಾಗುವುದು’ ಎಂದು ಸುಬ್ರಹ್ಮಣ್ಯ ಗ್ರಾಮ ಪಂಚಾಯಿತಿ ಸದಸ್ಯ ಹರೀಶ್ ಇಂಜಾಡಿ ತಿಳಿಸಿದ್ದಾರೆ.

‘ಹೆಸರಿನ ವಿಚಾರದಲ್ಲಿ ಅಧಿಕಾರಿಯ ಧರ್ಮದ ಬಗ್ಗೆ ಗೊಂದಲ ಸೃಷ್ಟಿಸಿರುವ ಬಗ್ಗೆ ಭಕ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಧಿಕಾರಿಯ ಧರ್ಮದ ಬಗ್ಗೆ ಗೊಂದಲ ಸೃಷ್ಟಿಸುವ ನಡೆ ಸರಿಯಲ್ಲ. ಅಧಿಕಾರಿಗಳ ಜೊತೆ ಚರ್ಚಿಸಿ ಸ್ಪಷ್ಟನೆ ಪಡೆದುಕೊಳ್ಳಬೇಕಿತ್ತು. ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವುದೂ ಸರಿಯಲ್ಲ’ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.



ಕಥಕ್ ಉತ್ಸವ

ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ನೃತ್ಯ ದಿನಾಚರಣೆ ಹಾಗೂ ಮಾಯಾರಾವ್ ಸ್ಮರಣಾರ್ಥ ಹಮ್ಮಿಕೊಂಡಿದ್ದ ಕಥಕ್ ಉತ್ಸವದಲ್ಲಿ ನಾದಂ ಸಂಸ್ಥೆಯ ನಿರ್ದೇಶಕರಾದ ನಂದಿನಿ ಕೆ. ಮೆಹ್ತಾ ಮತ್ತು ಕೆ. ಮುರಳಿ ಮೋಹನ್ ಶಿಷ್ಯರು ಕಥಕ್ ನೃತ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಅಂಕಪಟ್ಟಿ ಇಲ್ಲದೇ ಆದರ್ಶ ವಿ.ವಿಗಳಲ್ಲಿ ಪ್ರವೇಶವಿಲ್ಲ

ಫಲಿತಾಂಶವಿಲ್ಲ; ಪ್ರವೇಶಕ್ಕೆ ಪರದಾಟ

● ಬಸವರಾಜ ಹವಾಲ್ದಾರ

ಬಾಗಲಕೋಟೆ: ಐದನೇ ತರಗತಿಯ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲ. ಆದರೆ, ಆದರ್ಶ ವಿದ್ಯಾಲಯಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಮೇ 7 ಕೊನೆ ದಿನವೆಂದು ನಿಗದಿಪಡಿಸಲಾಗಿದೆ. ಐದನೇ ತರಗತಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣಪತ್ರ ಸಿಗದ ಕಾರಣ ಪಾಲಕರು, ವಿದ್ಯಾರ್ಥಿಗಳು ಕಲಿಯುತ್ತಿರುವ ಶಾಲೆ, ಆಯ್ಕೆಯಾದ ಆದರ್ಶ ವಿದ್ಯಾಲಯಕ್ಕೆ ಅಲೆದಾಡುವಂತಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ 6 ಆದರ್ಶ ವಿದ್ಯಾಲಯಗಳಿವೆ. ರಾಜ್ಯದಲ್ಲಿ ಒಟ್ಟು 74 ಶಾಲೆಗಳಿವೆ. ಪ್ರತಿ ಶಾಲೆಗೆ 120 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದೆ. ರಾಜ್ಯದಾದ್ಯಂತ ಸಾವಿರಾರು ವಿದ್ಯಾರ್ಥಿಗಳದ್ದು ಇದೇ ಸ್ಥಿತಿ ಇದೆ.

ಆದರ್ಶ ವಿದ್ಯಾಲಯ ಇಂಗ್ಲಿಷ್ ಮಾಧ್ಯಮ ಪ್ರವೇಶಕ್ಕೆ ನಡೆಸಿದ್ದ ಪ್ರವೇಶ ಪರೀಕ್ಷೆ ಆಧಾರದ ಮೇಲೆ ಏಪ್ರಿಲ್ 29ರಂದು ಪ್ರವೇಶಕ್ಕೆ ಅರ್ಹತಾ ಪಟ್ಟಿ ಪ್ರಕಟಿಸಲಾಗಿದೆ. ಆಯ್ಕೆಯಾದವರು ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಜಾತಿ ಹಾಗೂ ಆದಾಯ ಪ್ರಮಾಣಪತ್ರದೊಂದಿಗೆ ಪ್ರವೇಶ ಪಡೆಯಬೇಕು ಎಂದು ಸೂಚಿಸಲಾಗಿದೆ.


> ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಹೋದ ವಿದ್ಯಾರ್ಥಿಗಳನ್ನು ವಾಪಸ್ ಕಳುಹಿಸಿದ್ದು ಗೊತ್ತಾಗಿದೆ. ಇದನ್ನು ನೋಡಲ್ ಅಧಿಕಾರಿಯ ಗಮನಕ್ಕೂ ತಂದಿದ್ದೇನೆ
>
> **ಮಾಗುಂಡಪ್ಪ ಬಡದಾನಿ**
> ಕ್ಷೇತ್ರ ಶಿಕ್ಷಣಾಧಿಕಾರಿ, ಬಾಗಲಕೋಟೆ

ಮೊದಲ ಬಾರಿಗೆ ಐದನೇ ತರಗತಿ ಮಕ್ಕಳಿಗೆ ಮೌಲ್ಯಾಂಕನ ನಡೆಸಲು ರಾಜ್ಯ ಸರ್ಕಾರ ಮುಂದಾಗಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನ ಮೊರೆಹೋಗಲಾಗಿತ್ತು. ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ 5, 8, 9ನೇ ತರಗತಿಯ ಫಲಿತಾಂಶವನ್ನು ಪ್ರಕಟಿಸಿದಂತೆ ಆದೇಶ ನೀಡಿತ್ತು. ಒಂದು ವೇಳೆ ಪ್ರಕಟಿಸಿದ್ದರೂ ಮಾನ್ಯತೆ ನೀಡುವಂತಿಲ್ಲ ಎಂದಿತ್ತು.

ಏಪ್ರಿಲ್ 8ರಂದು ಬೆಳಿಗ್ಗೆ ಫಲಿತಾಂಶ ಘೋಷಣೆ ಮಾಡಿ, ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಕೋರ್ಟ್ ಆದೇಶದ ನಂತರ ಫಲಿತಾಂಶವು ಅತಂತ್ರವಾಗಿದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಎಸ್‌ಟಿಎಸ್‌ನಲ್ಲಿ ನಮೂದು ಮಾಡದ್ದರಿಂದ ವರ್ಗಾವಣೆ ಪ್ರಮಾಣಪತ್ರ ಜನರೇಟ್ ಆಗುವುದಿಲ್ಲ. ಅಂಕಪಟ್ಟಿ, ವರ್ಗಾವಣೆ ಪ್ರಮಾಣಪತ್ರ ತೆಗೆದುಕೊಂಡು ಬರುವವರೆಗೆ ಪ್ರವೇಶ ತೆಗೆದುಕೊಳ್ಳುವುದಿಲ್ಲ ಎಂದು ಆದರ್ಶ ವಿದ್ಯಾಲಯದ ಪ್ರಾಚಾರ್ಯರು ಮಕ್ಕಳನ್ನು ಮರಳಿ ಕಳುಹಿಸುತ್ತಿದ್ದಾರೆ.

‘ಜಿಲ್ಲೆಯ ಹುನಗುಂದ ಆದರ್ಶ ವಿದ್ಯಾಲಯಕ್ಕೆ ಸಹೋದರನ ಮಗ ಆಯ್ಕೆಯಾಗಿದ್ದಾನೆ. ಅಂಕಪಟ್ಟಿ, ವರ್ಗಾವಣೆ ಪ್ರಮಾಣಪತ್ರ ಮೂಲಪ್ರತಿಗಳನ್ನು ಕೊಡದೆ ಪ್ರವೇಶ ಕಷ್ಟ ಎಂದು ಶಾಲೆಯವರು ಹೇಳಿದ್ದಾರೆ. ಮೇ 7ರಂದು ಮತದಾನ ಇರುವ ಕಾರಣ ಬಹಳಷ್ಟು ಶಿಕ್ಷಕರು ಚುನಾವಣಾ ಕರ್ತವ್ಯಕ್ಕೆ ಹೋಗುತ್ತಾರೆ. ಹೀಗಾಗಿ, ಏನು ಮಾಡಬೇಕು ಎಂಬ ಗೊಂದಲವಿದೆ’ ಎಂದು ಹುನಗುಂದದ ನಿವಾಸಿ ರಾಜು ಕೌಜಗನೂರು ತಿಳಿಸಿದರು.

‘ನವಭಾರತದಲ್ಲಿ ‘ಧರ್ಮ’ ಆಯುಧ’



ಪರಕಾಲ ಪ್ರಭಾಕರ್

ಕೋಲ್ಕತ್ತ (ಪಿಟಿಐ) : ಬಿಜೆಪಿ ಅಧಿಕಾರದಲ್ಲಿರುವ ನವಭಾರತದಲ್ಲಿ ರಾಜಕೀಯ ಲಾಭಕ್ಕಾಗಿ ಧರ್ಮವನ್ನು ಆಯುಧವಾಗಿ ಬಳಸಲಾಗುತ್ತಿದೆ ಎಂದು ರಾಜಕೀಯ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಸಾಂವಿಧಾನಿಕ ನಡೆಯ ಮೂಲಕ ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯನ್ನು ನಾಶ ಮಾಡಲು ಪ್ರಯತ್ನಿಸುತ್ತಿದೆ’ ಎಂದರು.

'ಧರ್ಮ ಯಾವತ್ತಿಗೂ ಇರುತ್ತದೆ. ಬಿಜೆಪಿ ಆಡಳಿತದ ನವಭಾರತದಲ್ಲಿ ರಾಜಕೀಯ ಸ್ವಹಿತಾಸಕ್ತಿಗಾಗಿ ಅದನ್ನು ಬಳಸಲಾಗುತ್ತಿದೆ ಎನ್ನುವುದು ಹೊಸ ವಿಚಾರ’ ಎಂದು ಹೇಳಿದರು.

ತಿಮ್ಮಾಪುರ, ರಾಜು ಕಾಗೆ ಹೇಳಿಕೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೋದಿ ಸತ್ತರೆ ಪ್ರಧಾನಿಯಾಗಲು ಯಾರೂ ಇಲ್ಲವೇ ಎಂದಿರುವ ಕಾಗವಾಡ ಶಾಸಕ ರಾಜು ಕಾಗೆ ಹಾಗೂ ಪ್ರಜ್ವಲ್ ರೇವಣ್ಣ ಕೃಷ್ಣನನ್ನೂ ಮೀರಿಸುವ ಹಂತಕ್ಕೆ ಹೊರಟಿದ್ದಾರೆ’ ಎಂಬ ಅಬಕಾರಿ ಸಚಿವ ತಿಮ್ಮಾಪುರ ಅವರ ಹೇಳಿಕೆಯನ್ನು ಬಿಜೆಪಿ ಖಂಡಿಸಿದೆ.

‘ಇಬ್ಬರ ಹೇಳಿಕೆಗಳು ಕೀಳು ಅಭಿರುಚಿಯಿಂದ ಕೂಡಿವೆ. ಕೆಟ್ಟ ಮನಃಸ್ಥಿತಿ ಇರುವ ವ್ಯಕ್ತಿಗಳಷ್ಟೇ ಇಂತಹ ಹೇಳಿಕೆ ನೀಡಲು ಸಾಧ್ಯ. ಲೋಕಸಭಾ ಚುನಾವಣೆಯಲ್ಲಿ ಲೀಡ್ ಕೊಡದಿದ್ದರೆ ವಿದ್ಯುತ್ ಸಂಪರ್ಕ ಕಡಿತ ಮಾಡುವುದಾಗಿ ಕಾಗೆ ಹೇಳಿದ್ದಾರೆ. ಇದು ಮತದಾರರನ್ನು ಬ್ಲ್ಯಾಕ್‌ಮೇಲ್ ಮಾಡುವ ತಂತ್ರ. ಸಾರ್ವಜನಿಕರ ತೆರಿಗೆ ಹಣದಿಂದ ಭಾಗ್ಯಗಳನ್ನು ಘೋಷಣೆ ಮಾಡಿ ಚುನಾವಣೆಯಲ್ಲಿ ಮತಕ್ಕಾಗಿ ಜನರನ್ನು ಬೆದರಿಸುವ ಮಟ್ಟಕ್ಕೆ ಕಾಂಗ್ರೆಸ್ ಹೊರಟಿದೆ’ ಎಂದು ಬಿಜೆಪಿಯ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣಗೌಡ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

‘ಕಾಂಗ್ರೆಸ್‌ನಲ್ಲಿ ಶಾಸಕರು, ಸಚಿವರು ತಮ್ಮ ಹೇಳಿಕೆಗಳ ಮೂಲಕ ಪ್ರಚಾರಕ್ಕಾಗಿ ಅಡ್ಡ ದಾರಿಯಲ್ಲಿ ಮತ ಕೇಳಲು ಹೊರಟಿದ್ದಾರೆ. ಪ್ರಜ್ವಲ್ ಪ್ರಕರಣ ಮುಂದೆ ಇಟ್ಟುಕೊಂಡು ಸ್ತ್ರೀ ಸಮುದಾಯಕ್ಕೆ ಅವಮಾನವಾಗುವ ರೀತಿಯ ಹೇಳಿಕೆ ಕೊಡುತ್ತಿದ್ದಾರೆ’ ಎಂದು ದೂರಿದರು.

‘ಯುಎಸ್‌ಸಿಐಆರ್‌ಎಫ್ ಪಕ್ಷಪಾತಿ’

ನವದೆಹಲಿ (ಪಿಟಿಐ): ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಗಂಭೀರ ಉಲ್ಲಂಘನೆಗಳಾಗಿವೆ ಎಂದಿರುವ ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗದ (ಯುಎಸ್‌ಸಿಐಆರ್‌ಎಫ್) ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಭಾರತ, ಅದು ನಿರ್ದಿಷ್ಟ ರಾಜಕೀಯ ಕಾರ್ಯಸೂಚಿಯೊಂದಿಗೆ ಕೆಲಸ ಮಾಡುವ ಪಕ್ಷಪಾತದಿಂದ ಕೂಡಿದ ಸಂಸ್ಥೆಯಾಗಿದೆ ಎಂದಿದೆ.

‘ಯುಎಸ್‌ಸಿಐಆರ್‌ಎಫ್ ತನ್ನ ವಾರ್ಷಿಕ ವರದಿಯಲ್ಲಿ ಭಾರತದ ವಿರುದ್ಧ ಅಪಪ್ರಚಾರ ಮಾಡಲು ಯತ್ನಿಸಿದೆ. ಆ ಮೂಲಕ ಅದು ಭಾರತದ ಚುನಾವಣಾ ಪ್ರಕ್ರಿಯೆಯಲ್ಲಿ ಮಧ್ಯ ಪ್ರವೇಶಿಸಲು ಪ್ರಯತ್ನಿಸುತ್ತಿದೆ’ ಎಂದು ಭಾರತ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಾಮೀನಿಗಾಗಿ ರೇವಣ್ಣ ಕೋರ್ಟ್‌ಗೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಯಾದ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನೋಟಿಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಎಚ್.ಡಿ.ರೇವಣ್ಣ ಸಲ್ಲಿಸಿದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಗುರುವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ರೇವಣ್ಣ ಪರ ಹೈಕೋರ್ಟ್‌ನ ಹಿರಿಯ ವಕೀಲ ಮೂರ್ತಿ ಡಿ.ನಾಯಕ್ ಹಾಜರಾಗಿ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಕೋರಿದರು. ’ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಎಸ್‌ಐಟಿ, ಭಾರತೀಯ ದಂಡ ಸಂಹಿತೆ–1860ರ ಕಲಂ 376 (ಅತ್ಯಾಚಾರ ಆರೋಪ) ಅನ್ನು ಸೇರ್ಪಡೆ ಮಾಡಿದೆ. ಪ್ರಕರಣದ ಆರೋಪಿಗಳನ್ನು ಬಂಧಿಸುವುದಾಗಿ ಇವತ್ತು(ಗುರುವಾರ) ಬೆಳಿಗ್ಗೆಯಷ್ಟೇ ಗೃಹ ಮಂತ್ರಿ ತಿಳಿಸಿದ್ದಾರೆ. ಆದ್ದರಿಂದ, ಅರ್ಜಿದಾರರಿಗೆ ಬಂಧನದಿಂದ ರಕ್ಷಣೆ ನೀಡಬೇಕು ಮತ್ತು ಮಧ್ಯಂತರ ಜಾಮೀನು ನೀಡಬೇಕು’ ಎಂದು ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಾಧೀಶರು, ಎಸ್‌ಐಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 3ಕ್ಕೆ ಮುಂದೂಡಿದರು. ವಕೀಲ ಪವನ್ ಸಾಗರ್ ರೇವಣ್ಣ ಪರ ವಕಾಲತ್ತು ವಹಿಸಿದ್ದಾರೆ.

ಕಲಂ 376 ಸೇರ್ಪಡೆಗೆ ಮನವಿ: ಗುರುವಾರ ಮಧ್ಯಾಹ್ನ 1 ಗಂಟೆಗೆ ಎಸ್‌ಐಟಿ ತಂಡವು ನಗರದ, ಉಸ್ತುವಾರಿ 32ನೇ ಎಸಿಎಂಎಂ ಕೋರ್ಟ್‌ಗೆ ಹಾಜರಾಗಿ, ‘ಈಗಾಗಲೇ ಆರೋಪಿ ವಿರುದ್ಧ ಹೊಳೆ ನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿ ಐಪಿಸಿ ಕಲಂ 376 ಅನ್ನೂ ಸೇರ್ಪಡೆ ಮಾಡಬೇಕು’ ಎಂಬ ಮನವಿಯನ್ನು ನ್ಯಾಯಾಧೀಶರಿಗೆ ಸಲ್ಲಿಸಿದರು. ಈ ವಿಷಯ ಗೊತ್ತಾಗುತ್ತಿದ್ದಂತೆಯೇ, ರೇವಣ್ಣ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದರು.

ಪ್ರಜ್ವಲ್ ಪ್ರಕರಣ: ಮೋದಿ ಜಾಣ ಮೌನ–ಬಿಎಸ್‌ಪಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಪ್ರಧಾನಿ ದೇವೇಗೌಡರ ಮೊಮ್ಮಗ, ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಅವರ ತಂದೆ, ಶಾಸಕ ರೇವಣ್ಣ ಅವರು ಅಮಾಯಕ ಬಡ ಹೆಣ್ಣುಮಕ್ಕಳ ಮೇಲೆ ನಡೆಸಿರುವ ಲೈಂಗಿಕ ದೌರ್ಜನ್ಯ ಪ್ರಕರಣವು ನಾಡಿನ ಮಾನವನ್ನು ಹರಾಜು ಹಾಕಿದೆ’ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ದೂರಿದ್ದಾರೆ.

‘ಮಿತ್ರ ಪಕ್ಷದ ಅಭ್ಯರ್ಥಿಯ ಲೈಂಗಿಕ ಪುರಾಣ ಬೀದಿಬೀದಿಗಳಲ್ಲಿ ಹರಾಜಾಗುತ್ತಿದ್ದರೂ ಪ್ರಧಾನಿ ನರೇಂದ್ರ ಮೋದಿ ಜಾಣ ಮೌನ ವಹಿಸಿದ್ದಾರೆ. ಈ ಅನೈತಿಕ ಕತೆ ಮೊದಲೇ ಗೊತ್ತಿದ್ದರೂ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವಿದೇಶಕ್ಕೆ ಹೋಗಲು ನೆರವಾಗಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಪಕ್ಷದ ಸದಸ್ಯನನ್ನು ಅಮಾನತು ಮಾಡಿರುವುದು ದೊಡ್ಡ ಶಿಕ್ಷೆಯಲ್ಲ. ಪಕ್ಷದಿಂದ ಉಚ್ಚಾಟಿಸಿ, ವಿದೇಶದಿಂದ ಕರೆತಂದು ಪೊಲೀಸರಿಗೆ ಒಪ್ಪಿಸಿದರೆ ಗೌಡರ ಕುಟುಂಬದ ಪ್ರಾಮಾಣಿಕತೆ, ನ್ಯಾಯಪ್ರಜ್ಞೆ ಮೆಚ್ಚಬಹುದಿತ್ತು. ಆದರೆ ಅಮಾನತು ಮಾಡಿ ಕಣ್ಣೊರೆಸುವ ನಾಟಕ ವಾಡಿದ್ದಾರೆ’ ಎಂದಿದ್ದಾರೆ.

‘ಸಿದ್ದರಾಮಯ್ಯ ಅವರ ಸರ್ಕಾರವು ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸಿರುವುದು ಸ್ವಾಗತಾರ್ಹ. ತನಿಖೆ ಪಾರದರ್ಶಕವಾಗಿ ನಡೆದು, ಸಾಕ್ಷ್ಯ ನಾಶವಾಗದಂತೆ ನೋಡಿಕೊಳ್ಳಬೇಕು. ಸಂತ್ರಸ್ತೆಯರಿಗೆ ರಕ್ಷಣೆ ನೀಡಬೇಕು’ ಎಂದಿದ್ದಾರೆ.

ರಾಹುಲ್ ಚಿತ್ರಗಳೆಲ್ಲ ಸತ್ಯವೇ?: ಸಿ.ಟಿ. ರವಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಲೈಂಗಿಕ ದೌರ್ಜನ್ಯ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರದ ನಡೆ ಅನುಮಾನಾಸ್ಪದವಾಗಿದೆ. ಅವರು ಹೇಳಿದ್ದೆಲ್ಲವೂ ಸತ್ಯ ಎಂಬಂತೆ ವಾದಿಸು ತ್ತಾರೆ. ಹಾಗಾದರೆ, ರಾಹುಲ್ ಗಾಂಧಿ ಅವರ ಹಲವು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಅವುಗಳೆಲ್ಲ ಸತ್ಯ ಎಂದು ನಂಬೋಣವೇ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಪ್ರಶ್ನಿಸಿದರು.

‘ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣವನ್ನು ಬಿಜೆಪಿಗೆ ತಳಕು ಹಾಕಲಾಗುತ್ತಿದೆ. ರಾಹುಲ್ ಗಾಂಧಿ ಅಮೆರಿಕದಲ್ಲಿ ‘ಸಿಕ್ಕಿಹಾಕಿಕೊಂಡಿದ್ದರಂತೆ’ ಎಂಬ ಸುದ್ದಿ ಹರಿದಾಡಿತ್ತು. ರಜಾದಿನ ಕಳೆಯಲು ಅವರು ಒಬ್ಬೊಬ್ಬರ ಜೊತೆ ಅಫ್ಗಾನಿಸ್ತಾನ, ಪಾಕಿಸ್ತಾನ, ನೇಪಾಳ, ಶ್ರೀಲಂಕಾ, ಸ್ವಿಟ್ಜರ್‌ಲ್ಯಾಂಡ್, ಇಟಲಿ ಮತ್ತಿತರ ಕಡೆ ಹೋಗುತ್ತಾರೆ ಎಂಬ ಆರೋಪವಿದೆ. ಅದೆಲ್ಲ ಸತ್ಯ ಎಂದು ನಂಬಬೇಕೆ ಎಂಬುದನ್ನು ಕಾಂಗ್ರೆಸ್ ಹೇಳಲಿ’ ಎಂದು ಅವರು ಗುರುವಾರ ಕೇಳಿದರು. ‘ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಮಹಿಳಾ ನ್ಯಾಯಾಧೀಶರ ನೇತೃತ್ವದಲ್ಲೇ ತನಿಖೆ ಮಾಡಿಸಬೇಕು. ಎಸ್‌ಐಟಿ ನ್ಯಾಯಾಧೀಶರಿಗೆ ವರದಿ ಸಲ್ಲಿಸಬೇಕು. ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು’ ಎಂದರು.

‘ಸಂತ್ರಸ್ತರಿಗೆ ಸೂಕ್ತ ರಕ್ಷಣೆ ನೀಡಿ’

ಪ್ರಜಾವಾಣಿ ವಾರ್ತೆ



ಸಂತ್ರಸ್ತರಿಗೆ ಸೂಕ್ತ ರಕ್ಷಣೆ ನೀಡುವಂತೆ ಪೂರ್ಣಿಮಾ ದಾಸ್ ಅವರು ನಾಗಲಕ್ಷ್ಮಿ ಚೌಧರಿ ಅವರಿಗೆ ಮನವಿ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಸಂತ್ರಸ್ತರಿಗೆ ಸೂಕ್ತ ರಕ್ಷಣೆ ನೀಡಿ, ಸಂತ್ರಸ್ತರ ಪೂರ್ಣ ವಿಡಿಯೊ ಬಿಡುಗಡೆ ಮಾಡಿದ ವ್ಯಕ್ತಿಗಳನ್ನು ಬಂಧಿಸಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಕರ್ನಾಟಕ ಮಹಿಳಾ ಸಂಘರ್ಷ ಸಮಿತಿ ಮನವಿ ಮಾಡಿದೆ.

ನಗರದಲ್ಲಿ ಗುರುವಾರ ಸಮಿತಿಯ ಅಧ್ಯಕ್ಷೆ ಪೂರ್ಣಿಮಾ ದಾಸ್ ಅವರು ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರಿಗೆ ಮನವಿ ಸಲ್ಲಿಸಿದರು.

‘ಈ ಪ್ರಕರಣ ಇಡೀ ಮನುಕುಲ ತಲೆ ತಗ್ಗಿಸುವಂತೆ ಮಾಡಿದ ಹೀನ ಕೃತ್ಯವಾಗಿದ್ದು, ಅದನ್ನು ಖಂಡಿಸುತ್ತೇವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರಗಳು ಹಾಗೂ ವಿಡಿಯೊಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿದ ವ್ಯಕ್ತಿಗಳ ಮನಃಸ್ಥಿತಿ ಕೂಡ ಅತ್ಯಂತ ವಿಕೃತ ಮತ್ತು ಕ್ರೂರವಾದದ್ದಾಗಿದೆ. ಅಂತಹವರನ್ನು ತುರ್ತಾಗಿ ಬಂಧಿಸಬೇಕಿದೆ’ ಎಂದು ಪೂರ್ಣಿಮಾ ದಾಸ್ ಅವರು ತಿಳಿಸಿದ್ದಾರೆ.

‘ರೇವಣ್ಣ ಅವರ ಕುಟುಂಬದ ಕಾರು ಚಾಲಕ ಕಾರ್ತಿಕ್ ನೀಡಿರುವ ಹೇಳಿಕೆಯಿಂದ ಪೆನ್‌ಡ್ರೈವ್ ಮೂಲ ಆತನೇ ಎನ್ನುವುದು ಸಾಬೀತಾಗಿದೆ. ಇಷ್ಟಾದರೂ ಅಶ್ಲೀಲ ವಿಡಿಯೊಗಳ ಪೆನ್‌ಡ್ರೈವ್ ಮಾಡಿದವರು, ಹಂಚಿದವರು ಯಾರು ಎಂಬ ಬಗ್ಗೆ ತನಿಖೆ ಚುರುಕುಗೊಳಿಸದಿರುವುದು ವಿಷಾದನೀಯ. ರೇವಣ್ಣ ಮತ್ತು ಪ್ರಜ್ವಲ್ ಅವರನ್ನು ವಿಚಾರಣೆಗೆ ಗುರಿಪಡಿಸಿ ಕ್ರಮ ಕೈಗೊಳ್ಳುವುದು ಎಷ್ಟು ಮುಖ್ಯವೋ, ಇದನ್ನು ಬೀದಿ ಬೀದಿಗಳಲ್ಲಿ ಹಂಚಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು ಅಷ್ಟೇ ಮುಖ್ಯ. ಹಾಗಾಗಿ, ಆಯೋಗವು ಹಾಸನ ಪೊಲೀಸ್ ಹಾಗೂ ಎಸ್.ಐ.ಟಿ.ಗೆ ಸ್ಪಷ್ಟ ಸೂಚನೆ ನೀಡಬೇಕು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಹಾಯಕ ಎಂಜಿನಿಯರ್ ಹುದ್ದೆ: ಆನ್‌ಲೈನ್‌ನಲ್ಲಿ ಸ್ವೀಕಾರವಾಗದ ಅರ್ಜಿ

ಕೆಪಿಎಸ್‌ಸಿ: ಅಂಗವಿಕಲ ಅಭ್ಯರ್ಥಿಗಳು ಅತಂತ್ರ

● ಮೋಹನ್ ಕುಮಾರ ಸಿ.

ಮುಖ್ಯಾಂಶಗಳು

- ಇತ್ಯರ್ಥವಾಗದ ಸಮಸ್ಯೆ
- ಸಲ್ಲಿಕೆಗೆ ಮೇ 15 ಕಡೇ ದಿನ
- ಸ್ಪಂದಿಸದ ಅಧಿಕಾರಿಗಳು: ಬೇಸರ

ಮೈಸೂರು: ಬಿಬಿಎಂಪಿ ಹಾಗೂ ಜಲಸಂಪನ್ಮೂಲ ಇಲಾಖೆಯ ಸಹಾಯಕ ಎಂಜಿನಿಯರ್ ಅಂಗವಿಕಲರ ಮೀಸಲು ಹುದ್ದೆಗಳಿಗೆ ಕೈ– ಕಾಲು ಇಲ್ಲದ ಆಕಾಂಕ್ಷಿಗಳು ಅರ್ಜಿ ಸಲ್ಲಿಸಲು ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು, ಅತಂತ್ರ ಪರಿಸ್ಥಿತಿ ಎದುರಾಗಿದೆ. ಉಳಿದ ಅಂಗವಿಕಲರಿಗೆ ಈ ಸಮಸ್ಯೆ ಇಲ್ಲ.

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ‘ಗ್ರೂಪ್–ಬಿ’ ಹುದ್ದೆಗಳ ನೇಮಕಾತಿಗೆ ಮಾರ್ಚ್ 13ರಂದು ಅಧಿಸೂಚನೆ ಹೊರಡಿಸಿದ್ದು, 227 ಹುದ್ದೆಗಳ ನೇಮಕಾತಿಗೆ ಪರೀಕ್ಷೆ ನಡೆಸಲಿದೆ.

ಬಿಬಿಎಂಪಿಯಲ್ಲಿ 8 ಹಾಗೂ ಜಲಸಂಪನ್ಮೂಲ ಇಲಾಖೆಯಲ್ಲಿ 7 ಹುದ್ದೆಗಳು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿವೆ. ಅವುಗಳಲ್ಲಿ ಸಾಮಾನ್ಯ ವರ್ಗದಲ್ಲಿ ತಲಾ ಒಂದು ಹುದ್ದೆ ಕೈ ಹಾಗೂ ಕಾಲು ಇಲ್ಲದವರಿಗೆ ಮೀಸಲಿದೆ. ಉಳಿದವು ದೃಷ್ಟಿದೋಷವುಳ್ಳವರಿಗೆ ಮೀಸಲಾಗಿವೆ. ಅವರಿಗೆ ಮೀಸಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆ ಇಲ್ಲ. ಆದರೆ, ಕೈ ಹಾಗೂ ಕಾಲು ಇಲ್ಲದ ಅಂಗವಿಕಲರಿಗೆ ಮೀಸಲಾದ 2 ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಆಗುತ್ತಿಲ್ಲ. ಅರ್ಜಿ ಸಲ್ಲಿಸಲು ಮೇ 15 ಕಡೇ ದಿನವಾಗಿದ್ದು, ಆಕಾಂಕ್ಷಿಗಳಿಗೆ ಆತಂಕ ಉಂಟಾಗಿದೆ.

12 ದಿನವಿದೆ: ‘ಹಾಸನದಲ್ಲಿ ಸಿವಿಲ್ ಎಂಜಿನಿಯರಿಂಗ್ ಮಾಡಿರುವೆ. ಶೇ 50ರಷ್ಟು ದೃಷ್ಟಿದೋಷವುಳ್ಳ ಅಂಗವಿಕಲರು ಸುಲಭವಾಗಿ ಅರ್ಜಿ ಸಲ್ಲಿಸಬಹುದು. ಆದರೆ, ಒಂದು ಕೈ ಅಥವಾ ಕಾಲು ಇಲ್ಲದ ನನ್ನಂಥ ಅಂಗವಿಕಲರ ಅರ್ಜಿ ತೆಗೆದುಕೊಳ್ಳುತ್ತಿಲ್ಲ. ‘ಕೆಟಗರಿ ಮಿಸ್‌ಮ್ಯಾಚ್’ ಎಂದು ಬರುತ್ತಿದೆ. ಈ ಬಗ್ಗೆ ಆಯೋಗಕ್ಕೆ ದೂರು ನೀಡಲಾಗಿದೆ’ ಎಂದು ಬೇಲೂರಿನ ಸ್ಪರ್ಧಾರ್ಥಿ ಸುಮೇರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಬಗ್ಗೆ ಆಯೋಗಕ್ಕೆ ಕರೆ ಮಾಡಿದಾಗ, ಸಮಸ್ಯೆ ಪರಿಹಾರವಾಗುತ್ತದೆ ಎಂದಿದ್ದರು. ಆದರೆ, ಸಮಸ್ಯೆ ಹಾಗೇ ಉಳಿದಿರುವ ಬಗ್ಗೆ ತಿಳಿಸಲೆಂದು ಕರೆ ಮಾಡಿದರೆ ಅಧಿಕಾರಿಗಳು ಸಂಪರ್ಕಕ್ಕೇ ಸಿಗುತ್ತಿಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ತಾಂತ್ರಿಕ ಸಮಸ್ಯೆ ಕುರಿತು ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ರಾಕೇಶ್‌ಕುಮಾರ್ ಅವರು ಲಭ್ಯರಾಗಲಿಲ್ಲ.

ಸ್ಫೋಟ: ತಂದೆ–ಮಗಳ ಸಾವು

ಸಾಬರ್‌ಕಾಂತಾ (ಪಿಟಿಐ): ಗುಜರಾತ್‌ನ ಸಾಬರ್‌ಕಾಂತಾ ಜಿಲ್ಲೆಯ ವೇದಾ ಗ್ರಾಮದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ನೀಡಿದ ಎಲೆಕ್ಟ್ರಾನಿಕ್ ವಸ್ತುವೊಂದು ಸ್ಫೋಟಗೊಂಡು ತಂದೆ–ಮಗಳು ಮೃತಪಟ್ಟಿದ್ದು, ಇಬ್ಬರು ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ವಡಾಲೀ ಪೊಲೀಸರು ತಿಳಿಸಿದ್ದಾರೆ.

ಸಿನಿಮಾ ಪುರವಣಿ





'ಅಂಜನಿಪುತ್ರ' ಮರುಬಿಡುಗಡೆ

ತೆರೆಗಳಿಗೆ ಸ್ಟಾರ್ ನಟರ ಸಿನಿಮಾಗಳ ಹರಿವು ಇಲ್ಲದೇ ಇರುವ ಸಂದರ್ಭದಲ್ಲೇ ಮೇ 10ರಂದು ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅಭಿನಯದ 'ಅಂಜನಿಪುತ್ರ' ಮರುಬಿಡುಗಡೆಯಾಗುತ್ತಿದೆ. ಎಂ.ಎನ್.ಕೆ ಮೂವೀಸ್ ಲಾಂಛನದಲ್ಲಿ ಎಂ.ಎನ್ ಕುಮಾರ್ ನಿರ್ಮಿಸಿ, ಎ.ಹರ್ಷ ನಿರ್ದೇಶಿಸಿರುವ ಈ ಸಿನಿಮಾ ರಾಜ್ಯದಾದ್ಯಂತ ಮತ್ತೆ ತೆರೆಗೆ ಬರಲಿದೆ.

ಸ್ಟಾರ್ ನಟರ ಸಿನಿಮಾಗಳು ಬಿಡುಗಡೆಯಾಗದೆ ಈ ವರ್ಷದ ಮೊದಲಾರ್ಧವನ್ನು ಚಂದನವನ ದೂಡಲಿದೆ. ಬಿಡುಗಡೆ ಸಜ್ಜಾಗಿರುವ ಸಿನಿಮಾಗಳೂ ನಾನಾ ಕಾರಣಗಳನ್ನು ಮುಂದಿಟ್ಟುಕೊಂಡು ತೆರೆಗೆ ಬರಲು ಹಿಂದಡಿ ಇಡುತ್ತಿವೆ. ಸ್ಟಾರ್ ನಟರ ಸಿನಿಮಾಗಳಿಲ್ಲದೆ ಹಲವು ಚಿತ್ರಮಂದಿರಗಳು ಮುಚ್ಚುವ ಪರಿಸ್ಥಿತಿಗೆ ಬಂದಿವೆ...

> **ಸಿನಿಮಾದಲ್ಲಿ ಹೆಚ್ಚು ಫೈಟ್ಸ್ ಇದ್ದು, ವಿಎಫ್‌ಎಕ್ಸ್ ಕೆಲಸ ಬಹಳಷ್ಟಿತ್ತು. ಈ ಕೆಲಸ ಕೊನೆಯ ಹಂತದಲ್ಲಿದೆ. ಚುನಾವಣೆ ಬಂದಿರುವ ಕಾರಣದಿಂದ ದಿನಾಂಕ ಘೋಷಿಸಿಲ್ಲ. ಚುನಾವಣೆ ಫಲಿತಾಂಶದ ಬಳಿಕ 'ಭೀಮ' ಬಿಡುಗಡೆಗೊಳ್ಳಲಿದೆ. ಜೊತೆಗೆ ಒಂದು ಹಾಡು ಮತ್ತು ಫೈಟ್‌ಗೆ ದುನಿಯಾ ವಿಜಯ್ ಅವರು ಬಾಡಿ ಟೋನ್ ಮಾಡಿಕೊಳ್ಳಬೇಕಿದ್ದ ಕಾರಣ ಆರು ತಿಂಗಳು ಸಮಯಾವಕಾಶ ನೀಡಿದ್ದೆವು. ಈ ಎಲ್ಲ ಕಾರಣದಿಂದ ಸಿನಿಮಾ ವಿಳಂಬವಾಯಿತು.**
>
> **ಕೃಷ್ಣ ಸಾರ್ಥಕ್,** ಭೀಮ ಸಿನಿಮಾ ನಿರ್ಮಾಪಕ

ಅರ್ಧ ವರ್ಷ ಸ್ಟಾರ್ ಸಿನಿಮಾ ಇಲ್ಲ!

ಅಭಿಲಾಷ್ ಪಿ.ಎಸ್.

ಮಾರ್ಚ್ 8, 2024– ಇದು ಶಿವರಾಜ್‌ಕುಮಾರ್ ಮತ್ತು ಪ್ರಭುದೇವ ನಟನೆಯ 'ಕರಟಕ ದಮನಕ' ಸಿನಿಮಾ ಬಿಡುಗಡೆಗೊಂಡ ದಿನ. ಇದನ್ನೊಂದನ್ನು ಹೊರತುಪಡಿಸಿದರೆ ಈ ವರ್ಷ ಇಲ್ಲಿಯವರೆಗೆ (ಮೇ 3) ಇತರೆ ಸ್ಟಾರ್ ನಟರ ಸಿನಿಮಾಗಳು ತೆರೆಗೆ ಬಂದಿಲ್ಲ. ಸದ್ಯಕ್ಕೆ ಬರುವ ಯಾವ ಲಕ್ಷಣವೂ ಇಲ್ಲ. ಆಗಸ್ಟ್ 15ಕ್ಕೆ ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್' ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಘೋಷಿಸಿದೆ. ಅಲ್ಲಿಗೆ ಚಂದನವನದ ತೆರೆಗಳು ಸಂಕ್ರಾಂತಿ, ಯುಗಾದಿ ಕಳೆದರೂ ಸ್ಟಾರ್ ನಟರ ಸಿನಿಮಾಗಳಿಲ್ಲದೆ ಅರ್ಧ ವರ್ಷವನ್ನು ದೂಡಲಿವೆ.



ಮುಂದಿನ ವರ್ಷ 'ರಿಚರ್ಡ್ ಆಂಟನಿ'

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ಸದ್ಯ ನಟ ರಕ್ಷಿತ್ ಶೆಟ್ಟಿ, ತಮ್ಮ ನಿರ್ದೇಶನದ 'ರಿಚರ್ಡ್ ಆಂಟನಿ' ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಚಿತ್ರದ ಪ್ರಿ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿದ್ದು, ಚಿತ್ರತಂಡ ಉಡುಪಿಯಲ್ಲಿ ಬೀಡುಬಿಟ್ಟಿದೆ. ಚಿತ್ರದ ಸ್ಕ್ರಿಪ್ಟ್‌ನಲ್ಲಿ ಸ್ವಲ್ಪ ಕೆಲಸ ಉಳಿದುಕೊಂಡಿದೆ ಎಂದಿದ್ದಾರೆ ರಕ್ಷಿತ್. ಜೂನ್‌ನಲ್ಲಿ ಸಿನಿಮಾದ ಶೂಟಿಂಗ್ ಆರಂಭವಾಗುವ ಸಾಧ್ಯತೆ ಇದೆ. ಕರಾವಳಿ ಭಾಗದಲ್ಲೇ ಶೇ 50–60 ಚಿತ್ರೀಕರಣ ನಡೆಯಲಿದೆ. ಮುಂದಿನ ವರ್ಷಕ್ಕೆ ಸಿನಿಮಾ ಸಿದ್ಧವಾಗಲಿದೆ ಎಂದಿದ್ದಾರೆ ರಕ್ಷಿತ್.

ಜನವರಿ–ಏಪ್ರಿಲ್ ಅವಧಿಯಲ್ಲಿ ಕೆಲ ಸದಭಿರುಚಿಯ ಸಿನಿಮಾಗಳು ಬಿಡುಗಡೆಗೊಂಡಿದ್ದರೂ, ಅವುಗಳಿಗೆ ಪ್ರೇಕ್ಷಕರ ಸಂಖ್ಯೆಯ ಕೊರತೆ ಕಾಡಿದವು. ಇಷ್ಟೆಲ್ಲದರ ನಡುವೆ ಚಂದನವನದ ತೆರೆಗಳಲ್ಲಿ ಮತ್ತೆ ಸಿನಿಮಾ ಹಬ್ಬ ಆರಂಭವಾಗಬೇಕು ಎಂದರೆ ಸ್ಟಾರ್ ನಟರ ಸಿನಿಮಾಗಳು ಸರತಿಯಲ್ಲಿ ಬಿಡುಗಡೆಗೊಳ್ಳಬೇಕು. ಆದರೆ ಪ್ರತಿಯೊಂದು ಚಿತ್ರತಂಡವೂ ತಮ್ಮದೇ ಕಾರಣ ನೀಡುತ್ತಾ ಸಿನಿಮಾ ಬಿಡುಗಡೆ ವಿಳಂಬ ಮಾಡುತ್ತಿವೆ. ಪ್ರತಿ ವರ್ಷದ ಏಪ್ರಿಲ್–ಮೇ ತಿಂಗಳು ಐಪಿಎಲ್ ಜ್ವರದಲ್ಲಿ ಕಳೆದರೆ, ಈ ವರ್ಷ ಬಂದಿರುವ ಚುನಾವಣೆ ಬಿಸಿಯೂ ಕೆಲ ಸಿನಿಮಾಗಳಿಗೆ ತಟ್ಟಿದೆ. ಜೂನ್ 4ಕ್ಕೆ ಚುನಾವಣೆ ಫಲಿತಾಂಶ ಬರಲಿದ್ದು, ಅಲ್ಲಿಯವರೆಗೂ ಸಿನಿಮಾ ಬಿಡುಗಡೆಗೆ ನಿರ್ಮಾಪಕರು ಹಿಂಜರಿಯುತ್ತಿದ್ದಾರೆ. ಕೆಲ ಸ್ಟಾರ್‌ಗಳ ಸಿನಿಮಾಗಳು ಒಟಿಟಿ, ಸ್ಯಾಟಲೈಟ್ ವ್ಯವಹಾರವಾಗದ ಕಾರಣದಿಂದ ಹಿಂದಡಿ ಇಡುತ್ತಿದೆ. ಜೊತೆಗೆ ಪ್ಯಾನ್ ಇಂಡಿಯಾ ಯುಗದಲ್ಲಿ ಅತ್ಯುತ್ತಮ ಗುಣಮಟ್ಟದ ಸಿನಿಮಾವನ್ನೇ ನೀಡಬೇಕು ಎನ್ನುವ ಕಾರಣಕ್ಕೂ ಕೆಲ ಸಿನಿಮಾಗಳು ವಿಳಂಬವಾಗುತ್ತಿವೆ.

'ಭೀಮ' ಎಲ್ಲಿ ಹೋದ?

ಫೆಬ್ರುವರಿ 24, 2022 ರಂದು ದುನಿಯಾ ವಿಜಯ್ ತಮ್ಮ 28ನೇ ಸಿನಿಮಾ 'ಭೀಮ' ಘೋಷಿಸಿದರು. ಏಪ್ರಿಲ್ 18, 2022ಕ್ಕೆ ಈ ಸಿನಿಮಾದ ಮುಹೂರ್ತ ನಡೆಯಿತು. ಇದಾಗಿ ಎರಡು ವರ್ಷ ಉರುಳಿದೆ. ಚಿತ್ರತಂಡ ಈಗಾಗಲೇ ಚಿತ್ರದಲ್ಲಿರುವ ಪಾತ್ರಗಳನ್ನು ಪರಿಚಯಿಸಿದೆ. ಜೊತೆಗೆ ಫಸ್ಟ್ ಲುಕ್ ಟೀಸರ್, ಎರಡು ಹಾಡುಗಳನ್ನು ರಿಲೀಸ್ ಮಾಡಿದೆ. ಅಧಿಕೃತ ಟೀಸರ್ ಬಿಡುಗಡೆಯಾಗಿ ಮೂರು ತಿಂಗಳು ಕಳೆದಿದ್ದರೂ, ಸಿನಿಮಾ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಇನ್ನೂ ಘೋಷಿಸಿಲ್ಲ.

ಉಪೇಂದ್ರ ನಟನೆಯ 'ಯುಐ' ಸಿನಿಮಾ ವಿಎಫ್‌ಎಕ್ಸ್ ಕಾರಣದಿಂದಾಗಿ ವಿಳಂಬವಾಗಿದೆ ಎನ್ನುತ್ತಾರೆ ನಿರ್ಮಾಪಕ ಕೆ.ಪಿ. ಶ್ರೀಕಾಂತ್. 2022ರ ಜೂನ್‌ನಲ್ಲಿ ಸೆಟ್ಟೇರಿದ್ದ ಈ ಸಿನಿಮಾ ಇದೇ ಜೂನ್‌ನಲ್ಲಿ ತೆರೆಕಾಣುವ ಸಾಧ್ಯತೆ ಇದೆ. ಈ ಸಿನಿಮಾದ ವಿಳಂಬದಿಂದಾಗಿ ಬಿಡುಗಡೆಗೆ ಸಜ್ಜಾಗಿರುವ 'ಬುದ್ಧಿವಂತ–2' ಸಿನಿಮಾವೂ ಮುಂದೂಡಲ್ಪಡುತ್ತಿದೆ.



ಕೆ.ವಿ.ಚಂದ್ರಶೇಖರ್

ವ್ಯವಹಾರ ಮುನ್ನೆಲೆಗೆ

'ಸ್ಟಾರ್ ಸಿನಿಮಾಗಳಿಲ್ಲದೆ ರಾಜ್ಯದ ಕೆಲ ಚಿತ್ರಮಂದಿರಗಳು ಮುಚ್ಚುವ ಪರಿಸ್ಥಿತಿಗೆ ಬರುತ್ತಿದೆ. ಅಂದಾಜು 150 ಚಿತ್ರಮಂದಿರಗಳು ಈಗಾಗಲೇ ಮುಚ್ಚಿವೆ. ಈ ಹಿಂದೆ ನಿರ್ಮಾಪಕರು ಆಡಿಯೊ ಕಂಪನಿಗಳ ಹಕ್ಕು, ಚಿತ್ರಮಂದಿರಗಳ ವ್ಯವಹಾರವನ್ನು ಮೊದಲು ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಕ್ರಮೇಣ ಅವರ ಮನಸ್ಸು ಬದಲಾಯಿತು. ಚಿತ್ರಮಂದಿರ, ಒಟಿಟಿ, ಸ್ಯಾಟಲೈಟ್ ಹೀಗೆ ಎಲ್ಲ ವ್ಯವಹಾರಗಳಿಂದ ಬರುವ ಆದಾಯವನ್ನು ಏಕೆ ಕಳೆದುಕೊಳ್ಳಬೇಕು ಎನ್ನುವ ಮನಃಸ್ಥಿತಿಗೆ ಬಂದಿದ್ದಾರೆ. ಇದರಿಂದ ಪ್ರದರ್ಶಕರು ತೊಂದರೆ ಅನುಭವಿಸುತ್ತಿದ್ದಾರೆ. ಏಳೆಂಟು ಸಿನಿಮಾಗಳು ಬಿಡುಗಡೆಗೆ ಸಿದ್ಧವಿದ್ದರೂ, ಅದರ ನಿರ್ಮಾಪಕರು ಒಟಿಟಿ, ಸ್ಯಾಟಲೈಟ್ ವ್ಯವಹಾರ ಪೂರ್ಣಗೊಳಿಸಲು ಕಾಯುತ್ತಿದ್ದಾರೆ. ನಿರ್ಮಾಪಕರು ಷೇರು ಮಾರುಕಟ್ಟೆಯಂಥ ಮನಃಸ್ಥಿತಿ ಬಿಟ್ಟು, ಈ ಮೊದಲು ಇದ್ದ ಲೆಕ್ಕಾಚಾರಕ್ಕೆ ಬರಬೇಕು. ಎರಡು ತಿಂಗಳಿಗೊಂದು ಸ್ಟಾರ್ ಸಿನಿಮಾ ಬಂದರೆ ಚಿತ್ರಮಂದಿರಗಳು ಜೀವಂತಿಕೆಯಿಂದ ಇರುತ್ತವೆ' ಎನ್ನುತ್ತಾರೆ ವೀರೇಶ್ ಸಿನಿಮಾಸ್‌ನ ಮಾಲೀಕ ಕೆ.ವಿ.ಚಂದ್ರಶೇಖರ್.

ಜುಲೈಗೆ 'ಮ್ಯಾಕ್ಸ್'?

ಕಿಚ್ಚ ಸುದೀಪ್ ನಟನೆಯ 46ನೇ ಸಿನಿಮಾ 'ಮ್ಯಾಕ್ಸ್'ನ ಶೂಟಿಂಗ್ ಇನ್ನೂ ಪೂರ್ಣಗೊಂಡಿಲ್ಲ. ಕಳೆದ ನವೆಂಬರ್‌ನಲ್ಲಿ ತಮಿಳುನಾಡಿನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಸಿನಿಮಾದ ಶೆಡ್ಯೂಲ್ ಅಸ್ತವ್ಯಸ್ತಗೊಂಡಿತು. 'ಜೈಲರ್' ಸಿನಿಮಾಗೆ ಸಾಹಸ ನಿರ್ದೇಶನ ಮಾಡಿದ್ದ ಕೆವಿನ್ ಇತ್ತೀಚೆಗಷ್ಟೇ 'ಮ್ಯಾಕ್ಸ್'ನ ಕ್ಲೈಮ್ಯಾಕ್ಸ್‌ಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇನ್ನೂ ನಾಲ್ಕೈದು ದಿನಗಳ ಶೂಟಿಂಗ್ ಬಾಕಿ ಇದ್ದು, ಜುಲೈಗೆ ಈ ಸಿನಿಮಾ ತೆರೆಕಾಣುವ ಸಾಧ್ಯತೆ ಇದೆ. ಇದಾದ ಬಳಿಕ ಸುದೀಪ್, ಅನೂಪ್ ಭಂಡಾರಿ ಆ್ಯಕ್ಷನ್ ಕಟ್ ಹೇಳಲಿರುವ 'ಬಿಲ್ಲಾ ರಂಗ ಬಾಷಾ'(BRB) ಟೀಸರ್ ಶೂಟ್‌ನಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಧನಂಜಯ ನಟನೆಯ 'ಕೋಟಿ' ಜೂನ್ 14ಕ್ಕೆ ಬಿಡುಗಡೆಯಾಗುತ್ತಿದೆ. ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ' ಜೂನ್‌ನಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. 2021ರಲ್ಲಿ ಶೂಟಿಂಗ್ ಆರಂಭಿಸಿದ್ದ ಧ್ರುವ ಸರ್ಜಾ ನಟನೆಯ 'ಮಾರ್ಟಿನ್' ಚಿತ್ರವು ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಧ್ರುವ ನಟನೆಯ 'KD' ಸಿನಿಮಾದ ಶೂಟಿಂಗ್ ಕೂಡ ಕೊನೆಯ ಹಂತ ತಲುಪಿದೆ.

ವಿನೋದ್ ಪ್ರಭಾಕರ್ ನಟನೆಯ 'ಲಂಕಾಸುರ' ಕೂಡಾ ಬಿಡುಗಡೆಗೆ ಸಿದ್ಧವಿದ್ದು, ಚಿತ್ರತಂಡ ಇನ್ನೂ ರಿಲೀಸ್ ದಿನಾಂಕ ಘೋಷಿಸಿಲ್ಲ. ದರ್ಶನ್ ನಟನೆಯ 'ಡೆವಿಲ್' ಚಿತ್ರದ ಶೂಟಿಂಗ್ ಆರಂಭವಾಗಿದೆ. ಚಿತ್ರೀಕರಣದ ನಡುವೆಯೇ ದರ್ಶನ್ ಕೈಗೆ ಪೆಟ್ಟು ಮಾಡಿಕೊಂಡಿದ್ದಾರೆ. 'ಎಲ್ಲವೂ ಅಂದುಕೊಂಡಿದ್ದಂತೆ ನಡೆದಿದ್ದರೆ ಈಗ ಶೇ 70ರಷ್ಟು ಚಿತ್ರೀಕರಣ ಪೂರ್ಣಗೊಂಡಿರುತ್ತಿತ್ತು. ಅಕ್ಟೋಬರ್‌ನಲ್ಲಿ ಚಿತ್ರ ಬಿಡುಗಡೆ ಎಂದಿದ್ದೆ. ಅದು ತಡವಾಗಬಹುದು' ಎಂದಿದ್ದಾರೆ ದರ್ಶನ್. 2022ರ ಮೇ ತಿಂಗಳಲ್ಲಿ ಸೆಟ್ಟೇರಿದ್ದ ಶ್ರೀಮುರಳಿ ನಟನೆಯ 'ಬಘೀರ' ಚಿತ್ರದ ಶೂಟಿಂಗ್ ಅಂತಿಮ ಹಂತದಲ್ಲಿದೆ.

ಯಶ್ ನಟನೆಯ 'ಕೆ.ಜಿ.ಎಫ್. ಚಾಪ್ಟರ್–2' ಬಿಡುಗಡೆಗೊಂಡಿದ್ದು ಏಪ್ರಿಲ್ 14, 2022ರಂದು. ಏಪ್ರಿಲ್ 10, 2025ರಂದು 'ಟಾಕ್ಸಿಕ್' ಬಿಡುಗಡೆಯಾಗಲಿದೆ ಎಂದು ಯಶ್ ಈಗಾಗಲೇ ಘೋಷಿಸಿದ್ದು, ಮೂರು ವರ್ಷಗಳ ಬಳಿಕ ರಾಕಿಂಗ್ ಸ್ಟಾರ್ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ 'ಕಾಂತಾರ–ಒಂದು ದಂತಕಥೆ ಮೊದಲ ಅಧ್ಯಾಯ' ಸಿನಿಮಾದ ಪ್ರಿಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು, ರಿಷಬ್ ಹುಟ್ಟೂರಿನಲ್ಲಿ ನಿರ್ಮಿಸಲಾಗಿರುವ ಬೃಹತ್ ಸೆಟ್‌ಗಳಲ್ಲಿ ಚಿತ್ರೀಕರಣ ಶೀಘ್ರದಲ್ಲೇ ಆರಂಭವಾಗಲಿದೆ. ಈ ಸಿನಿಮಾವೂ 2025ರಲ್ಲಿ ತೆರೆಕಾಣುವ ಸಾಧ್ಯತೆ ಇದೆ.

'ಕಾಟೇರ' ಸಿನಿಮಾ ಬಿಡುಗಡೆಯಾದ ಸಂದರ್ಭದಲ್ಲಿ ಚೇತರಿಕೆ ಕಂಡಿದ್ದ ಕೆಲ ಏಕಪರದೆ ಚಿತ್ರಮಂದಿರಗಳು ಇದೀಗ ಮತ್ತೆ ಮುಚ್ಚುವ ಹಂತ ತಲುಪಿವೆ' ಎನ್ನುತ್ತಾರೆ ಪಿಆರ್‌ಒ ಸುಧೀಂದ್ರ ವೆಂಕಟೇಶ್. ಸ್ಟಾರ್ ನಟರ ಸಿನಿಮಾಗಳು ಚಿತ್ರಮಂದಿರ ತುಂಬಿದಾಗಲೇ ಚಂದನವನದಲ್ಲಿ ಹಬ್ಬದ ವಾತಾವರಣ ಕಾಣಿಸುತ್ತದೆ. ಈ ಹಬ್ಬ ಶೀಘ್ರವೇ ಆರಂಭವಾಗಲಿ ಎನ್ನುವ ಆಶಯ ಅಭಿಮಾನಿಗಳದ್ದು, ಚಿತ್ರಮಂದಿರಗಳ ಮಾಲೀಕರದ್ದು. ಸದ್ಯಕ್ಕೆ ಮುಂದಿನ ಶುಕ್ರವಾರ (ಮೇ 10) ಶರಣ್ ನಟನೆಯ 'ಛೂ ಮಂತರ್', ರಿಷಿ ನಟನೆಯ 'ರಾಮನ ಅವತಾರ', ವಿಜಯ ರಾಘವೇಂದ್ರ ನಟನೆಯ 'ಗ್ರೇ ಗೇಮ್ಸ್' ಸಿನಿಮಾಗಳು ಬಿಡುಗಡೆಯಾಗುತ್ತಿವೆ.

ಭಾವನಾತ್ಮಕ ಪಯಣದ 'ಫಾದರ್'



ಅಮೃತ ಅಯ್ಯಂಗಾರ್, ಡಾರ್ಲಿಂಗ್ ಕೃಷ್ಣ

'ಆರ್.ಸಿ. ಸ್ಟುಡಿಯೊಸ್'ನಡಿ ನಿರ್ದೇಶಕ ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ 'ಫಾದರ್' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆಯಿತು. ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಹಾಗೂ ಗೀತಾ ಶಿವರಾಜ್‌ಕುಮಾರ್ ಕ್ಲ್ಯಾಪ್ ಮಾಡುವ ಮುಖಾಂತರ ಚಿತ್ರದ ಮೊದಲ ಸನ್ನಿವೇಶಕ್ಕೆ ಚಾಲನೆ ನೀಡಿದರು.

ಹೊಸ ಪ್ರಾಜೆಕ್ಟ್‌ಗೆ ಶುಭಕೋರಿದ ಶಿವರಾಜ್‌ಕುಮಾರ್, 'ಆರ್. ಚಂದ್ರು ನನ್ನ ಆತ್ಮೀಯರು. ಅವರ ನಮ್ಮ ಬಾಂಧವ್ಯ ಯಾವಾಗಲೂ ಇರುತ್ತದೆ. ನಮ್ಮಿಬ್ಬರ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಸುದ್ದಿಗಳು ಸುಳ್ಳು. ಸಾಮಾಜಿಕ ಮಾಧ್ಯಮಗಳು ಇಂದು ಆಟದ ವಸ್ತುವಾಗಿಬಿಟ್ಟಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಿವರಾಜ್‌ಕುಮಾರ್ ನಟನೆಯ 'ಬೈರಾಗಿ' ಸಿನಿಮಾದಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ರಾಜ್ ಮೋಹನ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಫಾದರ್' ಸಿನಿಮಾದಲ್ಲಿ 'ಲವ್ ಮಾಕ್ಟೇಲ್' ಖ್ಯಾತಿಯ ಡಾರ್ಲಿಂಗ್ ಕೃಷ್ಣ ಹಾಗೂ ಬಹುಭಾಷಾ ನಟ ಪ್ರಕಾಶ್ ರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ಕೃಷ್ಣನಿಗೆ ಅಮೃತಾ ಅಯ್ಯಂಗಾರ್ ಜೋಡಿಯಾಗಿದ್ದಾರೆ. ತೆಲುಗಿನ ಖ್ಯಾತ ನಟ ಸುನೀಲ್ ಸೇರಿದಂತೆ ಅನೇಕ ಪರಭಾಷೆ ನಟ, ನಟಿಯರ ದಂಡೇ ಈ ಚಿತ್ರದಲ್ಲಿದೆ.

'ಫಾದರ್' ಸಿನಿಮಾಗಾಗಿ ನನ್ನ ನಿರ್ದೇಶನದ ಸಿನಿಮಾಗಳನ್ನೂ ಮುಂದೂಡಿದ್ದೇನೆ ಎಂದ ಆರ್. ಚಂದ್ರು, 'ಈ ಸಿನಿಮಾಗೆ ಭಾಷೆಯ ಗಡಿ ಇಲ್ಲ' ಎಂದಿದ್ದಾರೆ.

'ಈ ಸಿನಿಮಾದ ಕಥೆಯನ್ನು ನಾನು, ಮಿಲನಾ ಜೊತೆಯಾಗಿಯೇ ಕೇಳಿದ್ದೆವು. ಅದೊಂದು ಅದ್ಭುತವಾದ ವಿಷಯವನ್ನು ಒಳಗೊಂಡಿತ್ತು. ಕಥೆಯು ನನ್ನನ್ನು ಸೆಳೆದಿತ್ತು. 'ಈ ಸಿನಿಮಾ ನೀನು ಮಾಡಲೇಬೇಕು' ಎಂದು ನಿರ್ದೇಶಕರ ಮುಂದೆಯೇ ಮಿಲನಾ ಹೇಳಿದಳು. ಈ ಸಿನಿಮಾ ಖಂಡಿತವಾಗಿಯೂ ಬಹಳ ವರ್ಷ ನೆನಪಿನಲ್ಲಿ ಉಳಿಯಲಿದೆ. ನನ್ನ ಸಿನಿಪಯಣದಲ್ಲಿ ಇದೊಂದು ಭಿನ್ನವಾದ ಸಿನಿಮಾ ಆಗಿರಲಿದೆ. ಇದೊಂದು ಭಾವನಾತ್ಮಕ, ಫ್ಯಾಮಿಲಿ ಡ್ರಾಮಾ. ಚಂದ್ರು ಅವರ ಜೊತೆಗೆ ನನ್ನ ಮೊದಲ ಸಿನಿಮಾವಿದು. ಇದು ನನ್ನ ಮೊದಲ ಪ್ಯಾನ್ ಇಂಡಿಯಾ ಸಿನಿಮಾ' ಎನ್ನುತ್ತಾರೆ ಡಾರ್ಲಿಂಗ್ ಕೃಷ್ಣ.

ರಾಮನ ಅವತಾರ
ರಿಷಿ, ಪ್ರಣೀತಾ



ಎಲ್ಲರ ಜೀವನದ 'ರಾಮಾಯಣ'

'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ನಟ ರಿಷಿ ಅಭಿನಯದ 'ರಾಮನ ಅವತಾರ' ಸಿನಿಮಾ ಮೇ 10 ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಟ್ರೇಲರ್ ಇತ್ತೀಚೆಗೆ ರಿಲೀಸ್ ಆಗಿದೆ.

'ಈ ಸಿನಿಮಾದ ಪಯಣ ಒಂದು ಪಾತ್ರದ ಸುತ್ತ ಇದೆ. 'ರಾಮಕೃಷ್ಣ' ಅವನಿಗೆ ಅವನೇ ಜೆಂಟಲ್‌ಮ್ಯಾನ್ ಎಂದು ಹೇಳಿಕೊಂಡು ಓಡಾಡುತ್ತಿರುತ್ತಾನೆ. ಅವನ ಜೀವನದಲ್ಲಿ ನಡೆದ ಘಟನೆಗಳೇನು? ಅವನನ್ನು ಅವು ಹೇಗೆ ಬದಲಾಯಿಸುತ್ತವೆ ಎನ್ನುವುದು ಕಥೆ. 'ರಾಮನ ಅವತಾರ' ಎಂದು ಏಕೆ ಹೆಸರಟ್ಟಿದ್ದೇವೆ ಎಂದರೆ, ಎಲ್ಲರ ಜೀವನದಲ್ಲೂ ಒಂದಲ್ಲ ಒಂದು ರಾಮಾಯಣ ನಡೆಯುತ್ತದೆ. ಸೀತೆಯಂಥ ಹೆಂಡತಿ, ಲಕ್ಷ್ಮಣನ ರೀತಿ ತಮ್ಮ, ರಾವಣನಿಂದ ಆಗುವ ತೊಂದರೆ–ಈ ರೀತಿ ಸಮಸ್ಯೆಗಳು ಎಲ್ಲರ ಜೀವನದಲ್ಲಿ ಇರುತ್ತವೆ. ಅವುಗಳನ್ನು ಚಿತ್ರದಲ್ಲಿ ತೋರಿಸಲಾಗಿದೆ' ಎನ್ನುತ್ತಾರೆ ಚಿತ್ರದ ನಿರ್ದೇಶಕ ವಿಕಾಸ್ ಪಂಪಾಪತಿ.

'ಈ ಸಿನಿಮಾ ಒಪ್ಪಿಕೊಳ್ಳಲು ಮುಖ್ಯ ಕಾರಣ 'ಆಪರೇಷನ್ ಅಲಮೇಲಮ್ಮ'. ಜನರು ಅದೇ ರೀತಿ ಹಾಸ್ಯಭರಿತ ಚಿತ್ರ ಮಾಡಿ ಎನ್ನುತ್ತಿದ್ದರು. ಹಾಸ್ಯವೆನ್ನುವುದು ಸರಳವಾದ ಜಾನರ್ ಅಲ್ಲ. ನಿರ್ದೇಶಕರಾದ ವಿಕಾಸ್ ಹಾಸ್ಯಮಿಶ್ರಿತವಾದ ಒಂದು ಅದ್ಭುತವಾದ ಕಥೆಯನ್ನು ಸಿನಿಮಾದಲ್ಲಿ ಹೇಳಿದ್ದಾರೆ. ಈಗ ನಡೆಯುವ ಘಟನೆಗೆ ರಾಮಾಯಣದ ಮೌಲ್ಯವನ್ನು ಲೇಪಿಸಿದ್ದಾರೆ' ಎಂದರು ರಿಷಿ. ಚಿತ್ರದಲ್ಲಿ ಪ್ರಣೀತಾ ಸುಭಾಷ್, ಶುಭ್ರ ಅಯ್ಯಪ್ಪ ನಾಯಕಿಯರಾಗಿ ನಟಿಸಿದ್ದು, ಅರುಣ್ ಸಾಗರ್ ಪ್ರಮುಖ ಪಾತ್ರದಲ್ಲಿದ್ದಾರೆ.

ತೆರೆಗೆ ಎರಡು ಸಿನಿಮಾ



ಶ್ರೀಜಿತ ಘೋಶ್

ರಾಜೀವ್ ಹನು ನಟನೆಯ 'ಉಸಿರೇ ಉಸಿರೇ' ಹಾಗೂ 'ಡೆಡ್ಲಿ ಸೋಮ' ಖ್ಯಾತಿಯ ಆದಿತ್ಯ ನಟನೆಯ 'ಕಾಂಗರೂ' ಸಿನಿಮಾಗಳು ಇಂದು(ಮೇ 3)ಬಿಡುಗಡೆಯಾಗುತ್ತಿವೆ.

ಉಸಿರೇ ಉಸಿರೇ: ರಾಜೀವ್ ಹನು ನಾಯಕರಾಗಿ ನಟಿಸಿರುವ ಈ ಸಿನಿಮಾದಲ್ಲಿ ಕಿಚ್ಚ ಸುದೀಪ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಜೀವ್‌ಗೆ ಶ್ರೀಜಿತ ಘೋಶ್ ಜೋಡಿಯಾಗಿದ್ದಾರೆ. ಎನ್. ಗೊಂಬೆ ಲಾಂಛನದಲ್ಲಿ ಪ್ರದೀಪ್ ಯಾದವ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದು, ಸಿ.ಎಂ.ವಿಜಯ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ದೇವರಾಜ್, ತಾರಾ, ಸುಚೇಂದ್ರ ಪ್ರಸಾದ್, ಬ್ರಹ್ಮಾನಂದಂ, ಅಲಿ, ಸಾಧು ಕೋಕಿಲ, ಮಂಜು ಪಾವಗಡ ತಾರಾಬಳಗದಲ್ಲಿದ್ದಾರೆ.

ಕಾಂಗರೂ: ಈ ಸಿನಿಮಾದಲ್ಲಿ ನಟ ಆದಿತ್ಯ ತನಿಖಾಧಿಕಾರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕಿಯಾಗಿ ರಂಜನಿ ರಾಘವನ್ ಅಭಿನಯಿಸಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಹಾರರ್ ಜಾನರ್‌ನ ಈ ಸಿನಿಮಾಗೆ ಸಾಧು ಕೋಕಿಲ ಸಂಗೀತ ನಿರ್ದೇಶನವಿದೆ.

ಬಂದೇ ಬಿಟ್ಟ ಪುಷ್ಪರಾಜ್!

ಪುಷ್ಪ–2
ಅಲ್ಲು ಅರ್ಜುನ್



ತೆಲುಗಿನ ಐಕಾನ್ ಸ್ಟಾರ್ ಅಲ್ಲು ಅರ್ಜುನ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'ಪುಷ್ಪ–2 ದಿ ರೂಲ್' ಆಗಸ್ಟ್ 15ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಮೊದಲ ಹಾಡು ರಿಲೀಸ್ ಆಗಿದೆ.

ಕಾರ್ಮಿಕರ ದಿನದಂದೇ 'ತಗ್ಗೋದೇ ಇಲ್ಲ...ಬಂದೇ ಬಿಟ್ಟ ಪುಷ್ಪರಾಜ್...' ಎಂಬ ಹಾಡು ರಿಲೀಸ್ ಆಗಿದೆ. ಕನ್ನಡ, ತೆಲುಗು, ಹಿಂದಿ, ತಮಿಳು, ಮಲಯಾಳ ಹಾಗೂ ಬೆಂಗಾಲಿ ಸೇರಿ 6 ಭಾಷೆಗಳಲ್ಲಿ ಟೈಟಲ್ ಟ್ರ್ಯಾಕ್ ಬಿಡುಗಡೆಯಾಗಿದೆ. ಸಾಮಾನ್ಯ ಕಾರ್ಮಿಕನಾಗಿದ್ದ ಪುಷ್ಪರಾಜ್ ಶ್ರೀಮಂತನಾಗಿ ಬೆಳೆದ ರೀತಿಯನ್ನು ಹಾಡಿನಲ್ಲಿ ಕಟ್ಟಿಕೊಡಲಾಗಿದೆ. 'ಪುಷ್ಪ... ಪುಷ್ಪ...' ಎಂದು ಶುರುವಾಗುವ ಹಾಡಿಗೆ ರಾಕ್‌ಸ್ಟಾರ್ ದೇವಿ ಶ್ರೀ ಪ್ರಸಾದ್ ಸಂಗೀತ ನೀಡಿದ್ದಾರೆ. ತೆಲುಗು ಹಾಡಿಗೆ ಚಂದ್ರಬೋಸ್ ಸಾಹಿತ್ಯ ಬರೆದಿದ್ದು, ನಕಾಶ್ ಅಜೀಜ್, ದೀಪಕ್ ಬ್ಲೂ ಧ್ವನಿಯಾಗಿದ್ದಾರೆ. ಕನ್ನಡದಲ್ಲಿ ವರದರಾಜು ಚಿಕ್ಕಬಳ್ಳಾಪುರ ಹಾಡಿಗೆ ಸಾಹಿತ್ಯ ಬರೆದಿದ್ದು, ವಿಜಯ್ ಪ್ರಕಾಶ್ ಧ್ವನಿಯಾಗಿದ್ದಾರೆ. ಮೈತ್ರಿ ಮೂವೀ ಮೇಕರ್ಸ್ ದೊಡ್ಡ ಬಜೆಟ್‌ನಲ್ಲೇ ಸಿನಿಮಾ ನಿರ್ಮಾಣ ಮಾಡಿದೆ ಎನ್ನುವುದಕ್ಕೆ ಸಾಕ್ಷ್ಯದಂದಿತೆ ಈ ಹಾಡು. 'ಪುಷ್ಪ' ಸಿನಿಮಾಗೆ ಸುಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದು, ಅಲ್ಲು ಅರ್ಜುನ್‌ಗೆ ಜೊತೆಯಾಗಿ 'ಶ್ರೀವಲ್ಲಿ'ಯಾಗಿ ರಶ್ಮಿಕಾ ಮಂದಣ್ಣ ನಟಿಸಿದ್ದಾರೆ. ಫಹದ್ ಫಾಸಿಲ್, ಡಾಲಿ ಧನಂಜಯ ಸೇರಿದಂತೆ ಹಲವರು ತಾರಾ ಬಳಗದಲ್ಲಿದ್ದಾರೆ.

ಜೆಕೆ ಹೊಸ ಸಿನಿಮಾ ವೀರ್



ಕನ್ನಡ ಹಾಗೂ ಹಿಂದಿ ಕಿರುತೆರೆಯಲ್ಲಿ ಮಿಂಚಿ, ಚಂದನವನಕ್ಕೆ ಕಾಲಿಟ್ಟಿದ್ದ ನಟ ಕಾರ್ತಿಕ್ ಜಯರಾಮ್(ಜೆಕೆ) 'ಐರಾವನ್' ಬಳಿಕ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ.

ಹೊಸ ಸಿನಿಮಾಗೆ 'ವೀರ್' ಎಂಬ ಶೀರ್ಷಿಕೆ ಇಡಲಾಗಿದೆ. ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಲೋಹಿತ್ ಆರ್ ನಾಯ್ಕ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಹರಿ ಸಂತು ಅವರ ಜೊತೆ ಕಾರ್ಯನಿರ್ವಹಿಸಿದ ಅನುಭವವಿರುವ ಲೋಹಿತ್ ಸಹಾಯಕ, ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 'ವೀರ್' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. ಸಿನಿಮಾದ ಶೂಟಿಂಗ್ ಭರದಿಂದ ಸಾಗಿದೆ.

'ವೀರ್' ಸಿನಿಮಾದಲ್ಲಿ ಜೆಕೆಗೆ ಜೋಡಿಯಾಗಿ ಪ್ರಣತಿ ನಾಯಕಿಯಾಗಿ ನಟಿಸಿದ್ದು, ರೋಚಿತ್, ಮಂಜು ಪಾವಗಡ ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ಜೆಕೆ ಮೂಗನ ಪಾತ್ರಕ್ಕೆ ಬಣ್ಣ ಹಚ್ಚಿದ್ದು, ವೀರ್ ಸಿನಿಮಾಗೆ ರಾಜರಾಜೇಶ್ವರಿ ಪ್ರೊಡಕ್ಷನ್‌ನಡಿ ಗೀತಾ ಜಯಶ್ರೀನಿವಾಸನ್ ಬಂಡವಾಳ ಹೂಡುತ್ತಿದ್ದಾರೆ. ಆರ್. ದೇವೇಂದ್ರ ಛಾಯಾಚಿತ್ರಗ್ರಹಣ, ಭೂಷಣ್ ಮಾಸ್ಟರ್ ನೃತ್ಯ ಸಂಯೋಜನೆ ಚಿತ್ರಕ್ಕಿದೆ.

ಸರ್ಕಾರ ಮೇಲ್ವಿಚಾರಣೆ ನಡೆಸಲಾಗದು: ಸುಪ್ರೀಂ ಕೋರ್ಟ್‌ನಲ್ಲಿ ಸಾಲಿಸಿಟರ್ ಜನರಲ್ ವಿವರಣೆ

‘ಕೇಂದ್ರದ ನಿಯಂತ್ರಣದಲ್ಲಿ ಸಿಬಿಐ ಇಲ್ಲ’

ನವದೆಹಲಿ (ಪಿಟಿಐ): ಸಿಬಿಐ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ, ಅದು ಪ್ರಕರಣಗಳನ್ನು ದಾಖಲಿಸಿಕೊಳ್ಳುವ ವಿಚಾರದಲ್ಲಿ ಹಾಗೂ ನಡೆಸುವ ತನಿಖೆಗಳ ಬಗ್ಗೆ ಕೇಂದ್ರ ಸರ್ಕಾರ ಮೇಲ್ವಿಚಾರಣೆ ನಡೆಸಲಾಗದು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಗುರುವಾರ ತಿಳಿಸಿದೆ.

ಕೇಂದ್ರ ಸರ್ಕಾರವು ಸಿಬಿಐ ಮತ್ತು ಜಾರಿ ನಿರ್ದೇಶನಾಲಯವನ್ನು (ಇ.ಡಿ) ದುರ್ಬಳಕೆ ಮಾಡಿಕೊಳ್ಳುತ್ತಿದೆ, ತನ್ನ ವಿರೋಧಿಗಳ ವಿರುದ್ಧ ಅವುಗಳನ್ನು ಬಳಸಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪ ಮಾಡುತ್ತಿರುವ ಹಿನ್ನೆಲೆಯಲ್ಲಿ, ಕೇಂದ್ರದ ಈ ಹೇಳಿಕೆಯು ಮಹತ್ವ ಪಡೆದುಕೊಂಡಿದೆ.

ಸಿಬಿಐ ಅಧಿಕಾರಿಗಳು ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆಯೇ ತನಿಖೆ ಮುಂದುವರಿಸಿದ್ದಾರೆ ಎಂದು ಪಶ್ಚಿಮ ಬಂಗಾಳ ಸರ್ಕಾರ ಸಲ್ಲಿಸಿರುವ ಅರ್ಜಿಯೊಂದಕ್ಕೆ ಪ್ರತಿಯಾಗಿ ಸಲ್ಲಿಸಿರುವ ಪ್ರಾಥಮಿಕ ಆಕ್ಷೇಪಣೆಯಲ್ಲಿ ಕೇಂದ್ರವು ಈ ಮಾತುಗಳನ್ನು ಹೇಳಿದೆ. ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರು ಇರುವ ವಿಭಾಗೀಯ ಪೀಠವು ಈ ಅರ್ಜಿಯ ವಿಚಾರಣೆ ನಡೆಸುತ್ತಿದೆ.

ಕೇಂದ್ರದ ವಾದಕ್ಕೆ ಪ್ರತಿವಾದ ಮಂಡಿಸಿರುವ ಪಶ್ಚಿಮ ಬಂಗಾಳ ಸರ್ಕಾರವು, ಸಿಬಿಐಗೆ ರಾಜ್ಯದಲ್ಲಿ ಒಮ್ಮೆ ಕಾಲೂರಲು ಅವಕಾಶ ನೀಡಿದಲ್ಲಿ, ಇ.ಡಿ. ಕೂಡ ಪ್ರವೇಶ ಪಡೆಯುತ್ತದೆ, ಅದರ ಪರಿಣಾಮಗಳು ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಬಹಳ ವ್ಯಾಪಕವಾಗಿರುತ್ತವೆ ಎಂದು ಹೇಳಿದೆ.

ರಾಜ್ಯದಲ್ಲಿ ತನಿಖೆ ನಡೆಸಲು ಸಿಬಿಐಗೆ ನೀಡಿದ್ದ ಅನುಮತಿಯನ್ನು ಹಿಂದಪಡೆಯಲಾಗಿದ್ದರೂ, ಸಿಬಿಐ ಅಧಿಕಾರಿಗಳು ಎಫ್‌ಐಆರ್‌ಗಳನ್ನು ದಾಖಲಿಸುತ್ತಿದ್ದಾರೆ, ತನಿಖೆ ನಡೆಸುತ್ತಿದ್ದಾರೆ ಎಂದು ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಿದೆ.

ಕೇಂದ್ರದ ಪರವಾಗಿ ಗುರುವಾರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಅರ್ಜಿಯಲ್ಲಿ ಉಲ್ಲೇಖಿಸಿರುವ ಪ್ರಕರಣಗಳನ್ನು ಕೇಂದ್ರ ಸರ್ಕಾರ ದಾಖಲು ಮಾಡಿಲ್ಲ’ ಎಂದು ಪೀಠಕ್ಕೆ ತಿಳಿಸಿದರು. ‘ಪ್ರಕರಣಗಳನ್ನು ದಾಖಲಿಸಿಕೊಂಡಿರುವುದು ಸಿಬಿಐ ಅಧಿಕಾರಿಗಳು... ಸಿಬಿಐ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ’ ಎಂದು ಮೆಹ್ತಾ ವಿವರಿಸಿದರು.

ಕಲ್ಕತ್ತ ಹೈಕೋರ್ಟ್‌ನ ಸೂಚನೆ ಆಧರಿಸಿ ದಾಖಲು ಮಾಡಿಕೊಂಡಿರುವ ಪ್ರಕರಣಗಳನ್ನು ಕೂಡ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಅವರು ಹೇಳಿದರು. ‘ಸಿಬಿಐ ಉಸ್ತುವಾರಿ ಕೇಂದ್ರ ಸರ್ಕಾರದ ಹೊಣೆಯಲ್ಲ. ಪ್ರಕರಣ ದಾಖಲು, ತನಿಖೆ, ಪ್ರಕರಣದ ಪರಿಸಮಾಪ್ತಿ ವರದಿ ಅಥವಾ ದೋಷಾರೋಪಪಟ್ಟಿ ಅಥವಾ ಪ್ರಕರಣದಲ್ಲಿ ಶಿಕ್ಷೆ ಆಗುವ ವಿಚಾರವನ್ನು ಕೇಂದ್ರವು ಮೇಲ್ವಿಚಾರಣೆ ನಡೆಸಲು ಆಗುವುದಿಲ್ಲ’ ಎಂದು ಮೆಹ್ತಾ ಅವರು ಪೀಠಕ್ಕೆ ಮಾಹಿತಿ ನೀಡಿದರು.

ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ಸಿಬಿಐ ಎಂಬುದು ಶಾಸನಾತ್ಮಕ ಪ್ರಾಧಿಕಾರ ಅಲ್ಲ, ಅದೊಂದು ತನಿಖಾ ಸಂಸ್ಥೆ ಎಂದರು. ‘ಅದು ಸರ್ಕಾರದ ತನಿಖಾ ವಿಭಾಗ’ ಎಂದರು. ಸಿಬಿಐ ಬಗ್ಗೆ ಸಂಸತ್ತಿನಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಅದಕ್ಕೆ, ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ರಾಜ್ಯ ಖಾತೆ ಸಚಿವರು ಅದಕ್ಕೆ ಉತ್ತರ ನೀಡುತ್ತಾರೆ ಎಂದು ಸಿಬಲ್ ಹೇಳಿದರು. ವಾದ–ಪ್ರತಿವಾದವು ಮೇ 8ರಂದು ಮುಂದುವರಿಯಲಿದೆ.

2ಜಿ: ಕೇಂದ್ರದ ಅರ್ಜಿ ಸ್ವೀಕರಿಸಲು ಒಪ್ಪದ ರಿಜಿಸ್ಟ್ರಿ

ನವದೆಹಲಿ (ಪಿಟಿಐ): ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ವರ್ಗಾವಣೆ ಮಾಡುವ ಸಂದರ್ಭದಲ್ಲಿ ಸರ್ಕಾರಗಳು ಹರಾಜು ಪ್ರಕ್ರಿಯೆಯನ್ನೇ ಅನುಸರಿಸಬೇಕು ಎಂದು 2012ರಲ್ಲಿ 2ಜಿ ತರಂಗಾಂತರ ಪ್ರಕರಣದಲ್ಲಿ ನೀಡಿದ್ದ ತೀರ್ಪಿನಲ್ಲಿ ಬದಲಾವಣೆ ತರುವಂತೆ ಕೋರಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸ್ವೀಕರಿಸಲು ಕೋರ್ಟ್‌ನ ರಿಜಿಸ್ಟ್ರಿ ಒಪ್ಪಿಲ್ಲ ಎಂದು ಗೊತ್ತಾಗಿದೆ.

ಕೇಂದ್ರವು ಅಪಾರ್ಥಕ್ಕೆ ಒಳಗಾಗಿ ಅರ್ಜಿಯನ್ನು ಸಲ್ಲಿಸಿದೆ, ಸ್ಪಷ್ಟೀಕರಣ ಕೇಳುವ ನೆಪದಲ್ಲಿ ತೀರ್ಪಿನ ಪುನರ್‌ಪರಿಶೀಲನೆಗೆ ಕೋರುತ್ತಿದೆ ಎಂದು ರಿಜಿಸ್ಟ್ರಿ ಹೇಳಿದೆ ಎನ್ನಲಾಗಿದೆ.

ಎ.ರಾಜಾ ದೂರಸಂಪರ್ಕ ಸಚಿವರಾಗಿದ್ದ ಅವಧಿಯಲ್ಲಿ, 2008ರ ಜನವರಿಯಲ್ಲಿ ಬೇರೆ ಬೇರೆ ಕಂಪನಿಗಳಿಗೆ ಹಂಚಿಕೆ ಮಾಡಿದ್ದ 2ಜಿ ತರಂಗಾಂತರ ಪರವಾನಗಿಗಳನ್ನು 2012ರ ಫೆ.2ರಂದು ನೀಡಿದ ತೀರ್ಪಿನಲ್ಲಿ ರದ್ದುಪಡಿಸಿತ್ತು. 2ಜಿ ತರಂಗಾಂತರಗಳನ್ನು ವಾಣಿಜ್ಯೇತರ ಉದ್ದೇಶಗಳಿಗೆ ನೀಡುವಾಗ ಹರಾಜು ಪ್ರಕ್ರಿಯೆಯಿಂದ ವಿನಾಯಿತಿ ನೀಡಬೇಕು ಎಂದು ಕೇಂದ್ರವು ಅರ್ಜಿಯಲ್ಲಿ ಕೋರಿದೆ.

ಶಕ್ಸ್‌ಗಾಮ್ ಕಣಿವೆ ಬಳಿ ಚೀನಾ ಕಾಮಗಾರಿ: ಭಾರತ ಪ್ರತಿಭಟನೆ

ನವದೆಹಲಿ (ಪಿಟಿಐ): ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಪ್ರಮುಖ ಆಯಕಟ್ಟಿನ ಭಾಗವಾಗಿರುವ ಶಕ್ಸ್‌ಗಾಮ್ ಕಣಿವೆಯಲ್ಲಿ ಚೀನಾ ಕೈಗೊಂಡಿರುವ ನಿರ್ಮಾಣ ಕಾಮಗಾರಿಯು ಕಾನೂನುಬಾಹಿರವಾದದ್ದಾಗಿದೆ ಎಂದು ಭಾರತವು ಚೀನಾ ಬಳಿ ಪ್ರಬಲವಾಗಿ ಪ್ರತಿಭಟನೆ ದಾಖಲಿಸಿದೆ.

‘ಶಕ್ಸ್‌ಗಾಮ್ ಕಣಿವೆಯು ಭಾರತದ ಭಾಗವಾಗಿದೆ. 1963ರ ಚೀನಾ–ಪಾಕಿಸ್ತಾನ ಗಡಿ ಒಪ್ಪಂದವನ್ನು ನವದೆಹಲಿ ಎಂದಿಗೂ ಒಪ್ಪಿಕೊಂಡಿಲ್ಲ. ಈ ಒಪ್ಪಂದದ ಮೂಲಕ ಇಸ್ಲಾಮಾಬಾದ್ ಈ ಪ್ರದೇಶವನ್ನು ಕಾನೂನುಬಾಹಿರವಾಗಿ ಬೀಜಿಂಗ್‌ಗೆ ಬಿಟ್ಟುಕೊಡಲು ಪ್ರಯತ್ನಿಸಿದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈ ಸಂಬಂಧ ನಮ್ಮ ನಿರಾಕರಣೆಯನ್ನು ನಿರಂತರವಾಗಿ ತಿಳಿಸಿದ್ದೇವೆ. ಭೂ ಪ್ರದೇಶವನ್ನು ಬದಲಿಸುವ ಕಾನೂನುಬಾಹಿರ ಯತ್ನಗಳ ವಿರುದ್ಧ ನಾವು ಚೀನಾಗೆ ನಮ್ಮ ಪ್ರತಿಭಟನೆಯನ್ನು ದಾಖಲಿಸಿದ್ದೇವೆ’ ಎಂದು ಅವರು ಪ್ರತಿಕ್ರಿಯಿಸಿದರು.

ರಾಮಚಂದ್ರೇಗೌಡ, ಸುಮಿತ್ರಾಬಾಯಿಗೆ ‘ಕಸಾಪ ಗೌರವ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ



ರಾಮಚಂದ್ರೇಗೌಡ



ಸುಮಿತ್ರಾ ಬಾಯಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಗೌರವ ದತ್ತಿ ಪ್ರಶಸ್ತಿಗೆ’ ಜಾನಪದ ವಿದ್ವಾಂಸ ಮೈಸೂರಿನ ಹಿ.ಶಿ.ರಾಮಚಂದ್ರೇಗೌಡ ಮತ್ತು ವಿಮರ್ಶಕಿ ಬೆಂಗಳೂರಿನ ಬಿ.ಎನ್.ಸುಮಿತ್ರಾಬಾಯಿ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ 2024ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹30 ಸಾವಿರ ನಗದು ಒಳಗೊಂಡಿದೆ.

ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ ಒಬ್ಬ ಲೇಖಕ ಹಾಗೂ ಒಬ್ಬ ಲೇಖಕಿಗೆ ಪ್ರತಿವರ್ಷ ಪರಿಷತ್ತಿನ ಮೂಲಕ ಪ್ರಶಸ್ತಿ ನೀಡಲಾಗುತ್ತಿದೆ.

ಹಿ.ಶಿ.ರಾಮಚಂದ್ರೇಗೌಡ ಕೇರಳದಲ್ಲಿ ಜಾನಪದದ ಕುರಿತು ಅಧ್ಯಯನ ಮಾಡಿದ್ದರು. ಮೈಸೂರು ವಿ.ವಿ.ಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿರ್ದೇಶಕರಾಗಿ ನಿವೃತ್ತರಾಗಿದ್ದಾರೆ.

ಬಿ.ಎನ್. ಸುಮಿತ್ರಾಬಾಯಿ ಮೈಸೂರು ವಿ.ವಿ.ಯಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹಾಸನದ ಎ.ವಿ. ಕಾಂತಮ್ಮ ಮತ್ತು ಬೆಂಗಳೂರಿನ ಎ.ಪಿ.ಎಸ್.ವಾಣಿಜ್ಯ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದಾರೆ.

ರಾಜ್ಯಗಳ ನೆರವು ಕೋರಿದ ಕೇಂದ್ರ

ನವದೆಹಲಿ (ಪಿಟಿಐ): ಜುಲೈ 1ರಿಂದ ದೇಶದ ಎಲ್ಲೆಡೆ ಜಾರಿಗೆ ಬರಲಿರುವ ಹೊಸ ಕ್ರಿಮಿನಲ್ ಕಾನೂನುಗಳ ಅನುಷ್ಠಾನದ ಭಾಗವಾಗಿ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡುವ ವಿಚಾರದಲ್ಲಿ ರಾಜ್ಯಗಳ ನೆರವು ಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಹೊಸ ಕಾನೂನುಗಳಾದ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯು ಜುಲೈ 1ರಿಂದ ಜಾರಿಗೆ ಬರಲಿವೆ. ಈ ಕಾನೂನುಗಳಿಗೆ ಸಂಬಂಧಿಸಿದಂತೆ ಕೇಂದ್ರವು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ರವಾನಿಸಿದೆ.

‘ಕೃಷ್ಣ ಜನ್ಮಭೂಮಿ ದೇಗುಲ ಸಂರಕ್ಷಿತ ಸ್ಮಾರಕ’

ಪ್ರಯಾಗ್‌ರಾಜ್(ಉತ್ತರ ಪ್ರದೇಶ) (ಪಿಟಿಐ): ಕೃಷ್ಣ ಜನ್ಮಭೂಮಿ ದೇವಸ್ಥಾನವು ಸಂರಕ್ಷಿತ ಸ್ಮಾರಕವಾಗಿದೆ. ಹಾಗಾಗಿ, ಈ ದೇವಸ್ಥಾನದ ಮೇಲ್ವಿಚಾರಣೆಯು ಪ್ರಾಚೀನ ಸ್ಮಾರಕಗಳು ಹಾಗೂ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಕಾಯ್ದೆ ವ್ಯಾಪ್ತಿಗೆ ಬರುತ್ತದೆ ಎಂದು ಹಿಂದೂ ಅರ್ಜಿದಾರರು ಅಲಹಾಬಾದ್ ಹೈಕೋರ್ಟ್‌ಗೆ ಗುರುವಾರ ತಿಳಿಸಿದ್ದಾರೆ.

ಅರ್ಜಿದಾರರ ಪರ ಹಾಜರಿದ್ದ ವಕೀಲ ಹರಿಶಂಕರ ಜೈನ್, ಪೂಜಾಸ್ಥಳಗಳ ಕಾಯ್ದೆಯ ಅವಕಾಶಗಳು ಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಪಟ್ಟ ಪ್ರಕರಣಕ್ಕೆ ಅನ್ವಯ ಆಗುವುದಿಲ್ಲ ಎಂದು ಅರುಹಿದರು.

ಮಥುರಾದಲ್ಲಿರುವ ಕೃಷ್ಣ ಜನ್ಮಭೂಮಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸುವಂತೆ ಕೋರಿದ್ದ ಅರ್ಜಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿ ವಿಚಾರಣೆ ವೇಳೆ, ಹೈಕೋರ್ಟ್‌ಗೆ ಈ ವಿಷಯ ತಿಳಿಸಲಾಯಿತು.

‘ಪೂಜೆ ಸಲ್ಲಿಸುವ ಮೂಲಭೂತ ಹಕ್ಕನ್ನು ಕಾಲಪರಿಮಿತಿ ಕಾಯ್ದೆ ಮೂಲಕ ಕಸಿದುಕೊಳ್ಳಲಾಗದು. ಅಲ್ಲದೇ, ದೇವಸ್ಥಾನ ಮತ್ತು ಭಕ್ತರಿಗೆ ತಮ್ಮ ವಾದ ಮಂಡಿಸುವ ಹಕ್ಕಿದೆ’ ಎಂದೂ ಜೈನ್ ತಿಳಿಸಿದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮಯಂಕ್ ಕುಮಾರ್ ಜೈನ್, ವಿಚಾರಣೆಯನ್ನು ಮೇ 7ಕ್ಕೆ ಮುಂದೂಡಿದರು.

ಮೋದಿ ಮಹಿಳೆಯರ ಕ್ಷಮೆ ಕೇಳಲಿ: ರಾಹುಲ್

ಒಂದನೇ ಪುಟದಿಂದ...

‘ವೇದಿಕೆಯಲ್ಲಿ ನಿಂತು ಎಲ್ಲರೂ ಆತನನ್ನು ಸಮರ್ಥಿಸಿಕೊಂಡರು. ಹಾಸನದಲ್ಲಿ ನಡೆದಿರುವುದು ಬರೀ ಸೆಕ್ಸ್ ಸ್ಕ್ಯಾಂಡಲ್ ಅಲ್ಲ. ಅದೊಂದು ಸಾಮೂಹಿಕ ಅತ್ಯಾಚಾರ (ಮಾಸ್ ರೇಪ್). ಪ್ರಧಾನಿ ನರೇಂದ್ರ ಮೋದಿ ಜೊತೆ ಗೃಹ ಸಚಿವ ಅಮಿತ್ ಶಾ, ಬಿಜೆಪಿ ನಾಯಕರು ಕೈಮುಗಿದು, ತಲೆಬಾಗಿ ದೇಶದ ತಾಯಂದಿರ ಕ್ಷಮೆ ಯಾಚಿಸಬೇಕು’ ಎಂದು ಆಗ್ರಹಿಸಿದರು.

‘ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದು ಮಾತ್ರವಲ್ಲದೇ ಆತ (ಪ್ರಜ್ವಲ್ ರೇವಣ್ಣ) ಅದರ ವಿಡಿಯೊ ಚಿತ್ರೀಕರಣವನ್ನೂ ಮಾಡಿಕೊಂಡಿದ್ದಾನೆ. ಇಂತಹ ಕೃತ್ಯ ಜಗತ್ತಿನಲ್ಲೇ ಮೊದಲು. ಪ್ರಧಾನಿಯೊಬ್ಬರು ಮಾಸ್ ರೇಪಿಸ್ಟ್ ಜೊತೆ ನಿಂತು ಮತಯಾಚನೆ ಮಾಡಿರುವುದು ಇದೇ ಪ್ರಥಮ. ಇದು ಇಡೀ ಪ್ರಪಂಚಕ್ಕೇ ಗೊತ್ತಾಗಿದೆ’ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣ ದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ನಟ ಶಿವರಾಜಕುಮಾರ್, ಶಾಸಕರಾದ ಗೋಪಾಲಕೃಷ್ಣ ಬೇಳೂರು, ಬಿ.ಕೆ.ಸಂಗಮೇಶ್ವರ, ನಟ ದುನಿಯಾ ವಿಜಯ್, ಮಾಜಿ ಸಚಿವರಾದ ಕಿಮ್ಮನೆ ರತ್ನಾಕರ, ಟಿ.ಬಿ.ಜಯಚಂದ್ರ ಉಪಸ್ಥಿತರಿದ್ದರು.

ಶಿವಮೊಗ್ಗ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ವೇದಿಕೆಯ ಕೆಳಗೆ ಜನರೊಂದಿಗೆ ಕುಳಿತು ಕಾರ್ಯಕ್ರಮ ವೀಕ್ಷಿಸಿದರು.

‘ನಕ್ಸಲ್‌ವಾದಿಗಳು ಹೇಳಿಕೆಗೂ ಕ್ಷಮೆ ಯಾಚಿಸಲಿ’

‘ಸಮಾನತೆಯನ್ನು ಯಾರು ಬಯಸುತ್ತಾರೋ ಅವರೆಲ್ಲರೂ ನಕ್ಸಲ್‌ವಾದಿಗಳು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದ್ದಾರೆ. ಆ ಮೂಲಕ, ದೇಶದ ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ವರ್ಗದವರನ್ನು ನಡ್ಡಾ ಅಪಮಾನಿಸಿದ್ದಾರೆ. ಸಂವಿಧಾನ ರಕ್ಷಣೆ ಮಾಡುವುದಾಗಿ ಹೇಳುವ ಪ್ರಧಾನಿಯು ಮೊದಲು ಈ ಸಮುದಾಯಗಳ ಕ್ಷಮೆ ಯಾಚಿಸಲಿ’ ಎಂದು ರಾಹುಲ್ ಗಾಂಧಿ ಒತ್ತಾಯಿಸಿದರು.

ಸಮಾನತೆ ಹಾಗೂ ಮೀಸಲಾತಿ ವಿರೋಧಿಸುವ ಬಿಜೆಪಿ ಅದೇ ಕಾರಣಕ್ಕೆ ಪದೇಪದೇ ಸಂವಿಧಾನದ ಮೇಲೆ ಆಕ್ರಮಣ ಮಾಡುತ್ತಿದೆ ಎಂದೂ ದೂರಿದರು.

ದೆಹಲಿ: 52 ಗುತ್ತಿಗೆ ನೌಕರರ ವಜಾ

ನವದೆಹಲಿ (ಪಿಟಿಐ): ದೆಹಲಿ ಮಹಿಳಾ ಆಯೋಗದಲ್ಲಿ (ಡಿಸಿಡಬ್ಲ್ಯು) 52 ಮಂದಿ ಗುತ್ತಿಗೆ ಆಧಾರಿತ ನೌಕರರನ್ನು ದೆಹಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಡಬ್ಲ್ಯುಸಿಡಿ) ಇಲಾಖೆಯು ವಜಾ ಮಾಡಿದೆ. ಈ ನೌಕರರನ್ನು ಅಕ್ರಮವಾಗಿ ನೇಮಕಾತಿ ಮಾಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಫ್ರೆಸ್ನೊದಲ್ಲಿ ಸತ್ತಿದ್ದು ಬ್ರಾರ್ ಅಲ್ಲ’

ವಾಷಿಂಗ್ಟನ್ (ಪಿಟಿಐ): ಫ್ರೆಸ್ನೊ ನಗರದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಬಲಿಯಾದ ವ್ಯಕ್ತಿಯು ಕೆನಡಾ ಮೂಲದ ಭಯೋತ್ಪಾದಕ ಸತಿಂದರ್‌ಜಿತ್ ಸಿಂಗ್ ಅಲಿಯಾಸ್ ಗೋಲ್ಡಿ ಬ್ರಾರ್ ಎಂಬ ವರದಿಗಳನ್ನು ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಪೊಲೀಸರು ಅಲ್ಲಗಳೆದಿದ್ದಾರೆ.

ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣದ ಪ್ರಮುಖ ಸಂಚುಕೋರ ಈ ಸತಿಂದರ್‌ಸಿಂಗ್ ಎಂಬ ಆರೋಪ ಇದೆ. ಗುಂಡಿನ ದಾಳಿಗೆ ಬಲಿಯಾದ ವ್ಯಕ್ತಿಯ ಹೆಸರು ಕ್ಸೇವಿಯರ್ ಗ್ಲಾಡ್ನಿ ಎಂದು ಪೊಲೀಸರು ಹೇಳಿದ್ದಾರೆ.

ಗುಂಡಿನ ದಾಳಿಯಲ್ಲಿ ಬಲಿಯಾದ ವ್ಯಕ್ತಿಯೇ ಸಿಧು ಮೂಸೆವಾಲಾ ಅವರ ಹತ್ಯೆಯ ಪ್ರಮುಖ ಸಂಚುಕೋರ ಎಂದು ಭಾರತದ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದ್ದವು. ಗುಂಡು ಹಾರಿಸಿದ್ದಾನೆ ಎನ್ನಲಾದ ವ್ಯಕ್ತಿಯು ಡಾರೆನ್ ವಿಲಿಯಮ್ಸ್ ಎಂದು ಗುರುತಿಸಲಾಗಿದೆ.

ವೈಯಕ್ತಿಕ ಘರ್ಷಣೆಯ ಕಾರಣಕ್ಕೆ ಗುಂಡಿನ ದಾಳಿ ನಡೆದಿದೆ. ಸತಿಂದರ್‌ಜಿತ್ ಸಿಂಗ್ ಕೆನಡಾದ ಬ್ರಾಂಪ್ಟನ್‌ನಲ್ಲಿ ಇರುತ್ತಾನೆ ಎನ್ನಲಾಗಿದೆ.

ಪರಿಷತ್ 6 ಕ್ಷೇತ್ರಗಳಿಗೆ ಜೂನ್ 3ರಂದು ಚುನಾವಣೆ

ಪ್ರಜಾವಾಣಿ ವಾರ್ತೆ

ಅಧಿಸೂಚನೆ	ಮೇ 9
ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ	ಮೇ 16
ನಾಮಪತ್ರ ಪರಿಶೀಲನೆ	ಮೇ 17
ನಾಮಪತ್ರ ಹಿಂಪಡೆಯಲು ಕೊನೆಯ ದಿನ	ಮೇ 20
ಮತದಾನ	ಜೂನ್ 3
ಮತದಾನದ ಅವಧಿ	ಬೆಳಿಗ್ಗೆ 8ರಿಂದ ಸಂಜೆ 4
ಮತ ಎಣಿಕೆ	ಜೂನ್ 6
ಚುನಾವಣೆ ಪ್ರಕ್ರಿಯೆ ಮುಗಿಯುವ ದಿನಾಂಕ	ಜೂನ್ 12

ನವದೆಹಲಿ: ವಿಧಾನ ಪರಿಷತ್‌ಗೆ ಮೂರು ಪದವೀಧರರ ಹಾಗೂ ಮೂರು ಶಿಕ್ಷಕರ ಕ್ಷೇತ್ರಗಳಿಂದ ನಡೆಯಲಿರುವ ದ್ವೈವಾರ್ಷಿಕ ಚುನಾವಣೆಗೆ ಚುನಾವಣಾ ಆಯೋಗ ಗುರುವಾರ ವೇಳಾಪಟ್ಟಿ ಪ್ರಕಟಿಸಿದೆ. ಲೋಕಸಭಾ ಚುನಾವಣೆಯ ಬೆನ್ನಲ್ಲೇ, ರಾಜ್ಯದಲ್ಲಿ ಮತ್ತೊಂದು ಚುನಾವಣೆಗೆ ವೇದಿಕೆ ಸಜ್ಜಾಗಿದೆ. ಜೂನ್ 3ರಂದು ಮತದಾನ ನಡೆಯಲಿದೆ. ಈ ಕ್ಷೇತ್ರಗಳಲ್ಲಿ ಮಾದರಿ ನೀತಿಸಂಹಿತೆ ತಕ್ಷಣದಿಂದ ಜಾರಿಗೆ ಬಂದಿದೆ.

ಈಶಾನ್ಯ ಪದವೀಧರ ಕ್ಷೇತ್ರದಿಂದ ಡಾ.ಚಂದ್ರಶೇಖರ ಬಿ.ಪಾಟೀಲ, ಬೆಂಗಳೂರು ಪದವೀಧರ ಕ್ಷೇತ್ರದಿಂದ ಅ. ದೇವೇಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವೈ.ಎ. ನಾರಾಯಣಸ್ವಾಮಿ, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಎಸ್.ಎಲ್.ಭೋಜೇಗೌಡ ಅವರ ಅವಧಿ ಜೂನ್ 21ಕ್ಕೆ ಕೊನೆ ಆಗಲಿದೆ. ನೈರುತ್ಯ ಪದವೀಧರರ ಕ್ಷೇತ್ರದಿಂದ ಬಿಜೆಪಿಯಿಂದ ಆಯ್ಕೆಯಾಗಿದ್ದ ಆಯನೂರು ಮಂಜುನಾಥ ತಮ್ಮ ಸ್ಥಾನಕ್ಕೆ 2023ರ ಏಪ್ರಿಲ್ 19ರಂದು ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್‌ನಿಂದ ಆಯ್ಕೆಯಾಗಿದ್ದ ಮರಿತಿಬ್ಬೇಗೌಡ ಈ ವರ್ಷದ ಮಾರ್ಚ್ 21ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಬೆಂಗಳೂರು ಪದವೀಧರ ಕ್ಷೇತ್ರಕ್ಕೆ ರಾಮೋಜಿ ಗೌಡ, ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಕೆ.ಕೆ. ಮಂಜುನಾಥ್, ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಡಿ.ಟಿ. ಶ್ರೀನಿವಾಸ್, ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಡಾ. ಚಂದ್ರಶೇಖರ ಪಾಟೀಲ ಹಾಗೂ ನೈರುತ್ಯ ಪದವೀಧರರ ಕ್ಷೇತ್ರಕ್ಕೆ ಆಯನೂರು ಮಂಜುನಾಥ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ನಿರ್ಧರಿಸಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಮರಿತಿಬ್ಬೇಗೌಡ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವ ಸಂಭವ ಇದೆ.

ಬಿಜೆಪಿಯ ರಾಜ್ಯ ಘಟಕವು ಆರು ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳ ಹೆಸರನ್ನು ಶಿಫಾರಸು ಮಾಡಿ ಎರಡು ತಿಂಗಳು ಕಳೆದಿವೆ. ಬಿಜೆಪಿ ವರಿಷ್ಠರು ಈ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಈ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಇರಲಿದೆಯೇ ಎಂಬುದು ಸ್ಪಷ್ಟಗೊಂಡಿಲ್ಲ. ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಿಂದಾಗಿ ಮುಜುಗರಕ್ಕೆ ಸಿಲುಕಿರುವ ಬಿಜೆಪಿ, ಜೆಡಿಎಸ್ ಜತೆಗಿನ ಮೈತ್ರಿ ಮುಂದುವರಿಸುವುದು ಅನುಮಾನ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಪದವೀಧರರ ಕ್ಷೇತ್ರಕ್ಕೆ ಎ.ಎಚ್.ಆನಂದ್ ಹಾಗೂ ಅ.ದೇವೇಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ವೈ.ಎ.ನಾರಾಯಣಸ್ವಾಮಿ, ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಈ.ಸಿ.ನಿಂಗರಾಜಗೌಡ ಹಾಗೂ ವಿನಯ್, ಈಶಾನ್ಯ ಪದವೀಧರರ ಕ್ಷೇತ್ರಕ್ಕೆ ಅಮರನಾಥ ಪಾಟೀಲ, ನೈರುತ್ಯ ಪದವೀಧರರ ಕ್ಷೇತ್ರಕ್ಕೆ ಡಾ.ಸರ್ಜಿ ಹಾಗೂ ವಿಕಾಸ್ ಪುತ್ತೂರು ಮಂಚೂಣಿಯಲ್ಲಿದೆ ಎಂದು ಮೂಲಗಳು ಹೇಳಿವೆ.

ಕೇರಳ: ಚಾಲನಾ ಪರವಾನಗಿ ಪರೀಕ್ಷೆ ಪರಿಷ್ಕರಣೆಗೆ ವಿರೋಧ

ಡ್ರೈವಿಂಗ್ ಸ್ಕೂಲ್ ಒಕ್ಕೂಟದಿಂದ ಪ್ರತಿಭಟನೆ

ತಿರುವನಂತಪುರ (ಪಿಟಿಐ): ಚಾಲನಾ ಪರವಾನಗಿ ಪರೀಕ್ಷಾ ವಿಧಾನವನ್ನು ಪರಿಷ್ಕರಿಸಿರುವ ಕೇರಳ ಸರ್ಕಾರದ ಕ್ರಮವನ್ನು ವಿರೋಧಿಸಿ ರಾಜ್ಯದ ಡ್ರೈವಿಂಗ್ ಸ್ಕೂಲ್‌ಗಳ ಒಕ್ಕೂಟದ ಸದಸ್ಯರು ಗುರುವಾರ ರಾಜ್ಯದಾದ್ಯಂತ ಮುಷ್ಕರ ನಡೆಸಿದರು.

ಕೇರಳ ಸರ್ಕಾರವು ಹೊಸ ನಿಯಮಗಳ ಮೂಲಕ ಚಾಲನಾ ಪರವಾನಗಿ ಪಡೆಯುವುದನ್ನು ಇನ್ನಷ್ಟು ಕಠಿಣಗೊಳಿಸಿದ್ದು, ಆಕಾಂಕ್ಷಿಗಳಿಗೆ ಸವಾಲಾಗಿ ಪರಿಣಮಿಸಲಿದೆ ಎಂದು ಒಕ್ಕೂಟ ದೂರಿದೆ.

ಮೋಟಾರು ವಾಹನ ಇಲಾಖೆ ಈ ಸುತ್ತೋಲೆಯನ್ನು ಹಿಂಪಡೆಯುವವರೆಗೂ ಧರಣಿ ಮುಂದುವರಿಸುವುದಾಗಿ ತಿಳಿಸಿದ ಒಕ್ಕೂಟದ ಸದಸ್ಯರು, ತಿರುವನಂತಪುರ ಮತ್ತು ಇತರ ಪರೀಕ್ಷಾ ಮೈದಾನಗಳಲ್ಲಿ ಚಾಲನಾ ಪರವಾನಗಿ ಪರೀಕ್ಷೆ ಎದುರಿಸಲು ಬಂದಿದ್ದ ಅಭ್ಯರ್ಥಿಗಳಿಗೆ ಅಡ್ಡಿಪಡಿಸಿದ್ದಾರೆ.

ಕೇರಳ ಮೋಟಾರು ವಾಹನ ಇಲಾಖೆಯು ಹೊಸ ಸುಧಾರಣೆಗಳನ್ನು ಒಳಗೊಂಡ ಸುತ್ತೋಲೆಯನ್ನು ಮೇ 2ರಿಂದ ಜಾರಿಗೆ ತಂದಿದೆ.

ರಾಜ್ಯದ ಎಲ್ಲ 84 ಪರೀಕ್ಷಾ ಕೇಂದ್ರಗಳಲ್ಲಿಯೂ ಒಂದೇ ರೀತಿಯ ಸೌಲಭ್ಯಗಳು ಇರಬೇಕು ಮತ್ತು ಎಲ್ಲ ಕೇಂದ್ರಗಳಲ್ಲಿಯೂ ನಡೆಯುವ ಪರೀಕ್ಷೆಗಳು ಏಕರೂಪವಾಗಿರಬೇಕು ಎಂದು ಡ್ರೈವಿಂಗ್ ಸ್ಕೂಲ್ ಮಾಲೀಕರ ಸಂಘದ ಸದಸ್ಯ ಉನ್ನಿ ಆಗ್ರಹಿಸಿದರು.

ಈಗಾಗಲೇ ನಾವು ಇಲಾಖೆಯ ಸುತ್ತೋಲೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದೇವೆ. ಹೀಗಿರುವಾಗ ಸರ್ಕಾರ ತರಾತುರಿಯಲ್ಲಿ ಇದನ್ನು ಜಾರಿಗೊಳಿಸುವ ಅಗತ್ಯವೇನಿದೆ. ಹೈಕೋರ್ಟ್ ತೀರ್ಪು ಬರುವವರೆಗೆ ಕಾಯಬಹುದಿತ್ತಲ್ಲವೇ ಎಂದು ಅವರು ಪ್ರಶ್ನಿಸಿದರು.

ಕಲಿಕೆಗೆ 15 ವರ್ಷಕ್ಕಿಂತ ಹಳೆಯ ವಾಹನಗಳನ್ನು ನಿಷೇಧಿಸಲಾಗಿದೆ. ಇದು ಸರಿಯಲ್ಲ ಎಂದಿದ್ದಾರೆ.

ಸುತ್ತೋಲೆಯಲ್ಲಿ ಏನಿದೆ?

ಕೇರಳ ಮೋಟಾರು ವಾಹನಗಳ ಇಲಾಖೆಯು ಚಾಲನಾ ಪರವಾನಗಿ ಪರೀಕ್ಷಾ ಷರತ್ತುಗಳನ್ನು ತಿದ್ದುಪಡಿ ಮಾಡಿ, 2024ರ ಏಪ್ರಿಲ್ 4ರಂದು ಸುತ್ತೋಲೆ ಹೊರಡಿಸಿತ್ತು. ಅದರಲ್ಲಿರುವ ಪ್ರಮುಖ ಅಂಶಗಳೆಂದರೆ–

- ಅರ್ಜಿದಾರರು ಸಂಚಾರ ದಟ್ಟಣೆ ಇರುವ ರಸ್ತೆಯಲ್ಲಿ ರಸ್ತೆ ಪರೀಕ್ಷೆಯನ್ನು ಕಡ್ಡಾಯವಾಗಿ ಎದುರಿಸಬೇಕು. ಮೈದಾನದಲ್ಲಿ ‘ಎಚ್’ ಟೆಸ್ಟ್‌ಗೂ ಮುನ್ನ, ಕೋನೀಯ ಪಾರ್ಕಿಂಗ್, ಸಮಾನಾಂತರ ಪಾರ್ಕಿಂಗ್, ಜಿಗ್–ಜಾಗ್ ಡ್ರೈವಿಂಗ್, ‘ಗ್ರೇಡಿಯಂಟ್ ಟೆಸ್ಟ್’ಗಳಿಗೆ ಒಳಪಡಬೇಕು.
- ನಾಲ್ಕು ಚಕ್ರಗಳ ವಾಹನದ ಚಾಲನಾ ಪರೀಕ್ಷೆಗೆ ಯಾವುದೇ ಎಲೆಕ್ಟ್ರಿಕ್ ಕಾರುಗಳು ಅಥವಾ ಸ್ವಯಂ ಚಾಲಿತ (ಗೇರು ರಹಿತ) ಕಾರುಗಳನ್ನು ಪರಿಗಣಿಸುವುದಿಲ್ಲ.
- ಪರೀಕ್ಷೆಗೆ ಬಳಸುವ ವಾಹನಗಳಲ್ಲಿ ಡ್ಯಾಶ್‌ಬೋರ್ಡ್ ಕ್ಯಾಮೆರಾ ಮತ್ತು ವಾಹನದ ಸ್ಥಳ ಟ್ರ್ಯಾಕಿಂಗ್ ಸಾಧನ ಕಡ್ಡಾಯವಾಗಿ ಅಳವಡಿಸಿರಬೇಕು.
- ಚಾಲನಾ ಬೋಧಕರು ಕ್ಯಾಮೆರಾವನ್ನು ಬಳಸಿಕೊಂಡು ಪರೀಕ್ಷೆಯನ್ನು ರೆಕಾರ್ಡ್ ಮಾಡಬೇಕು ಮತ್ತು ಮೆಮೊರಿ ಕಾರ್ಡ್ ಅನ್ನು ಮೋಟಾರು ವಾಹನಗಳ ಇನ್‌ಸ್ಪೆಕ್ಟರ್ ಬಳಿಕೊಡಬೇಕು.
- ಮೆಮೊರಿ ಕಾರ್ಡ್ ದತ್ತಾಂಶವನ್ನು ಎಂವಿಡಿ ಸಿಸ್ಟಮ್‌ಗೆ ವರ್ಗಾಯಿಸಲಾಗುತ್ತದೆ. ವಾಹನ ಮಾಲೀಕರು ಮುಂದಿನ ಮೂರು ತಿಂಗಳವರೆಗೆ ಈ ಮೆಮೊರಿ ಕಾರ್ಡ್ ಅನ್ನು ಹಾಗೇಯೇ ಉಳಿಸಿರಬೇಕು.



ಸುಭಾಷಿತ

ಸರಳತೆ ಎಂಬುದು ಉತ್ಕೃಷ್ಟತೆಯ ಅಂತಿಮ ಹಂತ.
-ಲಿಯೊನಾರ್ಡೊ ಡಾ ವಿಂಚಿ

ಪ್ರಜ್ವಲ್ ರೇವಣ್ಣ ಪ್ರಕರಣ: ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ಕೊಡಿಸಿ

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ನಡೆಸಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣವು ರಾಜ್ಯ ಹಿಂದೆಂದೂ ಕಾಣದಂಥದ್ದು. ಪ್ರಜ್ವಲ್ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಲೈಂಗಿಕ ದೃಶ್ಯಾವಳಿಯ ವಿಡಿಯೊಗಳ ಪ್ರಮಾಣವನ್ನು ಮತ್ತು ಅವುಗಳಿಂದ ಆಗಬಹುದಾದ ಪರಿಣಾಮಗಳನ್ನು ಗಮನಿಸಿದರೆ, ಇಡೀ ಪ್ರಕರಣವು ಆಘಾತಕಾರಿಯೂ ಹೌದು, ಮನಸ್ಸನ್ನು ತೀವ್ರವಾಗಿ ಕಲಕುವಂಥದ್ದೂ ಹೌದು ಎಂದು ಅನ್ನಿಸುತ್ತದೆ. ಪ್ರಜ್ವಲ್ ಅವರು ಹಾಸನ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಅವರು ಇದ್ದಾರೆ ಎನ್ನಲಾದ ಲೈಂಗಿಕ ದೃಶ್ಯಗಳಿರುವ ವಿಡಿಯೊಗಳನ್ನು ಸರಿಸುಮಾರು ಒಂದು ವಾರದಿಂದ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ವ್ಯಾಪಕವಾಗಿ ಈ ವಿಡಿಯೊಗಳು ಇರುವ ಪೆನ್‌ಡ್ರೈವ್‌ಗಳನ್ನು ರಾಜ್ಯದಲ್ಲಿ ಮೊದಲ ಹಂತದ ಮತದಾನ ನಡೆಯುವುದಕ್ಕೂ ಕೆಲವು ದಿನಗಳ ಮೊದಲೇ ಹಾಸನ ಕ್ಷೇತ್ರದಲ್ಲಿ ಬಹಳ ವ್ಯಾಪಕ ಪ್ರಮಾಣದಲ್ಲಿ ಹಂಚಲಾಗಿತ್ತು ಎಂದು ವರದಿಯಾಗಿದೆ. ಈಗ ಪ್ರಜ್ವಲ್ ಅವರು ದೇಶದಿಂದ ಹೊರಹೋಗಿದ್ದಾರೆ. ಅವರನ್ನು ಜೆಡಿಎಸ್ ಪಕ್ಷದಿಂದ ಅಮಾನತು ಮಾಡಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಮೇ 7ರಂದು ನಡೆಯುವ ಮತದಾನದಲ್ಲಿ ಮೈತ್ರಿಕೂಟದ ಅಭ್ಯರ್ಥಿಗಳಿಗೆ ಹಿನ್ನಡೆ ಆಗದಿರಲಿ ಎಂಬ ಉದ್ದೇಶದಿಂದ ತ್ವರಿತವಾಗಿ ಅಮಾನತು ಕ್ರಮ ಕೈಗೊಂಡಿರಬಹುದು. ಪ್ರಜ್ವಲ್ ಅವರ ತಂದೆ, ಜೆಡಿಎಸ್ ನಾಯಕ ಎಚ್.ಡಿ.ರೇವಣ್ಣ ಅವರ ವಿರುದ್ಧವೂ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ದೂರು ದಾಖಲಾಗಿದೆ. ಈ ದೂರುಗಳ ತನಿಖೆಗೆ ರಾಜ್ಯ ಸರ್ಕಾರವು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.



ದೂರುಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸುವ ಕೆಲಸ ತ್ವರಿತವಾಗಿ ಆಗಬೇಕಾಗಿದೆ

ಹಲವು ರಾಜಕಾರಣಿಗಳಲ್ಲಿ 'ನಾವು ಪ್ರಶ್ನಾತೀತರು' ಎಂಬ ಮನೋಭಾವ ಇರುತ್ತದೆ. ದುರಹಂಕಾರವೂ ಇರುತ್ತದೆ ಎಂಬ ಮಾತಿದೆ. ಪ್ರಜ್ವಲ್ ರೇವಣ್ಣ ಅವರ ಮೇಲಿನ ಆರೋಪಗಳು ಸಾಬೀತಾದಲ್ಲಿ 'ಇಂತಹ ಮಾತುಗಳಿಗೆ ಮತ್ತಷ್ಟು ಪುಷ್ಟಿ ಸಿಗುತ್ತದೆ. ಆರೋಪ ದೃಢಪಟ್ಟರೆ, ಅಧಿಕಾರ ಹಾಗೂ ಹಣದ ತಾಕತ್ತು ಇರುವ, ದೊಡ್ಡವರ ಮನೆಯ ದಾರಿ ತಪ್ಪಿದ ಮಗ ಎಂದಷ್ಟೇ ಪ್ರಜ್ವಲ್ ಬಗ್ಗೆ ಹೇಳಲು ಸಾಧ್ಯವಿಲ್ಲ. ಇಂತಹ ಕೃತ್ಯ ಎಸಗುವವರು ಪುರುಷಪ್ರಧಾನ ಹಾಗೂ ಸ್ತ್ರೀದ್ವೇಷದ ಮನಸ್ಥಿತಿ ಹೊಂದಿರುತ್ತಾರೆ, ಮಹಿಳೆಯರಿಗೆ ಇರುವ ಗೌರವಯುತವಾದ ಸ್ಥಾನದ ಬಗ್ಗೆ ಬಾಯುಪಚಾರಕ್ಕೆ ಒಂದಿಷ್ಟು ಮಾತನಾಡಿದರೂ ಮಹಿಳೆಯರನ್ನು ಭೋಗದ ವಸ್ತುಗಳನ್ನಾಗಿ ಕಾಣುವ ಮನಸ್ಥಿತಿ ಹೊಂದಿರುತ್ತಾರೆ. ಅದೇನೇ ಇದ್ದರೂ ಪ್ರಜ್ವಲ್ ಮೇಲೆ ಬಂದಿರುವ ಆರೋಪಗಳು ಗಂಭೀರ ಸ್ವರೂಪದವು. ಆರೋಪಗಳಲ್ಲಿ ನಿಜವೇ ಅಡಗಿದ್ದಲ್ಲಿ, ಅಧಿಕಾರದಲ್ಲಿ ಇರುವ ಮನುಷ್ಯ ಕೆಲವು ಸಂದರ್ಭ[illegible] ಎಂಬುದನ್ನು ಅವು ತೋರಿಸುತ್ತವೆ. ಅಲ್ಲದೆ, ಅಷ್ಟೊಂದು ಸಂಖ್ಯೆಯ ವಿಡಿಯೊಗಳು, ಆ ವಿಡಿಯೊಗಳಲ್ಲಿ ಇರುವ ಮಹಿಳೆಯರನ್ನು ಬ್ಲ್ಯಾಕ್‌ಮೇಲ್‌ಗೆ ಗುರಿಪಡಿಸುವ ಆತಂಕ ಅಪಾಯಕಾರಿ ಸಾಧ್ಯತೆಯನ್ನೂ ಹೇಳುತ್ತವೆ.

ಆರೋಪಗಳ ಸ್ವರೂಪವನ್ನು ಗಮನಿಸಿದರೆ, ಯಾವ ರಾಜಕೀಯ ಪಕ್ಷವೂ ಈಗ ಪ್ರಜ್ವಲ್ ಅವರ ಸಮರ್ಥನೆಗೆ ಮುಂದಾಗಲಾರದು, ಅವರನ್ನು ತನ್ನವ ಎಂದು ಹೇಳಿಕೊಳ್ಳಲಾರದು. ಪ್ರಜ್ವಲ್ ಅವರನ್ನು ಮೈತ್ರಿ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸುವಲ್ಲಿ ಇರುವ ಅಪಾಯದ ಬಗ್ಗೆ ಬಿಜೆಪಿಯ ಹಾಸನ ಜಿಲ್ಲಾ ಪ್ರಮುಖರೊಬ್ಬರು ಪಕ್ಷದ ರಾಜ್ಯ ನಾಯಕತ್ವವನ್ನು ಎಚ್ಚರಿಸಿದ್ದರು, ಆದರೆ ಬಿಜೆಪಿಯ ರಾಜ್ಯ ಘಟಕದ ನಾಯಕರು ಆ ಎಚ್ಚರಿಕೆಯನ್ನು ಉಪೇಕ್ಷಿಸಿದರು ಎನ್ನಲಾಗಿದೆ. ಅಷ್ಟೇ ಅಲ್ಲ, ಪ್ರಧಾನಿ ನರೇಂದ್ರ ಮೋದಿ ಅವರು ಪ್ರಜ್ವಲ್ ಅವರ ಪರವಾಗಿ ಪ್ರಚಾರವನ್ನೂ ನಡೆಸಿದರು. [illegible] ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಗುರಿಯಾಗಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಪಕ್ಷದಲ್ಲಿ ಇಂದಿಗೂ ಪ್ರಭಾವಿಯಾಗಿಯೇ ಇದ್ದಾರೆ. ಈ ವಿಚಾರದಲ್ಲಿ ಬೇರೆ ಪಕ್ಷಗಳ ಹಿನ್ನೆಲೆಗಳೇನೂ ಬಹಳ ಉತ್ತಮವಾಗಿಲ್ಲ. ಈಗ ಕೆಲವು ಮಹಿಳೆಯರು ತಾವು ಪ್ರಜ್ವಲ್ ಅವರಿಂದ ದೌರ್ಜನ್ಯಕ್ಕೆ ಗುರಿಯಾಗಿರುವುದಾಗಿ ದೂರು ನೀಡಿದ್ದಾರೆ. ದೌರ್ಜನ್ಯಕ್ಕೆ ಗುರಿಯಾದ ಹಲವು ಮಹಿಳೆಯರು ಯಾವುದೇ ದೂರು ನೀಡದೆ ಇರುವ ಸಾಧ್ಯತೆಯೂ ಇದೆ. ಈಗ ಸರ್ಕಾರವು ದೂರುಗಳ ಬಗ್ಗೆ ಸೂಕ್ತವಾದ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷಿಸಿ, ದೌರ್ಜನ್ಯಕ್ಕೆ ಗುರಿಯಾದವರಿಗೆ ನ್ಯಾಯ ಕೊಡಿಸುವ ಕೆಲಸವನ್ನು ತ್ವರಿತವಾಗಿ ಮಾಡಬೇಕಿದೆ.

ದಿನದ ಟ್ವೀಟ್

ಅಂತೂ ಇಂತೂ ಮಳೆ ಬಂತು!



ಬೆಂಗಳೂರಿನ ವಸಂತನಗರದಲ್ಲಿ 165 ದಿನಗಳ ನಂತರ ಮಳೆಯ ಮೊದಲ ಹನಿಗಳ ಸಿಂಚನ. ಹೌದು, ನಿರಂತರವಾದ ಬಿಸಿ ಮತ್ತು ಶುಷ್ಕ ದಿನಗಳು ಬೇಗನೇ ಮುಗಿದುಹೋಗಲಿ– ಈ ವರ್ಷಕ್ಕೇ ಕೊನೆಗೊಳ್ಳಲಿ. ಹವಾಮಾನ ಬದಲಾವಣೆಯ ಅನಿರೀಕ್ಷಿತಗಳನ್ನು ಎದುರಿಸಲು ನಾವು ಪೂರ್ವಭಾವಿಯಾಗಿ ಸಿದ್ಧಗೊಳ್ಳಬೇಕಿದೆ ಮತ್ತು ಯೋಜಿಸಬೇಕಿದೆ.

ರಾಜ್‌ಕುಮಾರ್ ದುಗಾರ್, ಸಂಚಾಲಕ, ಸಿಟಿಜನ್ಸ್ ಫಾರ್ ಸಿಟಿಜನ್ಸ್

ಕಿಡಿನುಡಿ



ಆಕೆ ಹಾಗೆ ಹೇಳುತ್ತಾಳೆಂದರೆ, ಅವಳ ನಗುವಿನ ಹಿಂದಿರುವ ನೋವು ಮತ್ತು ವ್ಯಥೆ ತಿಳಿಯುತ್ತದೆ! ಓದುವುದರಲ್ಲಿ ಟಾಪರ್ ಆದವಳು ನಡತೆಯಲ್ಲೂ ಟಾಪರ್ ಆಗಿದ್ದಾಳೆ... ಅವಳು ಹಂಸಪಕ್ಷಿಯಂತೆ ಏನು ಬೇಕೋ ಅದನ್ನು ಮಾತ್ರ ಒಳಗೆಳೆದುಕೊಂಡು ಬೇಡವಾದದ್ದನ್ನು ಹೊರಗೆಸೆಯುತ್ತಾಳೆ ಎಂದು ನಂಬುತ್ತೇನೆ.

(ಉತ್ತರಪ್ರದೇಶದ ಎಸ್‌ಎಸ್‌ಎಲ್‌ಸಿ ಟಾಪರ್ ಪ್ರಾಚಿ ನಿಗಮ್, ತನ್ನ ಮುಖದ ಮೇಲಿನ ಕೂದಲಿನ ಕಾರಣಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್‌ಗೆ ಒಳಗಾದ ಬಳಿಕ, ತನಗೆ ಕಡಿಮೆ ಅಂಕ ಬಂದಿದ್ದರೆ ಚೆನ್ನಾಗಿರುತ್ತಿತ್ತು, ಆಗ ತಾನು ಹೀಗೆ ಟ್ರೋಲ್‌ಗೆ ಒಳಗಾಗುತ್ತಿರಲಿಲ್ಲ ಎಂದು ಕಣ್ಣೀರಿಟ್ಟಿರುವುದಕ್ಕೆ ಪ್ರತಿಕ್ರಿಯೆ)

ಉಮಾಮಹೇಶ್ವರಿ ಶ್ರೀಧರ್

25 ವರ್ಷಗಳ ಹಿಂದೆ

ಸೋಮವಾರ, 3-5-1999

● **ಚುನಾವಣೆ ದಿನಾಂಕ: ಪಕ್ಷಗಳ ಜತೆ ಇಂದು ಆಯೋಗ ಸಮಾಲೋಚನೆ**

ನವದೆಹಲಿ, ಮೇ 2 (ಯುಎನ್‌ಐ, ಪಿಟಿಐ)– ಆರು ರಾಷ್ಟ್ರೀಯ ಪಕ್ಷಗಳು ಮತ್ತು 48 ಪ್ರಾದೇಶಿಕ ಪಕ್ಷಗಳ ಜತೆ ನಾಳೆ ಚರ್ಚೆ ನಡೆಸಿದ ನಂತರ ಚುನಾವಣಾ ಆಯೋಗ ಮಧ್ಯಂತರ ಚುನಾವಣೆಯ ದಿನಾಂಕಗಳನ್ನು ಗೊತ್ತುಪಡಿಸಲಿದೆ ಎಂದು ಚುನಾವಣಾ ಆಯುಕ್ತ ಜಿ.ವಿ.ಜಿ. ಕೃಷ್ಣಮೂರ್ತಿ ಇಂದು ಪತ್ರಕರ್ತರಿಗೆ ತಿಳಿಸಿದರು.

ದೇಶದಲ್ಲಿ ಅಕ್ಟೋಬರ್ ತಿಂಗಳವರೆಗೆ ಪ್ರತಿಕೂಲ ವಾತಾವರಣ ಇರುವುದರಿಂದ ಚುನಾವಣೆಯ ದಿನಾಂಕಗಳನ್ನು ನಿಗದಿ ಪಡಿಸುವುದು ಅತ್ಯಂತ ಕಷ್ಟವಾಗಿದೆ. ಜನರಿಗೆ ಕನಿಷ್ಠ ಪ್ರಮಾಣದಲ್ಲಿ ಅನನುಕೂಲವಿದ್ದಾಗ ಚುನಾವಣೆ ನಡೆಸಲಾಗುವುದು ಎಂದರು.

ಚುನಾವಣಾ ಆಯೋಗ ಇಂದು ಸಭೆ ನಡೆಸಿದ ನಂತರ ಮಾತನಾಡಿದ ಅವರು, ನಾಳೆ ರಾಜಕೀಯ ಪಕ್ಷಗಳ ಜತೆ ಚರ್ಚಿಸಿದ ನಂತರ ಆಯೋಗದ ಮೂವರು ಸದಸ್ಯರು ಚುನಾವಣಾ ದಿನಾಂಕ ನಿಗದಿಪಡಿಸುವ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದರು.

● **ದೇವನಹಳ್ಳಿ ವಿಮಾನ ನಿಲ್ದಾಣ ಇಂದು ತಿಳಿವಳಿಕೆ ಒಪ್ಪಂದಕ್ಕೆ ಸಹಿ**

ಬೀದರ್, ಮೇ 2– ದೇವನಹಳ್ಳಿ ಬಳಿ ಉದ್ದೇಶಿತ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಸಂಬಂಧ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ನಾಳೆ ಬೆಂಗಳೂರಿನಲ್ಲಿ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದು ಕೇಂದ್ರ ವಿಮಾನಯಾನ ಖಾತೆ ಸಚಿವ ಅನಂತಕುಮಾರ್ ಇಂದು ಇಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 3-5-1974

● **ಜಾರ್ಜ್ ಫರ್ನಾಂಡಿಸ್ ಬಂಧನ: ರೈಲ್ವೆ ಮುಷ್ಕರಕ್ಕೆ ನಾಂದಿ**

ನವದೆಹಲಿ, ಮೇ 2– ಅಖಿಲ ಭಾರತ ರೈಲ್ವೆ ನೌಕರರ ಫೆಡರೇಷನ್ನಿನ ಅಧ್ಯಕ್ಷ ಜಾರ್ಜ್ ಫರ್ನಾಂಡಿಸ್ ಅವರನ್ನು ಲಖನೌ ರೈಲು ನಿಲ್ದಾಣದಲ್ಲಿ ಇಂದು ಬೆಳಗಿನ ಜಾವದ ವೇಳೆಯಲ್ಲಿ ಬಂಧಿಸಲಾಯಿತು.

ಆಂತರಿಕ ಭದ್ರತಾ ಶಾಸನದ ಮೇರೆಗೆ ಬಂಧಿಸಲಾಗಿರುವ ಫರ್ನಾಂಡಿಸ್ ಅವರನ್ನು ದೆಹಲಿಗೆ ಕರೆತರಲಾಗಿದೆ. ದೆಹಲಿ ಆಡಳಿತವು ನೀಡಿದ ವಾರಂಟ್ ಮೇರೆಗೆ ದೆಹಲಿ ಪೊಲೀಸರು ಅವರನ್ನು ಬಂಧಿಸಿದರು ಎಂದು ಉತ್ತರ ಪ್ರದೇಶ ಸರ್ಕಾರದ ಗೃಹಖಾತೆ ಕಾರ್ಯದರ್ಶಿ ಆರ್.ಕೆ. ಕೌಲ್ ಅವರು ಲಖನೌನಲ್ಲಿ ತಿಳಿಸಿದರು.

ಮೇ ದಿನಾಚರಣೆ ಸಂಬಂಧದಲ್ಲಿ ನಿನ್ನೆ ರಾತ್ರಿ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಬಳಿಕ ಲಖನೌ ರೈಲು ನಿಲ್ದಾಣದ ವಿಶ್ರಾಂತಿ ಕೊಠಡಿಯಲ್ಲಿ ತಂಗಿದ್ದ ಫರ್ನಾಂಡಿಸ್ ಅವರನ್ನು ಬಂಧಿಸಲಾಯಿತು ಎಂದು ಎ.ಐ.ಆರ್.ಎಫ್.ನ ಪ್ರಧಾನ ಕಾರ್ಯದರ್ಶಿ ಪ್ರಿಯ ಗುಪ್ತಾ ಹೇಳಿದರು.

● **ಭದ್ರಾವತಿ ಕಾರ್ಖಾನೆಯಲ್ಲಿ ಯಂತ್ರೋಪಕರಣ ನಾಪತ್ತೆ; ವಿಧಾನಸಭೆಯಲ್ಲಿ ಆರೋಪ**

ಬೆಂಗಳೂರು, ಮೇ 2– ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಾಗಿ ಖರೀದಿಸಿದ್ದ 12 ಲಕ್ಷ ರೂ. ಬೆಲೆಯ ಯಂತ್ರದಲ್ಲಿ ಒಂದೆರಡು ಬಿಡಿಭಾಗ ಬಿಟ್ಟರೆ ಯಂತ್ರೋಪ ಕರಣಗಳೆಲ್ಲ ನಾಪತ್ತೆಯಾಗಿವೆ ಎಂದು ವಿಧಾನ ಸಭೆಯಲ್ಲಿ ಇಂದು ಪಕ್ಷೇತರ ಸದಸ್ಯ ಶ್ರೀ ಎಸ್. ಬಂಗಾರಪ್ಪ ಅವರು ಆಪಾದಿಸಿದರು.

ಭದ್ರಾವತಿ ಕಾರ್ಖಾನೆ ನಷ್ಟ ಅನುಭವಿಸಲು ಕಾರ್ಖಾನೆಯ ಉನ್ನತ ಅಧಿಕಾರಿಗಳು ನಡೆಸಿದ ಅವ್ಯವಹಾರವೇ ಕಾರಣ. ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಪಡಿಸಿದರು.

ಹಿಂದಿನ ಎರಡು ಚುನಾವಣೆಗಳಿಗಿಂತ ಈ ಬಾರಿ ವಿಭಿನ್ನ ಸ್ಥಿತಿ ಎದುರಿಸುತ್ತಿದ್ದಾರೆ ಮೋದಿ

ನಾಮಬಲದಿಂದ ಗೆಲ್ಲಬೇಕಾದ ಸವಾಲು



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

'ಸಾಹೇಬರು ಹೆದರಿದ್ದಾರೆ' ಎನ್ನುವುದು ಬರೀ ಚುನಾವಣಾ ಪ್ರಚಾರದ ಜನಪ್ರಿಯ ಹಾಡಿನ ಸಾಲುಗಳೆಂದು ತಳ್ಳಿಹಾಕಬೇಕಾಗಿಲ್ಲ. 'ಸಾಹೇಬರ' ಇತ್ತೀಚಿನ ಭಾಷಣಗಳಲ್ಲಿಯೇ ಈ ಹೆದರಿಕೆಯ ಸುಳಿವು ಇದೆ. 'ಸಾಹೇಬರು' ಇದ್ದಕ್ಕಿದ್ದಹಾಗೆ ಮೋದಿ ಗ್ಯಾರಂಟಿಯ 'ವಿಕಾಸ ಪುರುಷ'ನ ಅವತಾರವನ್ನು ಕಳಚಿ ಪಕ್ಕಕ್ಕಿಟ್ಟು, ಕೋಮುವಾದಿ ಅಜೆಂಡಾದ 'ಹಿಂದೂ ಹೃದಯ ಸಾಮ್ರಾಟ'ನ ಅವತಾರದಲ್ಲಿ ಕಾಣಿಸಿಕೊಂಡಿರುವುದಕ್ಕೆ ಈ ಹೆದರಿಕೆಯೇ ಕಾರಣ. ಹೀಗೆ ಅಂದಮಾತ್ರಕ್ಕೆ ಹೆದರಿರುವ 'ಸಾಹೇಬರು' ಖಂಡಿತ ಸೋಲುತ್ತಾರೆ ಎನ್ನುವ ಷರಾವನ್ನು ಈಗಲೇ ಬರೆಯಬೇಕಾಗಿಲ್ಲ.

ಹತ್ತು ವರ್ಷಗಳ ಆಡಳಿತ ವಿರೋಧಿ ಅಲೆಯೊಂದೇ ಈ ಹೆದರಿಕೆಗೆ ಕಾರಣ ಅಲ್ಲ. ಹಿಂದಿನ ಎರಡು ಚುನಾವಣೆಗಳಿಗೆ ಹೋಲಿಸಿದರೆ ಇದೇ ಮೊದಲ ಬಾರಿ 'ಸಾಹೇಬರು' ನರೇಂದ್ರ ದಾಮೋದರದಾಸ್ ಮೋದಿ ಎನ್ನುವ ತಮ್ಮ ನಾಮಬಲದಿಂದಲೇ ಚುನಾವಣೆಯನ್ನು ಗೆಲ್ಲಬೇಕಾದ ಸವಾಲನ್ನು ಎದುರಿಸುತ್ತಿದ್ದಾರೆ. 2014 ಮತ್ತು 2019ರಲ್ಲಿ ನಡೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯ ಗೆಲುವಿಗೆ 'ಮೋದಿ ಮೋಡಿ', 'ಮೋದಿ ಮ್ಯಾಜಿಕ್' ಕಾರಣ ಎಂದು ಅವರ ಪ್ರೊಪಗಾಂಡ ತಂಡ ಬಿಂಬಿಸಿ ಯಶಸ್ಸು ಕಂಡರೂ ಆ ಗೆಲುವಿಗೆ ಮೋದಿ ನಾಮಬಲ ಒಂದೇ ಕಾರಣ ಆಗಿರಲಿಲ್ಲ.

2014ರ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರೇ ಪ್ರಧಾನಮಂತ್ರಿ ಅಭ್ಯರ್ಥಿ ಎಂದು ಬಿಜೆಪಿ ಘೋಷಿಸಿದ್ದು ನಿಜವಾದರೂ ಆಗಿನ ಗೆಲುವಿನಲ್ಲಿ ಆ ಚುನಾವಣೆಯ ಪೂರ್ವದಲ್ಲಿ ದೇಶದಾದ್ಯಂತ ಸಂಚಲನವನ್ನು ಉಂಟುಮಾಡಿದ್ದ ಎರಡು ಆಂದೋಲನಗಳ ಪಾತ್ರವೂ ಇತ್ತು. ಮೊದಲನೆಯದು, ಅಣ್ಣಾ ಹಜಾರೆ- ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ನಡೆದ ಭ್ರಷ್ಟಾಚಾರ ವಿರುದ್ಧದ ಆಂದೋಲನ. ಎರಡನೆಯದು, ನಿರ್ಭಯಾ ಅತ್ಯಾಚಾರ ವಿರುದ್ಧದ ಆಂದೋಲನ.

ಈ ಎರಡು ಆಂದೋಲನಗಳು ಪಕ್ಷಾತೀತವಾಗಿ ನಡೆದಿದ್ದವು ಎಂದು ಮೇಲ್ನೋಟಕ್ಕೆ ಬಿಂಬಿತವಾಗಿದ್ದರೂ ಇವುಗಳಿಗೆ ಸಂಘ ಪರಿವಾರ ಆರ್ಥಿಕ ಮತ್ತು ಮಾನವ ಸಂಪನ್ಮೂಲವನ್ನು ವ್ಯವಸ್ಥಿತವಾಗಿ ಒದಗಿಸಿದ್ದು ಈಗ ಗುಟ್ಟಾಗಿ ಉಳಿದಿಲ್ಲ. ಈ ಕಾರಣದಿಂದಾಗಿಯೇ ಈ ಆಂದೋಲನಗಳ ಯಶಸ್ಸನ್ನು ಬಹಳ ಸುಲಭವಾಗಿ ರಾಜಕೀಯವಾಗಿ ಬಳಸಿಕೊಳ್ಳಲು ಬಿಜೆಪಿಗೆ ಸಾಧ್ಯವಾಯಿತು. ಈ ಬೆಳವಣಿಗೆಗಳಲ್ಲಿ ತನ್ನ ಕನಸನ್ನು ನನಸು ಮಾಡುವ ಅವಕಾಶವನ್ನು ಕಂಡ ನರೇಂದ್ರ ಮೋದಿಯವರಿಗೆ ದೆಹಲಿ ಹಾದಿಯನ್ನು ಸುಗಮ ಮಾಡಿಕೊಟ್ಟದ್ದು ಲಾಲ್ ಕೃಷ್ಣ ಅಡ್ವಾಣಿ ಮತ್ತು ಅವರ ಶಿಷ್ಯರ ತಂಡ. ಅರುಣ್ ಜೇಟ್ಲಿ, ವೆಂಕಯ್ಯ ನಾಯ್ಡು, ಸುಷ್ಮಾ ಸ್ವರಾಜ್ ಮತ್ತು ಅನಂತಕುಮಾರ್ ಅವರನ್ನೊಳಗೊಂಡ ಅಡ್ವಾಣಿ ಶಿಷ್ಯ ಬಳಗವನ್ನು 'ದೆಹಲಿ-4' ಎಂದು ಆ ಕಾಲದಲ್ಲಿ ಕರೆಯಲಾಗುತ್ತಿತ್ತು. ತಾನಲ್ಲದಿದ್ದರೆ ತನ್ನ ಶಿಷ್ಯ ಎಂಬ ತೀರ್ಮಾನಕ್ಕೆ ಬಂದಿದ್ದ ಅಡ್ವಾಣಿಯವರ ಬೆನ್ನಿಗೆ ಈ ದೆಹಲಿ-4 ತಂಡ ನಿಂತಿತ್ತು.

ಪಕ್ಷದೊಳಗೆ ಮೋದಿಯವರಿಗೆ ಯಾವುದೇ ವಿರೋಧ ಹುಟ್ಟದಂತೆ ಕಾಪಾಡಿ ಅವರು ಪ್ರಧಾನಿ ಪಟ್ಟದಲ್ಲಿ ಕೂರಲು ಸಹಕರಿಸಿದ್ದ ಅಡ್ವಾಣಿ ಮತ್ತು ಅವರ ಶಿಷ್ಯರ ತಂಡದ ಗತಿ ಏನಾಯಿತು ಎನ್ನುವ ವಿವರ ದೇಶದ ಮುಂದೆ ಇದೆ. ಮೋದಿಯವರು ಅಡ್ವಾಣಿಯವರನ್ನು ವಾನಪ್ರಸ್ಥಾಶ್ರಮಕ್ಕೆ ಕಳಿಸಿದರು, ವೆಂಕಯ್ಯ ನಾಯ್ಡು ಅವರನ್ನು ಉಪರಾಷ್ಟ್ರಪತಿ ಮಾಡಿದರು, ಜೇಟ್ಲಿ, ಸುಷ್ಮಾ ಮತ್ತು ಅನಂತಕುಮಾರ್ ಅವರು ಇಹಲೋಕವನ್ನೇ ತ್ಯಜಿಸಿ ಹೋದರು. ಮೋದಿ ಹಾದಿಯಲ್ಲಿ ಎದುರಾಳಿಗಳೇ ಇಲ್ಲ.

2019ರ ಲೋಕಸಭಾ ಚುನಾವಣೆಯ ಪೂರ್ವದಲ್ಲಿ ಒಂದು ಪ್ರಬಲವಾದ ಆಡಳಿತ ವಿರೋಧಿ ಅಲೆ ಇತ್ತು. ನೋಟು ರದ್ದತಿಯಿಂದ ನೊಂದ ಜನರ ವಿರೋಧವೂ ಇತ್ತು. ಆಗಲೂ ಮೋದಿ ನಾಮಬಲದ ಕುದುರೆ ಓಡುತ್ತಿತ್ತಾದರೂ ಅದರ ಬಲದಿಂದಲೇ ದೆಹಲಿಯಲ್ಲಿ ಗದ್ದುಗೆ ಏರುವ ವಿಶ್ವಾಸ ನರೇಂದ್ರ ಮೋದಿಯವರಿಗೂ ಇರಲಿಲ್ಲ. ಲೋಕಸಭಾ ಚುನಾವಣೆಯ ಮೂರು ತಿಂಗಳ ಮೊದಲು ಪುಲ್ವಾಮದಲ್ಲಿ ಸೈನಿಕರನ್ನು ಕೊಂಡೊಯ್ಯುತ್ತಿದ್ದ ವಾಹನಗಳ ಮೇಲೆ ನಡೆದ ದಾಳಿಯು ದೇಶದ ರಾಜಕೀಯ ಚರ್ಚೆಯ ದಿಕ್ಕನ್ನೇ ಬದಲಾಯಿಸಿಬಿಟ್ಟಿತ್ತು. ಬಿಜೆಪಿಗೆ ಅತಿಪ್ರಿಯವಾದ 'ಭಾರತ-ಪಾಕಿಸ್ತಾನ', 'ದೇಶಭಕ್ತಿ-ದೇಶದ್ರೋಹ'ದ ಕಥನಗಳು ಚುನಾವಣಾ ಪ್ರಚಾರದ ಪ್ರಮುಖ ಅಸ್ತ್ರಗಳಾಗಿದ್ದವು. ನಿರೀಕ್ಷಿಸಿದಂತೆ ಬಿಜೆಪಿ ಮುನ್ನೂರರ ಗಡಿ ದಾಟಿತ್ತು.

2024ರ ಲೋಕಸಭಾ ಚುನಾವಣೆಯ ಇಲ್ಲಿಯವರೆಗಿನ ಪ್ರಚಾರವನ್ನು ಗಮನಿಸಿದರೆ, ಮೋದಿಯವರ ನಾಮಬಲದ ಹೊರತಾಗಿ ಬೇರೆ ಯಾವ ಹೊಸ ವಿಷಯಗಳೂ ಬಿಜೆಪಿಯನ್ನು ಮುನ್ನೂರರ ಗಡಿ ಸಮೀಪವೂ ಕೊಂಡೊಯ್ಯುತ್ತಿರುವಂತೆ ಕಾಣುತ್ತಿಲ್ಲ. ಇದರಿಂದಾಗಿ ಇದೇ ಮೊದಲ ಬಾರಿ ಮೋದಿಯವರು ಬರೀ ತಮ್ಮ ನಾಮಬಲದಿಂದಲೇ ಚುನಾವಣೆಯನ್ನು ಗೆಲ್ಲಬೇಕಾದ ಹೊಸ ಸವಾಲನ್ನು ಎದುರಿಸುತ್ತಿದ್ದಾರೆ. ಈ ಚುನಾವಣೆಯಲ್ಲಿ ರಾಮಮಂದಿರ ನಿರ್ಮಾಣದ ಸಾಧನೆಯೇ ಚುನಾವಣೆಯನ್ನು ಗೆಲ್ಲಿಸಿಕೊಡಲಿದೆ ಎಂಬ ಪ್ರಚಾರವನ್ನು ಬಿಜೆಪಿಯೇ ನಂಬುವ ಸ್ಥಿತಿಯಲ್ಲಿಲ್ಲ.

ಹಿಂದುತ್ವ ಈಗಲೂ ಬಿಜೆಪಿಯ ಪ್ರಮುಖ ಅಸ್ತ್ರವೆನ್ನುವುದು ನಿಜ. ಆದರೆ ಈ ಹಿಂದುತ್ವಕ್ಕೆ ಎರಡು ಮುಖಗಳಿವೆ. ಒಂದು, ತಥಾಕಥಿತ ಹಿಂದೂ ಸಂಸ್ಕೃತಿಯ ರಕ್ಷಣೆ. ಇನ್ನೊಂದು, ಮುಸ್ಲಿಮರ ಬಗೆಗಿನ ದ್ವೇಷ. ಈ ಚುನಾವಣೆಯಲ್ಲಿ ರಾಮಮಂದಿರ ನಿರ್ಮಾಣದ



ಸಾಧನೆಯೂ ಸೇರಿದಂತೆ ಹಿಂದೂ ಸಂಸ್ಕೃತಿ ರಕ್ಷಣೆಯ ಹೇಳಿಕೆಗಳ ಬಗ್ಗೆ ಜನ ನಿರಾಸಕ್ತರಾಗಿದ್ದಾರೆ. ಆದರೆ ಮುಸ್ಲಿಂ ದ್ವೇಷದ ಮಾತುಗಳಿಗೆ ಕಿವಿಯಾಗುವ ಮತ್ತು ಅದರಿಂದ ಪ್ರಚೋದನೆಗೆ ಒಳಗಾಗುವವರ ಸಂಖ್ಯೆ ಕಡಿಮೆಯೇನಿಲ್ಲ.

ನರೇಂದ್ರ ಮೋದಿಯವರು ಹತ್ತು ವರ್ಷಗಳ ಆಡಳಿತದಲ್ಲಿ ವಿಫಲರಾಗಿರಬಹುದು. ಆದರೆ ಅವರು ಈಗಲೂ ಮುಸ್ಲಿಮರ ವಿಷಯದಲ್ಲಿ ರಾಜಿಯಾಗದ 56 ಇಂಚಿನ ಎದೆಯ ಹಿಂದೂ ಹೃದಯ ಸಾಮ್ರಾಟ ಎಂದು ನಂಬಿದವರಿದ್ದಾರೆ.


'ಮೋದಿ ಗ್ಯಾರಂಟಿ' ಎಂಬ ಅಭಿವೃದ್ಧಿಯ ಅಜೆಂಡಾಕ್ಕೆ ಒತ್ತು ನೀಡಿ ಪ್ರಚಾರ ಶುರು ಮಾಡಿದರೂ ಅದಕ್ಕೆ ನಿರೀಕ್ಷಿತ ಪ್ರತಿಸ್ಪಂದನೆ ಬಾರದಿರುವುದು ಮೋದಿಯವರಿಗೆ ಬಹಳ ಬೇಗ ಅರಿವಾಗಿದೆ. ಕಾರ್ಯತಂತ್ರ ಬದಲಾವಣೆ ಮಾಡುವುದರಲ್ಲಿ ನಿಸ್ಸೀಮರಾಗಿರುವ ಮೋದಿ ಅವರು ದಿಢೀರನೆ 'ಹಿಂದೂ ಹೃದಯ ಸಾಮ್ರಾಟ'ನ ಅವತಾರ ತಾಳಿದರು. ಅವರ ಇತ್ತೀಚಿನ ಭಾಷಣದಲ್ಲಿ ಪ್ರಸ್ತಾಪವಾದ ಮುಸ್ಲಿಂ ಲೀಗ್ ಪ್ರಣಾಳಿಕೆ, ಮುಸ್ಲಿಂ ಮೀಸಲಾತಿ, ಮಂಗಳಸೂತ್ರ, ಮುಸ್ಲಿಮರಿಗೆ ಹಿಂದೂಗಳ ಆಸ್ತಿ ಹಂಚಿಕೆ ಎಂಬೆಲ್ಲ ವಿಷಯಗಳೆಲ್ಲವೂ ಕೋಮುದ್ವೇಷದ ಸಿಡಿಗುಂಡುಗಳೇ ಆಗಿವೆ.

ಇಂತಹ ಪ್ರಚೋದನಕಾರಿ ಭಾಷಣಗಳು ಮಾಧ್ಯಮಗಳಲ್ಲಿ ಪ್ರಸಾರವಾಗಿ ಸುದ್ದಿಯಾದರೂ ಅದರಿಂದಾಗಿ ಹಿಂದಿನ ದಿನಗಳಂತೆ ಹಿಂದುತ್ವದ ಪರವಾದ ಅಲೆ ಏಳದೇ ಇರುವುದು ಮೋದಿಯವರನ್ನು ಚಿಂತೆಗೀಡು ಮಾಡಿದಂತೆ ಕಾಣುತ್ತಿದೆ. ತಳಮಟ್ಟದಲ್ಲಿ ಮೋದಿ ಎಂಬ ಹಿಂದೂ ಹೃದಯ ಸಾಮ್ರಾಟನನ್ನು ಮನೆಮನೆಗೆ ಕೊಂಡೊಯ್ದು ಮೆರೆಸುತ್ತಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರ ನಿರುತ್ಸಾಹವೂ ಇದಕ್ಕೆ ಕಾರಣ. ಸಂಘ ಪರಿವಾರದ ಜಾಲವು ಆಳ-ಅಗಲಕ್ಕೆ ಹರಡಿಕೊಂಡಿರುವ ಕರಾವಳಿಯ ಜಿಲ್ಲೆಗಳಲ್ಲಿಯೇ ಆರ್‌ಎಸ್‌ಎಸ್‌ನ ಗೈರುಹಾಜರಿ ಜನ ಗಮನಿಸುವಷ್ಟು ಸ್ಪಷ್ಟವಾಗಿ ಕಂಡಿದೆ.

ಆರ್‌ಎಸ್‌ಎಸ್ ಇತಿಹಾಸ ತಿಳಿದವರಿಗೆ ಅದರ ಈ ನಡೆ ಅಚ್ಚರಿ ಉಂಟುಮಾಡಲಾರದು. ತನ್ನ ರಾಜಕೀಯ ಮುಖವಾದ ಬಿಜೆಪಿಯ ನಾಯಕರು ಸಂಘವನ್ನು ಮೀರಿ ಬೆಳೆಯುವುದನ್ನು ಆರ್‌ಎಸ್‌ಎಸ್ ಇಷ್ಟಪಡುವುದಿಲ್ಲ. ಆರ್‌ಎಸ್‌ಎಸ್‌ನ ಸರಸಂಘಚಾಲಕರಾಗಿದ್ದ ಕೆ.ಎಸ್.ಸುದರ್ಶನ್ ಅವರು ವಾಜಪೇಯಿ ಮತ್ತು ಅಡ್ವಾಣಿ ಅವರಂತಹವರಿಗೆ ರಾಜಕೀಯದಿಂದ ನಿವೃತ್ತರಾಗಲು ಬಹಿರಂಗವಾಗಿ ಫರ್ಮಾನು ಹೊರಡಿಸಿದ್ದರು. ನರೇಂದ್ರ ಮೋದಿಯವರು ತಮ್ಮ ಅಂಕೆ ಮೀರಿ ಬೆಳೆಯುತ್ತಿರುವುದನ್ನು ಆರ್‌ಎಸ್‌ಎಸ್ ಗಮನಿಸುತ್ತಲೇ ಬಂದಿದೆ. ಆದರೆ ರಾಮಮಂದಿರ ನಿರ್ಮಾಣದ ಯಶಸ್ಸಿನ ಕಿರೀಟವನ್ನು ಮೋದಿ ತಾವೊಬ್ಬರೇ ಧರಿಸಿ ಮೆರೆದಾಡಲು ಶುರುವಾದ ದಿನಗಳಿಂದ ಆರ್‌ಎಸ್‌ಎಸ್ ಜಾಗೃತವಾಗಿದೆ. ಒಂದೊಮ್ಮೆ ಭಾರಿ ಬಹುಮತದಿಂದ ಪುನರಾಯ್ಕೆಯಾದರೆ ಮೋದಿ ತಮ್ಮ ಕೈಮೀರಿ ಹೋಗುತ್ತಾರೆ, ಆದ್ದರಿಂದ ಅವರನ್ನು ತನ್ನ ಅಂಕೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುವಷ್ಟು ಸ್ಥಾನಗಳನ್ನು ಬಿಜೆಪಿ ಪಡೆದರೆ ಸಾಕು ಎನ್ನುವ ಅಭಿಪ್ರಾಯ ಆರ್‌ಎಸ್‌ಎಸ್ ನಾಯಕರಲ್ಲಿದೆ ಎಂದು ಹೇಳಲಾಗಿದೆ.

ತನ್ನ ನಾಮಬಲದಿಂದಲೇ ಗೆಲ್ಲಬೇಕಾಗಿರುವ ಸವಾಲನ್ನು ಎದುರಿಸುತ್ತಿರುವ 'ಸಾಹೇಬರು' ಆರ್‌ಎಸ್‌ಎಸ್‌ನ ತಣ್ಣನೆಯ ಬಂಡಾಯದಿಂದಾಗಿ ಇನ್ನಷ್ಟು ಹೆದರಿದಂತೆ ಕಾಣುತ್ತಿದೆ.

ಚುರುಮುರಿ



ಕಾಯೋ ಕೆಲಸ!

● ತುರುವೇಕೆರೆ ಪ್ರಸಾದ್

ಎಲೆಕ್ಷನ್ ಆದ್ಮೇಲೆ ಯಾವ ಯಾವ ಮುಖಂಡರು ಏನೇನು ಮಾಡ್ತಿದಾರೆ ಅಂತ ಪರ್ಮೇಶಿ ಮಾಡಿದ ಸಾಕ್ಷಾತ್ ಸಮೀಕ್ಷೆಯ ವರದಿ ಹೀಗಿದೆ:

ತೆನೆಯಣ್ಣ: ಸಿಇಟಿ ರಿಸಲ್ಟೇ 15 ದಿನಕ್ಕೆ ಬರುತ್ತೆ, ಅಂತಾದ್ರಲ್ಲಿ ಎಲೆಕ್ಷನ್ ರಿಸಲ್ಟ್ ಇಷ್ಟು ಲೇಟಾದ್ರೆ ಹೇಗೆ? ಈ ಒಂದು ತಿಂಗಳಲ್ಲಿ 'ಕಣ್ಣೀರ್ ಕಣ್ಣೀರ್' ಡಾಕ್ಯುಮೆಂಟರೀನ ಸಹಾರಾ ಡೆಸರ್ಟ್‌ನಲ್ಲಿ ಶೂಟ್ ಮಾಡ್ಬೇಕು ಅಂತ ಪ್ಲಾನಿದೆ.

ಮುದ್ದೇಗೌಡರು: ಕಮಲ ನಯನ ಕಮಲ ವದನ ಹಾಡು ಹಾಕ್ಕಂಡ್ರೂ ನಿದ್ದೆ ಬರ್ತಿಲ್ಲ. ಮಗರಾಮನ್ನ ಸೆಂಟರ್ ಸಾಂದರ್ಭಿಕ ಶಿಶು ಮಾಡ್ಬಿಟ್ರೆ ನನ್ನ ಎಲ್ಲಾ ಜವಾಬ್ದಾರಿ ಮುಗಿದ ಹಾಗೆ.

ಮುದ್ದರಾಮಯ್ಯ: ಹಾಳಾದ್ದು ಚೊಂಬು ಚೊಂಬು ಅಂದು ನಿದ್ದೇಲೂ ಅದನ್ನೇ ಹೇಳ್ಕೊಳೋ ಹಾಗಾಗಿದೆ. ಯಾರೋ ಮೊನ್ನೆ ಕಮಲದೋರ್ದು ಗ್ಯಾರಂಟಿ ಚೊಂಬು ಅಂದ್ರು. ಯಾಕೋ ಅವಾಗಿಂದ ಚೊಂಬು ಅಂದಿದ್ದೇ ಎಡವಟ್ಟಾಯ್ತು ಅನ್ಸಕ್ಕೆ ಶುರುವಾಗಿದೆ.

ನಾರೀಶ್ವರಪ್ಪ: ಗೆದ್ರೆ ನಮೋಗೆ ಸಪೋರ್ಟು, ಸೋತ್ರೆ ಗೆಟ್‌ಔಟು! ಅದಕ್ಕೆ ನಾನೇ ಕಾಶಿ ಕಡೆ ಹೋಗಿ ರಾಜಕೀಯನೇ ಬಿಟ್ ಬಂದ್‌ಬಿಡೋಣ ಅಂದ್ಕೊಂಡಿದೀನಿ.

ಕೇಶೀ ಕುಮಾರ್: ಹೇಗಿದ್ರೂ ಮೇಡಂ ಕಾರಣ ಕೇಳಿ ನೋಟಿಸು ಕೊಡ್ತಾರೆ. ಅದು ಮಾಮೂಲಿ! ಅದಕ್ಕೆ ಈಗ್ಲೇ ಒಂದು ಡೀಟೈಲ್ಡ್ ರಿಪೋರ್ಟ್ ರೆಡಿ ಮಾಡ್ತಿದೀನಿ. ಯಾರ್ಯಾರ ನಾಲಿಗೆಯಿಂದ ಎಷ್ಟು ವೋಟು ಹಾಳಾಗೋಯ್ತು ಅನ್ನೋದಕ್ಕೆ ಎವಿಡೆನ್ಸ್ ಕಲೆಕ್ಟ್ ಮಾಡ್ತಿದೀನಿ.

ಜಯೇಂದ್ರ: ಮೋದಿ ಮಾಮ ಬಂದ್ರೂ ನಮ್ಮೋರೇ ನಮ್ಗೆ ಗುನ್ನ ಹಾಕಿರೋದ್ರಿಂದ ಎತ್ತು ಏರಿಗೆಳೀತು, ಕ್ವಾಣ ನೀರಿಗೆಳೀತು ಅಂದಂಗಾಯ್ತು. ಆದರೂ ಕಮಲ ಮೇನೆಗೆ ತೆನೆ ಸಿಗಿಸ್ಕೊಂಡು ರಥೋತ್ಸವ ಮಾಡಿ ಉಸ್ಸಂತ ನಿಟ್ಟುಸಿರುಬಿಟ್ಟಿದೀವಿ.

ಮತದಾರ: ಸ್ವಾಮಿ! ಯಾವನು ಗೆದ್ರೇನು, ಯಾವನು ಸೋತ್ರೇನು? ಸದ್ಯಕ್ಕೆ ಯಾವ ಎಲೆಕ್ಷನ್ನೂ ಇಲ್ಲ. ಇಂಗಾದ್ರೆ ನಮ್ ಗತಿ ಏನ್ ಹೇಳಿ? ಅವ್ರು ಒಂದು ತಿಂಗ್ಳು ಕಾಯೋದು ಬಿಡಿ, ನಾವಿನ್ನೂ ನಾಕು ವರ್ಷ ಕಾಯ್ಬೇಕಲ್ಲ ಸ್ವಾಮಿ ಅದನ್ನ ಹೇಳಿ?

ಸಂಗತ

ಜೀವನೋತ್ಸಾಹ ಕುಗ್ಗಿಸದಿರಲಿ ದುಡಿಮೆ

ಬಿಡುವಿಲ್ಲದ ದುಡಿಮೆಯಿಂದ ವ್ಯಕ್ತಿಯ ಜೀವಂತಿಕೆಗೆ, ಸೃಜನಶೀಲ ಸಾಮರ್ಥ್ಯಕ್ಕೆ ಪೆಟ್ಟು

● ರಾಜಕುಮಾರ ಕುಲಕರ್ಣಿ

ನನ್ನ ಬಂಧುವೊಬ್ಬರು ವೃತ್ತಿಯಿಂದ ನಿವೃತ್ತರಾಗಿ ಎರಡು ವರ್ಷಗಳಾದವು. ವೃತ್ತಿಯಲ್ಲಿದ್ದಾಗ ತುಂಬ ಲವಲವಿಕೆಯಿಂದ ಇದ್ದವರು ನಿವೃತ್ತಿಯ ನಂತರ ಬದುಕಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡವರಂತೆ ವರ್ತಿಸುತ್ತಿದ್ದಾರೆ. ಸುಮಾರು ಮೂವತ್ತೈದು ವರ್ಷಗಳಷ್ಟು ಕಾಲ ಉದ್ಯೋಗವನ್ನೇ ಬದುಕಾಗಿಸಿಕೊಂಡು ಬಾಳಿದವರು ಅವರು. ದಿನನಿತ್ಯದ ಕಚೇರಿಯ ಕೆಲಸ ಮತ್ತು ಹಣ ಉಳಿತಾಯದ ಯೋಜನೆಯಲ್ಲೇ ಬದುಕಿನ ಬಹುಭಾಗವನ್ನು ಕಳೆದವರಿಗೆ ಈಗ ಸಮಯ ಕಳೆಯುವುದೇ ಕಷ್ಟವಾಗಿದೆ. ಹಣವನ್ನು ದ್ವಿಗುಣಗೊಳಿಸುವುದರಲ್ಲಿ ಇದ್ದ ಆಸಕ್ತಿ ಅವರಿಗೆ ಬೇರೆ ಯಾವ ಸೃಜನಾತ್ಮಕ ಹವ್ಯಾಸಗಳ ಬಗೆಗೂ ಇರಲಿಲ್ಲ. ಪರಿಣಾಮವಾಗಿ, ನಿವೃತ್ತಿಯ ನಂತರ ಕೆಲಸ ಇಲ್ಲದಂತಾಗಿ ಮಾನಸಿಕ ಮತ್ತು ದೈಹಿಕ ಸಮಸ್ಯೆಗಳಿಂದ ಜರ್ಜರಿತರಾಗಿದ್ದಾರೆ.

'ನಾವು ಮನುಷ್ಯರಾಗಿ ಬಿಚ್ಚಿಕೊಳ್ಳುವುದೇ ಕಾಯಕದ ಮುಖಾಂತರ' ಎಂದಿದ್ದಾರೆ ಕಾರ್ಲ್ ಮಾರ್ಕ್ಸ್. ಬಸವಣ್ಣನವರು 'ಕಾಯಕವೇ ಕೈಲಾಸ' ಎಂದು ಕೆಲಸದ ಮಹತ್ವವನ್ನು ತಿಳಿಹೇಳಿದರು. ಜನಪದರು ತಮ್ಮ ದಿನನಿತ್ಯದ ಕಾಯಕದ ಜೊತೆಗೆ ಹಾಡು, ಲಾವಣಿ, ಒಗಟುಗಳನ್ನು ಹೇಳುತ್ತ ದುಡಿಮೆಯನ್ನು ಸೃಜನಶೀಲ ಕಲೆಯಾಗಿಸುತ್ತಿದ್ದರು. ತತ್ವಜ್ಞಾನಿಗಳು, ಅನುಭಾವಿಗಳು, ಶರಣರು, ಚಿಂತಕರು 'ಮನುಷ್ಯನು ಕಾಯಕದ ಮೂಲಕ ತನ್ನ ಎಲ್ಲ ಮಾನವೀಯ ಸಾಧ್ಯತೆಗಳನ್ನು ನಿಜ ಮಾಡಬಲ್ಲವನಾಗುತ್ತಾನೆ' ಎಂದು ದುಡಿಮೆಯನ್ನು ವಿಶಾಲ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ. ಆದರೆ ಇಂದು ಹಣ ಮತ್ತು ಅಧಿಕಾರವೇ ಕೆಲಸದ ಹಿಂದಿನ ಪ್ರೇರಣೆಗಳಾಗಿವೆ.

ಮನುಷ್ಯರನ್ನು ದುಡಿಯುವ ಯಂತ್ರಗಳನ್ನಾಗಿಸುವ ಹುನ್ನಾರಕ್ಕೆ ಶಾಲಾ ಶಿಕ್ಷಣದಿಂದಲೇ ಅಡಿಪಾಯ ಹಾಕಲಾಗುತ್ತಿದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಪಠ್ಯ ಪುಸ್ತಕಗಳಾಚೆ ಯಾವ ಮನರಂಜನೆಗೂ ಅವಕಾಶವಿರುವುದಿಲ್ಲ. ಇಂಥ ವಾತಾವರಣದಲ್ಲಿ ಶಿಕ್ಷಣ ಪಡೆಯುವ ಮಕ್ಕಳು ಸಹಜವಾಗಿಯೇ ಯಂತ್ರಗಳಂತಾಗುತ್ತಾರೆ. ಬದುಕಿನಲ್ಲಿ ದುಡಿಮೆ ಮತ್ತು ಆ ಮೂಲಕ ಹಣ ಗಳಿಕೆಯೇ ಬದುಕಿನ ಧ್ಯೇಯವಾಗುತ್ತದೆ.

ನನ್ನೂರಿನ ರೈತ ಕುಟುಂಬಗಳವರು ವ್ಯವಸಾಯ ಮಾಡುತ್ತಿದ್ದಾಗ ಶ್ರಾವಣದ ಮಳೆಯ ದಿನಗಳು ಮತ್ತು ಬೇಸಿಗೆ ಕಾಲದ ಬಿಡುವಿನ ವೇಳೆಯಲ್ಲಿ ಸೃಜನಾತ್ಮಕ ಚಟುವಟಿಕೆಗಳಲ್ಲಿ ನಿರತರಾಗಿರುತ್ತಿದ್ದರು. ಪುರಾಣ-ಪ್ರವಚನಗಳನ್ನು ಆಲಿಸುವುದು, ನಾಟಕಗಳನ್ನಾಡುವುದು, ಕೋಲಾಟ, ಭಜನೆಯಂತಹ ಸೃಜನಶೀಲ ಚಟುವಟಿಕೆಗಳ ಮೂಲಕ ಜೀವನೋತ್ಸಾಹವನ್ನು ಇಮ್ಮಡಿಗೊಳಿಸಿಕೊಳ್ಳುತ್ತಿದ್ದರು. ಈ ಕಾರಣದಿಂದಲೇ ಆರೋಗ್ಯಪೂರ್ಣವಾದ ದೀರ್ಘಾವಧಿ ಬದುಕನ್ನು ಬದುಕುತ್ತಿದ್ದರು. ಅವರ ನಂತರದ ಪೀಳಿಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ರಿಯಲ್ ಎಸ್ಟೇಟ್ ಕುಳಗಳಿಗೆ ಕೃಷಿಭೂಮಿಯನ್ನು ಪರಭಾರೆ ಮಾಡಿ ಈಗ ಅದೇ ಕಂಪನಿಗಳಲ್ಲಿ ಉದ್ಯೋಗಿಗಳಾಗಿ ದುಡಿಯುವ ಯಂತ್ರದಂತೆ ಆಗಿದ್ದಾರೆ. ಜೀವನೋತ್ಸಾಹವನ್ನು ಕಳೆದುಕೊಂಡು ಬದುಕುತ್ತಿರುವವರನ್ನು ಮಧ್ಯವಯಸ್ಸಿನಲ್ಲೇ ವೃದ್ಧಾಪ್ಯದ ಚಹರೆ ಆವರಿಸಿಕೊಂಡಿದೆ. ಈ ಸಮಸ್ಯೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿದೆ.

ಬೃಹತ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಯುವಕ-ಯುವತಿಯರಲ್ಲಿ ಹಲವರು ಇತ್ತೀಚಿನ ದಿನಗಳಲ್ಲಿ ಉದ್ಯೋಗ ತ್ಯಜಿಸಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೃಷಿಕ್ಷೇತ್ರದ ದುಡಿಮೆಯ ಬಿಡುವಿನ ವೇಳೆಯಲ್ಲಿ ಬರವಣಿಗೆ, ಕಲೆ, ಸಂಗೀತದಂತಹ ಹವ್ಯಾಸಗಳಲ್ಲಿ ತೊಡಗಿಸಿಕೊಂಡು ಸೃಜನಾತ್ಮಕವಾಗಿ ಬದುಕನ್ನು ರೂಪಿಸಿಕೊಳ್ಳುತ್ತಿದ್ದಾರೆ. ಹಣ ಮತ್ತು ದುಡಿಮೆಯೇ ಪ್ರಧಾನವಾದ ಸಮಾಜದಲ್ಲಿ ಇಂಥ ಪರಿವರ್ತನೆಗಳು ಆಗಾಗ ಸಂಭವಿಸುತ್ತ ಬದುಕಿಗೆ ಸೃಜನಶೀಲತೆಯ ಅಗತ್ಯವನ್ನು ಮನಗಾಣಿಸಿಕೊಡುತ್ತಿವೆ.

ದುಡಿಮೆ ಎನ್ನುವುದು ಬರೀ ಕಚೇರಿ ಮತ್ತು ಕಾರ್ಖಾನೆಗೆ ಸೀಮಿತವಾಗದೆ ಮನೆಯನ್ನೂ ಪ್ರವೇಶಿಸಿದೆ. ಕೋವಿಡ್ ಸಂದರ್ಭದಲ್ಲಿ ಅನಿವಾರ್ಯವಾಗಿದ್ದ ವರ್ಕ್ ಫ್ರಮ್ ಹೋಮ್ ಎನ್ನುವ ಪರಿಕಲ್ಪನೆಯನ್ನು ಈಗ ಉದ್ಯೋಗಿಗಳು ಹೆಚ್ಚು ಇಷ್ಟಪಡುತ್ತಿದ್ದಾರೆ. ಮನೆಯೇ ಕಚೇರಿಯಾಗಿ ರೂಪಾಂತರಗೊಳ್ಳುತ್ತಿರುವ ಈ ಪ್ರಕ್ರಿಯೆ ಮನುಷ್ಯನೊಳಗಿನ ಸೃಜನಶೀಲತೆಯನ್ನು ಮಾತ್ರ ನಷ್ಟಪಡಿಸುತ್ತಿಲ್ಲ, ಸಂಬಂಧಗಳ ಸ್ವರೂಪವನ್ನೂ ಪರಿವರ್ತಿಸುತ್ತಿದೆ. ಅನೇಕ ಕುಟುಂಬಗಳಲ್ಲಿ ಮಕ್ಕಳೊಂದಿಗೆ ಕಾಲ ಕಳೆಯಲು ಸಮಯವಿಲ್ಲದಷ್ಟು ಪಾಲಕರು ದುಡಿಮೆಗೆ ಅಂಟಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ, ಗ್ರೀಕ್ ತತ್ವಜ್ಞಾನಿ ಪ್ಲೇಟೊನ ಪರಿಕಲ್ಪನೆಯ ಆದರ್ಶರಾಜ್ಯದಲ್ಲಿ ಕಲೆ ಮತ್ತು ಸಾಹಿತ್ಯಕ್ಕೂ ಜಾಗವಿದೆ ಎನ್ನುವುದನ್ನು ನಾವು ಸ್ಮರಿಸಿಕೊಳ್ಳಬೇಕಿದೆ. ತನ್ನ ಅತಿಯಾದ ರಾಜಕೀಯ ಕಾರ್ಯವ್ಯಾಪ್ತಿಯಿಂದಾಗಿ ಸೃಜನಶೀಲತೆಯಿಂದ ಸದಾಕಾಲ ದೂರವೇ ಇರುವ ರಾಜಕಾರಣಕ್ಕೆ ಪಾಠ ಕಲಿಸಲೆಂಬಂತೆ ಚಾರ್ಲಿ ಚಾಪ್ಲಿನ್ ತನ್ನ 'ಗ್ರೇಟ್ ಡಿಕ್ಟೇಟರ್' ಸಿನಿಮಾದಲ್ಲಿ ಹಿಟ್ಲರ್‌ನನ್ನು ನಗಲು ಅರ್ಹವಾದ ಪಾತ್ರವಾಗಿಸಿದ.



'ದುಡಿಮೆಯ ಕ್ಷೇತ್ರದಿಂದ ಪ್ರಭಾವಿತಗೊಂಡ ಮನಸ್ಸನ್ನು ಅಲ್ಲೇ ಬಿಟ್ಟುಬರುವುದಿರಲಿ, ನಮ್ಮೊಳಗಿನ ಅತ್ಯಂತ ಮಹತ್ವದ್ದೇನೋ ಅಲ್ಲಿ ನಾಶವಾಗುತ್ತಿದೆ ಎಂಬ ಅರಿವೂ ಇಲ್ಲದಿರುವುದು ನಮ್ಮ ಬದುಕಿನ ದುರದೃಷ್ಟವಾಗಿದೆ' ಎಂದು ಯಶವಂತ ಚಿತ್ತಾಲರು ಆತಂಕ ವ್ಯಕ್ತಪಡಿಸಿದ್ದಾರೆ.

ಪರಿಸರದಲ್ಲಿ ಮನುಷ್ಯನೊಬ್ಬನನ್ನು ಹೊರತುಪಡಿಸಿ ಬೇರೆ ಯಾವ ಜೀವಸಂತತಿಯೂ ಅತಿಯಾದ ದುಡಿಮೆಗೆ ಅಂಟಿಕೊಂಡಿಲ್ಲ. ಆದರೆ ನಾಗರಿಕ ಎನಿಸಿಕೊಂಡ ಮನುಷ್ಯಸಮಾಜದಲ್ಲಿ ಮಾತ್ರ ದುಡಿಮೆಯ ಕ್ಷೇತ್ರವು ಆತನ ಆತ್ಮ ಮತ್ತು ಮನಸ್ಸನ್ನು ಕೊಲ್ಲುವ ಬೇನೆಯ ತಾಣವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರ ನಮ್ಮಲ್ಲೇ ಇದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

ವಾಚಕರ ವಾಣಿ

ಶುದ್ಧ ಗಾಳಿ, ನೀರಿನ ಗ್ಯಾರಂಟಿ ಕೊಡಿ

ಕಲಬುರಗಿಯಲ್ಲಿ ಈಗ ರಣರಣ ಬಿಸಿಲು. ಹನಿ ಹನಿ ನೀರಿಗೂ ಹಾಹಾಕಾರ. ಬಹುತೇಕ ಕೊಳವೆಬಾವಿಗಳು ಬತ್ತಿಹೋಗಿವೆ. ಪಾಲಿಕೆಯವರು ಹತ್ತು ದಿನಗಳಿಗೊಮ್ಮೆ ಅರ್ಧ ಗಂಟೆಯಷ್ಟೇ ನೀರು ಬಿಡುತ್ತಾರೆ. ಆ ನೀರನ್ನು ಸಂಪಿಗೆ ಪಂಪ್ ಮಾಡಲು ಜನ ಹವಣಿಸುತ್ತಾರೆ. ನಾನು ಎಲ್ಲೇ ವಾಸವಾಗಿದ್ದರೂ ನಾನು ಹುಟ್ಟಿ ಬೆಳೆದ ಈ ಕಲಬುರಗಿಯಲ್ಲಿ ಬೇಸಿಗೆ ಕಾಲ ಕಳೆಯದಿದ್ದರೆ ನನಗೆ ಏನೋ ಕಳೆದುಕೊಂಡಂತೆ ಭಾಸವಾಗುತ್ತದೆ. ಈಗ ಕಲಬುರಗಿಯಲ್ಲಿ 45 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ ಉಷ್ಣಾಂಶ ದಾಖಲಾಗಿದೆ. ಉಷ್ಣಾಂಶ 40 ಡಿಗ್ರಿ ತಲುಪಿದರೇನೇ ಹೈರಾಣಾಗುತ್ತಾರೆ ಬೆಂಗಳೂರು, ಮೈಸೂರಿನ ಜನ. ಆದರೆ ಕಲಬುರಗಿಯಲ್ಲಿ ಕೆಂಡದಂತೆ ಬಿಸಿಲಾದ ಮೇಲೆಯೇ ಜನರ ಚಟುವಟಿಕೆ ಆರಂಭ. ಬೆಳ್ಳಂಬೆಳಿಗ್ಗೆ ಆರ್.ಒ. ಘಟಕಗಳ ಮುಂದೆ ಪ್ಲಾಸ್ಟಿಕ್ ವಾಟರ್ ಕ್ಯಾನ್ ಹಿಡಿದು ಜನ ಸರದಿಯಲ್ಲಿ ನಿಲ್ಲುತ್ತಾರೆ.

ನಾವು ಸಣ್ಣವರಿದ್ದಾಗ ಬರಗಾಲದಲ್ಲೊಮ್ಮೆ, ನಮ್ಮ ಹಳ್ಳಿಯಲ್ಲಿ ಬತ್ತಿಹೋಗಿದ್ದ ಹಳ್ಳದಲ್ಲಿ ತಗ್ಗು ತೆಗೆದು, ಕುಡಿಯುವ ನೀರಿನ ಒರತೆಯನ್ನು ಹುಡುಕಿ ಬಟ್ಟಲಿನಲ್ಲಿ ತುಂಬಿ ಕೊಡಕ್ಕೆ ಸುರಿದದ್ದು ನೆನಪಿದೆ. ಅರ್ಧ ಗಂಟೆಗೆ ಒಂದು ಕೊಡ ತುಂಬುತ್ತಿತ್ತು. ಇಡೀ ಊರಿನ ಜನ ಹಗಲಿರುಳೆನ್ನದೆ ಪಾಳಿ ನಿಲ್ಲುತ್ತಿದ್ದರು. ಬೇರೆ ಕಾರ್ಯಗಳಿಗೆ ಬಳಸಲು ಎತ್ತಿನ ಮೇಲೆ ನಾಲ್ಕು ಕೊಡಗಳ ಲಗಳಿ ಹಾಕಿ ಹರದಾರಿ ಸಾಗಿ ಯಾವುದೋ ಸವುಳು ಬಾವಿಯಿಂದ ನೀರು ತರುತ್ತಿದ್ದರು. ಈಗ ನೀರಿನ ಟ್ಯಾಂಕರ್‌ಗಳು ಬಂದಿವೆ. ಕಾಲ ಬದಲಾದರೂ ಪರಿಸ್ಥಿತಿಯೇನೂ ಬದಲಾದಂತೆ ತೋರುತ್ತಿಲ್ಲ. ಸರ್ಕಾರವು ಜನರಿಗೆ ಶುದ್ಧ ಗಾಳಿ, ನೀರು ಕಲ್ಪಿಸುವ ಸಂಕಲ್ಪ ಮಾಡಲಿ.

ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

ತಾಪ...ಮಾನ!

ರಾಜ್ಯದ ಜನರಿಗೆ ಈಗ
ಪರಿಪರಿ ತಾಪ...
ಮನೆಯ ಹೊರಗೆ ಬಂದರೆ
ರಣ ಬಿಸಿಲ ಕಾವೋಕಾವು...
ಮನೆಯಲ್ಲಾದರೂ ಇದ್ದು
ಟಿ.ವಿ. ನೋಡೋಣವೆಂದು
ಯಾವ ವಾಹಿನಿ ಹಾಕಿದರೂ
ಪೆನ್‌ಡ್ರೈವ್ ಮೋಹಿನಿಯ ಕಾಟ!

ಮ.ಗು.ಬಸವಣ್ಣ
ನಂಜನಗೂಡು

ಪೋಷಕಾಂಶ ಒದಗಿಸುವ ಮಾದರಿ ಫಸಲು

'ಅನ್ನದಾತನ ಜ್ಞಾನ ಸಂಗತಿಗಳು' ಎಂಬ 'ನುಡಿ ಬೆಳಗು' ಬರಹವನ್ನು (ಪ್ರ.ವಾ., ಮೇ 1) ಓದಿದಾಗ, ನನಗಾದ ಅನುಭವವೊಂದು ನೆನಪಿಗೆ ಬಂದಿತು. ಇತ್ತೀಚೆಗೆ ನನ್ನ ಸ್ನೇಹಿತನೊಬ್ಬನ ಮನೆಗೆ ಭೇಟಿ ನೀಡಿದ್ದೆ. ಮನೆಯ ಸುತ್ತಲೂ ಸುಮಾರು 40 ಎಕರೆ ಅಡಿಕೆ ತೋಟ. ಹೆಚ್ಚು ಕಡಿಮೆ ಎಲ್ಲಾ ಅಡಿಕೆ ಮರಗಳಿಗೂ ಕಾಳುಮೆಣಸು ಬಳ್ಳಿಗಳನ್ನು ಹಬ್ಬಿಸಿದ್ದಾನೆ. ತೋಟದ ತುಂಬಾ ನೆಲದ ಮೇಲೆ 'ಮುಕೋನ' ಎಂಬ ಬಳ್ಳಿಯನ್ನು ಹಬ್ಬಿಸಿದ್ದಾನೆ. ನೀರು ಹಾಯಿಸುವುದನ್ನು ಬಿಟ್ಟರೆ ಆ ಅಡಿಕೆ ಮರಗಳಿಗೆ ಗೊಬ್ಬರವನ್ನೇನೂ ಹಾಕುವುದಿಲ್ಲ. ಬೇಸಾಯ ಮಾಡುವುದಿಲ್ಲ. ಆದರೂ ಆತ ಅಡಿಕೆ, ಕಾಳುಮೆಣಸು ಬೆಳೆಗಳಿಂದ ಅಧಿಕ ಫಸಲು ತೆಗೆಯುತ್ತಾನೆ. ಅಡಿಕೆ ಮರ ಹಾಗೂ ಕಾಳುಮೆಣಸು ಬಳ್ಳಿಗಳು ಯಾವ ರೋಗದ ಸೋಂಕೂ ಇಲ್ಲದೆ ಆರೋಗ್ಯಕರವಾಗಿ ಬೆಳೆದುನಿಂತಿವೆ. ಆತ ಆ ನೆಲದ ಮೇಲೆ ಹಬ್ಬಿಸಿರುವ ಬಳ್ಳಿ ಆ ಮರಗಳಿಗೆ ಬೇಕಾದ ಎಲ್ಲ ಪೋಷಕಾಂಶಗಳನ್ನೂ ಒದಗಿಸುತ್ತದೆ.

ಒಂದು ಕೆಮ್ಮು ಬಂದರೂ ಸಾಕು, ವೈದ್ಯರ ಬಳಿ ಹೋಗಿ ಬಂದು ಮಾತ್ರೆ ನುಂಗುವ, ಬೆಳೆಯುವ ಬೆಳೆಗಳಿಗೆ ಏನೇನೋ ವಿಷಕಾರಿ ಪದಾರ್ಥಗಳನ್ನು ಉಣಬಡಿಸಿ ಗಂಭೀರ ರೋಗಗಳಿಗೆ ಕಾರಣವಾಗುವ ನಾವು ಇದರಿಂದ ಕಲಿತುಕೊಳ್ಳುವುದು ಬಹಳಷ್ಟಿದೆ. ಸಕಲ ಜೀವಚರಗಳ ರಕ್ಷಣೆಗೆ ಬೇಕಾದ ಮದ್ದನ್ನು ಪ್ರಕೃತಿ ತನ್ನ ಒಡಲಲ್ಲೇ ಇರಿಸಿಕೊಂಡಿದೆ. ನಾವು ಅದರ ಅರಿವಿಲ್ಲದೆಯೇ ವಿಷಕಾರಿ ವಸ್ತುಗಳ ಮೊರೆ ಹೋಗಿ ನಮಗೆ ನಾವೇ ಗಂಡಾಂತರವನ್ನು ತಂದುಕೊಳ್ಳುತ್ತಿದ್ದೇವೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಆಗಲಿಲ್ಲವೇ 'ಶೀಲ್ಡ್'?

'ಕೋವಿಶೀಲ್ಡ್' ಲಸಿಕೆಯ ಗಂಭೀರ ಅಡ್ಡಪರಿಣಾಮ ಕುರಿತು ಓದಿದಾಗ (ಆಳ-ಅಗಲ, ಪ್ರ.ವಾ., ಮೇ 1, 2) ಅನ್ನಿಸಿದ್ದು: ಈ ಲಸಿಕೆಯು ಪಡೆದ ಕೆಲವರ ಪಾಲಿಗೆ 'ಕೋವಿ' (ಬಂದೂಕು) ಆಗಿದೆ, 'ಶೀಲ್ಡ್' (ರಕ್ಷಣೆ) ಆಗಿಲ್ಲ! ಇಂಥ ಲಸಿಕೆಯನ್ನು ಶಿಫಾರಸು ಮಾಡಿದ 'ಕೋವಿದ'ರಿಗೆ (ಪಂಡಿತರಿಗೆ) 'ಶೀಲ್ಡ್' (ಪ್ರಶಸ್ತಿ ಫಲಕ) ಕೊಡತಕ್ಕದ್ದು!

ಅಂದಹಾಗೆ, ನಮ್ಮದೇ ಆದ 'ಕೋವ್ಯಾಕ್ಸಿನ್' ಲಸಿಕೆಯ ಪರಿಣಾಮಗಳ ಬಗ್ಗೆ ಯಾರಾದರೂ ಅಧ್ಯಯನ ನಡೆಸಿದ್ದಾರೆಯೇ? ನಡೆಸಿದ್ದರೆ ಆ ಅಂಶಗಳೂ ಹೊರಬರಲಿ.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಆಧಾರರಹಿತ ಆರೋಪ ಎಷ್ಟು ಸರಿ?

'ದೇಶದ ಹಿತ ಮರೆತ ಪ್ರಣಾಳಿಕೆಗಳು' ಎಂಬ ಲೇಖನದಲ್ಲಿ (ಪ್ರ.ವಾ., ಮೇ 2) ಎ.ಸೂರ್ಯ ಪ್ರಕಾಶ್ ಅವರು ವ್ಯಕ್ತಪಡಿಸಿರುವ ಕೆಲವು ಅಭಿಪ್ರಾಯಗಳು ಏಕಪಕ್ಷೀಯವಾಗಿವೆ. ಸಿಪಿಎಂ ಪಕ್ಷವನ್ನು ಅವರು ಲೇಖನದಲ್ಲಿ ಹಿಗ್ಗಾಮುಗ್ಗಾ ಟೀಕಿಸಿದ್ದಾರೆ. 'ಭಾರತದ ಅತ್ಯಂತ ಹಳೆಯ ರಾಜಕೀಯ ಪಕ್ಷವಾಗಿರುವ ಕಾಂಗ್ರೆಸ್ ಈಗಿನ ಸಂದರ್ಭದಲ್ಲಿ ಸಿಪಿಎಂ ಜೊತೆ ಪಾಲುದಾರಿಕೆ ಹೊಂದಿರುವುದು ವಿಷಕಾರಿ. ಕಾಂಗ್ರೆಸ್ ಪಕ್ಷವು ನಿಜಕ್ಕೂ ಕೆಟ್ಟವರ ಸಹವಾಸಕ್ಕೆ ಬಿದ್ದಿದೆ' ಎಂದು ಕಾಂಗ್ರೆಸ್‌ಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಸಿಪಿಎಂ ಪಕ್ಷವೂ ದೇಶದ ಬೆರಳೆಣಿಕೆಯಷ್ಟಿರುವ ಪ್ರಮುಖ ಪಕ್ಷಗಳಲ್ಲಿ ಒಂದು. ಅಂತಹ ಒಂದು ಪಕ್ಷವು ತನ್ನ ಪ್ರಣಾಳಿಕೆಯನ್ನು 'ಸಂವಿಧಾನ ಹಾಗೂ ದೇಶದ ಹಿತಾಸಕ್ತಿ'ಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ರೂಪಿಸಿರುತ್ತದೆ. ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದಲ್ಲಿ ಹಲವಾರು ವರ್ಷ ಆಳ್ವಿಕೆ ಮಾಡಿರುವ ಸಿಪಿಎಂ, ಕೇರಳದಲ್ಲಿ ಈಗ ಸತತ ಎರಡನೆಯ ಅವಧಿಗೆ ಆಡಳಿತದಲ್ಲಿದೆ. ಅಂತಹ ಒಂದು ಪಕ್ಷದ ಮೇಲೆ ಈ ರೀತಿಯ ಆಧಾರರಹಿತ ಆರೋಪ ಮಾಡುವುದು ಎಷ್ಟರಮಟ್ಟಿಗೆ ಸರಿ?

ಭೀಮನಗೌಡ ಕಾಶಿರೆಡ್ಡಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.




ಹವಾಮಾನ ವೈಪರೀತ್ಯ

ಒಂದೆಡೆ ಬಿಸಿಗಾಳಿ ಇನ್ನೊಂದೆಡೆ ಬಿರುಮಳೆ



ಹವಾಮಾನ ವೈಪರೀತ್ಯದ ಪರಿಣಾಮವು ಜಗತ್ತಿನ ಹಲವೆಡೆ ತಲೆದೋರಿದೆ. ಇದು ಆರಂಭದ ಹಂತದ ಪರಿಣಾಮಗಳಷ್ಟೆ. ಮುಂದಿನ ವರ್ಷಗಳಲ್ಲಿ ಈ ಪರಿಣಾಮದ ತೀವ್ರತೆ ಇನ್ನಷ್ಟು ಹೆಚ್ಚಲಿದೆ ಎಂದು ವಿಶ್ವ ಹವಾಮಾನ ಸಂಘಟನೆ ಹೇಳಿದೆ. ಭೂಮಧ್ಯೆ ರೇಖೆಗಿಂತ ಕೆಳಗೆ ಇರುವ ದೇಶಗಳಲ್ಲಿ ಈಗ ಬಿರುಬೇಸಿಗೆ. ಅಂದರೆ, ಇತ್ತೀಚಿನ ದಶಕಗಳಲ್ಲೇ ಕಂಡರಿಯದಷ್ಟು ಬಿಸಿಲಿಗೆ ಈ ದೇಶಗಳು ಮೈಯೊಡ್ಡಿವೆ. ಈ ದೇಶಗಳ ಪಕ್ಕದಲ್ಲೇ ಇರುವ ಯುಎಇ, ಈಜಿಪ್ಟ್, ಕೆನ್ಯಾ, ಸೊಮಲಿಯಾಗಳಲ್ಲಿ ಪ್ರವಾಹ ಸ್ಥಿತಿ ತಲೆದೋರುವಷ್ಟು ಮಳೆ ಹೊಯ್ಯುತ್ತಿದೆ. ಭಾರತವೂ ಒಳಗೊಂಡಂತೆ ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ದೇಶಗಳಲ್ಲಿ ಒಂದು ವಾರದಿಂದ ಬಿಸಿಗಾಳಿಯ ಪರಿಸ್ಥಿತಿ ಇತ್ತು. ಆಗ್ನೇಯ ಏಷ್ಯಾದಲ್ಲಿ ಈಗ ಮಳೆಯಾಗುತ್ತಿದೆ. ಭಾರತದ ಕೆಲವೆಡೆ ಮಳೆ ಇದ್ದರೆ, ಕೆಲವೆಡೆ ಮಳೆಯಾಗುತ್ತಿದೆ. ದಕ್ಷಿಣ ಅಮೆರಿಕದ ದೇಶಗಳಲ್ಲೂ ಇಂಥದ್ದೇ ಸ್ಥಿತಿ ಇದೆ



ಪ್ರಜಾವಾಣಿ ಗ್ರಾಫಿಕ್ಸ್: ಕಣಕಾಲಮಠ

ಹವಾಮಾನ ವೈಪರೀತ್ಯವೂ ಮಾನವ ಹಕ್ಕೂ

● ಸುಕೃತ ಎಸ್.

ಇದೊಂದು ಸಾಹಸಮಯ ಕತೆ. ತಾವೂ ಗೆದ್ದು, ಜಗತ್ತನ್ನೂ ಗೆಲ್ಲಿಸಿದ ವಿಶಿಷ್ಟ ಕತೆ. ಸ್ವಿಟ್ಜರ್‌ಲೆಂಡ್‌ನ 64 ವರ್ಷ ಮೇಲ್ಪಟ್ಟ 2,500 ವೃದ್ಧೆಯರು, ಅಲ್ಲ, ಪರಿಸರ ಹೋರಾಟಗಾರರು, 'ಇಂಥ ಬಿಸಿಗಾಳಿಯಲ್ಲಿ ನಮ್ಮನ್ನು ಸಾಯಲು ಬಿಟ್ಟಿದ್ದೀರಾ? ನಿಮ್ಮ ನಿಷ್ಕ್ರಿಯತೆಯಿಂದ ನಮ್ಮನ್ನು ಅಪಾಯಕ್ಕೆ ದೂಡಿದ್ದೀರಿ' ಎನ್ನುತ್ತಾ ತಮ್ಮ ಸರ್ಕಾರದ ವಿರುದ್ಧ ನ್ಯಾಯಾಲಯದಲ್ಲಿ 2016ರಲ್ಲಿ ಹೋರಾಟ ಆರಂಭಿಸಿದರು. 'ಸೀನಿಯರ್ ವಿಮೆನ್ ಫಾರ್ ಕ್ಲೈಮೇಟ್ ಪ್ರೊಟೆಕ್ಷನ್' ಎನ್ನುವ ಸಂಸ್ಥೆಯೊಂದನ್ನು ಕಟ್ಟಿಕೊಂಡು ಒಂದು ಕ್ರಾಂತಿಯನ್ನೇ ಮಾಡಿದ್ದಾರೆ.

ಬಿಸಿಗಾಳಿಯಿಂದ, ಹವಾಮಾನ ವೈಪರೀತ್ಯದಿಂದ ವೃದ್ಧರಿಗೆ ಅದರಲ್ಲೂ ವೃದ್ಧೆಯರಿಗೇ ಹೆಚ್ಚಿನ ಅಪಾಯವಿದೆ. ಅತಿಯಾದ ಕೈಗಾರಿಕೀಕರಣದಿಂದ ಸ್ವಿಟ್ಜರ್‌ಲೆಂಡ್ ಅನ್ನು ಹಾಳು ಮಾಡಿದ್ದೀರಿ. 2015ರ ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿದ್ದೀರಿ. ಆದರೆ, ಅದನ್ನು ಪಾಲಿಸಿಲ್ಲ. ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸುವುದು ನಿಮ್ಮ ಜವಾಬ್ದಾರಿ. ತಾಪಮಾನ ಏರಿಕೆಯಾಗದಂತೆ ನೀವೇ (ಸ್ವಿಟ್ಜರ್‌ಲೆಂಡ್ ಸರ್ಕಾರ) ಕೆಲವು ಯೋಜನೆಗಳು ಘೋಷಿಸಿದ್ದೀರಿ. ಅದನ್ನೂ ಜಾರಿ ಮಾಡುತ್ತಿಲ್ಲ. ನಮ್ಮ ಬದುಕುವ ಹಕ್ಕನ್ನು ಕಾಯುವುದು ನಿಮ್ಮ ಹೊಣೆಗಾರಿಕೆ' ಎನ್ನುವುದು ಈ ವೃದ್ಧೆಯರ ವಾದ. ಇವರ ಈ ವಾದವನ್ನು ಸ್ವಿಟ್ಜರ್‌ಲೆಂಡ್‌ನ ಯಾವ ನ್ಯಾಯಾಲಯವೂ ಆಲಿಸಲಿಲ್ಲ. ಅವರ ಅರ್ಜಿಗಳನ್ನು ಎಲ್ಲ ಹಂತದ ನ್ಯಾಯಾಲಯಗಳೂ ವಜಾ ಮಾಡಿಬಿಟ್ಟವು. ಇಲ್ಲಿಂದ ಈ ಹೋರಾಟಕ್ಕೊಂದು ತಿರುವು ದೊರಕಿತು.

ಇಲ್ಲೆಲ್ಲ ಸೋಲುಂಡ ಬಳಿಕ ಅವರು ಹತ್ತಿದ್ದು, 'ಯುರೋಪಿಯನ್ ಕೋರ್ಟ್ ಆಫ್ ಹ್ಯೂಮನ್ ರೈಟ್ಸ್' ಮೆಟ್ಟಿಲನ್ನು. ಹೋರಾಟಗಾರರ ಈ ಹೆಜ್ಜೆಯು ಯೂರೋಪಿನ ಎಲ್ಲ ದೇಶಗಳ ಸರ್ಕಾರಕ್ಕೂ ತಪರಾಕಿ ಹಾಕಿದಂತಾಯಿತು. 'ಹಸಿರುಮನೆ ಅನಿಲ ಹೊರಸೂಸುವಿಕೆ ತಡೆಗಟ್ಟಲು ಸ್ವಿಟ್ಜರ್‌ಲೆಂಟ್ ಸರ್ಕಾರವು ತಾನಾಗೇ ಹಾಕಿಕೊಂಡ ಗುರಿಗಳನ್ನು ತಲುಪಲು ವಿಫಲವಾಗಿದೆ. ಯುರೋಪಿಯನ್ ಕನ್‌ವೆನ್ಶನ್ ಆನ್ ಹ್ಯೂಮನ್ ರೈಟ್ಸ್‌ನ 8ನೇ ವಿಧಿಯ ಅನ್ವಯ ಖಾಸಗಿತನ ಹಾಗೂ ಕುಟುಂಬದೊಂದಿಗೆ ಜೀವನ ನಡೆಸುವ ಹಕ್ಕನ್ನು ಈ ಸರ್ಕಾರವು ಕಿತ್ತುಕೊಂಡಿದೆ. ಇಂದಿನ ನಮ್ಮ ವೈಫಲ್ಯದ ಪರಿಣಾಮಗಳನ್ನು ನಮ್ಮ ಮುಂಬರುವ ಪೀಳಿಗೆಗಳು ಅನುಭವಿಸಬೇಕಾಗುತ್ತದೆ' ಎಂದು ನ್ಯಾಯಾಲಯವು ಇದೇ ಏಪ್ರಿಲ್ 9ರಂದು ತೀರ್ಪು ನೀಡಿತು.



ಕಾನೂನಿನ ಹೋರಾಟದಲ್ಲಿ ಜಯಗಳಿಸಿದ ಸ್ವಿಟ್ಜರ್‌ಲೆಂಡ್‌ನ 'ಸೀನಿಯರ್ ವಿಮೆನ್ ಫಾರ್ ಕ್ಲೈಮೇಟ್ ಪ್ರೊಟೆಕ್ಷನ್' ಸಂಸ್ಥೆಯ ಸದಸ್ಯೆಯರು
– ಸಂಸ್ಥೆಯ 'ಎಕ್ಸ್' ಖಾತೆಯಿಂದ ಪಡೆದ ಚಿತ್ರ

'ಈ ಸಂಸ್ಥೆಯ ಎಲ್ಲ ವೃದ್ಧೆಯರು ಸರ್ಕಾರದ ನಿಷ್ಕ್ರಿಯತೆಯ ಸಂತ್ರಸ್ತರು' ಎಂದೂ ತನ್ನ ತೀರ್ಪಿನಲ್ಲಿ ಹೇಳಿತು. ಯುರೋಪಿಯನ್ ಕೋರ್ಟ್ ಆಫ್ ಹ್ಯೂಮನ್ ರೈಟ್ಸ್ ಅನ್ನು ಒಪ್ಪಿಕೊಂಡ ಯುರೋಪಿನ ಎಲ್ಲ 46 ದೇಶಗಳೂ ಹವಾಮಾನ ವೈಪರೀತ್ಯವನ್ನು ನಿಯಂತ್ರಿಸಲು ಯೋಜನೆಗಳನ್ನು ರೂಪಿಸುವಂತೆ ಮಾಡಿದೆ. ಈ ಮೂಲಕ ಜಗತ್ತಿನ ಬೇರೆಲ್ಲಾ ದೇಶಗಳ ನಾಗರಿಕರು, ಸಂಘ–ಸಂಸ್ಥೆಯವರೂ ತಮ್ಮ ಸರ್ಕಾರದ ವಿರುದ್ಧ ದಾವೆ ಹೂಡುವಂಥ ಚಿಂತನೆ ನಡೆಸಲು ಪ್ರೇರಣೆ ನೀಡಿದೆ. ಹೀಗೆ, ವೃದ್ಧೆಯರು ತಾವೂ ಗೆದ್ದು, ಜಗತ್ತನ್ನೂ ಗೆಲ್ಲಿಸಿದರು.

ಇಲ್ಲೊಂದು ಸ್ವಾರಸ್ಯಕರ ಸಂಗತಿಯೊಂದಿದೆ. ಹವಾಮಾನ ವೈಪರೀತ್ಯವು ಪರಿಸರಕ್ಕೆ ಸಂಬಂಧಿಸಿದ್ದು, ಒಂದು ವೇಳೆ ಹವಾಮಾನ ವೈಪರೀತ್ಯವನ್ನು ನಿಯಂತ್ರಿಸಲು ಸರ್ಕಾರವೊಂದು ವಿಫಲವಾದರೆ, ಅಂಥ ಸರ್ಕಾರವನ್ನು ಉತ್ತರದಾಯಿಯನ್ನಾಗಿ ಮಾಡಬಹುದು ಎಂಬುದನ್ನು ಈ ತೀರ್ಪು ನಿರೂಪಿಸಿತು. ಇದರ ಜೊತೆಯಲ್ಲಿ, ಹವಾಮಾನ ವೈಪರೀತ್ಯವನ್ನು ಸರ್ಕಾರವೊಂದು ನಿಯಂತ್ರಿಸಲಿಲ್ಲ ಎಂದಾದರೆ, ಅದು ನಾಗರಿಕರ ಬದುಕುವ ಹಕ್ಕನ್ನು ಕಸಿದುಕೊಂಡಂತೆ ಎಂಬುದನ್ನೂ ಈ ತೀರ್ಪು ಸಾರಿದೆ.

ಬದುಕಲು ಯೋಗ್ಯವಾದ ವಾತಾವರಣವು ಎಲ್ಲರಿಗೂ ಬೇಕು. ಈ ಕಾರಣಕ್ಕಾಗಿಯೇ ಇದೊಂದು ಐತಿಹಾಸಿಕ ತೀರ್ಪಾಗಿದೆ. ಇದು ನಮಗೆ ತೃಪ್ತಿಯನ್ನೂ ಕೊಟ್ಟಿದೆ. ಗ್ರೀನ್‌ಪೀಸ್‌ನ ಸಹಕಾರದೊಂದಿಗೆ 9 ವರ್ಷಗಳಿಂದ ಈ ಹೋರಾಟ ನಡೆಸುತ್ತಿದ್ದೇವೆ. ಸ್ವಿಟ್ಜರ್‌ಲೆಂಡ್ ನ್ಯಾಯಾಲಯಗಳು ನಮ್ಮ ವಾದವನ್ನು ಆಲಿಸಲು ನಿರಾಕರಿಸಿದವು. ಪರಿಸರ ಸಂರಕ್ಷಣೆ ಎನ್ನುವುದು ಮಾನವ ಹಕ್ಕು ಎಂಬುದನ್ನು ಹ್ಯೂಮನ್ ರೈಟ್ಸ್ ನ್ಯಾಯಾಲಯವು ಸಾಬೀತುಪಡಿಸಿದೆ

ಅನ್ನಾ ಮಾರೇರ್, ಸಹ ಅಧ್ಯಕ್ಷೆ, ಸೀನಿಯರ್ ವಿಮೆನ್ ಫಾರ್ ಕ್ಲೈಮೇಟ್ ಪ್ರೊಟೆಕ್ಷನ್

ಆಧಾರ: ರಾಯಿಟರ್ಸ್, ಎಎಫ್‌ಪಿ, ಸೀನಿಯರ್ ವಿಮೆನ್ ಫಾರ್ ಕ್ಲೈಮೇಟ್ ಪ್ರೊಟೆಕ್ಷನ್‌ನ ಪತ್ರಿಕಾ ಪ್ರಕಟಣೆ

ಸಿನಿ ಬಿಟ್ಸ್

'ಗರುಡ ಪುರಾಣ'ದಲ್ಲಿ ರಿಷಿ



'ಆಪರೇಶನ್ ಅಲಮೇಲಮ್ಮ', 'ಕವಲುದಾರಿ'ಯಂತಹ ವಿಭಿನ್ನ ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ನಟ ರಿಷಿ ಸದ್ಯ 'ರುದ್ರ ಗರುಡ ಪುರಾಣ' ಓದಲು ಸಿದ್ಧರಾಗಿದ್ದಾರೆ. ಅಶ್ವಿನಿ ಪುನೀತ್ ರಾಜಕುಮಾರ್ ಅವರು ಇತ್ತೀಚೆಗಷ್ಟೇ ಈ ಚಿತ್ರದ ಫಸ್ಟ್ ಲುಕ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಕೋರಿದರು.

ರಿಷಿ ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ(ತನಿಖಾಧಿಕಾರಿ) ಕಾಣಿಸಿಕೊಂಡಿದ್ದಾರೆ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ಲೋಹಿತ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದು, 'ಚಂಬಲ್', 'ಡಿಯರ್ ವಿಕ್ರಮ್' ಸೇರಿದಂತೆ ಕೆಲವು ಚಿತ್ರಗಳನ್ನು ನಿರ್ದೇಶಿಸಿರುವ ಕೆ.ಎಸ್ ನಂದೀಶ್ ಆ್ಯಕ್ಷನ್–ಕಟ್ ಹೇಳಿದ್ದಾರೆ.

'ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಜುಲೈ ವೇಳೆಗೆ ಚಿತ್ರವನ್ನು ಬಿಡುಗಡೆ ಮಾಡುವ ಆಲೋಚನೆ ಇದೆ' ಎಂದರು ನಿರ್ದೇಶಕರು.

ರಿಷಿ ಅವರಿಗೆ ಜೋಡಿಯಾಗಿ ಪ್ರಿಯಾಂಕ ಕುಮಾರ್ ನಟಿಸಿದ್ದಾರೆ. ವಿನೋದ್ ಆಳ್ವ, ಅವಿನಾಶ್, ಶಿವರಾಜ್ ಕೆ.ಆರ್ ಪೇಟೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕಥೆ ಹಾಗೂ ಚಿತ್ರಕಥೆಯನ್ನು ನಿರ್ದೇಶಕರೇ ಬರೆದಿದ್ದು, ರಘು ನಿಡುವಳ್ಳಿ ಸಂಭಾಷಣೆಯಿದೆ. ಕೆಪಿ ಸಂಗೀತ ನಿರ್ದೇಶನ, ಸಂದೀಪ್ ಕುಮಾರ್ ಛಾಯಾಚಿತ್ರಗ್ರಹಣ ಹಾಗೂ ಮನು ಶೇಡ್ಗಾರ್ ಸಂಕಲನ ಈ ಚಿತ್ರಕ್ಕಿದೆ.

ಹೊಸಬರ 'ರಣ ರಾಕ್ಷಸ'




ಬಹುತೇಕ ಹೊಸಬರಿಂದಲೇ ಕೂಡಿರುವ 'ರಣ ರಾಕ್ಷಸ' ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮುರಳಿಪ್ರಸಾದ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರಕ್ಕೆ ಹೆಚ್.ಪಿ.ನರಸಿಂಹಸ್ವಾಮಿ ಬಂಡವಾಳ ಹೂಡುವುದರ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ತಂದೆ ಮಗಳ ಸಂಬಂಧವನ್ನು ಹೇಳುವ ಕಥೆ. ಚಿತ್ರ ಸೆನ್ಸಾರ್ ಮುಗಿಸಿ, ಬಿಡುಗಡೆಗೆ ಸಿದ್ಧವಿದೆ. ಇದೇ ತಿಂಗಳು ತೆರೆಗೆ ತರುವ ಆಲೋಚನೆಯಿದೆ. ಬೆಂಗಳೂರು, ಹೆಸರುಘಟ್ಟ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕರು.

'ನಮ್ಮ ತಂದೆ ರಂಗಭೂಮಿ ಕಲಾವಿದರು. ಅವರ ಬಳುವಳಿಯಿಂದಲೇ ನನಗೂ ಚಿಕ್ಕ ವಯಸ್ಸಿಗೆ ಅಭಿನಯದ ಗೀಳು ಹುಟ್ಟಿಕೊಂಡಿತು. ನಂತರ ಉದ್ಯಮದಲ್ಲಿ ಯಶಸ್ಸು ಕಂಡು ಚಿತ್ರಮಂದಿರದ ಮಾಲೀಕನಾದೆ. ಇದೆಲ್ಲದರ ಅನುಭವದಿಂದ ನಾಲ್ಕು ಚಿತ್ರಗಳನ್ನು ನಿರ್ಮಾಣ ಮಾಡಿ, ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದೇನೆ' ಎಂದರು ಹೆಚ್.ಪಿ.ನರಸಿಂಹಸ್ವಾಮಿ.

ಪುಣ್ಯ ಗೌಡ, ದತ್ತ, ದಿಲೀಪ್ ಮುಂತಾದವರು ನಟಿಸಿದ್ದಾರೆ. ನಿರ್ದೇಶಕರೇ ಚಿತ್ರಕ್ಕೆ ಸಂಗೀತವನ್ನೂ ನೀಡಿದ್ದಾರೆ. ಭಾರ್ಗವ ಸಂಕಲನವಿದೆ.


ಗುಂಡಣ್ಣ



ನಾಲಿಗೆ ಮೇಲಿನ ಮಾತು

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ನನ್ನ ಗುರುಗಳಾದ ಪ್ರೊ. ಪ್ರಭುಶಂಕರ ಅವರು ಹೇಳಿದ ಒಂದು ತಮಾಷೆಯ ಪ್ರಸಂಗ ಇದು. ಕೇಳಿ, ಸಾಹೇಬರೊಬ್ಬರಿಗೆ ವರ್ಗ ಆಗಿತ್ತು. ಅದರ ನಿಮಿತ್ತವಾಗಿ ಆ ಕಚೇರಿಯಲ್ಲಿ ಸಾಹೇಬರಿಗೊಂದು ಬೀಳ್ಕೊಡುಗೆ ಸಮಾರಂಭ. ನೂರಾರು ಜನ ಕೆಲಸ ಮಾಡುವ ಕಚೇರಿ ಅದು. ಅಂಥ ಸಮಾರಂಭಗಳು ಹೇಗಿರುತ್ತವೆ ಅಂತ ನಿಮಗೂ ಬಹುಶಃ ಗೊತ್ತು. ಒಂದು ದೇವತಾ ಪ್ರಾರ್ಥನೆ, ಸ್ವಾಗತ, ಆಮೇಲೊಂದು ಅಭಿನಂದನಾ ಭಾಷಣ. ಆ ಭಾಷಣದಲ್ಲಿ ವರ್ಗ ಆದ ಸಾಹೇಬರು ಅದೆಷ್ಟು ಮೇಧಾವಿಗಳು, ಪ್ರಾಮಾಣಿಕರು, ಅವರ ಶಿಸ್ತು, ಶ್ರದ್ಧೆ, ಬದ್ಧತೆಯನ್ನೆಲ್ಲಾ ಸೋದಾಹರಣವಾಗಿ ನಿರೂಪಿಸಿ, ಇಂಥ ಮಹನೀಯರು ಇರುವುದರಿಂದಲೇ ಇನ್ನೂ ಲೋಕದಲ್ಲಿ ಮಳೆ ಬೆಳೆ ಆಗುತ್ತಿದೆ ಎನ್ನುವ ರೇಂಜಿಗೆ ಕೊಂಡಾಡುವುದು, ಆಮೇಲೆ ಹೆಗಲಿಗೊಂದು ಶಾಲು, ತಲೆಗೊಂದು ಪೇಟ ಹಾಕಿ, ಕೈಗೊಂದು ಹಣ್ಣಿನ ಬುಟ್ಟಿ, (ಸಾಧ್ಯವಾದರೆ) ಒಂದು ನೆನಪಿನ ಕಾಣಿಕೆ ಕೊಡುವುದು... ಹೀಗೇ ತಾನೆ? ಎಲ್ಲಾ ಹಾಗೇ ವ್ಯವಸ್ಥೆ ಆಗಿತ್ತು. ಸಂಜೆ ನಾಲ್ಕು ಗಂಟೆಗೆ ಸಮಾರಂಭ.

ಸುಮಾರು ಮೂರು ಗಂಟೆಯ ಹೊತ್ತಿಗೆ ಸಾಹೇಬರಿಗೆ ಶೌಚಾಲಯಕ್ಕೆ ಹೋಗಬೇಕಾದ ಒತ್ತಡ ಸೃಷ್ಟಿಯಾಯಿತು. ಅವರು ಶೌಚಾಲಯದೊಳಗೆ ಇರುವಾಗಲೇ ಕಚೇರಿಯ ಮೂರ್ನಾಲ್ಕು ಸಿಬ್ಬಂದಿ ಆ ಕಡೆ ಬಂದರು. ಅವರಿಗೆ ಸಾಹೇಬರು ಶೌಚಾಲಯದೊಳಗೆ ಇರುವುದು ಗೊತ್ತಿಲ್ಲ. ಅವರಲ್ಲೊಬ್ಬ ಮತ್ತೊಬ್ಬನನ್ನು ಕೇಳಿದ. 'ಏನ್ರೀ ರಾಮನಾಥ್, ಅಭಿನಂದನಾ ಭಾಷಣಕ್ಕೆ ಎಲ್ಲಾ ಸಿದ್ಧಾನೋ?'

ರಾಮನಾಥ್ ಹೇಳಿದ: 'ಈ ಪಾಪಿಗೆ ಅಭಿನಂದನಾ ಭಾಷಣ ಮಾಡೋದು ಏನ್ ಕರ್ಮ ಅಲ್ವ? ಥೂ, ಮನುಷ್ಯನೇನ್ರಿ ಅವನು? ಅದ್ಯಾವ ಸುಡುಗಾಡು ಯೂನಿವರ್ಸಿಟಿ ಈ ಅವಿವೇಕಿಗೆ ಡಿಗ್ರಿ ಕೊಡ್ತೋ ಕಾಣೆ. ಜಂಭ ಮಾತ್ರ ಒಂದೂರಿಗೇ ಹಂಚೋ ಅಷ್ಟಿದೆ. ಸದ್ಯ, ಪೀಡೆ ತೊಲಗ್ತಾ ಇದೆ...'

ಹೀಗೆ ಮಾತಾಡುತ್ತಾ ಅವರೆಲ್ಲಾ ಶೌಚ ಕಾರ್ಯ ಮುಗಿಸಿ ಹೊರಗಡೆ ಹೋದರು. ಅವರ ಪ್ರತೀ ಮಾತೂ ಒಳಗೇ ಇದ್ದ ಸಾಹೇಬರ ಮರ್ಮಕ್ಕೆ ತಾಕಿತ್ತು.

ಬೀಳ್ಕೊಡುಗೆ ಸಮಾರಂಭ ಆರಂಭವಾಯಿತು. ಸಾಹೇಬರಿಗೆ ಅಭಿನಂದನಾ ಭಾಷಣ ಕೂಡಾ ನಡೆಯಿತು. ಕಾರ್ಯಕ್ರಮ ಮುಗಿದ ಮೇಲೆ ರಾಮನಾಥ್ ಸಾಹೇಬರನ್ನು ಕೇಳಿದ: 'ಹೇಗಿತ್ತು ಸಾರ್ ನನ್ನ ಭಾಷಣ? ಎಲ್ಲಾ ಸರಿಯಾಗಿ ಹೇಳಿದ್ನಾ?'

ಸಾಹೇಬರು ಹೇಳಿದರು: 'ನಾಲಿಗೆ ಮೇಲಿನ ಮಾತು ಮಾತಲ್ಲ ರಾಮನಾಥ್. ಮನಸಿನ ಮಾತು ಕೇಳಿಸ್ಕೋಬೇಕು. ನಾನು ಕೇಳಿಸಿಕೊಂಡಿದ್ದೇನೆ'.

ಮನಸಿನ ಮಾತು ಕೇಳಿಸ್ಕೋಬೇಕು, ಹೌದಲ್ಲ... ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಮೇ 3, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದಶಮಿ ಗಂ. 23-25 ನಕ್ಷತ್ರ ಶತಭಿಷ ಗಂ. 24-06 ಯೋಗ: ಬ್ರಹ್ಮ ಗಂ. 14-19 ಕರಣ: ವಣಿಜ ಗಂ. 12-41, ಮೇಷ ಮಾಸದ 21 ನೇ ದಿನ, ಮಳೆನಕ್ಷತ್ರ: ಭರಣಿ 2.
ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-12 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 23 ಶವ್ವಾಲ್
ಅದೃಷ್ಟ ಸಂಖ್ಯೆ : 9, 11

ಮೇಷ : ಇಷ್ಟದ್ರವ್ಯ ನಿಮ್ಮಲ್ಲಿಯೇ ಇದ್ದರೂ ಅಜ್ಞಾನದ ಕಾರಣವಾಗಿ ಅದನ್ನು ಬೇರೆಲ್ಲಾ ಕಡೆ ಹುಡುಕುವಂತಾಗುತ್ತದೆ. ಕಟ್ಟಡ ನಿರ್ಮಾಣ ಮಾಡಿಸುತ್ತಿರುವವರಿಗೆ ಲಾಭ–ನಷ್ಟಗಳ ಬಗ್ಗೆ ಪುನರಾವಲೋಕನ ಅಗತ್ಯವೆನಿಸುವುದು.

ವೃಷಭ: ಪಾಲುದಾರಿಕೆ ವ್ಯವಹಾರದಲ್ಲಿ ಸಂಶಯಕ್ಕೆ ಆಸ್ಪದ ಕೊಡದೆ ಪಾರದರ್ಶಕತೆಯನ್ನು ಉಳಿಸಿಕೊಳ್ಳಿ. ಗುರುಗಳ ಆಜ್ಞೆಯನ್ನು ಪಾಲಿಸಿದಲ್ಲಿ ಶ್ರೇಯಸ್ಸಾಗುವುದು. ಬುದ್ಧಿ ಪರಮಾತ್ಮನಲ್ಲಿ ಸ್ಥಿರವಾದರೆ ಜಯ ಖಂಡಿತ.

ಮಿಥುನ: ಮಂಗಳಕರವಾದ ಕಾರ್ಯಕ್ರಮದಲ್ಲಿ ಭಾಗವಹಿಸುವಾಗ ಉಡುಗೆ ತೊಡುಗೆಗಳು ಸಾಂಪ್ರದಾಯಿಕವಾಗಿದ್ದರೆ ಚೆನ್ನ. ವಾಸ ಮಾಡುತ್ತಿರುವ ನಿವಾಸದ ಬಗ್ಗೆ ಮೋಹ ಹೆಚ್ಚುತ್ತದೆ. ಇದರಿಂದ ಬೇಸರವಾಗುತ್ತದೆ.

ಕರ್ಕಾಟಕ: ಕಲ್ಪನೆಗೂ ಮತ್ತು ವಾಸ್ತವಕ್ಕೂ ಅಜಗಜಾಂತರ ವ್ಯತ್ಯಾಸವಿರುವುದು ಅಸಮಾಧಾನಕ್ಕೆ ಕಾರಣವಾಗಬಹುದು. ಕುಟುಂಬದಲ್ಲಿ ನೆಮ್ಮದಿಯ ವಾತಾವರಣವನ್ನು ತಂದುಕೊಳ್ಳುವುದು ನಿಮ್ಮ ಕೈಯಲ್ಲಿದೆ.

ಸಿಂಹ: ವಿಳಂಬವಾಗುತ್ತಿರುವ ಕಾರ್ಯಗಳನ್ನು ಶೀಘ್ರವಾಗಿ ಮುಕ್ತಾಯ ಮಾಡಲು ಕುಲದೇವತೆ ಹಾಗೂ ಗ್ರಾಮದೇವತೆಯ ಮೊರೆ ಹೋಗಿ. ಸ್ನೇಹಿತರ ಕೆಲವು ಅಹಿತಕರ ನಡೆಗಳಿಂದ ಇರಿಸುಮುರಿಸಾಗುವುದು.

ಕನ್ಯಾ: ನಿಮ್ಮದೆ ಕೆಲಸವನ್ನು ಬೇರೆಯವರು ತನ್ನದೆಂದು ಹೇಳಿಕೊಳ್ಳುವುದನ್ನು ನೋಡಬೇಕಾಗಬಹುದು. ತುಂಬಾ ಪ್ರಭಾವಿ ವ್ಯಕ್ತಿಗಳ ಮೇಲೆ ದ್ವೇಷವನ್ನು ಇಟ್ಟುಕೊಂಡು ಅದನ್ನು ಸಾಧಿಸುವುದರಲ್ಲಿ ಹುರುಳಿಲ್ಲ.

ತುಲಾ: ಪಕ್ಷಿಪ್ರೇಮಿಗಳು ಪಕ್ಷಿಯ ಶುಶ್ರೂಷೆಯನ್ನು ಮಾಡುವಿರಿ. ಅದರ ಚೇತರಿಕೆಯಿಂದ ಸಂತೋಷವನ್ನು ಹೊಂದುವಿರಿ. ಕುಟುಂಬದ ಜನರೊಂದಿಗೆ ಮನರಂಜನೆಗಾಗಿ ಸಮಯ ಮೀಸಲಿಡಬೇಕಾಗುತ್ತದೆ.

ವೃಶ್ಚಿಕ: ಯಾರದೆಂದು ಗೊತ್ತಿರದ ಅಪರಾಧಗಳನ್ನು ಬೆಳಕಿಗೆ ತರಲುಹೋದ ನಿಮಗೆ ಅಪರಾಧಿ ಪಟ್ಟ ಸಿಗುವ ಸಾಧ್ಯತೆ ಇದೆ. ಸಾಲಗಳನ್ನು ಇತ್ಯರ್ಥ ಮಾಡದ ಹೊರತು ನಿಮ್ಮನ್ನು ನಿದ್ರಾದೇವಿ ಸಲಹುವುದಿಲ್ಲ.

ಧನು: ಅಪಘಾತ ಆದವರನ್ನು ನೋಡಿಯೂ ಶುಷ್ಕಹೃದಯಿಗಳಾಗಿ ಇದ್ದಲ್ಲಿ ಜನರಿಂದ ನಿಂದನೆಗೊಳಪಡುವಿರಿ. ಸಂಪಾದನೆಯಲ್ಲಿ ನೀವು ಮಾಡುತ್ತಿರುವ ದಾನಾದಿ ಕಾರ್ಯಗಳು ಶ್ರೇಯಸ್ಸನ್ನುಂಟು ಮಾಡುತ್ತವೆ.

ಮಕರ: ಕೆಲವು ವಿಚಾರಗಳು ಭ್ರಾಂತಿಯ ಕಾರಣದಿಂದ ಅನಿಶ್ಚಿತತೆಯನ್ನು ಉಂಟುಮಾಡಬಹುದು. ಕಾರ್ಯಗಳ ನಿರ್ವಹಣೆಯನ್ನು ಇತರರಿಗೆ ಕೊಟ್ಟರೆ ಮಂದಗತಿಯ ಕಾರ್ಯವೈಖರಿಯನ್ನು ನೋಡಬೇಕಾಗುತ್ತದೆ.

ಕುಂಭ: ಇತರರ ಮೊಂಡುತನಕ್ಕಾಗಿ ಕೊಟ್ಟ ಶಿಕ್ಷೆಯನ್ನು ಅವರು ಅನುಭವಿಸುವುದನ್ನು ನೋಡಲಾಗದೆ ಕ್ಷಮಿಸಿಬಿಡುತ್ತೀರಿ. ಮನೆಯಲ್ಲಿ ನಡೆಯುವ ಶುಭಕಾರ್ಯಕ್ಕೆ ಬೇಕಾಗುವ ದ್ರವ್ಯಗಳನ್ನು ತರುತ್ತೀರಿ.

ಮೀನ: ಸಣ್ಣದಾಗಿರುವ ಕಿಚ್ಚಿನಿಂದಲೇ ದೊಡ್ಡ ಬೆಂಕಿ ಹೊತ್ತುವಂತೆ ಸಣ್ಣ ಜಗಳಗಳೇ ಮುಂದೆ ದೊಡ್ಡ ಮನಸ್ತಾಪಗಳಿಗೆ ಕಾರಣವಾಗಬಹುದು. ದಿನಸಿ ಅಂಗಡಿ ಮಾಲೀಕರಿಗೆ ಗ್ರಾಹಕರ ಬೇಡಿಕೆ ಪೂರೈಸಲು ಕಷ್ಟವಾಗುವುದು.

ಪದಬಂಧ 5669

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೈ ಕೊನೆಗಿಟ್ಟರೆ ಹೆದರಿಕೆಯೇ? (4)
3.ಮೃಗಜಲ ಇಲ್ಲಿ ಗೋಚರಿಸುತ್ತಿದೆ (4)
5.ಮೃತ್ಯುದೇವತೆ ಕೊನೆಗಿದ್ದಾಗಿನ ಸೂತ್ರ (3)
7.ಈ ವರ್ತಕ ಮೂಲಪುರುಷ! (4)
9.ನಾವೆಯನ್ನು ನಡೆಸುವವನು (3)
10.ವಿಲಾಸಪ್ರಿಯತೆಯನ್ನು ಹೀಗೆನ್ನಿ (4)
11.ವಾಲಿಯ ಮಗನಿವನು (3)
15.ಅತಿಶಯವಾದ ಪ್ರೀತಿ (4)
16.ವನದಲ್ಲಿ ಸಿಕ್ಕಿರುವ ಆದಾಯ (4)

ಮೇಲಿಂದ ಕೆಳಕ್ಕೆ
1.ಈಕೆ ಒಡಹುಟ್ಟಿದವಳು (3)
2.ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವ ವಸ್ತು (2)
3.ಈತ ಲಗ್ನವಾಗುತ್ತಿರುವವನು (5)
4.ಧೈರ್ಯ ಹೀಗೆ ಬಂದಿದೆಯಲ್ಲಾ? (2)
6.ಎಂದಿನಂತೆ ಎಂದು ಹೀಗೆ ಹೇಳಿ (5)
8.ಕಸ್ತೂರಿಯನ್ನು ಕೊಡುವ ಕೊಂಬಿಲ್ಲದ ಜಿಂಕೆ (5)
9.ಒಳಜಗಳವಿದು (5)
12.ಹಲ್ಲು ಇಲ್ಲಿ ಕಾಣುತ್ತಿದೆ (3)
13.ಸಂಕಟದಿಂದ ಕಟ್ಟಿರುವ ತೆರ (2)
14.ಅಭಾವ ಕಾಲದಲ್ಲಿ ಬಂದಿಳಿದ ಅಕ್ಕನ ಗಂಡ (2)

1			2	■	3			4
	■	■		■		■	■	
5	6		■	7			8	■
■		■	■	■		■		■
■		■	9			■		■
■		■		■	■	■		■
■	10				■	11		12
13	■	■		■	14	■	■	
15				■	16			

5668ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮಾಸ 2.ಅರಸ 6.ದಯಾಳು 7.ರಮಣಿ 8.ಗಟಾರ 10.ಮದ್ದು 11.ಕನ್ನಡಿ 13.ಹೆಣ 14.ಕದನ 15.ವಿಜಯ 16.ಹಾರವ 17.ಕೆಡವು 18.ನವೀನ

ಮೇಲಿಂದ ಕೆಳಕ್ಕೆ:
1.ಸವಿಗನಸು 2.ಸದರ 3.ಅಳು 4.ಸರಹದ್ದು 5.ಋಣಿ 9.ಅಂಕಣ 10.ಮಡಿಲು 12.ವಿಮಾನಯಾನ 13.ಹೆಬ್ಬಯಕೆ 14.ಕವನ 15.ವಿಘ್ನ 16.ಹಾವು

ಸುಡೊಕು 6054

	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	7
	6			9			1	
5		7	4		1	9		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6053 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4





ಮೊದಲ ಮತದ ಸಂಭ್ರಮ



ತೌಫಿಕ್ ನದಾಫ, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ

ಮೊದಲ ಸಲ ಮತದಾನ ಮಾಡಲು ಉತ್ಸುಕನಾಗಿರುವೆ. ಚುನಾವಣೆ ಘೋಷಣೆಯಾದ ಬಳಿಕ ಕಾಲೇಜಿನಲ್ಲಿ ರಾಜಕಿಯ ವಿಷಯಗಳು ಹೆಚ್ಚು ಚರ್ಚೆಯಾಗುತ್ತಿವೆ. ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡುವ ಹಕ್ಕನ್ನು ಸಂವಿಧಾನವು ನಮಗೆ ಕಲ್ಪಿಸಿರುವುದು ಹೆಮ್ಮೆಯ ಸಂಗತಿ. ಮತದಾನ ಮಾಡುವುದು ದೇಶದ ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯವಾಗಿದ್ದು, ಅದರಿಂದ ಯಾವುದೇ ಕಾರಣಕ್ಕೂ ವಿಮುಖವಾಗಬಾರದು



ತನುಜಾ ರಾಜೇಂದ್ರ, ಬೆಳಗಾವಿ

ಮತದಾನ ಎಂಬುದು ವರದಾನ. ಅದನ್ನು ಪಡೆದ ಸಂಭ್ರಮದಲ್ಲಿದ್ದೇನೆ. ದೇಶದ 140 ಕೋಟಿ ಜನರಿಗೆ ಸಮಾನ ಹಂಚಿಕೆ ಆದ ಏಕಮಾತ್ರ ವರವಿದು. ಒಂದು ಮತದಿಂದ ಏನು ಮಾಡಲು ಸಾಧ್ಯ ಎಂದು ಹಲವರು ಮತದಾನದಿಂದ ದೂರ ಉಳಿಯುತ್ತಾರೆ. ಅವರು ವರದಾನ ಕಳೆದುಕೊಂಡಂತೆ. ಆಮಿಷಕ್ಕೆ ಮತ ಹಾಕುವವರು ಉಜ್ವಲ ಭವಿಷ್ಯ ರೂಪಿಸುವುದಿಲ್ಲ. ಎಲ್ಲರೂ ಪ್ರಜ್ಞಾವಂತಿಕೆಯಿಂದ ಮತ ಚಲಾಯಿಸಬೇಕು. ಈ ಬಾರಿ ನಾನು ನನ್ನ ದಕ್ಷತೆ ಪ್ರದರ್ಶಿಸಿ, ಮತದಾನದ ಹಕ್ಕು ಚಲಾಯಿಸುವೆ

ಮತ ಆಮಿಷ: ಆಯೋಗದ ವಶ

₹96.73 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹81.19 ಕೋಟಿ
ಮದ್ಯ	₹179.05 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.75 ಕೋಟಿ (617.07 ಕೆ.ಜಿ.)
ಚಿನ್ನ	₹77.85 ಕೋಟಿ (138.94 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37 ಕೆ.ಜಿ.)

ಜನಬೆಂಬಲ ಇರೋದು 'ಮೋದಿ ಗ್ಯಾರಂಟಿ'ಗೆ

ಪ್ರಜಾವಾಣಿ ಸಂದರ್ಶನ

ಬಸವರಾಜ ಬೊಮ್ಮಾಯಿ

ಪ್ರಸಕ್ತ ಲೋಕಸಭಾ ಚುನಾವಣೆಯ ಸ್ಪರ್ಧೆಯಲ್ಲಿರುವ ಮಾಜಿ ಮುಖ್ಯಮಂತ್ರಿಗಳಲ್ಲಿ ಬಸವರಾಜ ಬೊಮ್ಮಾಯಿ ಕೂಡ ಒಬ್ಬರು. ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಅವರು ಬಿಡುವಿಲ್ಲದ ಪ್ರಚಾರದ ನಡುವೆ 'ಪ್ರಜಾವಾಣಿ'ಯೊಂದಿಗೆ ಮಾತಿಗೆ ಸಿಕ್ಕರು...

● ಸಿದ್ದು ಆರ್.ಜಿ.ಹಳ್ಳಿ

● ರಾಜ್ಯ ರಾಜಕಾರಣದಿಂದ ಕೇಂದ್ರ ರಾಜಕಾರಣದತ್ತ ಮುಖ ಮಾಡಲು ಕಾರಣವೇನು?

ಹಾಲಿ ಸಂಸದ ಶಿವಕುಮಾರ ಉದಾಸಿ ಅವರು ಚುನಾವಣೆಗೆ ಸ್ಪರ್ಧಿಸಲ್ಲ ಎಂದು ಹೇಳಿದ ನಂತರ, ಗೆಲ್ಲುವ ಅಭ್ಯರ್ಥಿಯ ಬಗ್ಗೆ ಪಕ್ಷ ಹಲವಾರು ಮೂಲಗಳಿಂದ ಮಾಹಿತಿ ಕಲೆ ಹಾಕಿತು. ಪಕ್ಷದ ವರಿಷ್ಠರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆ ಮೇರೆಗೆ ನಾನು ಸ್ಪರ್ಧಿಸಬೇಕಾಯಿತು. ನಮ್ಮ ತಂದೆ ಕೂಡ ರಾಜ್ಯ ರಾಜಕಾರಣದಿಂದ ಕೇಂದ್ರ ರಾಜಕಾರಣಕ್ಕೆ ಹೋಗಿದ್ದರು. ಎಲ್ಲಿದ್ದರೂ ಜನಸೇವೆಯೇ ಮುಖ್ಯ ಗುರಿ.

● ಕ್ಷೇತ್ರದಲ್ಲಿ ಜನರ ಪ್ರತಿಕ್ರಿಯೆ ಹೇಗಿದೆ?

ಶಿಗ್ಗಾವಿ-ಸವಣೂರು ವಿಧಾನಸಭಾ ಕ್ಷೇತ್ರ ಅಭಿವೃದ್ಧಿಯಾದ ಮಾದರಿಯಲ್ಲೇ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳೂ ಅಭಿವೃದ್ಧಿಯಾಗಬೇಕು ಎಂಬುದು ಜನರ ಬಯಕೆ. ಗ್ರಾಮಗಳಲ್ಲಿ ನಿರೀಕ್ಷೆ ಮೀರಿ ಜನರಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಕಾರ್ಯಕರ್ತರು ಕೂಡ ಉತ್ಸಾಹದಿಂದ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆ. ಮತದಾರರ ಅಭೂತಪೂರ್ವ ಬೆಂಬಲದಿಂದ ಗೆಲುವು ದಾಖಲಿಸುವೆ ಎಂಬ ವಿಶ್ವಾಸವಿದೆ.



● ಕಾಂಗ್ರೆಸ್ ಗ್ಯಾರಂಟಿಗಿಂತ ಮೋದಿ ಗ್ಯಾರಂಟಿ ಉತ್ತಮ ಎಂದು ಹೇಗೆ ಹೇಳುತ್ತೀರಿ?

ಮೋದಿಯವರ ಗ್ಯಾರಂಟಿ ಶಾಶ್ವತವಾದದ್ದು. ದೇಶದ ಜಿಡಿಪಿ ಶೇ 6.6 ಇದ್ದು, ಜನರ ಆದಾಯ ಹೆಚ್ಚಾಗುತ್ತಿದೆ. 25 ಕೋಟಿ ಜನರ ಬಡತನ ನಿರ್ಮೂಲನೆ ಆಗಿದ್ದು, ಅದೇ ಜಿಡಿಪಿ ಹೆಚ್ಚಳವಾಗಲು ಕಾರಣ. ಹಳ್ಳಿಗಳಲ್ಲಿ ಮನೆ ನಿರ್ಮಾಣ, ಶೌಚಾಲಯ ನಿರ್ಮಾಣ, ಹೆಣ್ಣುಮಕ್ಕಳಿಗೆ ಉಜ್ವಲ ಗ್ಯಾಸ್, ಜಲಜೀವನ್ ಯೋಜನೆಯಡಿ ಮನೆ-ಮನೆಗೆ ನೀರು, ಬಡವರಿಗೆ 5 ಕೆ.ಜಿ. ಅಕ್ಕಿ, ಯುವಕರಿಗೆ 'ಮುದ್ರಾ' ಯೋಜನೆಯಡಿ ನೆರವು... ಇವು ಶಾಶ್ವತ ಗ್ಯಾರಂಟಿಗಳು. ಕಾಂಗ್ರೆಸ್ ಗ್ಯಾರಂಟಿ ಯೋಜನೆಯಡಿ ಕೊಡುವ ಅಲ್ಪ ಹಣದಿಂದ ಜನರ ಆರ್ಥಿಕ ಸ್ಥಿತಿ ಸುಧಾರಣೆಯಾಗುವುದಿಲ್ಲ, ರಾಜ್ಯದ ಖಜಾನೆ ಕೂಡ ಖಾಲಿಯಾಗುತ್ತದೆ. ಕಾಂಗ್ರೆಸ್‌ನವರದ್ದು ರಾಜಕೀಯ ಹಿನ್ನೆಲೆ ಮತ್ತು ಚುನಾವಣಾ ಪ್ರೇರಿತ ಗ್ಯಾರಂಟಿ. ದೇಶ ಕಟ್ಟುವ ಮತ್ತು ಬದುಕು ಕಟ್ಟಿಕೊಡುವ ಮೋದಿ ಗ್ಯಾರಂಟಿಗೆ ಕಾಂಗ್ರೆಸ್ ಗ್ಯಾರಂಟಿಯನ್ನು ಹೋಲಿಸುವುದು ಅಸಾಧ್ಯ.

● ತಾವು ಸಿ.ಎಂ ಆಗಿದ್ದಾಗ ರಾಜ್ಯಕ್ಕೆ ಮತ್ತು ಜಿಲ್ಲೆಗೆ ನೀಡಿರುವ ಕೊಡುಗೆಗಳಿಗಿಂತ ಹೆಚ್ಚಾಗಿ ಮೋದಿ ಸರ್ಕಾರದ ಸಾಧನೆ ಮೇಲೆ ಮತ ಕೇಳಲು ಕಾರಣವೇನು?

ತುಂಗಾ ಮೇಲ್ದಂಡೆ ಯೋಜನೆಯಡಿ 1 ಲಕ್ಷ ಎಕರೆಗೆ ನೀರಾವರಿ ಸೌಲಭ್ಯ, ಬ್ಯಾಡಗಿ, ಹಾನಗಲ್, ಹಿರೇಕೆರೂರು, ರಾಣೆಬೆನ್ನೂರು ತಾಲ್ಲೂಕುಗಳಲ್ಲಿ ಏತ ನೀರಾವರಿ ಯೋಜನೆಗಳು, ಹಾವೇರಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜು, ಹಾವೇರಿ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ ಮತ್ತು ಮೆಗಾ ಡೇರಿ ಸ್ಥಾಪನೆ ಮುಂತಾದ ಸೌಲಭ್ಯಗಳನ್ನು ಹಾವೇರಿ ಜಿಲ್ಲೆಗೆ ಕಲ್ಪಿಸಿರುವುದು ಜನರಿಗೆ ಗೊತ್ತಿದೆ. ಮೋದಿ ಅವರಂಥ ಸಮರ್ಥ ನಾಯಕನ ಕೈಯಲ್ಲಿ ದೇಶವಿದ್ದರೆ ಇನ್ನೂ ಅಭಿವೃದ್ಧಿ ಆಗುತ್ತದೆ ಮತ್ತು ಸುರಕ್ಷಿತವಾಗಿರುತ್ತದೆ. ಹೀಗಾಗಿ ಮೋದಿ ಅವರ ಸಾಧನೆಯನ್ನೂ ಹೇಳುತ್ತಿದ್ದೇನೆ.

● 2023ರ ವಿಧಾನಸಭೆ ಚುನಾವಣೆಯನ್ನು ನಿಮ್ಮ ಸಾರಥ್ಯದಲ್ಲಿ ಎದುರಿಸಿದ ಬಿಜೆಪಿಗೆ ಹಿನ್ನಡೆಯಾಗಲು ಕಾರಣವೇನು?

ಹಿನ್ನಡೆಗೆ ಹಲವು ಕಾರಣಗಳಿವೆ. ನಮ್ಮ ಸರ್ಕಾರದ ಸಾಧನೆಯನ್ನು ನಿರೀಕ್ಷಿತ ಮಟ್ಟದಲ್ಲಿ ಜನರಿಗೆ ತಲುಪಿಸಲು ಸಾಧ್ಯವಾಗಲಿಲ್ಲ. ಕೆಲವು ಕ್ಷೇತ್ರಗಳಿಗೆ ಕಡೇ ಕ್ಷಣದಲ್ಲಿ ಅಭ್ಯರ್ಥಿ ಘೋಷಿಸಿದೆವು. ಕೆಲ ವಿಚಾರಗಳಲ್ಲಿ ಇನ್ನಷ್ಟು ದಕ್ಷತೆಯಿಂದ ಕೆಲಸ ಮಾಡಿದ್ದರೆ, 500ರಿಂದ 2500 ಮತಗಳ ಅಂತರದಲ್ಲಿ ಕಳೆದುಕೊಂಡ 30 ಸ್ಥಾನಗಳನ್ನು ಗೆಲ್ಲುತ್ತಿದ್ದೆವು. ಈಗ ನಾವು ತಪ್ಪುಗಳನ್ನು ತಿದ್ದಿಕೊಂಡು ಮುಂದೆ ಸಾಗಿದ್ದೇವೆ.

● ನೀವು ಅಧಿಕಾರದಲ್ಲಿದ್ದಾಗ ಮುಸ್ಲಿಮರ ಶೇ 4ರಷ್ಟು ಮೀಸಲಾತಿಯನ್ನು ರದ್ದುಗೊಳಿಸಿದ್ದೀರಿ. ಈ ವಿಷಯ ರಾಷ್ಟ್ರ ವ್ಯಾಪಿ ಚರ್ಚೆಯಾಗುತ್ತಿದೆಯಲ್ಲ?

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಮುಸ್ಲಿಂ ಸಮುದಾಯದಲ್ಲಿರುವ ಪಿಂಜಾರ, ನದಾಫ ಸೇರಿದಂತೆ 24 ಜಾತಿಗಳು ಈಗಾಗಲೇ '2ಎ' ನಲ್ಲಿವೆ. ಬಡ ಮುಸ್ಲಿಮರ ಮೀಸಲಾತಿಯನ್ನು ನಾವು ತೆಗೆದಿಲ್ಲ. ಜಾತಿ ಆಧಾರಿತ ಮೀಸಲಾತಿ ಈಗಾಗಲೇ ಕರ್ನಾಟಕದಲ್ಲಿದೆ. ಧರ್ಮ ಆಧಾರಿತ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ. ಇದರಿಂದ ದೇಶದಲ್ಲಿ ದೊಡ್ಡ ಅನಾಹುತವಾಗುತ್ತದೆ ಅಂತ ಅಂಬೇಡ್ಕರ್ ಅವರೇ ಹೇಳಿದ್ದರು. ಆಂಧ್ರದಲ್ಲಿ ಎರಡು ಮೂರು ಬಾರಿ ಮಾಡಿದ್ದ ಪ್ರಯೋಗಗಳನ್ನು ನ್ಯಾಯಾಲಯ ರದ್ದುಪಡಿಸಿದೆ.

● 'ಚುನಾವಣಾ ಬಾಂಡ್' ವಿಷಯ ಕಾಂಗ್ರೆಸ್ಸಿಗೆ ಬ್ರಹ್ಮಾಸ್ತ್ರವಾಗಿದೆಯಲ್ಲ?

ಇ.ಡಿ, ಐ.ಟಿ ಪ್ರಕರಣಗಳಿರುವ ಕಂಪನಿಗಳಿಂದ ಶೇ 66ರಷ್ಟು ಪಾಲನ್ನು ವಿರೋಧ ಪಕ್ಷಗಳೇ ಪಡೆದಿವೆ. ಇದಕ್ಕೆ ಅವರೇ ಉತ್ತರ ಕೊಡಬೇಕು. ಚುನಾವಣಾ ಬಾಂಡ್‌ನಲ್ಲಿ ಎಲ್ಲ ಪಕ್ಷಗಳು ಪಾಲುದಾರರು. ಬಾಂಡ್ ಇರುವುದರಿಂದ ಯಾರು ಯಾರಿಗೆ ಎಷ್ಟು ಕೊಟ್ಟರು ಎಂಬುದು ಗೊತ್ತಾಗಿದೆ. ಬಾಂಡ್ ಇಲ್ಲದಿದ್ದರೆ ಗೊತ್ತೇ ಆಗುತ್ತಿರಲಿಲ್ಲ. ಕಾಂಗ್ರೆಸ್‌ಗೆ ನಂ.2 ದಂಧೆ ಮತ್ತು ಹಣದ ಮೇಲೆ ಆಸೆ. 'ನೋಟ್ ಬ್ಯಾನ್' ಮಾಡಿದಾಗಲೂ ಕಾಂಗ್ರೆಸ್ ತನ್ನ ಹಿತಾಸಕ್ತಿ ಕಾಪಾಡಿಕೊಳ್ಳಲು ಹೆಣಗಾಡಿತು.

● ಹಾವೇರಿ ಮತ್ತು ಗದಗ ಜಿಲ್ಲೆಯ ಕಾಂಗ್ರೆಸ್ ಸಚಿವರು ಮತ್ತು ಶಾಸಕರು ನಿಮ್ಮ ಬಗ್ಗೆ ಮೃದು ಧೋರಣೆ ತೋರಿಸುತ್ತಿದ್ದಾರೆ ಎಂಬ ಮಾತಿದೆಯಲ್ಲ?

ಕಾಂಗ್ರೆಸ್‌ನವರು ಆ ರೀತಿ ಮೃದು ಧೋರಣೆಯನ್ನೇನೂ ತೋರಿಸುತ್ತಿಲ್ಲ. ನನ್ನ ಬಗ್ಗೆ ಟೀಕೆ ಮಾಡುತ್ತಿದ್ದಾರೆ.

● ಸುಪ್ರೀಂ ಕೋರ್ಟ್ ಚಾಟಿ ಬೀಸಿದ ಮೇಲೆಯೇ ಕೇಂದ್ರ ಸರ್ಕಾರ ಬರ ಪರಿಹಾರ ಬಿಡುಗಡೆ ಮಾಡಿದೆಯಲ್ಲಾ?

ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಯಾವುದೇ ಆದೇಶ ಕೊಟ್ಟಿಲ್ಲ. ರಾಜ್ಯಕ್ಕೆ ಬರ ಪರಿಹಾರ ಕೊಡಲು ಏಕೆ ವಿಳಂಬವಾಗಿದೆ ಎಂಬುದನ್ನು ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿದೆ. ಪರಿಹಾರ ಕೊಡುವುದಿಲ್ಲ ಅಂತ ಎಲ್ಲೂ ಹೇಳಿಲ್ಲ. ನೀತಿಸಂಹಿತೆ ಇದ್ದರೂ ಬರ ಪರಿಹಾರ ಬಿಡುಗಡೆ ಮಾಡಬಹುದು ಎಂದು ಚುನಾವಣಾ ಆಯೋಗ ಹೇಳಿದ ಮೇಲೆ ಪರಿಹಾರ ಕೊಡಲಾಗಿದೆ. ರಾಜ್ಯದಲ್ಲಿ ಪ್ರವಾಹ ಬಂದಾಗ ರಾಜ್ಯದ ಬೊಕ್ಕಸದಿಂದ ಒಂದು ತಿಂಗಳಲ್ಲೇ ₹2,730 ಕೋಟಿಯನ್ನು 17 ಲಕ್ಷ ರೈತರಿಗೆ ಪರಿಹಾರವಾಗಿ ಕೊಟ್ಟಿದ್ದೆವು. ಕಾಂಗ್ರೆಸ್ ಸರ್ಕಾರಕ್ಕೆ ಮನಸ್ಸಿದ್ದರೆ, 6 ತಿಂಗಳ ಹಿಂದೆಯೇ ಬರ ಪರಿಹಾರ ಕೊಡಬಹುದಿತ್ತು.

● ನೀವು ಸಂಸದರಾದರೆ ಕ್ಷೇತ್ರದ ಜನ ನಿಮ್ಮಿಂದ ಏನನ್ನು ನಿರೀಕ್ಷಿಸಬಹುದು?

ಸಂಸದನಾದ ತಕ್ಷಣವೇ, ಈ ಭಾಗದಲ್ಲಿ ರೈತರಿಗೆ ಬೇಕಾದ ನೀರಾವರಿ ಸೌಲಭ್ಯ ಕಲ್ಪಿಸುವೆ. ಯುವಜನರಿಗೆ ಉದ್ಯೋಗ ನೀಡುವ ಕೈಗಾರಿಕೆ ಮತ್ತು ಆಹಾರ ಸಂಸ್ಕರಣಾ ಘಟಕ ಸ್ಥಾಪನೆಗೆ ಕ್ರಮ ಕೈಗೊಳ್ಳುವೆ. ಹಾವೇರಿ-ಗದಗ ಜಿಲ್ಲೆಗಳ ಧಾರ್ಮಿಕ ಮತ್ತು ಐತಿಹಾಸಿಕ ತಾಣಗಳ ಅಭಿವೃದ್ಧಿಗೆ ಆದ್ಯತೆ ನೀಡುವೆ.

'ಕರ್ನಾಟಕ ಅಸ್ಮಿತೆಗೆ ಕಳಂಕ'

ಪ್ರಜಾವಾಣಿ ವಾರ್ತೆ



ಜಿಗ್ನೇಶ ಮೆವಾನಿ

ಕಲಬುರಗಿ: 'ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್ ಹಾಗೂ ಬಿಜೆಪಿಯು ಕರ್ನಾಟಕದ ಅಸ್ಮಿತೆ, ಕರ್ನಾಟಕದ ಗೌರವ, ಬಸವಣ್ಣನವರ ಹಿರಿಮೆಗೆ ಕಳಂಕ ತಂದಿದ್ದಾರೆ. ಜನರು ಅವರಿಗೆ ರಾಜ್ಯದಲ್ಲಿ ನೆಲೆ ನೀಡಬಾರದು' ಎಂದು ಗುಜರಾತ್ ಶಾಸಕ, ಸಾಮಾಜಿಕ ಹೋರಾಟಗಾರ ಜಿಗ್ನೇಶ ಮೆವಾನಿ ಒತ್ತಾಯಿಸಿದರು.

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಸಮುದಾಯಗಳೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಜ್ವಲ್ ರೇವಣ್ಣ ನಡೆಸಿದ್ದು ಇಡೀ ವಿಶ್ವದ ಅತಿದೊಡ್ಡ ಲೈಂಗಿಕ ಹಗರಣವಾಗಿದೆ. ಇಡೀ ಜಗತ್ತಿನಲ್ಲಿ ಇದಕ್ಕಿಂತಲೂ ದೊಡ್ಡ ಲೈಂಗಿಕ ಹಗರಣ ನಡೆದಿಲ್ಲ. ಆತ 16 ವರ್ಷದ ಬಾಲಕಿಯಿಂದ ಹಿಡಿದು, ತಮ್ಮ ತಾಯಿ, ಅಜ್ಜಿಯ ವಯಸ್ಸಿನ 65 ವರ್ಷದ ಮಹಿಳೆಯರನ್ನೂ ಬಿಟ್ಟಿಲ್ಲ. ಮೂರು ಸಾವಿರದಷ್ಟು ವಿಡಿಯೊಗಳು ಹರಿದಾಡುತ್ತಿವೆ' ಎಂದು ಹರಿಹಾಯ್ದರು. 'ಆದಾಗ್ಯೂ, ಅಂಥ ವ್ಯಕ್ತಿ ಹೆಗಲ ಮೇಲೆ ಪ್ರಧಾನಿ ಮೋದಿ ಕೈಹಾಕಿ, ಆತನ ಗುಣಗಾನ ಮಾಡುತ್ತಾರೆ. ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಕೊಡುತ್ತಾರೆ. ಚುನಾವಣಾ ಪ್ರಚಾರ ಕಾರ್ಯಕ್ರಮಕ್ಕೆ ಬಂದು ಆತನ ಪರವಾಗಿ ಮತಯಾಚಿಸುತ್ತಾರೆ' ಎಂದು ಕಿಡಿಕಾರಿದರು.

ಶಾ ಅಪರಾಧಿ: ರಾಹುಲ್

ಪ್ರಜಾವಾಣಿ ವಾರ್ತೆ

ರಾಯಚೂರು: 'ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿರುವ ಬಗ್ಗೆ ಬಿಜೆಪಿ ಮುಖಂಡರೊಬ್ಬರು ಪತ್ರ ಬರೆದು ಎಚ್ಚರಿಸಿದ್ದರೂ ಕ್ರಮ ಕೈಗೊಳ್ಳದೆ ಸುಮ್ಮನಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಅಪರಾಧ ಎಸಗಿದ್ದಾರೆ. ಹೀಗಾಗಿ ಅವರ ಮೇಲೂ ಕ್ರಮ ಕೈಗೊಳ್ಳಬೇಕು' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಒತ್ತಾಯಿಸಿದರು.

ಗುರುವಾರ ಇಲ್ಲಿ ಪ್ರಜಾ ಧ್ವನಿ-2 ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, 'ಗೃಹ ಸಚಿವರಿಗೆ ಮಾಹಿತಿ ಇತ್ತು ಎಂದ ಮೇಲೆ ಪ್ರಧಾನಿ ನರೇಂದ್ರ ಮೋದಿಗೂ ಈ ವಿಷಯ ಗೊತ್ತಿರಲೇಬೇಕು. ಅಧಿಕಾರ ದಾಹದಿಂದಾಗಿ ಪ್ರಧಾನಿ ಹಾಗೂ ಗೃಹ ಸಚಿವರು ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣ ಚರ್ಚೆಯಾಗುತ್ತಿದ್ದಂತೆ ಮೋದಿ ಅವರು ಕರ್ನಾಟಕದ ತಮ್ಮ ಎಲ್ಲಾ ಪ್ರಚಾರ ಸಭೆಗಳನ್ನು ರದ್ದುಗೊಳಿಸಿದ್ದಾರೆ. ಮೋದಿ ಅವರೇ ಕರ್ನಾಟಕದಿಂದ ಓಡಿಹೋಗಬೇಡಿ. ರಾಜ್ಯಕ್ಕೆ ಬಂದು ಪ್ರಜ್ವಲ್‌ನನ್ನು ಏಕೆ ರಕ್ಷಿಸಿದ್ದೀರಿ? ಈ ವ್ಯಕ್ತಿಗಾಗಿ ಏಕೆ ಮತಯಾಚಿಸಿದ್ದೀರಿ ಎಂಬ ಬಗ್ಗೆ ಸಂತ್ರಸ್ತ ಮಹಿಳೆಯರಿಗೆ ಉತ್ತರ ನೀಡಿ' ಎಂದು ಪ್ರಧಾನಿಗೆ ಸವಾಲು ಹಾಕಿದರು.

'ಮೋದಿಗೆ ಸಮಾನರು ಕಾಂಗ್ರೆಸ್‌ನಲ್ಲಿ ಇಲ್ಲ'

ಪ್ರಜಾವಾಣಿ ವಾರ್ತೆ

ಗಜೇಂದ್ರಗಡ (ಗದಗ ಜಿಲ್ಲೆ): 'ಕಾಂಗ್ರೆಸ್ ಮುಳುಗುತ್ತಿರುವ ಹಡಗು. ಆ ಪಕ್ಷಕ್ಕೆ ಯಾರೂ ನಾಯಕರಿಲ್ಲ. ಮುಂದಿನ ಪ್ರಧಾನಿ ಅಭ್ಯರ್ಥಿ ಯಾರು ಅಂತ ಅವರ ಕಣ್ಣಮುಂದೆ ಇಲ್ಲ. ಮೋದಿಗೆ ಸರಿಸಮಾನ ವ್ಯಕ್ತಿ ಕಾಂಗ್ರೆಸ್‌ನಲ್ಲಿ ಯಾರೂ ಇಲ್ಲ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

'ರಾಜ್ಯದ 28 ಕ್ಷೇತ್ರಗಳಲ್ಲಿ ಈಗಾಗಲೇ ಪ್ರವಾಸ ಮಾಡಿದ್ದೇನೆ. ರಾಜ್ಯದಲ್ಲಿನ 28 ಕ್ಷೇತ್ರಗಳನ್ನೂ ಗೆಲ್ಲುವ ವಿಶ್ವಾಸ ಇದೆ. ಮೋದಿ ಹೆಸರಿನಲ್ಲಿ ನಾವು ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಜನರು ಬಿಜೆಪಿ ಬೆಂಬಲಿಸುತ್ತಾರೆ. ಹಾವೇರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಎರಡು ಲಕ್ಷಕ್ಕೂ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುತ್ತಾರೆ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.


ಬಿಜೆಪಿಗೆ ಮತ ಹಾಕಿದರೆ ಗ್ಯಾರಂಟಿಗಳನ್ನು ರದ್ದು ಮಾಡುತ್ತಾರೆ ಎಂಬ ಶಾಸಕ ರಾಜು ಕಾಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಾವು ಅಭಿವೃದ್ಧಿ ಕಡೆಗೆ ವಿಶೇಷ ಗಮನ ನೀಡುತ್ತೇವೆ. ಆದರೆ, ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದ ಮೇಲೆ ವಿದ್ಯುತ್ ದರ ಜಾಸ್ತಿ ಮಾಡಿದರು. ಕೇಂದ್ರದ ಕಿಸಾನ್ ಸಮ್ಮಾನ್ ಯೋಜನೆ ನಿಲ್ಲಿಸಿದ್ದಾರೆ. ಅಧಿಕಾರಕ್ಕೆ ಬಂದಾಗಿನಿಂದಲೂ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಕೊಟ್ಟಿಲ್ಲ. ಸರ್ಕಾರ ದಿವಾಳಿ ಆಗಿದೆ' ಎಂದರು.




ದೇಶದ ಚುನಾವಣೆ ಮೇಲೆ ವಿಶ್ವವೇ ದೃಷ್ಟಿ ನೆಟ್ಟಿದೆ. ಭಾರತದಲ್ಲಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕೆಂದು ಪಾಕಿಸ್ತಾನದ ಜನರು ಬಯಸಿದ್ದಾರೆ. ವಿಶ್ವದ ದೊಡ್ಡಣ್ಣ ಅಮೆರಿಕ, ಸಾಂಪ್ರದಾಯಿಕ ವಿರೋಧಿ ದೇಶ ಸೇರಿದಂತೆ ಇತರೇ ರಾಷ್ಟ್ರಗಳು ದೇಶದಲ್ಲಿ ನಡೆದಿರುವ ಚುನಾವಣೆ ಮೇಲೆ ದೃಷ್ಟಿನೆಟ್ಟಿವೆ. ಮೋದಿ ಅವರು ಪ್ರಧಾನಿ ಆಗುವುದು ಎಲ್ಲರಿಗೂ ಬೇಕಿದೆ

ಬಿ.ಎಸ್.ಯಡಿಯೂರಪ್ಪ
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಯಾರು ಹಿತವರು ಮೂವರಲ್ಲಿ? ಕ್ಷೇತ್ರ ಸಮೀಕ್ಷೆ





ಕ್ಷೇತ್ರವನ್ನು ಕಾಡುವ ವಿಷಯಗಳು

- ಜಗಳೂರು ಭಾಗದ 57 ಕೆರೆ ತುಂಬಿಸುವ ಯೋಜನೆ ಪೂರ್ಣಗೊಳ್ಳದಿರುವುದು
- ದಾವಣಗೆರೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಇಲ್ಲದಿರುವುದು
- ರಾಜ್ಯದ ಮಧ್ಯಭಾಗವಾದರೂ ಕೈಗಾರಿಕೆಗಳ ಸ್ಥಾಪನೆಗೆ ಸಿಗದ ಮನ್ನಣೆ
- ಭದ್ರಾ ಅಚ್ಚುಕಟ್ಟು ಪ್ರದೇಶದ ಕೊನೆಯ ಭಾಗದ ರೈತರಿಗೆ ನೀರು ಹರಿಯದಿರುವುದು





ಡಾ.ಪ್ರಭಾ ಮಲ್ಲಿಕಾರ್ಜುನ್ (ಕಾಂಗ್ರೆಸ್)

ಜಾರಿಯಾಗಿರುವ 'ಗ್ಯಾರಂಟಿ' ಯೋಜನೆಗಳು, ಲೋಕಸಭೆ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಲಾದ 'ಗ್ಯಾರಂಟಿ'ಗಳಿಗೆ ಮತದಾರ ಸಂತುಷ್ಟನಾಗಿದ್ದು, ಗೆಲುವಿನ ವಿಶ್ವಾಸ ಇದೆ

- 👍 ಪತಿ ಮಲ್ಲಿಕಾರ್ಜುನ್, ಮಾವ ಶಾಮನೂರು ಶಿವಶಂಕರಪ್ಪ ಅಭಿವೃದ್ಧಿ ಕಾರ್ಯಗಳು
- 👍 ಕ್ಷೇತ್ರದಲ್ಲಿ ಕಾಂಗ್ರೆಸ್‌ನ 6 ಶಾಸಕರು ಹಾಗೂ ಪಕ್ಷೇತರ ಶಾಸಕಿಯ ಬೆಂಬಲ
- 👎 ಬಂಡಾಯ ಅಭ್ಯರ್ಥಿ ಕಾಂಗ್ರೆಸ್‌ನ ಮತಗಳನ್ನೇ ಸೆಳೆಯುವ ಭೀತಿ ಇರುವುದು
- 👎 ಸಚಿವ ಮಲ್ಲಿಕಾರ್ಜುನ್ ಜಿಲ್ಲೆಯ ಎಲ್ಲೆಡೆ ಭೇಟಿ ನೀಡದಿರುವುದು



ಗಾಯತ್ರಿ ಸಿದ್ದೇಶ್ವರ (ಬಿಜೆಪಿ)

ಮೋದಿ ಶ್ರೀರಾಮನನ್ನು ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿದ್ದನ್ನು ಜನರು ಮರೆತಿಲ್ಲ. ಪತಿ ಸಿದ್ದೇಶ್ವರ ಎಲ್ಲ ಗ್ರಾಮಗಳ ಮತದಾರರ ಹತ್ತಿರದಲ್ಲಿದ್ದವರು. ಇವು ನನ್ನ ಕೈಹಿಡಿಯಲಿವೆ

- 👍 ಪ್ರಧಾನಿ ನರೇಂದ್ರ ಮೋದಿ ನಾಮಬಲ, ಬಿಜೆಪಿ ಕೋಟೆ ಎಂಬ ಆತ್ಮವಿಶ್ವಾಸ
- 👍 ಪತಿ ಸಿದ್ದೇಶ್ವರ ಅವರ ಚುನಾವಣೆ ನೈಪುಣ್ಯ
- 👎 ಮನಃಸ್ತಾಪ ಹೊಂದಿರುವ ಬಿಜೆಪಿ ಮುಖಂಡರಿಂದ ದೊರೆಯದ ಬೆಂಬಲ
- 👎 ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ನ ಹೆಚ್ಚಿನ ಶಾಸಕರು ಇರುವುದು, 'ಮಾಜಿ'ಗಳ ಬೆಂಬಲ ದೊರೆಯದಿರುವುದು



ಜಿ.ಬಿ. ವಿನಯ್‌ಕುಮಾರ್ (ಪಕ್ಷೇತರ)

ನಾನು ಹಣ ಮಾಡಲು ರಾಜಕೀಯಕ್ಕೆ ಬಂದವನಲ್ಲ. ಕುಟುಂಬ ರಾಜಕಾರಣದಿಂದ ಬೇಸತ್ತಿರುವ ಕ್ಷೇತ್ರದ ಮತದಾರ ಖಂಡಿತ ನನ್ನನ್ನು ಬೆಂಬಲಿಸುತ್ತಾನೆ ಎಂಬ ವಿಶ್ವಾಸವಿದೆ

- 👍 ಯುವಕರು, ಹಿಂದುಳಿದವರ ಮತಗಳು ಬರುತ್ತವೆ ಎಂಬ ಆತ್ಮವಿಶ್ವಾಸ
- 👍 ಕಳೆದ ಒಂದು ವರ್ಷದಿಂದ ಕ್ಷೇತ್ರದಲ್ಲಿ ಸುತ್ತಾಟ, ಹಳ್ಳಿಹಳ್ಳಿಯಲ್ಲಿ ಸಂಪರ್ಕ
- 👎 ಬಹುತೇಕ ಬೆಂಬಲಿಗರು ಕಾಂಗ್ರೆಸ್‌ನತ್ತ ವಾಲುತ್ತಿರುವುದು
- 👎 ರಾಷ್ಟ್ರೀಯ ಪಕ್ಷಗಳೊಂದಿಗೆ ಸೆಣಸಾಟದ ಸವಾಲು, ಗ್ಯಾರಂಟಿ, ಮೋದಿ ಅಲೆ ಮೆಟ್ಟಿನಿಲ್ಲುವ ಪರೀಕ್ಷೆ

● ಸಿದ್ದಯ್ಯ ಹಿರೇಮಠ

ದಾವಣಗೆರೆ: ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಸಂಸದ ಜಿ.ಎಂ. ಸಿದ್ದೇಶ್ವರ ಕುಟುಂಬಗಳ ನಡುವಿನ ಜಿದ್ದಾಜಿದ್ದಿಗೆ ಸಾಕ್ಷಿಯಾಗುತ್ತಲೇ ಬಂದಿದೆ ದಾವಣಗೆರೆ ಲೋಕಸಭೆ ಕ್ಷೇತ್ರ. ಈ ಬಾರಿ ಆ ಕುಟುಂಬಗಳ ಮಹಿಳೆಯರು ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿ ಜಿ.ಬಿ. ವಿನಯಕುಮಾರ್ ಅವರೂ ಅದೃಷ್ಟ ಪರೀಕ್ಷೆಗೆ ಮುಂದಾಗಿರುವುದರಿಂದ ತ್ರಿಕೋನ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ.

ಸತತ ನಾಲ್ಕು ಬಾರಿ ಜಯಿಸಿರುವ ಹಾಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ 'ಆರೋಗ್ಯ ಸಮಸ್ಯೆ'ಯ ಕಾರಣ ಮುಂದಿರಿಸಿ ಟಿಕೆಟ್ ನಿರಾಕರಿಸಿರುವ ಬಿಜೆಪಿ, ಅವರ ಪತ್ನಿ ಗಾಯತ್ರಿ ಅವರಿಗೆ ಮಣೆ ಹಾಕಿದೆ. ಶಾಮನೂರು ಕುಟುಂಬದ ಸೊಸೆ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಡಾ.ಪ್ರಭಾ ಈ ಬಾರಿ ಕಾಂಗ್ರೆಸ್‌ನ ಹುರಿಯಾಳು.

ಸಾದರ ಲಿಂಗಾಯತ ಸಮುದಾಯದ ಈ ಎರಡೂ ಕುಟುಂಬಗಳ ಹೆಣ್ಣುಮಕ್ಕಳು ಮೊದಲ ಬಾರಿಗೆ ಚುನಾವಣೆಗೆ ಸ್ಪರ್ಧಿಸಿದ್ದರೂ ಕ್ಷೇತ್ರದ ಮತದಾರರಲ್ಲಿ ಮಾತ್ರ ಇವರಿಬ್ಬರೂ 'ಹೊಸಬರು' ಎಂಬ ಭಾವನೆ ಇಲ್ಲ. 'ಸ್ಪರ್ಧೆ ಏನಿದ್ದರೂ ಈ ಕುಟುಂಬಗಳ ನಡುವಿನದ್ದೇ' ಎಂಬುದು ಮತದಾರರ ಮನಸ್ಸಿನಲ್ಲೂ ಅಚ್ಚಾದಂತಿದೆ.

ಬಿಜೆಪಿಯ ಇತರ ಸ್ಪರ್ಧಾಕಾಂಕ್ಷಿಗಳು ಟಿಕೆಟ್ ಕೈತಪ್ಪಿದ್ದರಿಂದ ಬಂಡೆದ್ದು ಬೀದಿಗಿಳಿದಿದ್ದರಾದರೂ, ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಬಂಡಾಯಗಾರರ ಬಾಯಿ ಮುಚ್ಚಿಸಿ ಅಧಿಕೃತ ಅಭ್ಯರ್ಥಿ ಪರ ಇರುವಂತೆ ನೋಡಿಕೊಂಡಿದ್ದಾರೆ.

ಆದರೆ, ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಅವಕಾಶ ಕೈತಪ್ಪಿದ್ದರಿಂದ ಬಂಡೆದ್ದಿರುವ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್‌ಕುಮಾರ್ ಅವರ ಅಸಮಾಧಾನ ತಣಿಸಲು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಸ್ಥಿಕೆ ವಹಿಸಿದರೂ ಸಾಧ್ಯವಾಗಿಲ್ಲ. ಇದರಿಂದಾಗಿ, ಇಬ್ಬರು ಮಹಿಳೆಯರ ನಡುವಿನ ನೇರ ಹಣಾಹಣಿಗೆ ವೇದಿಕೆಯಾಗಬೇಕಿದ್ದ ಕ್ಷೇತ್ರದಲ್ಲಿ ಈಗ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ವಿಧಾನಸಭೆ ಕ್ಷೇತ್ರವನ್ನೂ ಒಳಗೊಂಡಿರುವುದು ದಾವಣಗೆರೆ ಕ್ಷೇತ್ರ.

ದಾವಣಗೆರೆ

ಆರೋಗ್ಯ ಸಮಸ್ಯೆಯ ನಡುವೆಯೇ ಸಂಸದ ಸಿದ್ದೇಶ್ವರ ಅವರು ಕ್ಷೇತ್ರ ವ್ಯಾಪ್ತಿಯಲ್ಲಿ ನಿತ್ಯವೂ ಪ್ರಧಾನಿ ಮೋದಿ ಗುಣಗಾನ ಮಾಡುತ್ತ, ಅವರ ಸಾಧನೆಯನ್ನೇ ಮುಂದಿರಿಸಿಕೊಂಡು ಪತ್ನಿ ಪರ ಮತ ಯಾಚಿಸುತ್ತಿದ್ದಾರೆ. ಬಂಡಾಯವೆದ್ದಿದ್ದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದ ನಾಯಕರು ಬಿಜೆಪಿ ಪರ ಪ್ರಚಾರದಲ್ಲಿ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ. ಮಾಜಿ ಶಾಸಕ ಗುರುಸಿದ್ದನಗೌಡ ಹಾಗೂ ಅವರ ಪುತ್ರ, ಟಿಕೆಟ್ ಆಕಾಂಕ್ಷಿಯೂ ಆಗಿದ್ದ ರವಿಕುಮಾರ್ ಬಿಜೆಪಿಯ ಉಸಾಬರಿಯೇ ಬೇಡ ಎಂದು ಕಾಂಗ್ರೆಸ್ ಸೇರಿಕೊಂಡಿದ್ದಾರೆ.

ಕ್ಷೇತ್ರ ವ್ಯಾಪ್ತಿಯಲ್ಲಿ ಜೆಡಿಎಸ್ ಪ್ರಭಾವ ಅಷ್ಟಾಗಿ ಇರದಿದ್ದರೂ ಪಕ್ಷದ ಕಟ್ಟಾ ಬೆಂಬಲಿಗರು ಇದ್ದಾರೆ. ಹಾಗಾಗಿ ಆ ಪಕ್ಷದೊಂದಿಗಿನ ಮೈತ್ರಿ ಬಿಜೆಪಿಗೆ ಅಲ್ಪಸ್ವಲ್ಪ ನೆರವಾಗಬಹುದು ಎಂಬ ಲೆಕ್ಕಾಚಾರಗಳಿವೆ.

ದಂತ ವೈದ್ಯೆಯಾಗಿರುವ ಡಾ.ಪ್ರಭಾ, ಮಾವ ಶಾಮನೂರು ಶಿವಶಂಕರಪ್ಪ ಹೆಸರಿನ ಟ್ರಸ್ಟ್‌ನ ಮುಖ್ಯಸ್ಥೆಯಾಗಿ ಆರೋಗ್ಯ ಸೇವೆಯಲ್ಲಿ ತೊಡಗಿದ್ದು, ಕಳೆದ ಒಂದು ವರ್ಷದಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಮಹಿಳಾ ಅಭಿಮಾನಿ ಸಮೂಹವನ್ನೂ ಸಂಪಾದಿಸಿದ್ದಾರೆ.

'ಎದುರಾಳಿ ಅಭ್ಯರ್ಥಿ ಅಡುಗೆ ಮನೆಗೆ ಸೀಮಿತ' ಎಂದು ಶಾಮನೂರು ಶಿವಶಂಕರಪ್ಪ ಚುನಾವಣೆಯ ಹೊಸ್ತಿಲಲ್ಲಿ ಗಾಯತ್ರಿ ಅವರನ್ನು ಉದ್ದೇಶಿಸಿ ನೀಡಿದ್ದ ಹೇಳಿಕೆಯನ್ನೇ ಮುಂದಿಟ್ಟುಕೊಂಡು 'ಮಹಿಳೆಯರಿಗೆ ಅವಮಾನವಾಗಿದೆ' ಎಂದು ಹೇಳಿಕೊಂಡು ಪ್ರಚಾರದಲ್ಲಿ ತೊಡಗಿದ ಬಿಜೆಪಿ, ಕ್ರಮೇಣ ಆ ವಿಷಯದ ಪ್ರಸ್ತಾಪ ಕೈಬಿಟ್ಟಿದೆ.

'ಮುಂದಿಟ್ಟ ಹೆಜ್ಜೆ ಹಿಂದಿಡಲಾರೆ' ಎಂಬ ಶಪಥದೊಂದಿಗೆ ಸಲ್ಲಿಸಿದ್ದ ನಾಮಪತ್ರವನ್ನು ಹಿಂಪಡೆಯದ ವಿನಯ್, ಕ್ಷೇತ್ರದಾದ್ಯಂತ ಸಂಚರಿಸಿ ಯುವಪಡೆಯನ್ನು ಸೆಳೆಯುತ್ತಿದ್ದಾರೆ. ಕುರುಬ ಸಮುದಾಯದ ಇವರು ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಯಾಗುತ್ತಿರುವ ಯುವ ಮತದಾರರ ಆಕರ್ಷಣೆಯ ಕೇಂದ್ರಬಿಂದು. ಮೋದಿ 'ನಾಮಬಲ'ದ ಲಾಭವನ್ನು ಪಡೆಯಲು ಇಚ್ಛಿಸುತ್ತಿರುವ ಬಿಜೆಪಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಧನೆ ಹಾಗೂ 'ಗ್ಯಾರಂಟಿ' ಯೋಜನೆಗಳ ಯಶಸ್ಸಿನ ಪ್ರಯೋಜನ ಪಡೆಯಲು ಬಯಸುತ್ತಿರುವ ಕಾಂಗ್ರೆಸ್ ಪೈಕಿ ಇವರು ಯಾರಿಗೆ ಮುಳುವಾಗಲಿದ್ದಾರೆ ಎಂಬುದು ನಿಗೂಢ.

ನಾನು ರಾಜಕಾರಣಿ ಅಲ್ಲ, ಸಮಾಜಕಾರಣಿ

ಬೆಳಗಾವಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರಗೆ ಇದು ಮೊದಲ ಚುನಾವಣೆ. ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ. ಕ್ಷೇತ್ರದಲ್ಲಿ ಪ್ರಚಾರ ಕಾರ್ಯಗಳಲ್ಲಿ ತೊಡಗಿರುವ ಅವರು ಸಭೆ, ಸಮಾವೇಶಗಳನ್ನು ನಡೆಸುವುದರ ಜೊತೆಗೆ ಗ್ರಾಮಗಳಿಗೆ ತೆರಳಿ ಜನರನ್ನು ಭೇಟಿಯಾಗಿ, ಮತ ಯಾಚಿಸುತ್ತಿದ್ದಾರೆ. ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನ ಇಲ್ಲಿದೆ.

● ಸಂತೋಷ ಈ. ಚಿನಗುಡಿ

ಪ್ರಜಾವಾಣಿ ಸಂದರ್ಶನ

ಮೃಣಾಲ್ ಹೆಬ್ಬಾಳಕರ

● ರಾಜಕಾರಣಿ ಆಗಬೇಕು ಎಂದೇಕೆ ಅನಿಸಿತು?

ರಾಜಕಾರಣಿಗಿಂತ ಸಮಾಜಕಾರಣಿ ಆಗಬೇಕು ಎಂಬ ತುಡಿತ ನನ್ನದು. ವಿದ್ಯಾರ್ಥಿ ಜೀವನದಿಂದಲೂ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ತಾಯಿ ಲಕ್ಷ್ಮಿ ಹೆಬ್ಬಾಳಕರ ಅವರ ಜನಸೇವೆಯೇ ನಾನು ರಾಜಕಾರಣಕ್ಕೆ ಬರಲು ಪ್ರೇರಣೆ.

● ಯುವ ಎಂಜಿನಿಯರ್ ಆದ ನಿಮಗೆ ಐ.ಟಿ, ಬಿ.ಟಿಯಲ್ಲಿ ಅವಕಾಶಗಳಿದ್ದವಲ್ಲ?

ಸಮಾಜದ ಕೆಲಸ ಮಾಡಲು ವಯಸ್ಸಿನ ಹಂಗಿಲ್ಲ. ಹೆಚ್ಚು ಶಿಕ್ಷಣ ಪಡೆದಂತೆ ಸಮಾಜ ಸುಧಾರಣೆಯತ್ತ ನಾವು ಹೆಚ್ಚು ವಾಲಬೇಕು. ಅದೇ ಅಲ್ಲವೇ ಶಿಕ್ಷಣದ ಉದ್ದೇಶ. ರಾಜಕೀಯವೇ ಇದಕ್ಕೆ ದೊಡ್ಡ ಅವಕಾಶ ನೀಡುತ್ತದೆ.

● ಕುಟುಂಬ ರಾಜಕಾರಣದ ಅಪವಾದವಿದೆಯಲ್ಲ?

ಖಂಡಿತ ಇಲ್ಲ. ಈ ಬಾರಿ ಕಾಂಗ್ರೆಸ್ ಪಕ್ಷ ಯುವಜನರಿಗೆ ಅವಕಾಶ ನೀಡಿದೆ. ಗೆಲ್ಲಬಲ್ಲ, ಸಮಾಜ ಸೇವೆ ಮಾಡಬಲ್ಲವರಿಗೆ ಟಿಕೆಟ್ ಕೊಡಿಸಿದ್ದಾರೆ. ಆ ಕೋಟಾದಲ್ಲಿ ನಾನು ಸಮರ್ಥ.

● ನಿಮ್ಮ ಕುಟುಂಬ ಮತ್ತು ನಿಮ್ಮ ವ್ಯಕ್ತಿತ್ವ ಮತದಾರರ ಮೇಲೆ ಎಷ್ಟು ಪರಿಣಾಮ ಬೀರಬಹುದು?

ತಾಯಿ ಲಕ್ಷ್ಮಿ ಅವರು ಶಾಸಕಿ, ಸಚಿವೆಯಾಗಿ ಸೇವೆ- ಸಾಮರ್ಥ್ಯ ಎರಡನ್ನೂ ಸಾಬೀತು ಮಾಡಿದ್ದಾರೆ. ಮಾವ ಚನ್ನರಾಜ ಹಟ್ಟಿಹೊಳಿ ಅವರು ವಿಧಾನ ಪರಿಷತ್ ಸದಸ್ಯರಾಗಿ ದುಡಿಯುತ್ತಿದ್ದಾರೆ. ನಾನು ದಶಕದಿಂದ ಯುವ ಕಾಂಗ್ರೆಸ್ ಸಂಘಟಿಸಿದ್ದೇನೆ. ಪ್ರಚಾರಕ್ಕೆ ಹೋದಲ್ಲೆಲ್ಲ ಹಿರಿಯರ ಆಶೀರ್ವಾದ, ಯುವಜನರ ಬೆಂಬಲ ಸಿಗುತ್ತಿದೆ.

● ಬೆಳಗಾವಿ ಕ್ಷೇತ್ರದ ದೊಡ್ಡ ಸಮಸ್ಯೆ ಯಾವುವು?

ಶಿಕ್ಷಣ ಪಡೆದರೂ ಉದ್ಯೋಗ ಸಿಗುತ್ತಿಲ್ಲ. ಕೈಗಾರಿಕೆ ಅಭಿವೃದ್ಧಿಪಡಿಸುವಲ್ಲಿ ಹಿಂದೆ ಬಿದ್ದಿದ್ದೇವೆ. ಉದ್ಯೋಗ ಅರಸಿ ಮಹಾರಾಷ್ಟ್ರಕ್ಕೆ ವಲಸೆ ಹೋಗುವುದು ಸಾಮಾನ್ಯವಾಗಿದೆ. ಜಿಲ್ಲೆಯ ಪ್ರತಿಭೆಗಳು ಬೆಂಗಳೂರಿಗೆ ಪಲಾಯನ ಮಾಡುತ್ತಿದ್ದಾರೆ. ದಿವಂಗತ ಸುರೇಶ ಅಂಗಡಿ ಅವರು ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದರೂ ರೈಲ್ವೆ ಸರಕು ಸಾಗಣೆ ಬೆಳವಣಿಗೆ ಕಾಣಲಿಲ್ಲ. ಬೆಳಗಾವಿ ತಾಲ್ಲೂಕಿಗೆ ಮೂರು ರೈಲ್ವೆ ಗೇಟ್‌ಗಳು ದೊಡ್ಡ ಸಮಸ್ಯೆ ಆಗಿವೆ. 20 ವರ್ಷ ಸಂಸದರಾದವರು ಒಂದೇ ಮೇಲ್ಸೇತುವೆ ಮಾಡಿದರು. ಹೆಚ್ಚು ಕಾರ್ಮಿಕರಿದ್ದರೂ ಇಎಸ್‌ಐ ಆಸ್ಪತ್ರೆ ಇಲ್ಲ.

● ಒಳಪೆಟ್ಟಿನ ರಾಜಕಾರಣದಿಂದ ಹಿಂದೆ ನಿಮ್ಮ ತಾಯಿ ಇದೇ ಕ್ಷೇತ್ರದಲ್ಲಿ ಸೋಲುಂಡಿದ್ದರು. ಈಗ ಹೇಗೆ ನಿಭಾಯಿಸುತ್ತೀರಿ?

ಅಂಥ ವಾತಾವರಣ ಈಗ ಇಲ್ಲ. ಸಚಿವ ಸತೀಶ ಜಾರಕಿಹೊಳಿ ಅವರ ನೇತೃತ್ವದಲ್ಲಿ ಎಲ್ಲ ನಾಯಕರು, ಕಾರ್ಯಕರ್ತರು ಒಂದಾಗಿದ್ದಾರೆ. ನನ್ನ ಬೆನ್ನಿಗೆ ನಿಂತಿದ್ದಾರೆ. 20 ವರ್ಷಗಳಿಂದ ನಮ್ಮ ಸಂಸದರನ್ನು ನಾವು ನೋಡಿಲ್ಲ. ಈಗ ಗೆಲ್ಲಬೇಕು ಎಂಬ ಹಂಬಲದಲ್ಲಿದ್ದಾರೆ. 'ಆಮೆ ವೇಗ'ದ ಆಡಳಿತದಿಂದ ಜನರೂ ಬೇಸತ್ತಿದ್ದಾರೆ.



● ನಿಮ್ಮ ಪ್ರತಿಸ್ಪರ್ಧಿ ಹಿರಿಯ ರಾಜಕಾರಣಿ ಇದ್ದಾರೆ. ಅವರ ಬಗ್ಗೆ ಏನು ಹೇಳುವಿರಿ?

ಅವರು ಅನುಭವಿ, ಮುಖ್ಯಮಂತ್ರಿ ಆಗಿದ್ದವರು. ಎರಡು ಬಾರಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದವರು. ಅಷ್ಟು ದೊಡ್ಡ ಹುದ್ದೆ ನಿಭಾಯಿಸಿದ ಮೇಲೂ ಹೇಳಿಕೊಳ್ಳುವಂತಹ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಪ್ರಚಾರಕ್ಕೆ ಹೋದಲ್ಲೆಲ್ಲ ಬರೀ ಮೋದಿ ಹೆಸರನ್ನೇ ಅವಲಂಬಿಸಿದ್ದಾರೆ. ಏಕೆ? ನೀವು ಹೇಳಿಕೊಳ್ಳುವಂಥದ್ದು ಏನೂ ಮಾಡಲಿಲ್ಲವೆ? ಬೆಳಗಾವಿ ಜನ ಇದನ್ನೆಲ್ಲ ಅಳೆದು- ತೂಗಿ ನೋಡುತ್ತಾರೆ.

● ಕ್ಷೇತ್ರದ ಅಭಿವೃದ್ಧಿ ಬಗ್ಗೆ ಇಟ್ಟುಕೊಂಡ ನಿರೀಕ್ಷೆಗಳೇನು?

ಜನೌಷಧಿ ಕೇಂದ್ರಗಳನ್ನು ತಾಲ್ಲೂಕು, ಗ್ರಾಮ ಮಟ್ಟದಲ್ಲಿ ತೆರೆಯಬೇಕು. ಪ್ರವಾಸೋದ್ಯಮ ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಬೇಕು ಎಂದುಕೊಂಡಿದ್ದೇನೆ.

● ಅತಿಯಾದ ಆತ್ಮವಿಶ್ವಾಸದಲ್ಲಿದ್ದೀರಿ ಅನ್ನಿಸುತ್ತಿಲ್ಲವೇ?

ಗೆಲ್ಲುತ್ತೇನೆ ಎಂಬ ಆತ್ಮವಿಶ್ವಾಸವಿದೆ. ಅತಿಯಾದ ಆತ್ಮವಿಶ್ವಾಸ ಅಲ್ಲ. ಎದುರಿಗಿರುವ ಅಭ್ಯರ್ಥಿ ಎಷ್ಟು ಸಮರ್ಥರು ಎಂದು ಯೋಚಿಸಿಲ್ಲ. ಆದರೆ, ಅವರಿಗಿಂತ ಹೆಚ್ಚು ಕೆಲಸ ಮಾಡುವ ಸಾಮರ್ಥ್ಯ ನನಗಿದೆ.

● ಜನ ನಿಮಗೆ ಏಕೆ ಮತ ಕೊಡಬೇಕು?

ಕೆಲಸ ಮಾಡುವ ಛಲವಿದೆ, ತುಡಿತವಿದೆ. ಹತ್ತು ವರ್ಷಗಳಿಂದ ಜಿಲ್ಲೆಯ ಜನರ ಸಮಸ್ಯೆ ಅರಿತಿದ್ದೇನೆ. ರೈತರ, ಮಹಿಳೆಯರ ಸಂಕಷ್ಟ ನೋಡಿದ್ದೇನೆ. ಯುವಜನರಂತೂ ಕೆಲಸಕ್ಕಾಗಿ ಪರದಾಡುವ ಸ್ಥಿತಿ ಇದೆ. ಇವರೆಲ್ಲ ಸಮಸ್ಯೆಗೆ ಸ್ಪಂದಿಸುವ, ಸೇವೆ ಮಾಡಲು ಅವಕಾಶ ಕೊಡಿ ಎಂದು ಕೋರುತ್ತಿರುವೆ.

ಪ್ರಚಾರ ಕಣದಲ್ಲಿ ಕೈ–ಕಮಲ ಮಾತಿನ ಸಮರ

ಮೂರನೇ ಹಂತದ ಮತದಾನದ ದಿನ ಸಮೀಪಿಸುತ್ತಿರುವಂತೆಯೇ ಚುನಾವಣಾ ಪ್ರಚಾರ ಸಭೆಗಳಲ್ಲಿ ಕಾವೇರಿದ ವಾತಾವರಣ ಕಂಡುಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ಮುಂದುವರಿಸಿದ್ದು, 'ಕೈ' ಪಕ್ಷವು ಪಾಕಿಸ್ತಾನದ 'ಅಭಿಮಾನಿ' ಎಂಬ ಅರೋಪ ಮಾಡಿದ್ದಾರೆ. ನೆರೆಯ ದೇಶವು ಭಾರತದಲ್ಲಿ ದುರ್ಬಲ ಸರ್ಕಾರವನ್ನು ಬಯಸುತ್ತಿದೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಬಿಜೆಪಿಯು, 'ಭ್ರಷ್ಟ' ನಾಯಕರಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ದೂರಿದ್ದಾರೆ

'ಕಾಂಗ್ರೆಸ್ ಪಾಕಿಸ್ತಾನದ ಅಭಿಮಾನಿ'

ಅನಂದ್ (ಗುಜರಾತ್) (ಪಿಟಿಐ): ಕಾಂಗ್ರೆಸ್ ಪಕ್ಷವನ್ನು ಪಾಕಿಸ್ತಾನದ 'ಅಭಿಮಾನಿ' ಎಂದು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ, ನೆರೆಯ ದೇಶವು ಭಾರತದಲ್ಲಿ ದುರ್ಬಲ ಸರ್ಕಾರವನ್ನು ಬಯಸುತ್ತಿದೆ ಎಂದು ಹೇಳಿದರು.

ಗುಜರಾತ್‌ನ ಆನಂದ್‌ನಲ್ಲಿ ಗುರುವಾರ ಚುನಾವಣಾ ರ‍್ಯಾಲಿಯನ್ನು ದ್ದೇಶಿಸಿ ಮಾತನಾಡಿದ ಅವರು, ರಾಹುಲ್ ಗಾಂಧಿ ಅವರನ್ನು ಭಾರತದ ಮುಂದಿನ ಪ್ರಧಾನಿಯನ್ನಾಗಿ ಮಾಡಲು ಪಾಕಿಸ್ತಾನ ಉತ್ಸುಕವಾಗಿದೆ ಎಂದು ಆರೋಪಿಸಿದರು.

ಇಮ್ರಾನ್ ಖಾನ್ ಸಂಪುಟದಲ್ಲಿ ಸಚಿವರಾಗಿದ್ದ ಚೌಧರಿ ಫವಾದ್ ಹುಸೇನ್ ಅವರು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ರಾಹುಲ್ ಗಾಂಧಿಗೆ ಸಂಬಂಧಿಸಿದ ವಿಡಿಯೊವನ್ನು ಪೋಸ್ಟ್ ಮಾಡಿ, ಅವರನ್ನು ಹೊಗಳಿರುವುದಾಗಿ ವರದಿಯಾಗಿತ್ತು. ಅದರ ಬೆನ್ನಲ್ಲೇ ಪ್ರಧಾನಿ ಈ ಹೇಳಿಕೆ ನೀಡಿದ್ದಾರೆ.

'ಕಾಂಗ್ರೆಸ್ ಪಕ್ಷವು ಇಲ್ಲಿ ಅವನತಿಯತ್ತ ಸಾಗುತ್ತಿರುವುದನ್ನು ನೋಡಿ ಪಾಕಿಸ್ತಾನ ದುಃಖಿಸುತ್ತಿದೆ. ಪಾಕಿಸ್ತಾನದ ನಾಯಕರು ಈಗ ಕಾಂಗ್ರೆಸ್‌ಗಾಗಿ ಪ್ರಾರ್ಥಿಸುತ್ತಿದ್ದಾರೆ ಎಂಬುದು ನಿಮಗೆಲ್ಲ ತಿಳಿದಿರಬೇಕು. ಕಾಂಗ್ರೆಸ್‌ನ 'ಶೆಹಜಾದಾ' (ರಾಹುಲ್ ಗಾಂಧಿ) ಅವರನ್ನು ಮುಂದಿನ ಪ್ರಧಾನಿಯಾಗಿ ಮಾಡಲು ಪಾಕಿಸ್ತಾನವು ಬಯಸಿದೆ. ಕಾಂಗ್ರೆಸ್ ಪಕ್ಷವು ಪಾಕಿಸ್ತಾನದ 'ಅಭಿಮಾನಿ' ಎಂಬುದು ಈಗಾಗಲೇ ತಿಳಿದಿರುವ ಕಾರಣ ಇದರಲ್ಲಿ ಆಶ್ಚರ್ಯ ಪಡುವಂತಹದ್ದು ಏನೂ ಇಲ್ಲ' ಎಂದರು.

'ಪಾಕಿಸ್ತಾನ ಮತ್ತು ಕಾಂಗ್ರೆಸ್ ನಡುವಣ ನಂಟು ಈಗ ಸಂಪೂರ್ಣವಾಗಿ ಬಹಿರಂಗಗೊಂಡಿದೆ. ನಮ್ಮ ಶತ್ರುಗಳು ಭಾರತದಲ್ಲಿ ದುರ್ಬಲ ಸರ್ಕಾರವನ್ನು ಬಯಸುವರು. ಆದರೆ ಮೋದಿ ನೇತೃತ್ವದ ಬಲಿಷ್ಠ ಸರ್ಕಾರ ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದು ತಿಳಿಸಿದರು.

'ವೋಟ್ ಜಿಹಾದ್‌ಗೆ ಕರೆ ಕೊಟ್ಟಿದ್ದಾರೆ'

'ಇಂಡಿ' ಮೈತ್ರಿಕೂಟವು ವೋಟ್ ಜಿಹಾದ್‌ಗೆ ಕರೆಕೊಟ್ಟಿದೆ. ನಾವು 'ಲವ್ ಜಿಹಾದ್' ಮತ್ತು 'ಜಮೀನು ಜಿಹಾದ್' ಬಗ್ಗೆ ಕೇಳಿದ್ದೇವೆ. ಆದರೆ ಈಗ ಹೊಸ ಪದ ಕೇಳುತ್ತಿದ್ದೇವೆ' ಎಂದು ಪ್ರಧಾನಿ ಹೇಳಿದರು.

ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಸಲ್ಮಾನ್ ಖುರ್ಷಿದ್ ಅವರ ಸೋದರ ಸಂಬಂಧಿ, ಸಮಾಜವಾದಿ ಪಕ್ಷದ ನಾಯಕಿ ಮರಿಯಾ ಆಲಂ ಅವರ ಹೇಳಿಕೆ ಉಲ್ಲೇಖಿಸಿ ಪ್ರಧಾನಿ ತಿರುಗೇಟು ನೀಡಿದರು.

'ಈ ಹೇಳಿಕೆ ನೀಡಿರುವುದು ಮದ್ರಸಾದಲ್ಲಿ ಓದಿದ ಸಾಮಾನ್ಯ ವ್ಯಕ್ತಿಯಲ್ಲ. ವಿದ್ಯಾವಂತ ಮುಸ್ಲಿಂ ಕುಟುಂಬಕ್ಕೆ ಸೇರಿದವರು ವೋಟ್ ಜಿಹಾದ್‌ಗೆ ಕರೆಕೊಟ್ಟಿದ್ದಾರೆ. ಜಿಹಾದ್ ಎಂದರೇನು ಮತ್ತು ಅದನ್ನು ಯಾರ ವಿರುದ್ಧ ಹೂಡಲಾಗಿದೆ ಎಂಬುದು ನಿಮಗೆಲ್ಲರಿಗೂ ತಿಳಿದಿರುವುದಾಗಿ ಭಾವಿಸುತ್ತೇನೆ. ಇದು ಪ್ರಜಾಪ್ರಭುತ್ವಕ್ಕೆ ಮಾಡಿರುವ ಅವಮಾನ. ಕಾಂಗ್ರೆಸ್‌ನ ಯಾವೊಬ್ಬ ನಾಯಕರೂ ಇದನ್ನು ಖಂಡಿಸಿಲ್ಲ' ಎಂದು ಟೀಕಿಸಿದರು.

'ಇಂಡಿಯಾ' ಮೈತ್ರಿಕೂಟದ ಫರೂಖಾಬಾದ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಪರ ಮತ ಯಾಚನೆ ಮಾಡುವ ವೇಳೆ ಮರಿಯಾ ಆಲಂ ಅವರು 'ವೋಟ್ ಜಿಹಾದ್'ಗೆ ಕರೆ ನೀಡಿದ್ದರು.



'ಭ್ರಷ್ಟ ಮುಖಂಡರಿಗೆ ಬಿಜೆಪಿ ಪ್ರೋತ್ಸಾಹ'

ಚಿರ್ಮಿರೀ (ಛತ್ತೀಸಗಢ): ಸಮಸ್ಯೆಗಳು ಮತ್ತು ಜನರ ಕಲ್ಯಾಣದ ಬಗ್ಗೆ ಮಾತನಾಡದ ಹಾಗೂ ಕಡು ಭ್ರಷ್ಟ ಮುಖಂಡರಿಗೆ ಬಿಜೆಪಿಯು ಪ್ರೋತ್ಸಾಹ ನೀಡುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಗುರುವಾರ ಆರೋಪಿಸಿದರು.

ಬಿಜೆಪಿಯು ಜನರನ್ನು 5 ಕೆ.ಜಿ ಪಡಿತರಕ್ಕೆ ಅವಲಂಬಿತರನ್ನಾಗುವಂತೆ ಮಾಡುತ್ತಿದೆ ಎಂದಿರುವ ಅವರು, ಇದಕ್ಕೆ ಬದಲಾಗಿ ಉದ್ಯೋಗ ನೀಡಲು ಹಾಗೂ ಖಾಲಿ ಇರುವ 30 ಲಕ್ಷ ಹುದ್ದೆಗಳನ್ನು ಭರ್ತಿಗೊಳಿಸುವಂತೆ ಆಡಳಿತಾರೂಢ ಪಕ್ಷವನ್ನು ಒತ್ತಾಯಿಸುವಂತೆ ಜನರಿಗೆ ಕರೆ ನೀಡಿದರು.

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಆಸ್ತಿಯನ್ನು ಕೋಟ್ಯಧಿಪತಿಗಳಿಗೆ ಹಸ್ತಾಂತರಿಸುತ್ತಿದ್ದಾರೆ ಎಂದು ಟೀಕಿಸಿದರು.

ಮೋದಿ ಸರ್ಕಾರದ 10 ವರ್ಷಗಳ ಆಡಳಿತದಲ್ಲಿ ಜನರಿಗೆ ಅನ್ಯಾಯವಾಗಿದೆ. ಆದರೆ ಉದ್ಯಮಿಗಳು ಮತ್ತು ದೊಡ್ಡ ನಾಯಕರು ಉನ್ನತಿ ಹೊಂದಿದ್ದಾರೆ. ಜನರಿಗಾಗಿ ಕೆಲಸ ಮಾಡದಿದ್ದರೂ, ಧರ್ಮದ ಹೆಸರಿನಲ್ಲಿ ಮತ ಪಡೆಯಬಹುದು ಎಂದು ಬಿಜೆಪಿಯವರು ಭಾವಿಸಿದ್ದಾರೆ ಎಂದರು.

ಭ್ರಷ್ಟ ಮುಖಂಡರ ವಿರುದ್ಧ ಬಿಜೆಪಿಯವರು ಮೊದಲು ಆರೋಪಗಳನ್ನು ಮಾಡುತ್ತಾರೆ ಅನಂತರ ಅವರನ್ನು ತಮ್ಮ ಪಾಳಯಕ್ಕೆ ಸೇರಿಸಿಕೊಳ್ಳುತ್ತಾರೆ. ಬಿಜೆಪಿಗೆ ಸೇರಿದ ಬಳಿಕ ಆ ಮುಖಂಡರು ಪರಿಶುದ್ಧರಾಗುತ್ತಾರೆ ಮತ್ತು ಅವರ ವಿರುದ್ಧದ ಎಲ್ಲಾ ಪ್ರಕರಣಗಳು ಇಲ್ಲವಾಗುತ್ತವೆ ಎಂದು ಪ್ರಿಯಾಂಕಾ ಲೇವಡಿ ಮಾಡಿದರು.

ಬೆಲೆ ಏರಿಕೆ ಹಾಗೂ ಜ್ವಲಂತ ಸಮಸ್ಯೆಗಳ ಬಗ್ಗೆ ತುಟಿ ಬಿಚ್ಚದ ಮುಖಂಡರನ್ನು ಬಿಜೆಪಿಯು ಮುನ್ನೆಲೆಗೆ ತರುತ್ತದೆ. ಆದರೆ ಕಾಂಗ್ರೆಸ್ ಪಕ್ಷವು, ಜನರಿಗಾಗಿ ಕೆಲಸ ಮಾಡುವ ಮತ್ತು ಅವರನ್ನು ಅರ್ಥೈಸಿಕೊಳ್ಳುವ ಮುಖಂಡರಿಗೆ ಪ್ರೋತ್ಸಾಹ ನೀಡುತ್ತದೆ ಎಂದು ಹೇಳಿದರು.

ಜನರು ಸಮಸ್ಯೆಗಳಿಂದ ಬಸವಳಿಯುತ್ತಿರುವಾಗ, ಬಿಜೆಪಿ ಮುಖಂಡರು ಜಿ20 ಶೃಂಗಸಭೆಯನ್ನು ಆಯೋಜನೆ ಮಾಡಿರುವ ಕುರಿತು ಹಾಗೂ ಪಾಕಿಸ್ತಾನ, ಚೀನಾದ ಬಗ್ಗೆ ಮಾತನಾಡುತ್ತಾರೆ ಎಂದು ಟೀಕಿಸಿದರು.

ಚುನಾವಣಾ ಬಾಂಡ್ ವಿಚಾರವಾಗಿ ಮೋದಿ ಸರ್ಕಾರದ ವಿರುದ್ಧ ಹರಿಹಾಯ್ದ ಅವರು, ಚುನಾವಣಾ ಬಾಂಡ್ ಯೋಜನೆಯು ಅತ್ಯಂತ ದೊಡ್ಡ ಹಗರಣವಾಗಿದೆ ಎಂದು ದೂರಿದರು.

ತಾವೊಬ್ಬರೇ ಪ್ರಾಮಾಣಿಕರು ಎಂದು ಮೋದಿ ಅವರು ಹೇಳಿಕೊಳ್ಳುತ್ತಿದ್ದಾರೆ. ಆದರೆ ಜನರ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡುವುದಿಲ್ಲ. ಎಷ್ಟು ಮಂದಿಗೆ ಉದ್ಯೋಗ ನೀಡಲಾಗಿದೆ, ಎಷ್ಟು ವಿಶ್ವವಿದ್ಯಾಲಯ, ಆಸ್ಪತ್ರೆ ಮತ್ತು ಶಾಲೆಗಳನ್ನು ನಿರ್ಮಿಸಲಾಗಿದೆ ಎಂಬುದನ್ನು ಹೇಳುತ್ತಿಲ್ಲ ಎಂದರು.

ಕೋವಿಡ್ ಲಸಿಕೆಯ ಪ್ರಮಾಣಪತ್ರದಲ್ಲಿ ಮೋದಿ ಅವರ ಫೋಟೊವನ್ನು ಮುದ್ರಿಸಲಾಗಿತ್ತು. ಲಸಿಕೆ ನಿರ್ಮಿಸಿರುವ ಕಂಪನಿಗಳಿಂದ ಬಿಜೆಪಿ ದೇಣಿಗೆ ಪಡೆದಿರುವುದರಿಂದ ಮೋದಿ ಅವರ ಫೋಟೊವನ್ನು ಅನಂತರ ತೆರವುಗೊಳಿಸಲಾಗಿದೆ ಎಂದೂ ಹೇಳಿದರು.



'ಒಡಕು ಮೂಡಿಸಲು ಯತ್ನ'

ಸುರೇಂದ್ರನಗರ (ಗುಜರಾತ್): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶ್ರೀರಾಮ ಮತ್ತು ಶಿವನ ಕುರಿತು ಈಚೆಗೆ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ವಾಗ್ದಾಳಿ ನಡೆಸಿದ್ದು, ವಿರೋಧ ಪಕ್ಷವು ತನ್ನ ಓಲೈಕೆ ರಾಜಕಾರಣದಿಂದ ಹಿಂದೂಗಳ ನಡುವೆ ಒಡಕು ಮೂಡಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

'ಕಾಂಗ್ರೆಸ್ ಪಕ್ಷ ಈಗ ಹಿಂದೂಗಳ ನಡುವೆ ಒಡಕು ಮೂಡಿಸಲು ಯತ್ನಿಸುತ್ತಿದೆ. ಖರ್ಗೆ ಅವರು ಶ್ರೀರಾಮ ಮತ್ತು ಶಿವನ ಬಗ್ಗೆ ದುರುದ್ದೇಶದಿಂದ ಅತ್ಯಂತ ಅಪಾಯಕಾರಿ ಹೇಳಿಕೆ ನೀಡಿದ್ದಾರೆ. ಅವರು ರಾಮ ಮತ್ತು ಶಿವನ ಭಕ್ತರ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಸಿ ಪರಸ್ಪರ ಹೊಡೆದಾಡಿಕೊಳ್ಳುವಂತೆ ಮಾಡುತ್ತಿದ್ದಾರೆ. ನಮ್ಮ ಸಾವಿರಾರು ವರ್ಷಗಳ ಸಂಪ್ರದಾಯಗಳನ್ನು ಮುರಿಯಲು ಮೊಘಲರಿಗೂ ಸಾಧ್ಯವಾಗಿರಲಿಲ್ಲ. ಈಗ ಕಾಂಗ್ರೆಸ್ ಅದನ್ನು ಮುರಿಯಲು ಬಯಸುತ್ತಿದೆಯೇ? ತುಷ್ಟೀಕರಣಕ್ಕಾಗಿ ಕಾಂಗ್ರೆಸ್ ಇಷ್ಟೊಂದು ಕೆಳಮಟ್ಟಕ್ಕೆ ಇಳಿದಿದೆಯೇ?' ಎಂದು ಕಿಡಿಕಾರಿದರು. ಛತ್ತೀಸಗಢದಲ್ಲಿ ಮಂಗಳವಾರ ತನ್ನ ಅಭ್ಯರ್ಥಿ ಶಿವಕುಮಾರ್ ಡಹರಿಯಾ ಪರ ನಡೆದ ರ‍್ಯಾಲಿಯಲ್ಲಿ ಖರ್ಗೆ ಅವರು, 'ಇವನ ಹೆಸರು ಶಿವಕುಮಾರ್. ಇವನು ಶಿವ ಆಗಿರುವುದರಿಂದ ರಾಮನೊಂದಿಗೆ ಸ್ಪರ್ಧಿಸಬಲ್ಲನು. ನಾನು ಮಲ್ಲಿಕಾರ್ಜುನ (ಶಿವನ ಇನ್ನೊಂದು ಹೆಸರು ಮಲ್ಲಿಕಾರ್ಜುನ). ಅಂದರೆ ನಾನೂ ಶಿವ' ಎಂದಿದ್ದರು.

'ಎಲ್ಲ ಭಾರತೀಯರೂ ನಮ್ಮ ಮತಬ್ಯಾಂಕ್'

ನವದೆಹಲಿ (ಪಿಟಿಐ): 'ದೇಶದಲ್ಲಿರುವ ಪ್ರತಿಯೊಬ್ಬರೂ ನಮ್ಮ ಮತ ಬ್ಯಾಂಕ್. ಅವರಲ್ಲಿ ಬಡವರು, ಮಹಿಳೆಯರು, ಯುವ ಸಮುದಾಯ, ಕಾರ್ಮಿಕ ವರ್ಗ, ದಲಿತರು ಮತ್ತು ಆದಿವಾಸಿಗಳು ಇದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್ ಪಕ್ಷವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯ ಮೀಸಲಾತಿಯನ್ನು ಕಸಿದು ಅದನ್ನು ತನ್ನ ಮತಬ್ಯಾಂಕ್‌ಗೆ ನೀಡಲಿದೆ ಎಂದು ಪ್ರಧಾನಿ ಮೋದಿ ಅವರು ಎನ್‌ಡಿಎ ಅಭ್ಯರ್ಥಿಗಳಿಗೆ ಬರೆದಿರುವ ಪತ್ರವನ್ನು ಉಲ್ಲೇಖಿಸಿ ಖರ್ಗೆ ಈ ಪತ್ರ ಬರೆದಿದ್ದು, ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ದ್ವೇಷ ಭಾಷಣ'ಗಳನ್ನು ಮಾಡುವ ಬದಲಿಗೆ ಕಳೆದ 10 ವರ್ಷಗಳಲ್ಲಿ ತಮ್ಮ ಸರ್ಕಾರ ಮಾಡಿರುವ ಸಾಧನೆಯನ್ನು ಆಧರಿಸಿ ಮತ ಕೇಳುವಂತೆ ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.



ಸುಳ್ಳು ಸತ್ಯವಾಗದು: 'ನೀವು ಎನ್‌ಡಿಎ ಅಭ್ಯರ್ಥಿಗಳಿಗೆ ಬರೆದಿರುವ ಪತ್ರವನ್ನು ಗಮನಿಸಿದರೆ, ನಿಮ್ಮ ಭಾಷಣಗಳಲ್ಲಿನ ಸುಳ್ಳುಗಳು ಜನರ ಮೇಲೆ ಪರಿಣಾಮ ಬೀರಿಲ್ಲ ಎಂಬುದನ್ನು ತೋರಿಸುತ್ತದೆ. ಹೀಗಾಗಿಯೇ ನೀವು ನಿಮ್ಮ ಅಭ್ಯರ್ಥಿಗಳಿಗೆ ಸುಳ್ಳನ್ನು ಹೇಳಲು ಸೂಚಿಸಿದ್ದೀರಿ. ಸುಳ್ಳನ್ನು ಸಾವಿರ ಬಾರಿ ಹೇಳಿದರೆ, ಅದೇನು ಸತ್ಯವಾಗುವುದಿಲ್ಲ' ಎಂದು ತಿಳಿಸಿದ್ದಾರೆ.

'ಮತದಾರರು ಪಕ್ಷಗಳ ಪ್ರಣಾಳಿಕೆಯಲ್ಲಿ ಏನಿವೆ, ಯಾವ ಭರವಸೆಗಳನ್ನು ನೀಡಲಾಗಿದೆ ಎಂಬುದನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಬುದ್ಧವಂತರಿದ್ದಾರೆ. ನಮ್ಮ ಖಾತರಿಗಳು ತುಂಬ ಸರಳ ಮತ್ತು ಸ್ಪಷ್ಟವಾಗಿವೆ' ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್ ಮತ್ತು ಬಿಜೆಪಿ 1947ರಿಂದ ಪ್ರತಿ ಹಂತದಲ್ಲೂ ಮೀಸಲಾತಿಯನ್ನು ವಿರೋಧಿಸಿವೆ ಎಂದು ಖರ್ಗೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬಿಜೆಪಿಯ ಮಾಜಿ ಹಣಕಾಸು ಸಚಿವರು ಪಿತ್ರಾರ್ಜಿತ ಆಸ್ತಿಗೆ ತೆರಿಗೆ ಬೇಕು ಎಂದು ಹಲವು ಬಾರಿ ಪ್ರತಿಪಾದಿಸಿದ್ದಾರೆ. ಆದರೆ ನೀವು ಪಿತ್ರಾರ್ಜಿತ ತೆರಿಗೆಯನ್ನು ತರಲು ಕಾಂಗ್ರೆಸ್ ಬಯಸುತ್ತಿದೆ ಎಂದು ಹೇಳಿರುವುದು ಸರಿಯಲ್ಲ' ಎಂದಿದ್ದಾರೆ.

'ನಿಮ್ಮ ನೀತಿಗಳಿಂದ ಬಡ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದಿರುವ ಅವರು, 'ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆ, ನಿರುದ್ಯೋಗ ಸಮಸ್ಯೆ, ಬೆಲೆ ಏರಿಕೆ ಬಗ್ಗೆಯಾಗಲೀ, ನಿಮ್ಮ ನಾಯಕರಿಂದ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಕುರಿತಾಗಲೀ ಮಾತನಾಡಲು ನಿಮಗೆ ಆಸಕ್ತಿ ಇಲ್ಲ' ಎಂದು ಟೀಕಿಸಿದ್ದಾರೆ.



ಪೂಜೆ ಲೋಕಸಭೆ ಚುನಾವಣೆಯ ಮೂರನೇ ಹಂತದ ಮತದಾನದ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ಅಮೇಠಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವೆ ಸ್ಮೃತಿ ಇರಾನಿ ಗುರುವಾರ ಅಮೇಠಿಯಲ್ಲಿ ಪೂಜೆಯಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಬ್ರಿಜ್‌ಭೂಷಣ್‌ಗೆ ಟಿಕೆಟ್ ನಿರಾಕರಣೆ; ಪುತ್ರ ಕಣಕ್ಕೆ

ನವದೆಹಲಿ (ಪಿಟಿಐ): ಬಿಜೆಪಿಯು ಉತ್ತರ ಪ್ರದೇಶದ ಕೈಸರ್‌ಗಂಜ್ ಲೋಕಸಭಾ ಕ್ಷೇತ್ರದಿಂದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಬದಲು, ಮಗ ಕರಣ್ ಭೂಷಣ್ ಸಿಂಗ್ ಅವರಿಗೆ ಟಿಕೆಟ್ ನೀಡಿದೆ.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಬ್ರಿಜ್‌ಭೂಷಣ್ ಅವರು ವಿವಾದಕ್ಕೆ ಗುರಿಯಾಗಿದ್ದರು.



ಬ್ರಿಜ್‌ಭೂಷಣ್ ಶರಣ್ ಸಿಂಗ್

ಬಿಜೆಪಿಯು ಬ್ರಿಜ್‌ಭೂಷಣ್ ಅವರಿಗೆ ಟಿಕೆಟ್ ನಿರಾಕರಿಸಿದರೂ ಅವರ ಮಗನಿಗೇ ಟಿಕೆಟ್ ನೀಡಲಾಗಿದೆ. ಠಾಕೂರ್ ಸಮುದಾಯದ ನಾಯಕ ಬ್ರಿಜ್‌ಭೂಷಣ್ ಅವರು ಪಕ್ಷದಲ್ಲಿ ಎಷ್ಟು ಪ್ರಭಾವಿಯಾಗಿದ್ದಾರೆ ಎಂಬುದರ ಸೂಚನೆ ಇದು. ಬ್ರಿಜ್‌ಭೂಷಣ್ ಅವರು ಆರು ಬಾರಿಯ ಸಂಸದರಾಗಿದ್ದಾರೆ.

ಭಾರತ ಕುಸ್ತಿ ಫೆಡರೇಷನ್‌ನ ಅಧ್ಯಕ್ಷರಾಗಿದ್ದ ಬ್ರಿಜ್‌ಭೂಷಣ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದ ಕುಸ್ತಿಪಟುಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಹುದ್ದೆಯಿಂದ ಕೆಳಗಿಳಿದಿದ್ದ ಅವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದರು. ದೆಹಲಿ ಪೊಲೀಸರು ಅವರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದಾರೆ.

ಗೊಂಡಾ ಮತ್ತು ನೆರೆಯ ಜಿಲ್ಲೆಗಳಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಬ್ರಿಜ್‌ಭೂಷಣ್ ಅವರು ಕೈಸರ್‌ಗಂಜ್ ಕ್ಷೇತ್ರದಲ್ಲಿ ಹೆಚ್ಚಿನ ಜನ ಬೆಂಬಲ ಹೊಂದಿದ್ದು, ರಾಜಕೀಯವಾಗಿಯೂ ಪ್ರಬಲರಾಗಿದ್ದಾರೆ.

ಕಮಲ ಪಾಳಯವು ರಾಯ್‌ಬರೇಲಿಯಿಂದ ದಿನೇಶ್ ಪ್ರತಾಪ್ ಸಿಂಗ್ ಅವರನ್ನು ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ದಿನೇಶ್ ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಎದುರು ಪರಾಭವಗೊಂಡಿದ್ದರು.

'ನಾಚಿಕೆಗೇಡು'

'ಬಿಜೆಪಿಯು ಬ್ರಿಜ್‌ಭೂಷಣ್ ಶರಣ್ ಸಿಂಗ್ ಪುತ್ರ ಕರಣ್ ಸಿಂಗ್‌ಗೆ ಟಿಕೆಟ್ ನೀಡಿದೆ. ಇದು ನಾಚಿಕೆಗೇಡಿನ ಮತ್ತು ಅಗೌರವದ ವಿಷಯ. ಬ್ರಿಜ್‌ಭೂಷಣ್ ಎಸಗಿರುವ ಲೈಂಗಿಕ ದೌರ್ಜನ್ಯಗಳನ್ನು ಖಂಡಿಸಲು ಸಿದ್ಧವಿಲ್ಲ ಎಂಬುದನ್ನು ಬಿಜೆಪಿ ಈ ಮೂಲಕ ತೋರಿಸಿಕೊಟ್ಟಿದೆ' ಎಂದು ಟಿಎಂಸಿ ರಾಜ್ಯಸಭಾ ಸದಸ್ಯರಾದ ಸಾಗರಿಕಾ ಘೋಷ್ ಟೀಕಿಸಿದ್ದಾರೆ.

ನವೀನ್ ಜಿಂದಾಲ್ ಆಸ್ತಿ ₹1,000 ಕೋಟಿ

ಚಂಡೀಗಢ (ಪಿಟಿಐ): ಬಿಜೆಪಿಯ ಕುರುಕ್ಷೇತ್ರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ, ಉದ್ಯಮಿ ನವೀನ್ ಜಿಂದಾಲ್ ಅವರು ₹1,000 ಕೋಟಿ ಆಸ್ತಿ ಇರುವುದಾಗಿ ಘೋಷಿಸಿಕೊಂಡಿದ್ದಾರೆ.

54 ವರ್ಷದ ಜಿಂದಾಲ್ ಅವರು ಗುರುವಾರ ನಾಮಪತ್ರ ಸಲ್ಲಿಸಿದರು. ಹರಿಯಾಣ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರು ಈ ವೇಳೆ ಜತೆಗಿದ್ದರು. ತಮ್ಮ ಬಳಿ ₹886 ಕೋಟಿ ಆಸ್ತಿ ಹಾಗೂ ಪತ್ನಿಯ ಹೆಸರಲ್ಲಿ ₹114 ಕೋಟಿ ಆಸ್ತಿ ಇರುವುದಾಗಿ ಅವರು ಪ್ರಮಾಣಪತ್ರದಲ್ಲಿ ಹೇಳಿದ್ದಾರೆ.

ಕಾಂಗ್ರೆಸ್‌ನಲ್ಲಿದ್ದ ಜಿಂದಾಲ್, ಮಾರ್ಚ್‌ನಲ್ಲಿ ಬಿಜೆಪಿ ಸೇರಿದ್ದರು. ಅವರು ಈ ಬಾರಿ ಐಎನ್‌ಎಲ್‌ಡಿಯ ನಾಯಕ ಅಭಯ್ ಸಿಂಗ್ ಚೌಟಾಲಾ ಮತ್ತು ಎಎಪಿಯ ಸುಶೀಲ್ ಗುಪ್ತಾ ವಿರುದ್ಧ ಹೋರಾಡಬೇಕಿದೆ.

ಒಮರ್ ಅಬ್ದುಲ್ಲಾ ನಾಮಪತ್ರ (ಶ್ರೀನಗರ ವರದಿ): ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಲೋಕಸಭಾ ಕ್ಷೇತ್ರದಿಂದ ಗುರುವಾರ ನಾಮಪತ್ರ ಸಲ್ಲಿಸಿದರು. ಒಮರ್ ಅವರು ಪೀಪಲ್ಸ್ ಕಾನ್ಫರೆನ್ಸ್‌ನ ಅಧ್ಯಕ್ಷ ಸಜ್ಜದ್ ಲೋನ್ ಮತ್ತು ಪಿಡಿಪಿಯ ಮೀರ್ ಫಯಾಜ್ ಅವರ ಸವಾಲು ಎದುರಿಸಲಿದ್ದಾರೆ.

ಅಮೇಠಿಯಿಂದ ರಾಹುಲ್ ಸ್ಪರ್ಧೆ ಸಾಧ್ಯತೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಅಮೇಠಿ ಮತ್ತು ರಾಯಬರೇಲಿ ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳ ಬಗ್ಗೆ ಕುತೂಹಲ ಮುಂದುವರಿದಿದೆ. ರಾಹುಲ್ ಗಾಂಧಿ ಅವರು ಕಳೆದ ಬಾರಿ ಸೋತಿದ್ದ ಅಮೇಠಿ ಸ್ಥಾನದಿಂದ ಮತ್ತೆ ಸ್ಪರ್ಧಿಸುವ ಸಾಧ್ಯತೆಯಿದೆ ಎಂದು ಮೂಲಗಳು ಗುರುವಾರ ಹೇಳಿವೆ.

ಈ ಎರಡು ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಲು ಶುಕ್ರವಾರ ಕೊನೆಯ ದಿನವಾಗಿದೆ. ನಾಮಪತ್ರ ಸಲ್ಲಿಕೆಗೆ ಸಂಬಂಧಿಸಿದಂತೆ ಪಕ್ಷವು ತಯಾರಿ ನಡೆಸಿದೆ. ಅಮೇಠಿಯಿಂದ ರಾಹುಲ್ ಕಣಕ್ಕಿಳಿಯುವ ಸಾಧ್ಯತೆಯೇ ಅಧಿಕ ಎಂದು ಮೂಲಗಳು ತಿಳಿಸಿವೆ. 2019ರ ಚುನಾವಣೆಯಲ್ಲಿ ಅವರು ಬಿಜೆಪಿಯ ಸ್ಮೃತಿ ಇರಾನಿ ಎದುರು ಸೋತಿದ್ದರು.

ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ಹಾಜರಿರಲಿದ್ದಾರೆ ಎಂದು ಪಕ್ಷದ ನಾಯಕರೊಬ್ಬರು ತಿಳಿಸಿದರು.

ರಾಯಬರೇಲಿಯಿಂದ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಕಣಕ್ಕಿಳಿಯದಿದ್ದರೆ, ಕಾಂಗ್ರೆಸ್ ನಾಯಕಿ ದಿವಂಗತ ಶೀಲಾ ಕೌಲ್ ಅವರ ಮೊಮ್ಮಗನನ್ನು ಕಣಕ್ಕಿಸುವ ಚಿಂತನೆಯೂ ನಡೆದಿದೆ.

ನಾಮಪತ್ರ ಸಲ್ಲಿಕೆಯ ಸಿದ್ಧತೆಯ ಅಂಗವಾಗಿ, ರಾಹುಲ್ ಗಾಂಧಿ ಮತ್ತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಚಿತ್ರಗಳನ್ನು ಒಳಗೊಂಡ ಕಟೌಟ್‌ಗಳು ಮತ್ತು ಬ್ಯಾನರ್‌ಗಳನ್ನು ಗುರುವಾರ ಸಂಜೆ ಅಮೇಠಿಯ ಗೌರಿಗಂಜ್‌ನಲ್ಲಿರುವ ಪಕ್ಷದ ಕಚೇರಿಗೆ ತರಲಾಗಿದೆ.

'ಗ್ಯಾರಂಟಿ' ಕಾರ್ಡ್ ಹಂಚುತ್ತಿದ್ದ ಕಾಂಗ್ರೆಸ್ ವಿರುದ್ಧ ಬಿಜೆಪಿ ದೂರು ● ಎಲ್ಲ ಪಕ್ಷಗಳಿಗೆ ಚುನಾವಣಾ ಆಯೋಗ ಸೂಚನೆ

ಮತದಾರರ ವಿವರ ಸಂಗ್ರಹಿಸುವುದರ ಮೇಲೆ ನಿಷೇಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣೆ ಮುಗಿದ ನಂತರ ವಿವಿಧ ಪ್ರಯೋಜನಗಳನ್ನು ನೀಡುವುದಕ್ಕಾಗಿ ರಾಜಕೀಯ ಪಕ್ಷಗಳು ಮತದಾರರ ವಿವರಗಳನ್ನು ಸಂಗ್ರಹಿಸುವುದನ್ನು ಚುನಾವಣಾ ಆಯೋಗವು ಗುರುವಾರ ನಿಷೇಧಿಸಿದೆ.

'ಚುನಾವಣೆ ನಂತರ ಪ್ರಯೋಜನಗಳನ್ನು ವಿತರಿಸುವುದಕ್ಕಾಗಿ ಮತದಾರರ ವಿವರಗಳನ್ನು ಸಂಗ್ರಹಿಸುವುದು ಭ್ರಷ್ಟಾಚಾರವೇ ಸರಿ' ಎಂದು ಹೇಳಿರುವ ಆಯೋಗ, ಈ ಸಂಬಂಧ ಎಲ್ಲ ರಾಜಕೀಯ ಪಕ್ಷಗಳಿಗೆ ಪತ್ರ ಬರೆದಿದೆ.

ಪ್ರಸಕ್ತ ಲೋಕಸಭಾ ಚುನಾವಣೆ ವೇಳೆ 'ಗ್ಯಾರಂಟಿ' ಕಾರ್ಡುಗಳನ್ನು ಹಂಚಿಕೆ ಮಾಡುತ್ತಿರುವ ಕಾಂಗ್ರೆಸ್ ಮೇಲೆ ಆಯೋಗದ



ಈ ಕ್ರಮವು ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದೆ.

'ಈ ವಿಷಯವನ್ನು ಆಯೋಗ ಗಂಭೀರವಾಗಿ ಪರಿಗಣಿಸಿದೆ. ಕೆಲ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಮತದಾರರ ವಿವರಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿರುವುದು ಕಂಡುಬಂದಿದೆ. ಇಂತಹ ನಡೆಯು, ನ್ಯಾಯಸಮ್ಮತ ಸಮೀಕ್ಷೆ ಹಾಗೂ ಚುನಾವಣೆ ನಂತರ ಕೆಲ ಪ್ರಯೋಜನಗಳನ್ನು ನೀಡುವುದಕ್ಕಾಗಿ ಮತದಾರರ ವಿವರ ಸಂಗ್ರಹಿಸುವುದರ ನಡುವಿನ ವ್ಯತ್ಯಾಸವನ್ನು ಅಳಿಸಿ ಹಾಕುವಂತಿದೆ' ಎಂದು ಪತ್ರದಲ್ಲಿ ವಿವರಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಐದು ನಿದರ್ಶನಗಳನ್ನು ಆಯೋಗ ಉಲ್ಲೇಖಿಸಿದೆ.

'ಜಾಹೀರಾತುಗಳು, ಸಮೀಕ್ಷೆಗಳು ಅಥವಾ ಆ್ಯಪ್ ಮೂಲಕ ವ್ಯಕ್ತಿಗಳ ಹೆಸರು ನೋಂದಣಿ ಮಾಡಿಸುವಂತಹ ಚಟುವಟಿಕೆಗಳನ್ನು ತಕ್ಷಣವೇ ನಿಲ್ಲಿಸಬೇಕು' ಎಂದು ಎಲ್ಲ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳಿಗೆ ಆಯೋಗ ಸೂಚಿಸಿದೆ.

ಆಯೋಗದ ನಿರ್ದೇಶನ ಉಲ್ಲಂಘಿಸುವವರ ವಿರುದ್ಧ ಜನಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 123(1) ಹಾಗೂ ಐಪಿಸಿ ಸೆಕ್ಷನ್ 171(ಬಿ) ಅಡಿ ಕ್ರಮ ಕೈಗೊಳ್ಳಲಾಗುವುದು ಎಂದೂ ಎಚ್ಚರಿಸಿದೆ.

'ಗ್ಯಾರಂಟಿ ಕಾರ್ಡು'ಗಳನ್ನು ಹಂಚಿಕೆ ಮಾಡುತ್ತಿದ್ದ ಕಾಂಗ್ರೆಸ್ ಪಕ್ಷದ ವಿರುದ್ಧ ಬಿಜೆಪಿ ಇತ್ತೀಚೆಗೆ ಆಯೋಗಕ್ಕೆ ದೂರು ನೀಡಿತ್ತು.

ಕಾರ್ಡ್ ಹಂಚಿಕೆ ಮುಂದುವರಿಕೆ: ಕಾಂಗ್ರೆಸ್

'ಪಕ್ಷವು ಗ್ಯಾರಂಟಿ ಕಾರ್ಡುಗಳನ್ನು ಹಂಚುವುದನ್ನು ಮುಂದುವರಿಸಲಿದೆ. ಆದರೆ, ವ್ಯಕ್ತಿಗಳ ವಿವರಗಳಿರುವ ರಸೀದಿ (ಕೌಂಟರ್‌ಫಾಯಿಲ್) ಇದರೊಂದಿಗೆ ಇರುವುದಿಲ್ಲ' ಎಂದು ಕಾಂಗ್ರೆಸ್ ಪಕ್ಷ ಪ್ರತಿಕ್ರಿಯಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರ ಸಹಿ ಹೊಂದಿದ ಕಾರ್ಡುಗಳನ್ನು ಪಕ್ಷವು ಹಂಚುತ್ತಿದೆ. ಐದು 'ನ್ಯಾಯ'ಗಳಡಿ ಸಾಮಾಜಿಕ ಪ್ರಾತಿನಿಧ್ಯ, ರೈತರು, ಯುವಕರು, ಮಹಿಳೆ ಮತ್ತು ಕಾರ್ಮಿಕರಿಗೆ 25 'ಗ್ಯಾರಂಟಿ'ಗಳನ್ನು ಒದಗಿಸುವ ಭರವಸೆಯನ್ನು ಪಕ್ಷವು ಈ ಕಾರ್ಡುಗಳ ಮೂಲಕ ನೀಡುತ್ತಿದೆ.

ಈ ಕಾರ್ಡುಗಳನ್ನು ಹಂಚುವಾಗ, ಅದರೊಂದಿಗಿನ ಕೌಂಟರ್‌ಫಾಯಿಲ್‌ನಲ್ಲಿ ಮತದಾರರ ವಿವರಗಳನ್ನು ನಮೂದಿಸಿ, ಅದನ್ನು ಪಕ್ಷ ತನ್ನ ಬಳಿ ಇಟ್ಟುಕೊಳ್ಳುತ್ತಿದೆ.

ಚುಟುಕು

'ಕೋವಿಶೀಲ್ಡ್ ಲಸಿಕೆ ಪಡೆದವರು ಬಿಜೆಪಿ ವಿರುದ್ಧ ಮತ ಹಾಕಲಿದ್ದಾರೆ'

ಬದಾಂಯೂ (ಉತ್ತರ ಪ್ರದೇಶ) (ಪಿಟಿಐ): ಕೋವಿಶೀಲ್ಡ್ ಲಸಿಕೆಯ ಅಡ್ಡ ಪರಿಣಾಮದ ವಿಚಾರವಾಗಿ ಬಿಜೆಪಿ ವಿರುದ್ಧ ಹರಿಹಾಯ್ದ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಈ ಲಸಿಕೆಯನ್ನು ಪಡೆದುಕೊಂಡ ಜನರು ಬಿಜೆಪಿಯ ವಿರುದ್ಧ ಮತಹಾಕಲಿದ್ದಾರೆ ಎಂದು ಗುರುವಾರ ಹೇಳಿದರು.



ಪಕ್ಷದ ಅಭ್ಯರ್ಥಿ ಆದಿತ್ಯ ಯಾದವ್ ಪರವಾಗಿ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಲಸಿಕೆ ತಯಾರಿಸಿರುವ ಕಂಪನಿಗಳಿಂದ ಬಿಜೆಪಿ ದೇಣಿಗೆ ಪಡೆದಿದೆ ಎಂದು ಆರೋಪಿಸಿದರು.

ಬಿಜೆಪಿಯ ನಿರ್ಧಾರಗಳಿಂದ ಕೇವಲ ಸಂವಿಧಾನಕ್ಕೆ ಮಾತ್ರ ಅಪಾಯವಲ್ಲ, ಜನರ ಜೀವಕ್ಕೂ ಅಪಾಯವಿದೆ ಎಂದು ಹೇಳಿದರು.

ಕೋವಿಡ್ ನಿಯಂತ್ರಣಕ್ಕಾಗಿ ತಾನು ಅಭಿವೃದ್ಧಿಪಡಿಸಿದ್ದ 'ಕೋವಿಶೀಲ್ಡ್' ಲಸಿಕೆಯಿಂದ ಗಂಭೀರ ಅಡ್ಡಪರಿಣಾಮ ಉಂಟಾಗುತ್ತದೆ ಎಂದು ಆಸ್ಟ್ರಾಜೆನೆಕಾ ಕಂಪನಿ ಈಚೆಗೆ ಹೇಳಿತ್ತು.

ತೆಲಂಗಾಣ: ಮತದಾನದ ಅವಧಿ ಒಂದು ತಾಸು ಹೆಚ್ಚಳ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಬಿಸಿಗಾಳಿ ಹೆಚ್ಚಾಗಿದ್ದರಿಂದ ಚುನಾವಣಾ ಆಯೋಗವು ಮತದಾನದ ಅವಧಿಯನ್ನು ಒಂದು ತಾಸು ಹೆಚ್ಚಳ ಮಾಡಿ, ಬುಧವಾರ ಅಧಿಸೂಚನೆ ಹೊರಡಿಸಿದೆ.



ಈಗ ಮತದಾನದ ಅವಧಿ ಬೆಳಿಗ್ಗೆ 7ರಿಂದ ಸಂಜೆ 5ಗಂಟೆಯ ವರೆಗೆ ಇದ್ದು, ಪರಿಷ್ಕೃತ ಅವಧಿ ಅನ್ವಯ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಅವಕಾಶ ಕಲ್ಪಿಸಲಾಗಿದೆ. ತೆಲಂಗಾಣದ ಎಲ್ಲ 17 ಲೋಕಸಭಾ ಕ್ಷೇತ್ರಗಳಿಗೂ ಮೇ 13ರಂದು ಚುನಾವಣೆ ನಡೆಯಲಿದೆ.

'ತೆಲಂಗಾಣದ ಮುಖ್ಯ ಚುನಾವಣಾಧಿಕಾರಿಯವರ ವಿನಂತಿಯ ಮೇರೆಗೆ ಆಯೋಗ ಈ ನಿರ್ಧಾರ ಕೈಗೊಂಡಿದೆ' ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಎಂಥಾ ಮಾತು!

ಪ್ರಧಾನಿ ನರೇಂದ್ರ ಮೋದಿ ಅವರು ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡುವುದಿಲ್ಲ. ಅವರ ಗಮನವನ್ನು ಬೇರೆಡೆಗೆ ಸೆಳೆಯುತ್ತಿದ್ದಾರೆ. ತಮ್ಮ ಭಾಷಣದಲ್ಲಿ ಸುಳ್ಳು ಹೇಳುವ ಪ್ರಧಾನಿಯನ್ನು ಈ ಹಿಂದೆ ಎಂದೂ ನೋಡಿರಲಿಲ್ಲ. ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮೋದಿ ಅವರಿಗೆ ಪ್ರಚಾರ ನಡೆಸಲು ಅನುಕೂಲ ಕಲ್ಪಿಸಲು ಮಹಾರಾಷ್ಟ್ರದಲ್ಲಿ ಐದು ಹಂತಗಳಲ್ಲಿ ಮತದಾನ ನಡೆಸಲಾಗುತ್ತಿದೆ

ಶರದ್ ಪವಾರ್, ಎನ್‌ಸಿಪಿ ಶರದ್ ಪವಾರ್ ಬಣ





ಕಾಂಗ್ರೆಸ್ ಪಕ್ಷವು ಹತಾಶೆಗೊಂಡಿದ್ದು, ಸುಳ್ಳು ಮತ್ತು ತಪ್ಪು ಮಾಹಿತಿಯನ್ನು ಹರಡುತ್ತಿದೆ. ಮತಕ್ಕಾಗಿ ಆ ಪಕ್ಷವು ಓಲೈಕೆಯ ರಾಜಕಾರಣದ ಮೊರೆ ಹೋಗಿದೆ. ತಮ್ಮ ಸೇವೆ ಮಾಡಲು ಜನರು ಕಾಂಗ್ರೆಸ್‌ಗೆ ಹಲವು ಬಾರಿ ಅವಕಾಶಗಳನ್ನು ನೀಡಿದ್ದರು. ಆದರೆ ಆ ಪಕ್ಷವು ಜನರ ನಂಬಿಕೆಗೆ ದ್ರೋಹ ಎಸಗಿದೆ. ಸಂವಿಧಾನವನ್ನು ಬದಲಿಸುವ ಸಲುವಾಗಿ ಬಿಜೆಪಿಯು 400 ಕ್ಷೇತ್ರಗಳಲ್ಲಿ ಗೆಲ್ಲಲು ಬಯಸುತ್ತಿದೆ ಎಂದು ಕಾಂಗ್ರೆಸ್ ಸುಳ್ಳು ಹೇಳುತ್ತಿದೆ

ರಾಜೀವ್ ಚಂದ್ರಶೇಖರ್, ಕೇಂದ್ರ ಸಚಿವ

ಕ್ಷೇತ್ರ ಮಹಾತ್ಮೆ



ಉತ್ತರ ಪ್ರದೇಶದ ಗೋಮತಿ ನದಿ ದಡದಲ್ಲಿರುವ ಸುಲ್ತಾನ್‌ಪುರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಣ ರಂಗೇರಿದ್ದು, ಘಟಾನುಘಟಿಗಳ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ. ಬಿಜೆಪಿಯು ಈ ಬಾರಿಯೂ ಮೇನಕಾ ಗಾಂಧಿ ಅವರನ್ನೇ ಕಣಕ್ಕಿಳಿಸಿದರೆ, ಸಮಾಜವಾದಿ ಪಕ್ಷವು (ಎಸ್.ಪಿ) ರಾಮ್ ಭೂವಾಲ್ ನಿಶಾದ್ ಅವರನ್ನು ಸ್ಪರ್ಧೆಗಿಳಿಸಿದೆ. ಬಿಎಸ್‌ಪಿಯು ಉದಯ್ ರಾಜ್ ವರ್ಮಾ ಅವರನ್ನು ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಮೇನಕಾ ಗಾಂಧಿ ಅವರು 14,526 ಮತಗಳ ಅಂತರದಿಂದ ಬಿಎಸ್‌ಪಿಯ ಚಂದ್ರ ಭದ್ರ ಸಿಂಗ್ ಅವರನ್ನು ಪರಾಭವಗೊಳಿಸಿದ್ದರು. ಈ ಬಾರಿ ಎಸ್‌ಪಿಯು 'ಇಂಡಿಯಾ' ಒಕ್ಕೂಟದ ಜೊತೆಗಿರುವುದು ನಿಶಾದ್ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಎಸ್‌ಪಿಯು ಈ ಕ್ಷೇತ್ರಕ್ಕೆ ಆರಂಭದಲ್ಲಿ ಭೀಮ್ ನಿಶಾದ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿತ್ತು. ಬಳಿಕ ಅವರನ್ನು ಬದಲಿಸಿ, ರಾಮ್ ಭೂವಾಲ್ ಅವರಿಗೆ ಟಿಕೆಟ್ ನೀಡಲಾಗಿದೆ. ಕಳೆದ ಚುನಾವಣೆಯಲ್ಲಿ ಎಸ್‌ಪಿ ಮತ್ತು ಬಿಎಸ್‌ಪಿ ಮೈತ್ರಿ ಮಾಡಿಕೊಂಡು ಲೋಕಸಭಾ ಚುನಾವಣೆಯನ್ನು ಎದುರಿಸಿದ್ದವು. ಈ ಬಾರಿ ಬಿಎಸ್‌ಪಿಯು ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಎಸ್‌ಪಿಯ ಮತಗಳು ವಿಭಜನೆಯಾಗುವ ಸಾಧ್ಯತೆ ಇದ್ದು, ಬಿಜೆಪಿ ಅಭ್ಯರ್ಥಿಗೆ ಅನುಕೂಲವಾಗಲಿದೆ ಎಂಬುದು ಚುನಾವಣಾ ವಿಶ್ಲೇಷಕರ ಅಭಿಪ್ರಾಯ. ನಿಶಾದ್ ಅವರು ರಾಜ್ಯ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ರಾಜಕಾರಣಿ ಹಾಗೂ ಪ್ರಾಣಿ ಹಕ್ಕುಗಳ ಹೋರಾಟಗಾರ್ತಿಯಾಗಿರುವ ಮೇನಕಾ ಅವರು ಕೇಂದ್ರ ಸಚಿವೆಯಾಗಿಯೂ ಕಾರ್ಯನಿರ್ವಹಿಸಿದವರು. ಈ ಬಾರಿ ಇಲ್ಲಿನ ಮತದಾರರು ಯಾರ ಪರ ನಿಲ್ಲಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಬೆಗುಸರಾಯ್



ಗಿರಿರಾಜ್ ಸಿಂಗ್ (ಬಿಜೆಪಿ)

ಬಿಹಾರದ ಬೆಗುಸರಾಯ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಈ ಬಾರಿಯೂ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಕಣಕ್ಕಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಗಿರಿರಾಜ್ ಅವರು, ಸಿಪಿಐನಿಂದ ಸ್ಪರ್ಧಿಸಿದ್ದ ಕನ್ಹಯ್ಯ ಕುಮಾರ್ ಅವರನ್ನು 4,22,217 ಮತಗಳ ಅಂತರದಿಂದ ಪರಾಭವಗೊಳಿಸಿದ್ದರು. ಗಿರಿರಾಜ್ ಅವರು ರಾಜ್ಯ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ನಿರ್ಧಾರಗಳನ್ನು ಜನರ ಮುಂದಿರಿಸಿ ಅವರು ಮತಯಾಚಿಸುತ್ತಿದ್ದಾರೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜೆಡಿಯು ಮತ್ತೆ ಎನ್‌ಡಿಎ ಒಕ್ಕೂಟಕ್ಕೆ ಸೇರಿರುವುದು ಸಿಂಗ್ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಇಬ್ಬರು ಪ್ರಬಲ ಅಭ್ಯರ್ಥಿಗಳು ಸ್ಪರ್ಧೆಗಿಳಿದಿರುವುದರಿಂದ ಕಣವು ಕುತೂಹಲ ಮೂಡಿಸಿದೆ.


V/S



ಅವಧೇಶ್ ಕುಮಾರ್ ರಾಯ್ (ಸಿಪಿಐ)

ಎಡಪಕ್ಷದ ಪ್ರಾಬಲ್ಯವಿರುವ ಬೆಗುಸರಾಯ್ ಕ್ಷೇತ್ರದಲ್ಲಿ ಗಿರಿರಾಜ್ ಸಿಂಗ್‌ಗೆ ಪೈಪೋಟಿ ನೀಡಲು ಸಿಪಿಐ, ಅವಧೇಶ್ ಕುಮಾರ್ ರಾಯ್ ಅವರನ್ನು ಕಣಕ್ಕಿಳಿಸಿದೆ. ಸಿಪಿಐ ಈ ಬಾರಿ 'ಇಂಡಿಯಾ' ಒಕ್ಕೂಟದ ಜೊತೆಗಿರುವುದು ಅವಧೇಶ್ ಅವರಿಗೆ ಅನುಕೂಲವಾಗಲಿದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಕ್ಷೇತ್ರದಲ್ಲಿನ ಮುಸ್ಲಿಮರ ಮತಗಳು ಅವಧೇಶ್ ಅವರಿಗೆ ಲಭಿಸುವ ಸಾಧ್ಯತೆ ಇದೆ ಎಂದೂ ಹೇಳಿದ್ದಾರೆ. ಅವಧೇಶ್, ಈ ಹಿಂದೆ ಬಚ್ವಾಡಾ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಕೇಂದ್ರ ಸರ್ಕಾರದ ನ್ಯೂನತೆಗಳನ್ನು ಪ್ರಮುಖ ಪ್ರಚಾರ ವಿಷಯವಾಗಿಸಿ ಅವಧೇಶ್ ಅವರು ಜನರ ಬಳಿಗೆ ತೆರಳುತ್ತಿದ್ದಾರೆ. ಗಿರಿರಾಜ್ ಅವರು ಕೇಂದ್ರದ ಸಚಿವರಾದರೂ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ ಎಂದು ಅವಧೇಶ್ ಆರೋಪಿಸುತ್ತಿದ್ದಾರೆ.

ಷೇರುಪೇಟೆ ವಹಿವಾಟು 128



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,604
ಇಂದಿನ ಅಂತ್ಯ	22,648
▲	43
ದಿನದ ಗರಿಷ್ಠ	22,710

ವಿನಿಮಯ ದರ

$ ಡಾಲರ್	83.46
£ ಪೌಂಡ್	104.48
€ ಯುರೊ	89.36
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹65
ಮೈಸೂರು	
100ಕ್ಕೆ	₹510



ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1700-2100
ಮಧ್ಯಮ	₹1200-1700
ಸಣ್ಣ	₹500-1200

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹270-483
ದ್ವಿತಳಿ (ಬಿ.ವಿ)	₹349-577

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹160

(ಪ್ರತಿ ಕೆ.ಜಿಗೆ)



ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9500
ಮಧುಗಿರಿ	₹7500-9000
ಮಳವಳ್ಳಿ	₹9200-9200
ತಿಪಟೂರು	₹8000-9400

ಚಿನ್ನದ ದರ ₹500, ಬೆಳ್ಳಿ ₹400 ಏರಿಕೆ

ನವದೆಹಲಿ (ಪಿಟಿಐ): ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದರಿಂದ ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದತ್ತ ಹೂಡಿಕೆದಾರರು ಚಿತ್ತ ಹರಿಸಿದ್ದಾರೆ. ಹಾಗಾಗಿ, ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ದರ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರ ₹500 ಏರಿಕೆಯಾಗಿ ₹72,350ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಕೆ.ಜಿಗೆ ₹400 ಹೆಚ್ಚಳವಾಗಿ ₹83,500ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,304 ಡಾಲರ್ (ಅಂದಾಜು ₹1.92 ಲಕ್ಷ) ಮತ್ತು 26.45 (ಅಂದಾಜು ₹2,208) ಡಾಲರ್‌ನಂತೆ ಮಾರಾಟವಾಗಿದೆ.





ಮಸಾಲೆ, ಹೈನು ಉತ್ಪನ್ನ ಗುಣಮಟ್ಟ ಪರೀಕ್ಷೆಗೆ ನಿರ್ಧಾರ

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಾರವರ್ಧಿತ ಅಕ್ಕಿ, ಹೈನು ಉತ್ಪನ್ನಗಳು ಹಾಗೂ ಮಸಾಲೆ ಪದಾರ್ಥಗಳ ಸುರಕ್ಷತೆ ಮತ್ತು ಗುಣಮಟ್ಟದ ಪರೀಕ್ಷೆಗೆ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಮುಂದಾಗಿದೆ.

ದೇಶದ ಜನಪ್ರಿಯ ಬ್ರ್ಯಾಂಡ್‌ಗಳಾದ ಎಂಡಿಎಚ್ ಮತ್ತು ಎವರೆಸ್ಟ್ ಮಸಾಲೆ ಪದಾರ್ಥಗಳಲ್ಲಿ ಕ್ಯಾನ್ಸರ್ ಕಾರಕ ಕೀಟನಾಶಕ ಅಂಶವಿದೆ ಎಂದು ಹಾಂಗ್‌ಕಾಂಗ್ ಹಾಗೂ ಸಿಂಗಪುರ ಆರೋಪಿಸಿದ್ದು, ಅಲ್ಲಿ ಇವುಗಳ ಬಳಕೆ, ಮಾರಾಟಕ್ಕೆ ನಿಷೇಧ ಹೇರಲಾಗಿದೆ.

ಹಾಗಾಗಿ, ದೇಶೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥಗಳ ಗುಣಮಟ್ಟದ ಮೇಲೆ ಹೆಚ್ಚಿನ ನಿಗಾವಹಿಸಲು ಪ್ರಾಧಿಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ. ಹಣ್ಣು ಮತ್ತು ತರಕಾರಿಗಳು, ಸಾಲ್ಮನ್ ಮೀನಿನ ಮಾಂಸ, ಪಾಕಶಾಲೆಯಲ್ಲಿ ಬಳಸುವ ಗಿಡಮೂಲಿಕೆ ಪದಾರ್ಥಗಳು, ಹಾಲು ಹಾಗೂ ಅದರ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಲಿದೆ ಎಂದು ತಿಳಿಸಿವೆ.

ಹೆಚ್ಚಿದ ಬಿಸಿಲ ಝಳ: ನೀರಿಲ್ಲದೆ ಬೆಳೆಗಾರರು ಕಂಗಾಲು

ಮಲ್ಲಿಗೆ ಇಳುವರಿ ಕುಂಠಿತ

• ಕೆ. ಸೋಮಶೇಖರ್

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಬಿಸಿಲಿನ ತಾಪ ಹೆಚ್ಚಳವು ತಾಲ್ಲೂಕಿನ ಮಲ್ಲಿಗೆ ಕೃಷಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಮಲ್ಲಿಗೆ ಋತು ಪ್ರಾರಂಭವಾಗಿ ಎರಡು ತಿಂಗಳಾಗಿದೆ. ಮಾರುಕಟ್ಟೆಯಲ್ಲಿ ಮಲ್ಲಿಗೆ ಹೂವಿಗೆ ಪ್ರತಿ ಕೆ.ಜಿಗೆ ₹400 ಬೆಲೆ ಇದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಇಳುವರಿ ಇಲ್ಲ.

ಮಲ್ಲಿಗೆ ಗಿಡಗಳ ಬುಡದಲ್ಲಿ ತಂಪು, ಸಾಧಾರಣ ಉಷ್ಣಾಂಶ ಇರಬೇಕು. ಆದರೆ, ಅಂತರ್ಜಲ ಮಟ್ಟ ಕುಸಿತದಿಂದ ಕೊಳವೆಬಾವಿಗಳು ಬತ್ತಿವೆ. ಬೆಳೆಗೆ ನೀರು ಪೂರೈಸಲು ಆಗುತ್ತಿಲ್ಲ. ಬಿಸಿಲ ಝಳವು ಕೃಷಿಯ ಮೇಲೆ ಪರಿಣಾಮ ಬೀರಿದೆ.

'ಮಲ್ಲಿಗೆ ಹೂ ಋತುವಿನ ಪ್ರಾರಂಭದ ದಿನಗಳಲ್ಲಿ ಎಕರೆಗೆ 20ರಿಂದ 30 ಕೆ.ಜಿವರೆಗೆ ಸಿಗುತ್ತಿದ್ದ ಮೊಗ್ಗಿನ ಪ್ರಮಾಣವು 10ರಿಂದ 15 ಕೆ.ಜಿಗೆ ಕುಸಿದಿದೆ. ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದರೂ, ನಿರೀಕ್ಷಿತ ಪ್ರಮಾಣದಲ್ಲಿ ಮೊಗ್ಗು ಬಿರಿಯುತ್ತಿಲ್ಲ. ಬಿಸಿಲ ಝಳಕ್ಕೆ ಮೋಪು ಕತ್ತರಿಸುತ್ತಿದೆ' ಎಂದು ವಿನೋಬನಗರದ ಮಲ್ಲಿಗೆ ಬೆಳೆಗಾರ ಗೋನಾಳ ಮಹಾಂತೇಶ ಹೇಳಿದರು.

'ಬಿಸಿಲಿನಿಂದ ಮೊಗ್ಗಿನ ಗಾತ್ರವೂ ಚಿಕ್ಕದಾಗಿದೆ. ಕೋವಿಡ್ ವೇಳೆ ರೈತರು ಸಂಕಷ್ಟ ಅನುಭವಿಸಿದ್ದರು. ನಂತರದ ವರ್ಷ ಮಳೆ ಹೆಚ್ಚಾಗಿದ್ದರಿಂದ ತಂಪು ಹವೆಯಿಂದಾಗಿ ಮಲ್ಲಿಗೆ ಬೆಳೆಗೆ ಶಿಲೀಂಧ್ರಕಾರಕ ರೋಗ ವ್ಯಾಪಿಸಿತು. ಕಳೆದ ನಾಲ್ಕು ವರ್ಷದಿಂದ ನಿರೀಕ್ಷಿತ ಇಳುವರಿ ಸಿಗದೆ ನಷ್ಟವಾಗಿದೆ' ಎಂದು ರೈತ ಬಸವರೆಡ್ಡಿ ತಿಳಿಸಿದರು.

ತಾಲ್ಲೂಕಿನಲ್ಲಿ ಹಿಂದೆ ಸಾವಿರಾರು ಹೆಕ್ಟೇರ್‌ನಲ್ಲಿ ಮಲ್ಲಿಗೆ ಕೃಷಿ ಮಾಡಲಾಗುತ್ತಿತ್ತು. ಈಗ 120 ಹೆಕ್ಟೇರ್‌ಗೆ ಕುಸಿದಿದೆ. ಹೂವಿನಹಡಗಲಿ, ಹನಕನಹಳ್ಳಿ, ದೇವಗೊಂಡನಹಳ್ಳಿ, ಮಿರಾಕೊರನಹಳ್ಳಿ, ವಿನೋಬನಗರ, ಗುಜನೂರು, ಮುದೇನೂರು, ಹಾಲ್ ತಿಮ್ಲಾಪುರ, ಕೊಂಬಳಿ ಗ್ರಾಮಗಳಲ್ಲಿ ಮಲ್ಲಿಗೆ ಬೆಳೆಯಲಾಗುತ್ತಿದೆ.

'ಮಾರುಕಟ್ಟೆಯಲ್ಲಿ ವಿವಿಧ ಬಗೆಯ ಮಲ್ಲಿಗೆ ಹೂವು ಇದ್ದರೂ ಹಡಗಲಿ ಮಲ್ಲಿಗೆಗೆ ಬೇಡಿಕೆ ಹೆಚ್ಚಿದೆ. ಕೇಂದ್ರ ಸರ್ಕಾರವು ಇದಕ್ಕೆ ಭೌಗೋಳಿಕ ವೈಶಿಷ್ಟ್ಯ (ಜಿಐ) ಮಾನ್ಯತೆ ನೀಡಿದೆ. ಬೆಳೆಗೆ ರಾಷ್ಟ್ರೀಯ ಮಾನ್ಯತೆ ಸಿಕ್ಕರೂ ನಮಗೆ ಅನುಕೂಲ ಆಗಿಲ್ಲ' ಎಂಬುದು ಬೆಳೆಗಾರರ ನೋವು.



ಹೂವಿನಹಡಗಲಿ ತಾಲ್ಲೂಕಿನ ವಿನೋಬನಗರದಲ್ಲಿ ಇರುವ ಮಲ್ಲಿಗೆ ತೋಟ

> ದಾವಣಗೆರೆ, ಗದಗ, ಹಾವೇರಿ ಮಾರುಕಟ್ಟೆಗೆ ಪ್ರತಿದಿನ 25 ರಿಂದ 30 ಕ್ವಿಂಟಲ್ ಮೊಗ್ಗು ಸಾಗಣೆ ಆಗುತ್ತಿತ್ತು. ಈಗ 12 ಕ್ವಿಂಟಲ್‌ಗೆ ಕುಸಿದಿದೆ
>
> **ಸುಭಾನ್,** ಹೂವಿನ ವ್ಯಾಪಾರಿ

> ಮಲ್ಲಿಗೆ ತೋಟಗಳಿಗೆ ನಾಲ್ಕೈದು ದಿನಗಳಿಗೊಮ್ಮೆ ನೀರು ಹಾಯಿಸಿ ತಂಪಾಗಿ ಇಡಬೇಕು. ಸಮರ್ಪಕವಾಗಿ ಪೋಷಕಾಂಶ ನೀಡಿದರೆ ಇಳುವರಿ ಹೆಚ್ಚಲಿದೆ
>
> **ಸಿ.ಎಂ. ಕಾಲಿಬಾವಿ,** ಬೇಸಾಯ ತಜ್ಞ, ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ

ಸುದ್ದಿ 2 ನಿಮಿಷ

ಅದಾನಿ ಬಂದರು ಕಂಪನಿಗೆ ₹2,014 ಕೋಟಿ ಲಾಭ

ನವದೆಹಲಿ (ಪಿಟಿಐ): ಅದಾನಿ ಬಂದರು ಮತ್ತು ವಿಶೇಷ ಆರ್ಥಿಕ ವಲಯ ಕಂಪನಿಯು (ಎಪಿಎಸ್‌ಇಝೆಡ್) 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹2,014 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹1,139 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 77ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ವರಮಾನವು ₹6,178 ಕೋಟಿಯಿಂದ ₹7,199 ಕೋಟಿಗೆ ಹೆಚ್ಚಳವಾಗಿದೆ. ವೆಚ್ಚದಲ್ಲೂ ಏರಿಕೆಯಾಗಿದ್ದು, ₹3,995 ಕೋಟಿಯಿಂದ ₹4,450 ಕೋಟಿಗೆ ಮುಟ್ಟಿದೆ.

2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ₹8,103 ಕೋಟಿ ಲಾಭ ಗಳಿಸಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 50ರಷ್ಟು ಏರಿಕೆಯಾಗಿದೆ. ಉತ್ತಮ ವಹಿವಾಟು, ಸರಕು ಸಾಗಣೆ ಹೆಚ್ಚಳದಿಂದಾಗಿ ಲಾಭದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಅದಾನಿ ಎಂಟರ್‌ಪ್ರೈಸಸ್ ಲಾಭ ಕುಸಿತ: ತಯಾರಿಕಾ ವೆಚ್ಚದ ಹೆಚ್ಚಳದಿಂದಾಗಿ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಲಾಭವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 37ರಷ್ಟು ಕುಸಿದಿದೆ.

ಕೊನೆಯ ತ್ರೈಮಾಸಿಕದಲ್ಲಿ ₹450 ಕೋಟಿ ಲಾಭ ಗಳಿಸಿದೆ. ವರಮಾನವು ₹28,943 ಕೋಟಿಯಿಂದ ₹29,180 ಕೋಟಿಗೆ ಹೆಚ್ಚಳವಾಗಿದೆ. 2023–24ರ ಪೂರ್ಣ ಹಣಕಾಸು ವರ್ಷದ ಲಾಭದಲ್ಲಿ ಶೇ 31ರಷ್ಟು ಏರಿಕೆಯಾಗಿದ್ದು, ₹3,240 ಕೋಟಿ ಆಗಿದೆ ಎಂದು ಕಂಪನಿ ತಿಳಿಸಿದೆ.

ಗೊದ್ರೇಜ್ ಇಂಡಸ್ಟ್ರೀಸ್ ಷೇರು ಕುಸಿತ

ನವದೆಹಲಿ (ಪಿಟಿಐ): ಗೊದ್ರೇಜ್ ಸಮೂಹದ ಆಸ್ತಿ ಇಬ್ಭಾಗದ ಬಗ್ಗೆ ಗುರುವಾರ ಷೇರುಪೇಟೆ ವಹಿವಾಟಿನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಗೊದ್ರೇಜ್ ಇಂಡಸ್ಟ್ರೀಸ್ ಷೇರಿನ ಮೌಲ್ಯವು ಶೇ 7.15ರಷ್ಟು ಕುಸಿದಿದೆ. ಗೊದ್ರೇಜ್ ಪ್ರಾಪರ್ಟೀಸ್ ಷೇರಿನ ಮೌಲ್ಯ ಶೇ 4ರಷ್ಟು ಹಾಗೂ ಆಸ್ಟೆಕ್ ಲೈಫ್‌ಸೈನ್ಸಸ್ ಷೇರಿನ ಮೌಲ್ಯವು ಶೇ 3ರಷ್ಟು ಇಳಿಕೆಯಾಗಿದೆ. ಆದರೆ, ಗೊದ್ರೇಜ್ ಆಗ್ರೋವೆಟ್ ಷೇರಿನ ಮೌಲ್ಯ ಶೇ 3.5ರಷ್ಟು ಮತ್ತು ಗೊದ್ರೇಜ್ ಗ್ರಾಹಕ ವಸ್ತುಗಳ ಕಂಪನಿಯ ಷೇರುಗಳು ಶೇ 1ರಷ್ಟು ಏರಿಕೆ ಕಂಡಿವೆ.

ಕೋಟಕ್ ಬ್ಯಾಂಕ್‌ಗೆ ₹9,532 ಕೋಟಿ ನಷ್ಟ: ಕೋಟಕ್ ಮಹೀಂದ್ರ ಬ್ಯಾಂಕ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ವಿ.ಎಸ್. ಮಣಿಯನ್ ಅವರು, ತಮ್ಮ ಹುದ್ದೆಗೆ ದಿಢೀರ್ ರಾಜೀನಾಮೆ ನೀಡಿರುವುದು ಕಂಪನಿಯ ಮಾರುಕಟ್ಟೆ ಮೌಲ್ಯದ ಮೇಲೆ ಪರಿಣಾಮ ಬೀರಿದೆ.

ಷೇರಿನ ಮೌಲ್ಯವು ಶೇ 3ರಷ್ಟು ಇಳಿಕೆ ಕಂಡಿದ್ದು, ಒಂದೇ ದಿನ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯ ₹9,532 ಕೋಟಿ ಕರಗಿದೆ. ಒಟ್ಟು ಎಂ–ಕ್ಯಾಪ್ ₹3.13 ಲಕ್ಷ ಕೋಟಿ ಆಗಿದೆ.

ಅಮೆರಿಕ: ಬಡ್ಡಿದರ ಯಥಾಸ್ಥಿತಿ

ವಾಷಿಂಗ್ಟನ್ (ರಾಯಿಟರ್ಸ್): ಹಣದುಬ್ಬರ ನಿಯಂತ್ರಿಸುವ ನಿಟ್ಟಿನಲ್ಲಿ ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್, ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಸದ್ಯ ಅಮೆರಿಕದಲ್ಲಿ ಶೇ 5.25ರಿಂದ ಶೇ 5.50ರಷ್ಟು ಬಡ್ಡಿದರವಿದ್ದು, ಕಳೆದ ವರ್ಷದ ಜುಲೈನಿಂದಲೂ ಬದಲಾವಣೆ ಮಾಡಿಲ್ಲ. ಇದು 23 ವರ್ಷಗಳ ಗರಿಷ್ಠ ಮಟ್ಟವಾಗಿದೆ.

ಬುಧವಾರ ನಡೆದ ಹಣಕಾಸು ನೀತಿ ಸಮಿತಿ ಸಭೆಯ ಬಳಿಕ ಮಾತನಾಡಿದ ಬ್ಯಾಂಕ್‌ನ ಅಧ್ಯಕ್ಷ ಜೆರೋಮ್ ಪೊವೆಲ್, 'ಪ್ರಸಕ್ತ ವರ್ಷದ ಆರಂಭದ ಮೂರು ತಿಂಗಳಿನಲ್ಲಿ ನಿರೀಕ್ಷೆಗೂ ಮೀರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಹಾಗಾಗಿ, ಹಣದುಬ್ಬರವನ್ನು ಶೇ 2ರ ಮಿತಿಯಲ್ಲಿ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಸಭೆಯ ಈ ನಿರ್ಧಾರವು ದೇಶದ ಆರ್ಥಿಕ ಚಟುವಟಿಕೆಯ ಬೆಳವಣಿಗೆಗೆ ನೆರವಾಗುವ ಜೊತೆಗೆ, ಹಣದುಬ್ಬರದ ನಿಯಂತ್ರಣಕ್ಕೂ ಸಹಕಾರಿಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಜೆರೋಮ್ ಪೊವೆಲ್

'ಪ್ರಸ್ತುತ ಹಣದುಬ್ಬರವು ನಿರೀಕ್ಷಿತ ಮಟ್ಟಕ್ಕಿಂತಲೂ ಹೆಚ್ಚಿದೆ. ನಿಗದಿತ ಮಿತಿಗೆ ತರಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ಈ ಗುರಿಗೆ ತಗ್ಗಿಸುವುದು ಅನಿಶ್ಚಿತತೆಯಿಂದ ಕೂಡಿದೆ' ಎಂದರು.

ದೇಶದ ತಯಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳು ಸದೃಢವಾಗಿವೆ. ಇದಕ್ಕೆ ತಕ್ಕಂತೆ ಹಣದುಬ್ಬರವು ನಿರೀಕ್ಷಿತ ಪಥದಲ್ಲಿ ಸಾಗುತ್ತಿಲ್ಲ. ಹಾಗಾಗಿ, ಬಡ್ಡಿದರ ಕಡಿತ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಮಾರ್ಚ್‌ನಲ್ಲಿ ಹಣದುಬ್ಬರವು ಶೇ3.5ರಷ್ಟು ದಾಖಲಾಗಿದ್ದು, ಫೆಬ್ರುವರಿಗೆ ಹೋಲಿಸಿದರೆ ಶೇ0.3ರಷ್ಟು ಏರಿಕೆಯಾಗಿದೆ.

ಮುಂಬೈ ಧಾರಣೆ

ಶೇಂಗಾ

02-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	870 (865)
ಪಾಮ್ ವಾರದ ಡೆಲಿವರಿ	890 (890)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,100 (71,100)
ಬೆಳ್ಳಿ ಕೆ.ಜಿ ₹79,600 (79,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-45000
ಚಿತ್ರದುರ್ಗ	
ಅಪಿ	51600-52000
ಬೆಟ್ಟೆ	36100-36500
ಕೆಂಪುಗೋಟು	29600-30000
ರಾಶಿ	51100-51500
ಕುಮಟ	
ಹಳೆಚಾಲಿ	35669-39299
ಹೊಸಚಾಲಿ	31109-35409
ಚಿಪ್ಪು	22111-29169
ಕೋಕ	11060-25189
ಸಾಗರ	
ಬಿಳಿಗೋಟು	10199-29269
ಚಾಲಿ	26269-34725
ಕೋಕ	10786-31699
ಕೆಂಪುಗೋಟು	20569-35629
ರಾಶಿ	32709-51749
ಸಿಪ್ಪೆಗೋಟು	16119-19919
ಶಿವಮೊಗ್ಗ	
ಬೆಟ್ಟೆ	42159-52209
ಗೊರಬಲು	17669-38692
ರಾಶಿ	31509-52209
ಸರಕು	43300-85896
ಸಿದ್ದಾಪುರ	
ಬಿಳಿಗೋಟು	27219-29549
ಚಾಲಿ	33899-36199
ಕೋಕ	24599-29899
ಹಳೆಚಾಲಿ	34899-35899
ಕೆಂಪುಗೋಟು	26619-29100
ರಾಶಿ	43099-48100
ತಟ್ಟಿಬೆಟ್ಟೆ	37300-44109
ಶಿರಸಿ	
ಬೆಟ್ಟೆ	35021-43299
ಬಿಳಿಗೋಟು	24009-31099
ಚಾಲಿ	32001-37098
ಕೆಂಪುಗೋಟು	27099-29699
ರಾಶಿ	44099-49289
ಯಲ್ಲಾಪುರ	
ಅಪಿ	58379-60899
ಬಿಳಿಗೋಟು	22899-30900
ಕೋಕ	12099-28299
ಹಳೆಚಾಲಿ	38499-38499
ಹೊಸಚಾಲಿ	31230-36903
ಕೆಂಪುಗೋಟು	24600-34899
ರಾಶಿ	42919-52911
ತಟ್ಟಿಬೆಟ್ಟೆ	35799-42399

ದ್ರವರೂಪದ ನ್ಯಾನೊ ಸತು, ತಾಮ್ರ ಪೋಷಕಾಂಶ ತಯಾರಿಕೆ

ನವದೆಹಲಿ (ಪಿಟಿಐ): ದ್ರವರೂಪದ ನ್ಯಾನೊ ಸತು ಮತ್ತು ದ್ರವರೂಪದ ನ್ಯಾನೊ ತಾಮ್ರ ಲಘು ಪೋಷಕಾಂಶಗಳನ್ನು ತಯಾರಿಸಲು ಇಫ್ಕೊಗೆ, ಕೇಂದ್ರ ಸರ್ಕಾರವು ಅನುಮತಿ ನೀಡಿದೆ.

ಕೃಷಿಯಲ್ಲಿ ಉತ್ಪಾದಕತೆ ಹೆಚ್ಚಿಸುವಲ್ಲಿ ಈ ಪೋಷಕಾಂಶಗಳು ಪರಿಣಾಮಕಾರಿಯಾಗಿವೆ.

'ದೇಶದ ಕೃಷಿ ವಲಯದಲ್ಲಿ ಸಂಸ್ಥೆಯ ನ್ಯಾನೊ ತಂತ್ರಜ್ಞಾನವು ಹೆಗ್ಗುರುತು ಮೂಡಿಸಿದೆ. ಮುಂದಿನ ಮೂರು ವರ್ಷದವರೆಗೆ ಸಂಸ್ಥೆಯಿಂದ ಈ ಉತ್ಪನ್ನಗಳ ತಯಾರಿಕೆಗೆ ಕೇಂದ್ರದಿಂದ ಒಪ್ಪಿಗೆ ಸಿಕ್ಕಿದೆ' ಎಂದು ಇಫ್ಕೊದ ವ್ಯವಸ್ಥಾಪಕ ನಿರ್ದೇಶಕ ಯು.ಎಸ್. ಅವಸ್ಥಿ ಅವರು, 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಸಸ್ಯಗಳ ಬೆಳವಣಿಗೆಗೆ ಸತು ಪ್ರಮುಖ ಲಘು ಪೋಷಕಾಂಶವಾಗಿದೆ. ಸಸ್ಯಗಳ ಎಲೆಗಳಲ್ಲಿ ಪತ್ರ ಹರಿತ್ತು ಉತ್ಪತ್ತಿ ಹಾಗೂ ಬೀಜಗಳ ಉತ್ಪಾದನೆಗೆ ತಾಮ್ರ ಪೋಷಕಾಂಶದ ಅಗತ್ಯವಿದೆ ಎಂದು ಹೇಳಿದ್ದಾರೆ.

ಈ ಎರಡು ಉತ್ಪನ್ನಗಳು ಬೆಳೆಯಲ್ಲಿ ತಲೆದೋರುವ ಸತು ಮತ್ತು ತಾಮ್ರದ ಕೊರತೆಯನ್ನು ನೀಗಿಸುತ್ತವೆ. ಜೊತೆಗೆ, ಸುಸ್ಥಿರ ಕೃಷಿಗೆ ಸಹಕಾರಿಯಾಗಲಿವೆ ಎಂದು ತಿಳಿಸಿದ್ದಾರೆ.

ಈಗಾಗಲೇ, ಇಫ್ಕೊದಿಂದ ದ್ರವರೂಪದ ನ್ಯಾನೊ ಯೂರಿಯಾ ಹಾಗೂ ದ್ರವರೂಪದ ನ್ಯಾನೊ ಡಿಎಪಿ ತಯಾರಿಸಲಾಗುತ್ತಿದೆ.



ಯುಎಇಯಲ್ಲಿ ಗುರುವಾರ ಭಾರಿ ಮಳೆಯಾಗಿದ್ದು ದುಬೈನ ರಸ್ತೆಯಲ್ಲಿ ನಿಂತಿದ್ದ ನೀರಿನಲ್ಲಿಯೇ ವಾಹನಗಳು ಸಂಚರಿಸಿದವು –ಎಎಫ್‌ಪಿ ಚಿತ್ರ

ಯುಎಇಯಲ್ಲಿ ಮತ್ತೆ ಮಳೆ

ದುಬೈ(ಎಎಫ್‌ಪಿ): ಎರಡು ವಾರಗಳ ಬಿಡುವಿನ ನಂತರ ಅರಬ್ ಸಂಯುಕ್ತ ಸಂಸ್ಥಾನದಲ್ಲಿ (ಯುಎಇ) ಗುರುವಾರ ಮತ್ತೆ ಭಾರಿ ಮಳೆಯಾಗಿದ್ದು, ದೇಶದಾದ್ಯಂತ ಶಾಲೆಗಳು ಹಾಗೂ ಕಚೇರಿಗಳನ್ನು ಮುಚ್ಚಲಾಗಿದೆ.

ಗುಡುಗು–ಮಿಂಚು ಹಾಗೂ ವೇಗವಾಗಿ ಬೀಸುತ್ತಿದ್ದ ಗಾಳಿಯೊಂದಿಗೆ ಸುರಿದ ಮಳೆಯಿಂದಾಗಿ ಹಲವು ನಗರಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ದೇಶದಾದ್ಯಂತ 50 ಮಿ.ಮೀ.ನಷ್ಟು ಮಳೆ ಬಿದ್ದಿದೆ ಎಂದು ರಾಷ್ಟ್ರೀಯ ಹವಾಮಾನ ಕೇಂದ್ರ ಹೇಳಿದೆ.

ಹವಾಮಾನ ಬದಲಾವಣೆಯೇ ಈ ಪ್ರಮಾಣದ ಮಳೆಯಾಗಲು ಕಾರಣ ಎಂದು ತಜ್ಞರು ಹೇಳಿದ್ದಾರೆ.

ದುಬೈನ ಹಲವಾರು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ವಿಶ್ವದ ಅತಿ ದಟ್ಟಣೆಯ ಅಂತರರಾಷ್ಟ್ರೀಯ ವಿಮಾನನಿಲ್ದಾಣದಿಂದ ಹೊರಡಬೇಕಿದ್ದ 13 ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ. ಐದು ವಿಮಾನಗಳ ಮಾರ್ಗ ಬದಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇನ್ನುಳಿದ ವಿಮಾನಗಳ ಹಾರಾಟದಲ್ಲಿ ವಿಳಂಬವಾಗಲಿದೆ ಎಂದು ಸರ್ಕಾರಿ ಒಡೆತನದ ವಿಮಾನಯಾನ ಸಂಸ್ಥೆ ಎಮಿರೇಟ್ಸ್ ಹಾಗೂ ಅದರ ಅಂಗಸಂಸ್ಥೆ 'ಫ್ಲೈದುಬೈ', ಪ್ರಯಾಣಿಕರಿಗೆ ತಿಳಿಸಿವೆ.

ಏಪ್ರಿಲ್ 16ರಂದು ಸುರಿದ ಪ್ರಮಾಣದಲ್ಲಿ ಈಗ ಮಳೆಯಾಗಿಲ್ಲ. ಆಗ, ದಾಖಲೆಯ 25.95 ಸೆಂ.ಮೀ.ನಷ್ಟು ಮಳೆ ಬಿದ್ದು, ನಾಲ್ವರು ಮೃತಪಟ್ಟಿದ್ದರು. 2 ಸಾವಿರಕ್ಕೂ ಹೆಚ್ಚು ವಿಮಾನಗಳ ಸಂಚಾರವನ್ನು ರದ್ದುಪಡಿಸಲಾಗಿತ್ತು.

ತಯಾರಿಕಾ ಚಟುವಟಿಕೆ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕೆ ಚಟುವಟಿಕೆಯು ಮಾರ್ಚ್‌ಗೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಅಲ್ಪ ಇಳಿಕೆ ಕಂಡಿದೆ. ಆದರೆ, ಬೆಲೆ ಏರಿಕೆ ನಡುವೆಯೂ ಉತ್ಪನ್ನಗಳಿಗೆ ಬೇಡಿಕೆಯು ನಿರೀಕ್ಷಿತ ಮಟ್ಟದಲ್ಲಿ ಹೆಚ್ಚಳವಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಮಾರ್ಚ್‌ನಲ್ಲಿ 59.1 ಏರಿಕೆ ಕಂಡು, 16 ವರ್ಷಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿತ್ತು. ಏಪ್ರಿಲ್‌ನಲ್ಲಿ 58.8ಕ್ಕೆ ಇಳಿದಿದೆ. ಆದರೂ, ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳವಾಗಿರುವುದರಿಂದ ಕಳೆದ ಮೂರುವರೆ ವರ್ಷದಲ್ಲಿ ತಯಾರಿಕಾ ವಲಯವು ಎರಡನೇ ಬಾರಿಗೆ ಉತ್ತಮ ಸಾಧನೆ ತೋರಿದೆ.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ದಾಖಲಾದರೆ ನಕಾರಾತ್ಮಕವೆಂದು ಪರಿಗಣಿಸಲಾಗುತ್ತದೆ.

ಏಪ್ರಿಲ್‌ನಲ್ಲಿ ತಯಾರಿಕೆ, ರಫ್ತು, ಖರೀದಿ ಸಾಮರ್ಥ್ಯವು ಸದೃಢವಾಗಿದೆ. ಈ ಆರೋಗ್ಯಕರ ಬೇಡಿಕೆಯು ಮಾರುಕಟ್ಟೆಯ ಬೆಳವಣಿಗೆಗೆ ನೆರವಾಗಿದೆ ಎಂದು ಗುರುವಾರ ಬಿಡುಗಡೆಯಾಗಿರುವ ವರದಿ ಹೇಳಿದೆ.

ಹೊಸ ರಫ್ತು ಆರ್ಡರ್‌ಗಳ ಸಂಖ್ಯೆ ಹೆಚ್ಚಿದೆ. ಆದರೆ, ಒಟ್ಟು ಮಾರಾಟ ದರವು ಮಂದಗತಿಯಲ್ಲಿದೆ. ಆದರೆ, ದೇಶೀಯ ಮಾರುಕಟ್ಟೆಯಲ್ಲಿ ಮಾರಾಟ ಹೆಚ್ಚಳವಾಗಿದೆ. ಏಷ್ಯಾ, ಆಸ್ಟ್ರೇಲಿಯಾ, ಯುರೋಪ್ ಹಾಗೂ ಅಮೆರಿಕದಿಂದ ಹೊಸ ಆರ್ಡರ್ ಮತ್ತು ಮಾರಾಟ ಹೆಚ್ಚಿದೆ ಎಂದು ವಿವರಿಸಿದೆ.

ಬೇಡಿಕೆಗೆ ಅನುಗುಣವಾಗಿ ನಿರೀಕ್ಷಿತ ಗುರಿ ಸಾಧನೆಗಾಗಿ ತಯಾರಕರು ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದಾರೆ ಎಂದು ತಿಳಿಸಿದೆ.

'ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳವಾಗಿರುವುದು ಉತ್ಪಾದನಾ ಚಟುವಟಿಕೆಗಳ ವಿಸ್ತರಣೆಗೆ ಸಹಕಾರಿಯಾಗಲಿದೆ' ಎಂದು ಎಚ್‌ಎಸ್‌ಬಿಸಿಯ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ಚೀನಾ: ಮೃತರ ಸಂಖ್ಯೆ 48ಕ್ಕೆ ಏರಿಕೆ

ಬೀಜಿಂಗ್(ಪಿಟಿಐ): ಚೀನಾದ ಗುವಾಂಗ್‌ಡಾಂಗ್ ಪ್ರಾಂತ್ಯದ ಮಿಜೌ-ದಾಬು ಎಕ್ಸ್‌ಪ್ರೆಸ್‌ವೇನಲ್ಲಿ ಭೂಕುಸಿತ ಉಂಟಾಗಿ ಸಂಭವಿಸಿದ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ ಗುರುವಾರ 48ಕ್ಕೆ ಏರಿದೆ ಎಂದು ಸರ್ಕಾರಿ ಒಡೆತನದ ಮಾಧ್ಯಮ ಸಂಸ್ಥೆ ಷಿನ್‌ಹುವಾ ವರದಿ ಮಾಡಿದೆ.

ಎಕ್ಸ್‌ಪ್ರೆಸ್‌ವೇನಲ್ಲಿ 58 ಅಡಿಗಳಷ್ಟು ಉದ್ದದ ಭಾಗ ಬುಧವಾರ ಕುಸಿದ ಪರಿಣಾಮ ಹಲವು ವಾಹನಗಳು ಉರುಳಿ ಬಿದ್ದು, 24 ಜನರು ಮೃತಪಟ್ಟಿದ್ದರು. ಎರಡು ವಾರಗಳ ಹಿಂದೆ ಪ್ರಾಂತ್ಯದಲ್ಲಿ ಭಾರಿ ಮಳೆ ಬಿದ್ದ ಪರಿಣಾಮ ಪ್ರವಾಹ ಕಂಡುಬಂದಿತ್ತಲ್ಲದೇ, ಭೂಕುಸಿತದಂತಹ ಅವಘಡಗಳು ಸಂಭವಿಸಿವೆ.

ರಕ್ಷಣಾ ಕಾರ್ಯ ಹಾಗೂ ಗಾಯಗೊಂಡವರ ಚಿಕಿತ್ಸೆಗೆ ತ್ವರಿತ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷ ಷಿ ಜಿನ್‌ಪಿಂಗ್ ಹಾಗೂ ಪ್ರಧಾನಿ ಲಿ ಕಿಯಾಂಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದೂ ಷಿನ್‌ಹುವಾ ವರದಿ ಮಾಡಿದೆ.

ಗಾಜಾ ಸಮರ: ಅಮೆರಿಕದ ವಿ.ವಿಗಳಲ್ಲಿ ಸಂಘರ್ಷ

ಲಾಸ್ ಏಂಜಲೀಸ್ (ಎಪಿ): ಪ್ಯಾಲೆಸ್ಟೀನ್ ಪರ ಧರಣಿ ನಿರತರ ಮೇಲೆ ಪೊಲೀಸರು ದಾಳಿ ನಡೆಸಿದ ಬಳಿಕ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಆವರಣದಲ್ಲಿ ಸಂಘರ್ಷ ಉಂಟಾಗಿದೆ ಎಂದು ಕುಲಾಧಿಪತಿ ತಿಳಿಸಿದ್ದಾರೆ. ಮ್ಯಾಡಿಸನ್‌ನಲ್ಲಿನ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ಕೆಲವರು ಹಾಕಿಕೊಂಡಿದ್ದ ಡೇರೆಗಳನ್ನು ಪೊಲೀಸರು ಧ್ವಂಸಗೊಳಿಸಿದಾಗ, ಅವರು ಪೊಲೀಸರೊಂದಿಗೆ ಸಂಘರ್ಷಕ್ಕೆ ಇಳಿದಿದ್ದಾರೆ.

ಗಾಜಾದಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವೆ ನಡೆಯುತ್ತಿರುವ ಯುದ್ಧದ ಕಾರಣಕ್ಕೆ ಅಮೆರಿಕದ ಕೆಲವು ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಸಂಘರ್ಷ ಹೆಚ್ಚಾಗಿದೆ.

ಲಾಸ್ ಏಂಜಲೀಸ್‌ನಲ್ಲಿನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ನಡೆದ ಸಂಘರ್ಷದಲ್ಲಿ 15 ಮಂದಿಗೆ ಗಾಯಗಳಾಗಿವೆ. ಪ್ಯಾಲೆಸ್ಟೀನ್ ಪರವಾಗಿ ವಿಶ್ವವಿದ್ಯಾಲಯದಲ್ಲಿ ಡೇರೆಗಳನ್ನು ಹಾಕಿಕೊಂಡಿದ್ದವರ ಮೇಲೆ ದಾಳಿ ನಡೆಸಲು ಪ್ರಚೋದಕರ ಗುಂಪೊಂದು ಬಂದಾಗ, ವಿಶ್ವವಿದ್ಯಾಲಯದ ಅಧಿಕಾರಿಗಳು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಹೊರಗಿನಿಂದ ನೆರವು ಪಡೆಯಬೇಕಾಯಿತು ಎಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಕುಲಾಧಿಪತಿ ಜೀನ್ ಬ್ಲಾಕ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಎರಡು ಗುಂಪುಗಳ ನಡುವೆ ಒಂದೆರಡು ಗಂಟೆಗಳ ಕಾಲ ಹೊಡೆದಾಟ ನಡೆಯಿತು. ಇದಾದ ನಂತರ ಪೊಲೀಸರು ಎರಡೂ ಕಡೆಯವರನ್ನು ಪ್ರತ್ಯೇಕಿಸಿ, ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಪ್ಯಾಲೆಸ್ಟೀನ್ ಪರವಾಗಿ ಧರಣಿ ನಡೆಸುತ್ತಿರುವವರು ಬುಧವಾರ ತಮ್ಮ ಡೇರೆಗಳ ಸುತ್ತ ತಾತ್ಕಾಲಿಕ ತಡೆಗೋಡೆಗಳನ್ನು ಹಾಕಿಕೊಂಡಿದ್ದಾರೆ. ಅವರನ್ನು ವಿರೋಧಿಸಿ ಯಾರೂ ಪ್ರತಿಭಟನೆ ನಡೆಸಿದ್ದು ಕಂಡುಬಂದಿಲ್ಲ.

ಮ್ಯಾಡಿಸನ್‌ನಲ್ಲಿ ಪೊಲೀಸರು ಒಂದು ಡೇರೆಯನ್ನು ಹೊರತುಪಡಿಸಿ, ಇತರ ಎಲ್ಲ ಡೇರೆಗಳನ್ನು ತೆರವುಗೊಳಿಸಿದರು. ಪ್ರತಿಭಟನೆಯಲ್ಲಿ ತೊಡಗಿದ್ದವರನ್ನು ಹೊರದಬ್ಬಿದರು. ಈ ಸಂದರ್ಭದಲ್ಲಿ ಪರಸ್ಪರ ನೂಕಾಟ ನಡೆಯಿತು. ಇದಾದ ಕೆಲವೇ ಗಂಟೆಗಳಲ್ಲಿ ಪ್ರತಿಭಟನಕಾರರು ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಆವರಣದಲ್ಲಿ ಇನ್ನಷ್ಟು ಡೇರೆಗಳನ್ನು ನಿರ್ಮಿಸಿದರು. 30ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿತ್ತು. ಅವರಲ್ಲಿ ಹೆಚ್ಚಿನವರನ್ನು ನಂತರ ಬಿಡುಗಡೆ ಮಾಡಲಾಯಿತು. ನಾಲ್ಕು ಮಂದಿಯ ಮೇಲೆ ಹಲ್ಲೆ ಆರೋಪದ ಅಡಿ ಪ್ರಕರಣ ದಾಖಲಿಸಲಾಗಿದೆ.

ವಿಶ್ವವಿದ್ಯಾಲಯಗಳ ಆವರಣದಲ್ಲಿ ಡೇರೆಗಳನ್ನು ನಿರ್ಮಿಸಿಕೊಂಡವರು, ಇಸ್ರೇಲ್ ಜೊತೆ ಯಾವುದೇ ವಹಿವಾಟು ನಡೆಸಬಾರದು ಹಾಗೂ ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ಯುದ್ಧವನ್ನು ಬೆಂಬಲಿಸುತ್ತಿರುವ ಕಂಪನಿಗಳ ಜೊತೆ ಯಾವುದೇ ವಹಿವಾಟು ನಡೆಸಬಾರದು ಎಂಬ ಆಗ್ರಹದೊಂದಿಗೆ ಧರಣಿ ನಡೆಸುತ್ತಿದ್ದಾರೆ. ಇಂತಹ ಧರಣಿಗಳು ದೇಶದ ಎಲ್ಲೆಡೆ ನಡೆಯಲಾರಂಭಿಸಿವೆ.

ಇದು ಈ ಶತಮಾನ ಕಂಡ ಇತರ ಯಾವುದೇ ವಿದ್ಯಾರ್ಥಿ ಚಳವಳಿಗಳಿಗಿಂತ ಭಿನ್ನವಾಗಿದೆ. ಇವರ ಮೇಲೆ ಪೊಲೀಸರು ಕೈಗೊಂಡಿರುವ ಕ್ರಮವು, ದಶಕಗಳ ಹಿಂದೆ ವಿಯೆಟ್ನಾಂ ಯುದ್ಧವನ್ನು ವಿರೋಧಿಸಿ ಹೋರಾಟ ನಡೆಸಿದವರ ಮೇಲೆ ಕೈಗೊಂಡ ಕ್ರಮಗಳನ್ನು ನೆನಪಿಸುವಂತಿದೆ.

‘ಸನ್’ ನೆರವಿಗೆ ಹೆಡ್, ನಿತೀಶ್

ಹೈದರಾಬಾದ್ ಸವಾಲಿನ ಮೊತ್ತ • ಕ್ಲಾಸೆನ್ ಮಿಂಚಿನ ಆಟ • ಆವೇಶ್ ಖಾನ್‌ಗೆ ಎರಡು ವಿಕೆಟ್

ಹೈದರಾಬಾದ್ (ಪಿಟಿಐ): ಆರಂಭ ಆಟಗಾರ ಟ್ರಾವಿಸ್ ಹೆಡ್ (58, 44 ಎಸೆತ) ಮತ್ತು ನಿತೀಶ್ ಕುಮಾರ್ ರೆಡ್ಡಿ (ಔಟಾಗದೇ 76, 42 ಎಸೆತ) ಅವರು ಅರ್ಧ ಶತಕಗಳ ಮೂಲಕ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಚೇತರಿಕೆ ನೀಡಿದರು. ಕೊನೆಯಲ್ಲಿ ಹೆನ್ರಿಚ್ ಕ್ಲಾಸೆನ್ ಕೇವಲ 19 ಎಸೆತಗಳಲ್ಲಿ ಅಜೇಯ 42 ರನ್ ಸಿಡಿಸಿ ತಮ್ಮ ತಂಡ, ಗುರುವಾರ ರಾಜಸ್ಥಾನ್ ರಾಯಲ್ಸ್ ವಿರುದ್ಧ ಐಪಿಎಲ್ ಪಂದ್ಯದಲ್ಲಿ 200 ರನ್‌ಗಳ ಗಡಿ ದಾಟಲು ನೆರವಾದರು.

ಬ್ಯಾಟ್ ಮಾಡಲು ನಿರ್ಧರಿಸಿದ ಸನ್‌ರೈಸರ್ಸ್ ಒಂದು ಹಂತದಲ್ಲಿ 35 ರನ್‌ಗಳಾಗುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡಿದ್ದರೂ, ಅಂತಿಮವಾಗಿ 3 ವಿಕೆಟ್‌ಗೆ 201 ರನ್‌ಗಳ ಒಳ್ಳೆಯ ಮೊತ್ತ ಗಳಿಸಿತು.

ಟ್ರಾವಿಸ್ ಹೆಡ್ ತಮಗೆ ಆರಂಭದಲ್ಲೇ ದೊರೆತ ಜೀವದಾನದ ಲಾಭ ಪಡೆದು, ಈ ಬಾರಿಯ ಲೀಗ್‌ನಲ್ಲಿ ನಾಲ್ಕನೇ ಅರ್ಧ ಶತಕ ಗಳಿಸಿದರು. ನಿತೀಶ್ ರೆಡ್ಡಿ ಎರಡನೇ ಅರ್ಧ ಶತಕ ಗಳಿಸಿದರಲ್ಲದೇ ಹೆಡ್ ಜೊತೆ ಮೂರನೇ ವಿಕೆಟ್‌ಗೆ ಕೇವಲ 57 ಎಸೆತಗಳಲ್ಲಿ 96 ರನ್ ಜೊತೆಯಾಟದಲ್ಲಿ ಭಾಗಿಯಾದರು.

ನಿತೀಶ್ ಮತ್ತು ಕ್ಲಾಸೆನ್ ಮುರಿಯದ ನಾಲ್ಕನೇ ವಿಕೆಟ್‌ಗೆ ಬರೇ 32 ಎಸೆತಗಳಲ್ಲಿ 70 ರನ್ ಸೇರಿಸಿದ್ದರಿಂದ ತಂಡ ಈ ಋತುವಿನಲ್ಲಿ ಐದನೇ ಬಾರಿ 200ರ ಗಡಿ ದಾಟಿತು.

ಟ್ರೆಂಟ್ ಬೌಲ್ಟ್ ಬೌಲಿಂಗ್‌ನಲ್ಲಿ ಇನಿಂಗ್ಸ್‌ನ ಮೊದಲ ಎಸೆತದಲ್ಲೇ ರಿಯಾನ್ ಪರಾಗ್ ಅವರು ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಬಿಟ್ಟ ಕ್ಯಾಚಿನಿಂದ ಬಚಾವಾಗಿದ್ದ ಹೆಡ್ ಆರು ಬೌಂಡರಿಗಳ ಜೊತೆ ಮೂರು ಸಿಕ್ಸರ್‌ಗಳನ್ನು ಎತ್ತಿದರು. ಅವರಿಗಿಂತ ಆಕ್ರಮಣಕಾರಿಯಾಗಿದ್ದ ನಿತೀಶ್ ಮೂರು ಬೌಂಡರಿಗಳ ಜೊತೆ ಎಂಟು ಭರ್ಜರಿ ಸಿಕ್ಸರ್‌ಗಳನ್ನು ಎತ್ತಿದರು.

ಯಜುವೇಂದ್ರ ಚಾಹಲ್ ಅವರಿಗೆ 300ನೇ ಐಪಿಎಲ್ ಪಂದ್ಯ ಸ್ಮರಣೀಯವಾಗಲಿಲ್ಲ. ಅವರು ತೀವ್ರ ದಂಡನೆಗೆ ಒಳಗಾಗಿ, ನಾಲ್ಕು ಓವರುಗಳಲ್ಲಿ 62 ರನ್ ತೆತ್ತರು.



ಅರ್ಧಶತಕ ಗಳಿಸಿದ ನಿತೀಶ್ ಕುಮಾರ್ ರೆಡ್ಡಿ ಮತ್ತು ಟ್ರಾವಿಸ್ ಹೆಡ್ –ಎಎಫ್‌ಪಿ ಚಿತ್ರಗಳು

ಅಪಾಯಕಾರಿ ಆಟಗಾರ ಅಭಿಷೇಕ್ ಶರ್ಮಾ ವಿಕೆಟ್ ಪಡೆಯುವ ಮೂಲಕ ಆವೇಶ್ ಖಾನ್ (39ಕ್ಕೆ2) ತಂಡಕ್ಕೆ ಮೊದಲ ಯಶಸ್ಸು ದೊರಕಿಸಿಕೊಟ್ಟರು. ಸಂದೀಪ್ ಶರ್ಮಾ ಮೊದಲ ಎಸೆತದಲ್ಲೇ ಅನ್ಮೋಲ್‌ಪ್ರೀತ್ ಸಿಂಗ್ (5) ಅವರ ವಿಕೆಟ್ ಪಡೆದಾಗ ಹೈದರಾಬಾದ್ ಮೊತ್ತ 2 ವಿಕೆಟ್‌ಗೆ 35. ಇದು ಈ ಬಾರಿಯ ಐಪಿಎಲ್‌ನಲ್ಲಿ ತಂಡ ಪವರ್‌ಪ್ಲೆ ಅವಧಿಯಲ್ಲಿ ಗಳಿಸಿದ ಅತಿ ಕಡಿಮೆ ಮೊತ್ತ.



ಹೆನ್ರಿಚ್ ಕ್ಲಾಸೆನ್ ಬ್ಯಾಟಿಂಗ್ ವೈಖರಿ

ವೇಗಿಗಳು ಕಡಿವಾಣ ಹಾಕಿದರೂ ಸ್ಪಿನ್ನರ್‌ಗಳಾದ ಚಾಹಲ್ ಮತ್ತು ಅಶ್ವಿನ್ (ವಿಕೆಟ್ ಇಲ್ಲದೇ 36) ಅವರು ರನ್ ವೇಗ ತಡೆಯಲು ವಿಫಲರಾದರು. ಮಧ್ಯಮ ಹಂತದ ಓವರುಗಳು ಸನ್‌ರೈಸರ್ಸ್ ಚೇತರಿಕೆಗೂ ನೆರವಾದವು.

ಪವರ್‌ಪ್ಲೇ ತಕ್ಷಣ ದಾಳಿಗಿಳಿದ ಚಾಹಲ್ ಅವರ ಒಂದೇ ಓವರ್‌ನಲ್ಲಿ ಹೆಡ್ ಎರಡು ಸಿಕ್ಸರ್ ಸೇರಿ 18 ರನ್‌ಗಳನ್ನು ಬಾಚಿದರು. ನಿತೀಶ್ ರೆಡ್ಡಿ ಕೂಡ ಅವರ ಇನ್ನೊಂದು ಓವರ್‌ನಲ್ಲಿ 21 ರನ್ ಸೂರೆ ಮಾಡಿದರು.

15ನೇ ಓವರ್‌ನಲ್ಲಿ ಹೆಡ್, ಆವೇಶ್ ಖಾನ್‌ಗೆ ಬೌಲ್ಡ್ ಆಗಿ ನಿರ್ಗಮಿಸಿದಾಗ ತಂಡ 131 ರನ್ ಗಳಿಸಿತ್ತು. ಬಳಿಕ ನಿತೀಶ್ 30 ಎಸೆತಗಳಲ್ಲಿ ಅರ್ಧ ಶತಕ ಗಳಿಸಿದರು. ಕ್ರೀಸಿಗಿಳಿದ ಕ್ಲಾಸೆನ್ ಆರಂಭದಿಂದಲೇ ಆಕ್ರಮಣಕಾರಿಯಾಗಿ ಆಡಿ ಮೂರು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್: 20 ಓವರುಗಳಲ್ಲಿ 3 ವಿಕೆಟ್‌ಗೆ 201 (ಟ್ರಾವಿಸ್ ಹೆಡ್ 58, ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 76, ಹೆನ್ರಿಚ್ ಕ್ಲಾಸೆನ್ ಔಟಾಗದೇ 42; ಆವೇಶ್ ಖಾನ್ 39ಕ್ಕೆ2, ಸಂದೀಪ್ ಶರ್ಮಾ 31ಕ್ಕೆ1) ವಿರುದ್ಧ ರಾಜಸ್ಥಾನ್ ರಾಯಲ್ಸ್.

ಇಂದು ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯ


ಸುಧಾರಿತ ಪ್ರದರ್ಶನಕ್ಕೆ ಕೋಲ್ಕತ್ತ ನೈಟ್ ರೈಡರ್ಸ್‌ಗೆ ಅವಕಾಶ

ಮುಂಬೈ (ಪಿಟಿಐ): ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಕೊನೆಯಿಂದ ಎರಡನೇ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ತಂಡಗಳು ಶುಕ್ರವಾರ ಇಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿ ಆಗಲಿವೆ.

ಒಂಬತ್ತು ಪಂದ್ಯಗಳನ್ನು ಆಡಿ ಆರನ್ನು ಗೆದ್ದಿರುವ ನೈಟ್ ರೈಡರ್ಸ್ ಈಗ ಪ್ಲೇಆಫ್‌ಗೆ ಸನಿಹದಲ್ಲಿದೆ. ಆದರೆ ಶ್ರೇಯಸ್ ಅಯ್ಯರ್ ಬಳಗ ತನ್ನಲ್ಲಿರುವ ದೋಷ, ದೌರ್ಬಲ್ಯಗಳನ್ನು ತಿದ್ದಿಕೊಂಡು ಸ್ಥಿರ ಪ್ರದರ್ಶನ ಕಂಡುಕೊಳ್ಳಲು ಉಳಿದ ಪಂದ್ಯಗಳು ಅವಕಾಶ ಕಲ್ಪಿಸಲಿವೆ.

ಕಳೆದ ಆರು ಪಂದ್ಯಗಳಲ್ಲಿ ಕೋಲ್ಕತ್ತ ಮೂರರಲ್ಲಿ ಸೋತಿದೆ. ಪಂಜಾಬ್ ಕಿಂಗ್ಸ್ ತಂಡವು, ದಾಖಲೆಯ ಚೇಸ್‌ನಲ್ಲಿ ಯಶಸ್ವಿ ಆಗಿದ್ದು ಕೋಲ್ಕತ್ತಕ್ಕೆ ಅನಿರೀಕ್ಷಿತ ಹಿನ್ನಡೆ ಉಂಟುಮಾಡಿತು. ಆದರೆ ಮರುಪಂದ್ಯದಲ್ಲೇ ದೆಹಲಿ ಕ್ಯಾಪಿಟಲ್ಸ್ ವಿರುದ್ಧ ಜಯಗಳಿಸಿ ಹಳಿಗೆ ಮರಳಿದೆ.

ಆಕ್ರಮಣಕಾರಿ ಬ್ಯಾಟರ್‌ಗಳನ್ನು ಹೊಂದಿರುವ ಕೆಕೆಆರ್ ತಂಡ ಪ್ರಬಲವಾಗಿದೆ. ಆದರೆ ಬೌಲಿಂಗ್ ಬಗ್ಗೆ ಇದೇ ಮಾತನ್ನು ಹೇಳುವಂತಿಲ್ಲ. ಈ ವಿಭಾಗದಲ್ಲಿ ಸುಧಾರಣೆ ಅಗತ್ಯವಿದೆ. ಐಪಿಎಲ್‌ನ ಅತಿ ದುಬಾರಿ ಆಟಗಾರ ಎನಿಸಿರುವ ಮಿಚೆಲ್ ಸ್ಟಾರ್ಕ್ ಅವರು ಪ್ರತಿ ಓವರಿಗೆ 12 ರನ್ ನೀಡಿದ್ದಾರೆ. ಎಂಟು ಪಂದ್ಯಗಳಿಂದ ಅವರು ಪಡೆದಿರುವುದು ಏಳು ವಿಕೆಟ್‌ಗಳನ್ನಷ್ಟೇ. ಅದರ ಯಶಸ್ವಿ ಬೌಲರ್ ಹರ್ಷಿತ್ ರಾಣಾ, ಅತಿಯಾದ ಸಂಭ್ರಮಾಚರಣೆ ಕಾರಣ ಒಂದು ಪಂದ್ಯದ ನಿಷೇಧಕ್ಕೆ ಒಳಗಾಗಿದ್ದಾರೆ.



ತಿಲಕ್ ವರ್ಮಾ ಎಎಫ್‌ಪಿ ಚಿತ್ರ

ಶ್ರೇಯಸ್ ಅಯ್ಯರ್ ಪಿಟಿಐ ಚಿತ್ರ

‘ಫಿನಿಷರ್’ ರಿಂಕು ಸಿಂಗ್ ಪ್ರದರ್ಶನದ ಮೇಲೂ ಗಮನವಿಡಲಾಗಿದೆ. ವಿಶ್ವಕಪ್ ತಂಡದಿಂದ ಕೈಬಿಟ್ಟಿರುವುದಕ್ಕೆ 26 ವರ್ಷದ ಬ್ಯಾಟರ್ ಮೇಲೆ ಅನುಕಂಪ ವ್ಯಕ್ತವಾಗಿದೆ.

ಮುಂಬೈ ತಂಡಕ್ಕೆ ಐದು ಪಂದ್ಯಗಳು ಆಡಲು ಇದ್ದರೂ ಪ್ಲೇ ಆಫ್ ಬಾಗಿಲು ಬಹುತೇಕ ಮುಚ್ಚಿದೆ. ಉಳಿದೆಲ್ಲ ಪಂದ್ಯಗಳನ್ನು ಗೆದ್ದರಷ್ಟೇ ಸಾಲದು, ಉಳಿದ ಪಂದ್ಯಗಳ ಫಲಿತಾಂಶ ಅದು ಬಯಸಿದಂತೆ ಬಂದರೆ ಮಾತ್ರ ಕ್ಷೀಣ ಅವಕಾಶವಿದೆ.

ಜಸ್‌ಪ್ರೀತ್ ಬೂಮ್ರಾ (14 ವಿಕೆಟ್) ಮತ್ತು ಜೆರಾಲ್ಡ್ ಕೋಟ್ಝಿ (13) ಅವರು ಮುಂಬೈ ಪರ ಯಶಸ್ವಿ ಬೌಲರ್‌ಗಳೆನಿಸಿದ್ದಾರೆ. ಬೌಲಿಂಗ್ ಪರಿಣಾಮಕಾರಿ ಎನಿಸಿದರೂ, ಬ್ಯಾಟರ್‌ಗಳು ಸಾಂಘಿಕ ಪ್ರದರ್ಶನ ನೀಡುತ್ತಿಲ್ಲ. ಹೀಗಾಗಿ ಐದು ಬಾರಿಯ ಚಾಂಪಿಯನ್ ತಂಡ ಪರದಾಡುತ್ತಿದೆ. ತಿಲಕ್ ವರ್ಮಾ ಮೂರು ಅರ್ಧ ಶತಕ ಸಹಿತ 343 ರನ್ ಗಳಿಸಿದ್ದು, ಅದರ ಯಶಸ್ವಿ ಬ್ಯಾಟರ್ ಎನಿಸಿದ್ದಾರೆ. ಆದರೆ ಅವರ ಆಟ ಇತರ ಬ್ಯಾಟರ್‌ಗಳ ವೈಫಲ್ಯ ಮುಚ್ಚುವಂತಿರಲಿಲ್ಲ.

ನಾಯಕ ಹಾರ್ದಿಕ್ ಪಾಂಡ್ಯ ಬ್ಯಾಟ್‌ನಿಂದಾಗಲಿ, ಚೆಂಡಿನಿಂದಾಗಲಿ ಮಿಂಚಲು ವಿಫಲರಾಗಿದ್ದಾರೆ. ಆದರೆ ವಿಶ್ವಕಪ್ ತಂಡಕ್ಕೆ ಉಪನಾಯಕನಾಗಿ ಆಯ್ಕೆ ಆಗಿರುವುದು ಅವರಿಗೆ ಸ್ಫೂರ್ತಿ ನೀಡಬಹುದೇ ಎಂಬುದನ್ನು ಕಾದುನೋಡಬೇಕಾಗಿದೆ.

ಪಂದ್ಯ ಆರಂಭ: ರಾತ್ರಿ 7.30.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	9	8	1	16	0.694
ಕೋಲ್ಕತ್ತ ನೈಟ್ ರೈಡರ್ಸ್	9	6	3	12	1.096
ಲಖನೌ ಸೂಪರ್ ಜೈಂಟ್ಸ್	10	6	4	12	0.094
ಚೆನ್ನೈ ಸೂಪರ್ ಕಿಂಗ್ಸ್	10	5	5	10	0.627
ಸನ್‌ರೈಸರ್ಸ್ ಹೈದರಾಬಾದ್	9	5	4	10	0.075
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಪಂಜಾಬ್ ಕಿಂಗ್ಸ್	10	4	6	8	-0.062
ಗುಜರಾತ್ ಟೈಟನ್ಸ್	10	4	6	8	-1.113
ಮುಂಬೈ ಇಂಡಿಯನ್ಸ್	10	3	7	6	-0.272
ಆರ್‌ಸಿಬಿ (ಬೆಂಗಳೂರು)	10	3	7	6	-0.415

ಆರೆಂಜ್ ಕ್ಯಾಪ್: ಋತುರಾಜ್ ಗಾಯಕವಾಡ್, ಸಿಎಸ್‌ಕೆ (509 ರನ್)

ಪರ್ಪಲ್ ಕ್ಯಾಪ್: ಬೂಮ್ರಾ, ಹರ್ಷಲ್ ಪಟೇಲ್, ಮುಸ್ತಫಿಜುರ್ (14 ವಿಕೆಟ್)

ಮಹಿಳಾ ಟಿ20: ಬಾಂಗ್ಲಾ ವಿರುದ್ಧ ಭಾರತಕ್ಕೆ ಸರಣಿ

ಸಿಲೆಟ್ (ಬಾಂಗ್ಲಾದೇಶ), (ಪಿಟಿಐ): ಸ್ಮೃತಿ ಮಂಧಾನ (47, 42ಎ) ಮತ್ತು ಶಫಾಲಿ ವರ್ಮಾ (51, 38ಎ) ಅವರ ಉತ್ತಮ ಜೊತೆಯಾಟದ ನೆರವಿನಿಂದ ಭಾರತ ತಂಡ ಗುರುವಾರ ನಡೆದ ಮಹಿಳೆಯರ ಮೂರನೇ ಟಿ20 ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ ಭಾರತ 3–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಫಿಲ್ಡಿಂಗ್ ಆಯ್ಕೆ ಮಾಡಿಕೊಂಡರು. ಭಾರತದ ಬೌಲರ್‌ಗಳು ಪರಿಣಾಮಕಾರಿ ದಾಳಿಯಿಂದ ಬಾಂಗ್ಲಾದೇಶವನ್ನು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 117 ರನ್‌ಗಳಿಗೆ ನಿಯಂತ್ರಿಸಿದರು. ಈ ಗುರಿ ಬೆನ್ನತ್ತಿದ ಭಾರತ 9 ಎಸೆತಗಳು ಇರುವಂತೆಯೇ 3 ವಿಕೆಟ್‌ಗೆ 121 ಹೊಡೆಯಿತು.

ಆರಂಭಿಕ ಆಟಗಾರ್ತಿಯರಾದ ಸ್ಮೃತಿ ಮತ್ತು ಶಫಾಲಿ 12.1 ಓವರ್‌ಗಳಲ್ಲಿ 91 ರನ್‌ಗಳ ಜೊತೆಯಾಟ ಮೂಲಕ ತಂಡವನ್ನು ಗೆಲುವಿನ ಸನಿಹಕ್ಕೆ ಕೊಂಡೊಯ್ದರು. ಶಫಾಲಿ ಬಿರುಸಿನ ಅರ್ಧ ಶತಕ ಗಳಿಸಿ ಔಟಾದರೆ, ಲಯಕ್ಕೆ ಮರಳಿದ ಮಂಧಾನ ಎಂಟು ರನ್‌ಗಳಿಂದ ಅರ್ಧ ಶತಕ ತಪ್ಪಿಸಿಕೊಂಡರು.

ರಿತು ಮೋನಿ ಅವರು ಶಫಾಲಿ ವಿಕೆಟ್ ಕಬಳಿಸಿದರೆ, ನಹೀದಾ ಅಖ್ತರ್ ಬೌಲಿಂಗ್‌ನಲ್ಲಿ ಮಂಧಾನ ಅವರು ಫಾಹಿಮಾ ಖತುನ್‌ಗೆ ಕ್ಯಾಚಿತ್ತರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ತಂಡವು ಪವರ್ ಪ್ಲೇ ಅವಧಿಯಲ್ಲಿ ವಿಕೆಟ್ ನಷ್ಟವಿಲ್ಲದೆ 44 ರನ್ ಗಳಿಸಿತು. ಬಾಂಗ್ಲಾ ಪರ ದಿಲಾರಾ ಅಖ್ತರ್ ಅತ್ಯಧಿಕ– 25 ಎಸೆಗಳಲ್ಲಿ 39 ರನ್ ಗಳಿಸಿದರು. ನಾಯಕಿ ನಿಗರ್ ಸುಲ್ತಾನಾ 28 ರನ್ ಗಳಿಸಿದರು. ಆದರೆ, ಉಳಿದ ಬ್ಯಾಟರ್‌ಗಳು ವಿಫಲರಾದರು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 117 (ದಿಲಾರಾ ಅಖ್ತರ್ 39, ನಿಗರ್ ಸುಲ್ತಾನಾ 28, ರಾಧಾ ಯಾದವ್ 22ಕ್ಕೆ2, ಶ್ರೇಯಾಂಕಾ ಪಾಟೀಲ 24ಕ್ಕೆ1); ಭಾರತ 18.3 ಓವರ್‌ಗಳಲ್ಲಿ 3 ವಿಕೆಟ್‌ಗೆ 121 (ಸ್ಮೃತಿ ಮಂಧಾನ 47, ಶಫಾಲಿ ವರ್ಮಾ 51; ರಿತು ಮೋನಿ 10ಕ್ಕೆ1, ರಬಿಯಾ ಖಾನ್ 24ಕ್ಕೆ1) ಪಂದ್ಯದ ಆಟಗಾರ್ತಿ: ಶಫಾಲಿ ವರ್ಮಾ. ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ



ಅರ್ಧಶತಕ ಗಳಿಸಿದ ಶಫಾಲಿ ವರ್ಮಾ

ರಕ್ತದಾನ ಮಾಡಿದ ನಂತರ ನಾಮಪತ್ರ ಸಲ್ಲಿಸಿದ ನಟ ದೇವ್

‘ಮತ ಗಳಿಸಿದಷ್ಟು ಸಸಿ ನೆಡುವೆ’

ಘಟಾಲ, ಪಶ್ಚಿಮ ಬಂಗಾಳ (ಪಿಟಿಐ): ‘ಲೋಕಸಭಾ ಚುನಾವಣೆಯಲ್ಲಿ 9 ಲಕ್ಷ ಮತಗಳನ್ನು ಪಡೆದರೆ, 9 ಲಕ್ಷ ಸಸಿಗಳನ್ನು ನೆಡುವೆ’ ಎಂದು ಬಂಗಾಳಿ ಸೂಪರ್‌ಸ್ಟಾರ್ ದೇವ್ ಹೇಳಿದ್ದಾರೆ.

ಘಟಾಲ ಲೋಕಸಭಾ ಕ್ಷೇತ್ರದಿಂದ ಸತತ ಮೂರನೇ ಬಾರಿಗೆ ದೇವ್ ಸ್ಪರ್ಧೆಗಿಳಿದಿದ್ದಾರೆ.

ತೃಣಮೂಲ ಕಾಂಗ್ರೆಸ್ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆಗೆ ಮುನ್ನ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದರು.



ಚಿತ್ರನಟ ದೇವ್

‘ಈ ವರ್ಷ ತಾಪಮಾನದಲ್ಲಿ ದಾಖಲೆಯ ಏರಿಕೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಇಷ್ಟೊಂದು ಬಿಸಿಲು ಇರಲಿಲ್ಲ. ಆದ್ದರಿಂದ, ಸಸಿಗಳನ್ನು ನೆಡಲು ಮುಂದಾಗಿದ್ದೇನೆ. ಜನರು ಈ ನಿಟ್ಟಿನಲ್ಲಿ ಯೋಚಿಸಿ, ಕೈಜೋಡಿಸಬೇಕು’ ಎಂದು ಹೇಳಿದ್ದಾರೆ.

‘ರಕ್ತನಿಧಿ ಕೇಂದ್ರಗಳು ಸಹ ಬಿಕ್ಕಟ್ಟು ಎದುರಿಸುತ್ತಿವೆ. ರಕ್ತದಾನ ಮಾಡುವಂತೆ ಜನರನ್ನು ಒತ್ತಾಯಿಸುತ್ತೇನೆ. ರಕ್ತದಾನ ಎಂದರೆ ಅಪಾಯದಲ್ಲಿರುವವರ ಜೀವ ಉಳಿಸಿ, ಅವರಿಗೆ ಹೊಸ ಜೀವನ ನೀಡುವುದು’ ಎಂದು ದೇವ್ ಅವರು ಹೇಳಿದರು.

ಘಟಾಲ್ ಕ್ಷೇತ್ರದಲ್ಲಿ ಮೇ 25ರಂದು ಮತದಾನ ನಡೆಯಲಿದೆ. ಖರಗ್‌ಪುರ–ಸಾದರ್ ಕ್ಷೇತ್ರದ ಶಾಸಕ, ಬಂಗಾಳಿ ನಟ ಹಿರಣ್ ಚಟರ್ಜಿ ಬಿಜೆಪಿಯಿಂದ, ಕಾಂಗ್ರೆಸ್ ಬೆಂಬಲಿತ ಸಿಪಿಐ ಅಭ್ಯರ್ಥಿಯಾಗಿ ತಪನ್ ಗಂಗೂಲಿ ಸ್ಪರ್ಧಿಸುತ್ತಿದ್ದಾರೆ.

ಎಡಪಂಥೀಯ ನಾಯಕಿಯರಿಗೆ ಬೆದರಿಕೆ: ಆರೋಪ

ತಿರುವನಂತಪುರ(ಪಿಟಿಐ): ಕಾಂಗ್ರೆಸ್ ಬೆಂಬಲಿತ ‘ಅರಾಜಕ ಗುಂಪೊಂದು’ ಎಡಪಕ್ಷಗಳ ಮಹಿಳಾ ರಾಜಕಾರಣಿಗಳನ್ನು ಸೈಬರ್ ಮೂಲಕ ಪೀಡಿಸುವ, ಬೆದರಿಸುವ ಕೆಲಸ ಮಾಡುತ್ತಿದೆ ಎಂದು ಸಿಪಿಎಂನ ಯುವ ವಿಭಾಗ ಡೆಮಾಕ್ರಟಿಕ್ ಯೂಥ್ ಫೆಡರೇಷನ್ ಆಫ್ ಇಂಡಿಯಾ (ಡಿವೈಎಫ್‌ಐ) ಆರೋಪಿಸಿದೆ.

‘ಸಿಪಿಎಂನ ಹಿರಿಯ ನಾಯಕಿ ಕೆ.ಕೆ. ಶೈಲಜಾ, ತಿರುವನಂತಪುರ ಮೇಯರ್ ಆರ್ಯಾ ರಾಜೇಂದ್ರನ್ ಅವರೊಂದಿಗೆ ಕಾಂಗ್ರೆಸ್ ಮತ್ತು ಯೂಥ್ ಕಾಂಗ್ರೆಸ್ ಬೆಂಬಲಿಗರು ಸೈಬರ್ ವೇದಿಕೆಗಳಲ್ಲಿ ಅಸಭ್ಯವಾಗಿ ವರ್ತಿಸಿದ್ದಾರೆ’ ಎಂದು ಡಿವೈಎಫ್‌ಐ ರಾಜ್ಯಸಭಾ ಸದಸ್ಯ ಎ.ಎ.ರಹೀಮ್ ಆರೋಪಿಸಿದ್ದಾರೆ.

ಮಣಿಪುರ: ಕುಕಿ- ಮೈತೇಯಿ ಸಮುದಾಯಗಳ ತೀರದ ಸಂಕಷ್ಟ

ವರುಷ ಕಳೆದರೂ ಮರಳದ ಹರುಷ

ಇಂಫಾಲ್/ ಚುರಚಾಂದಪುರ (ಮಣಿಪುರ)(ಪಿಟಿಐ): ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಸಂಘರ್ಷ ಹಾಗೂ ನಂತರದ ಬೆಳವಣಿಗೆಗಳಿಗೆ ಒಂದು ವರ್ಷವಾಗುತ್ತಿದೆ. ಆದರೆ, ಮೈತೇಯಿ–ಕುಕಿ ದಂಪತಿ ಪೈಕಿ ಹಲವರು ಆಯಾ ಸಮುದಾಯಗಳಿಗಾಗಿ ಸ್ಥಾಪಿಸಿರುವ ಪರಿಹಾರ ಕೇಂದ್ರಗಳಲ್ಲಿ ಗಂಡ–ಹೆಂಡತಿ ಪ್ರತ್ಯೇಕವಾಗಿ ವಾಸ ಮಾಡಬೇಕಾದ ಅನಿವಾರ್ಯ ಸ್ಥಿತಿಯೂ ಮುಂದುವರಿದಿದೆ.

ಸಂಘರ್ಷ ಶುರುವಾದಾಗಿನಿಂದ, ಮನಸುಗಳು ಒಡೆದಿವೆ. ಒಟ್ಟಿಗೆ ಬಾಳುತ್ತಿದ್ದವರು ಈಗ ತಮ್ಮ ಕುಟುಂಬಗಳಿಂದ ದೂರವಾಗಿ ಪ್ರತ್ಯೇಕ ವಾಸದ ಶಿಕ್ಷೆ ಅನುಭವಿಸಬೇಕಾಗಿದೆ. ಇಂಫಾಲ್ ಕಣಿವೆಯಲ್ಲಿ ಮೈತೇಯಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿದ್ದರೆ, ಕುಕಿ ಜನರು ಪರ್ವತ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ.

ಕಳೆದ ವರ್ಷ ಮೇ 3ರಂದು ಭುಗಿಲೆದ್ದ ಹಿಂಸಾಚಾರದಲ್ಲಿ 200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರೆ, ಸಾವಿರಾರು ಜನರು ತಮ್ಮ ನೆಲೆ ಕಳೆದುಕೊಂಡು ಪರಿತಪಿಸುತ್ತಿದ್ದಾರೆ. ಇಂತಹ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿರುವವರಲ್ಲಿ ಅಂತರ ಸಮುದಾಯ ವಿವಾಹ ಮಾಡಿಕೊಂಡಿರುವ ಜೋಡಿಗಳು ಮತ್ತೊಂದು ರೀತಿಯ ಸಮಸ್ಯೆಯ ಬೇಗುದಿಗೆ ಸಿಲುಕಿದ್ದಾರೆ.

ಕುಕಿ ಸಮುದಾಯಕ್ಕೆ ಸೇರಿದ ಐರೀನ್ ಹವೋಕಿಪ್ ಎಂಬ ಮಹಿಳೆ ಮದುವೆ ನಂತರ ಇಂಫಾಲ್‌ದಲ್ಲಿ ವಾಸಿಸುತ್ತಿದ್ದರು. ಸಂಘರ್ಷ, ಹಿಂಸಾಚಾರ ಕಾರಣದಿಂದಾಗಿ, 42 ವರ್ಷದ ಐರೀನ್ ಅವರು ಕಳೆದ ಒಂದು ವರ್ಷದಿಂದ ಕುಕಿ ಸಮುದಾಯ ಬಾಹುಳ್ಯವಿರುವ ಚುರಚಾಂದಪುರದಲ್ಲಿ ತಮ್ಮ ಪಾಲಕರೊಂದಿಗೆ ವಾಸಿಸುತ್ತಿದ್ದಾರೆ.



ಕುಕಿ ಮಹಿಳೆ ಮಿಜೋರಾಂನಲ್ಲಿ ತಮ್ಮ ಮಗುವನ್ನು ಭೇಟಿ ಮಾಡುತ್ತಾರೆ. ಮಕ್ಕಳೊಂದಿಗೆ ಇಂಫಾಲ್‌ನಲ್ಲಿ ವಾಸಿಸುವ ಪತಿ ತಿಂಗಳಿಗೊಮ್ಮೆ ಅವರನ್ನು ಮಿಜೋರಾಂಗೆ ಕರೆತರುತ್ತಾರೆ –ಪಿಟಿಐ ಚಿತ್ರ

ಒಗ್ಗಟ್ಟು ಸಾಧಿಸಲು ಸಂಕಲ್ಪ

ರಾಜ್ಯವನ್ನು ಸಂಘರ್ಷದಿಂದ ಮುಕ್ತ ಮಾಡುವುದು ಹಾಗೂ ರಾಜ್ಯದಲ್ಲಿ ಸಮುದಾಯಗಳ ನಡುವಿನ ಒಗ್ಗಟ್ಟು ಒಡೆಯುವ ಶಕ್ತಿಗಳ ವಿರುದ್ಧ ಒಟ್ಟಾಗುವ ಸಂಕಲ್ಪವನ್ನು ವಿವಿಧ ನಾಗರಿಕ ಸಂಘಟನೆಗಳು ಕೈಗೊಂಡಿವೆ.

ಮೈತೇಯಿ ಸಮುದಾಯದ ಸಶಸ್ತ್ರ ಗುಂಪುಗಳಾದ ಆರಂಬಾಯಿ ತೆಂಗೋಲ್ ಮತ್ತು ಯುಎನ್‌ಎಲ್‌ಎಫ್ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಗುರುವಾರ ನಿರ್ಧರಿಸಿವೆ.

ಸಿಒಸಿಒಎಂಐ ಎಂಬ ಮೈತೇಯಿ ಸಮುದಾಯದ ಮತ್ತೊಂದು ಗುಂಪು ಕೂಡ ಇಂಫಾಲ್‌ನ ಅರಮನೆ ಮೈದಾನದಲ್ಲಿ ಶುಕ್ರವಾರ ಕಾರ್ಯಕ್ರಮ ಆಯೋಜಿಸಿದೆ.

ಕುಕಿ ಜನರ ಸಂಘಟನೆಯಾದ ಐಟಿಎಲ್‌ಎಫ್, ಚುರಚಾಂದಪುರದಲ್ಲಿ ಶುಕ್ರವಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಿದೆ.

ಇನ್ನು, ಐರೀನ್ ಅವರ ಪತಿ, ಐದು ವರ್ಷದ ಪುತ್ರ ಹಾಗೂ 3 ವರ್ಷದ ಪುತ್ರಿ ಇಂಫಾಲ್‌ನಲ್ಲಿಯೇ ವಾಸ ಮಾಡುತ್ತಿರುವುದು ಪರಿಸ್ಥಿತಿಯ ಕ್ರೌರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

> **ತಿಂಗಳಲ್ಲಿ ಒಂದು ಬಾರಿ ನನ್ನ ಮಕ್ಕಳನ್ನು ಭೇಟಿ ಮಾಡುತ್ತೇನೆ. ಬದುಕುಳಿಯುವುದು ಹಾಗೂ ತಾಯಿಯ ಪ್ರೀತಿ ಇವೆರಡರ ಪೈಕಿ ಒಂದನ್ನು ನಾವು ಆಯ್ದುಕೊಳ್ಳಬೇಕಿದೆ**
> **ಐರೀನ್ ಹವೋಕಿಪ್**
> ಕುಕಿ ಮಹಿಳೆ

‘ನನ್ನ ಪತಿ ನಿರ್ಮಾಣ ಗುತ್ತಿಗೆದಾರ. ಬಿಷ್ಣುಪುರದಲ್ಲಿ ಪಕ್ಕದ ಮನೆಯೊಂದರ ನಿರ್ಮಾಣ ಕಾರ್ಯ ನಡೆಯುತ್ತಿದ್ದಾಗ ಅವರ ಪರಿಚಯವಾಯಿತು. ಪರಸ್ಪರ ಪ್ರೀತಿಸಲು ಆರಂಭಿಸಿದ ನಾವು, 2018ರಲ್ಲಿ ಮದುವೆಯಾದೆವು’ ಎಂದು ಹವೋಕಿಪ್ ಹೇಳುತ್ತಾರೆ.

ಬಿಷ್ಣುಪುರ, ಇಂಫಾಲ್ ಮತ್ತು ಚುರಚಾಂದಪುರ ನಡುವೆ ಇದೆ. ಸಂಘರ್ಷ ಭುಗಿಲೇಳುವ ಮೊದಲು ಈ ಪಟ್ಟಣದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ಜನರು ಒಟ್ಟಿಗೆ ಬದುಕುತ್ತಿದ್ದರು. ಈಗ ಪರಿಸ್ಥಿತಿ ಮೊದಲಿನಂತಿಲ್ಲ.

‘ನನ್ನ ಮಕ್ಕಳು ಪತಿ ಜೊತೆ ಇದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಚುರಚಾಂದಪುರದಲ್ಲಿ ಮಕ್ಕಳು ಸುರಕ್ಷಿತವಾಗಿ ಇರಲು ಸಾಧ್ಯವೇ ಇಲ್ಲ ಎಂಬ ಆತಂಕ ಇದೆ. ಹೀಗಾಗಿ, ಮಿಜೋರಾಂಗೆ ಹೋಗುತ್ತೇನೆ. ಪತಿ ಮಕ್ಕಳೊಂದಿಗೆ ಅಲ್ಲಿಗೆ ಬರುತ್ತಾರೆ. ಅಲ್ಲಿ ಕುಟುಂಬದ ಸದಸ್ಯರು ಪರಸ್ಪರ ಭೇಟಿ ಮಾಡುತ್ತೇವೆ’ ಎಂದು ಐರೀನ್ ವಿವರಿಸುತ್ತಾರೆ.

ಸಂಘರ್ಷಕ್ಕೆ ನಲುಗಿರುವ ಇಂತಹ ಹಲವಾರು ಕುಟುಂಬಗಳು ನಮಗೆ ಮಣಿಪುರದಲ್ಲಿ ಸಿಗುತ್ತವೆ. ಅವರು ಎದುರಿಸುತ್ತಿರುವ ಸಮಸ್ಯೆಗಳು ಬೇರೆಬೇರೆ ಅಷ್ಟೆ.

ಟಿ20 ವಿಶ್ವಕಪ್ ತಂಡಕ್ಕೆ ಆಯ್ಕೆ– ಅಜಿತ್ ಅಗರಕರ್ ಸಮರ್ಥನೆ

‘ತಂಡದಲ್ಲಿ ಹಾರ್ದಿಕ್‌ಗೆ ಮಹತ್ವದ ಪಾತ್ರ’

ಮುಂಬೈ (ಪಿಟಿಐ): ‘ಹಾರ್ದಿಕ್ ಪಾಂಡ್ಯ ಅವರು ಭಾರತದ ಟಿ20 ವಿಶ್ವಕಪ್ ಅಭಿಯಾನದಲ್ಲಿ ಪ್ರಮುಖ ಭಾಗವಾಗಿದ್ದಾರೆ’ ಎನ್ನುವ ಮೂಲಕ ಮೂಲಕ ಬಿಸಿಸಿಐ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರು ಅನುಭವಿ ಆಲ್‌ರೌಂಡರ್ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಜೂನ್ ತಿಂಗಳಿನಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ಗೆ ಭಾರತ ತಂಡವನ್ನು ಈ ವಾರದ ಆರಂಭದಲ್ಲಿ ಪ್ರಕಟಿಸ ಲಾಗಿದ್ದು, ಪಾಂಡ್ಯ ಅವರನ್ನು ಉಪನಾಯಕನನ್ನಾಗಿ ನೇಮಕ ಮಾಡಲಾಗಿದೆ.

ಐಪಿಎಲ್‌ನಲ್ಲಿ ಈ ಬಾರಿ ಮುಂಬೈ ಇಂಡಿಯನ್ಸ್ ನಾಯಕನಾಗಿ ಪಾಂಡ್ಯ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಅವರು ವೈಯಕ್ತಿವಾಗಿಯೂ ಉತ್ತಮ ಪ್ರದರ್ಶನ ನೀಡಿಲ್ಲ. ಕಳೆದ ವರ್ಷದ ಕೊನೆಯಲ್ಲಿ ಮುಂಬೈ ಇಂಡಿಯನ್ಸ್‌ಗೆ ಸೇರ್ಪಡೆಗೊಂಡ ನಂತರ ಅವರನ್ನು ರೋಹಿತ್ ಶರ್ಮಾ ಸ್ಥಾನದಲ್ಲಿ ನಾಯಕನನ್ನಾಗಿ ನೇಮಕ ಮಾಡಿದ್ದು ಚರ್ಚೆಗೆ ಗ್ರಾಸವಾಗಿತ್ತು. ಕ್ರೀಡಾಂಗಣದಲ್ಲಿ ಅವರು ಪ್ರೇಕ್ಷಕರಿಂದ ನಿಂದನೆಗಳನ್ನು ಎದುರಿಸಬೇಕಾಯಿತು.

‘ಅವರು ದೀರ್ಘ ವಿರಾಮದ ನಂತರ ಆಡುತ್ತಿದ್ದಾರೆ. ಅವರು ಮುಂದೆ ಪೂರ್ಣ ಲಯಕ್ಕೆ ಮರಳುವ ವಿಶ್ವಾಸವಿದೆ’ ಎಂದು ಅಗರಕರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ತಂಡಕ್ಕೆ ಅವರ ಸೇರ್ಪಡೆಯಿಂದ ಸಮತೋಲನ ಸಿಗಲಿದೆ. ಕ್ರಿಕೆಟರ್ ಆಗಿ, ಅದರಲ್ಲೂ ಈಗ ಅವರು ಮಾಡುತ್ತಿರುವ ರೀತಿ ನೋಡಿದರೆ, ಅವರು ಈಗ ವಹಿಸುವ ಪಾತ್ರಕ್ಕೆ ಪರ್ಯಾಯವಿದೆ ಎಂದು ನನಗೇನೂ ಅನಿಸುತ್ತಿಲ್ಲ’ ಎಂದು ವಿಶ್ಲೇಷಿಸಿದರು.

ಅವರ ಸೇರ್ಪಡೆಯಿಂದ ರೋಹಿತ್ ಅವರಿಗೆ ವಿವಿಧ ಸಂಯೋಜನೆಗಳಿಗೆ ಆಯ್ಕೆ ಒದಗಲಿದೆ ಎಂದೂ ಭಾರತ ತಂಡದ ಮಾಜಿ ಆಲ್‌ರೌಂಡರ್ ಹೇಳಿದರು.

16 ತಿಂಗಳ ಹಿಂದೆ ಅಪಘಾತದಲ್ಲಿ ಗಂಭೀರ ಗಾಯಗೊಂಡು, ಐಪಿಎಲ್ ವೇಳೆ ಆಟಕ್ಕೆ ಮರಳಿದ್ದ ರಿಷಭ್ ಪಂತ್ ಅವರಿಗೂ ಇದು ಪುನರಾಗಮನದ ನಂತರ ಮೊದಲ ಟೂರ್ನಿ ಆಗಲಿದೆ. ಪಂತ್ ಅವರಿಗಾಗಿ ಕೆ.ಎಲ್.ರಾಹುಲ್ ದಾರಿಮಾಡಿ ಕೊಟ್ಟಿದ್ದಾರೆ. ‘ಕೆ.ಎಲ್. ಅಮೋಘ ಆಟಗಾರನೆಂಬುದು ಎಲ್ಲರಿಗೂ ತಿಳಿದ ಸಂಗತಿಯೇ. ನಮಗೆ ಮಧ್ಯಮ ಕ್ರಮಾಂಕದಲ್ಲಿ ಆಡುವ ಆಟಗಾರನ ಅಗತ್ಯವಿತ್ತು. ಡೆಲ್ಲಿ ತಂಡಕ್ಕೆ ರಿಷಭ್ ಐದನೇ ಕ್ರಮಾಂಕದಲ್ಲಿ ಆಡುತ್ತಿದ್ದಾರೆ’ ಎಂದರು.

ಭಾರತ ವಿಶ್ವಕಪ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಜೂನ್ 5ರಂದು ನ್ಯೂಯಾರ್ಕ್‌ನಲ್ಲಿ ಐರ್ಲೆಂಡ್ ವಿರುದ್ಧ ಆಡಲಿದೆ.



ಪತ್ರಿಕಾಗೋಷ್ಠಿಯಲ್ಲಿ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಬಿಸಿಸಿಐ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ –ಎಎಫ್‌ಪಿ ಚಿತ್ರ

‘ರಿಂಕು ಸಿಂಗ್ ಕೈಬಿಟ್ಟಿದ್ದು ಕಠಿಣ ನಿರ್ಧಾರ’

ಪ್ರತಿಭಾನ್ವಿತ ಬ್ಯಾಟರ್, 26 ವರ್ಷ ವಯಸ್ಸಿನ ರಿಂಕು ಸಿಂಗ್ ಅವರನ್ನು 15ರ ಪಟ್ಟಿಯಿಂದ ಕೈಬಿಡುವ ನಿರ್ಧಾರ ಕಠಿಣವಾಗಿತ್ತು ಎಂದು ಅಜಿತ್ ಅಗರಕರ್ ಒಪ್ಪಿಕೊಂಡರು.

‘ರಿಂಕು ಅವರ ಸೇರ್ಪಡೆ ವಿಷಯಕ್ಕೆ ಸಂಬಂಧಿಸಿ ಗಹನವಾದ ಚರ್ಚೆಯಾಯಿತು. ಶುಭಮನ್ ಗಿಲ್ ಅವರ ಸೇರ್ಪಡೆ ವಿಷಯದಲ್ಲೂ ಸಹ. ರೋಹಿತ್ ಅವರಿಗೆ ಹೆಚ್ಚಿನ ಆಯ್ಕೆ ನೀಡಲು ಕೆಲವು ಸ್ಪಿನ್ನರ್‌ಗಳಿಗೆ ಅವಕಾಶ ನೀಡಲಾಯಿತು. ಇದರಲ್ಲಿ ರಿಂಕು ಅವರದೇನೂ ತಪ್ಪಿಲ್ಲ. ತಂಡದ ಸಂಯೋಜನೆ ವೇಳೆ ಅವರಿಗೆ ಅವಕಾಶವಾಗಿಲ್ಲ. ನಮಗೆ ಹೆಚ್ಚುವರಿ ಬೌಲರ್ ಅಗತ್ಯವಿತ್ತು. ತಂಡಕ್ಕೆ 15 ಮಂದಿಯನ್ನಷ್ಟೇ ಆಯ್ಕೆ ಮಾಡಲು ಸಾಧ್ಯ’ ಎಂದರು.

ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಪರ ಆಡುವ, ಉತ್ತರ ಪ್ರದೇಶದ ಅಲೀಗಢದ ರಿಂಕು ಸಿಂಗ್, ಭಾರತ ತಂಡಕ್ಕೆ ಟಿ20 ಪಂದ್ಯಗಳಲ್ಲಿ 89ರ ಸರಾಸರಿಯಲ್ಲಿ 356 ರನ್ ಗಳಿಸಿದ್ದಾರೆ. ಯಶಸ್ಸು ಗಳಿಸಿದರು ಅವರನ್ನು ಕೈಬಿಟ್ಟಿದ್ದು ಸರಿಯಲ್ಲ ಎಂಬ ಚರ್ಚೆಯಾಗಿದೆ.

‘ನಾಲ್ಕು ಸ್ಪಿನ್ನರ್‌ಗಳನ್ನು ಬಯಸಿದ್ದೆವು..’

ಮುಂಬೈ (ಪಿಟಿಐ): ‘ಅಮೆರಿಕ, ವೆಸ್ಟ್ ಇಂಡೀಸ್‌ನಲ್ಲಿ ಮುಂದಿನ ತಿಂಗಳು ನಡೆಯುವ ಟಿ20 ವಿಶ್ವಕಪ್‌ಗೆ ತಂಡದಲ್ಲಿ ನಾಲ್ಕು ಮಂದಿ ಸ್ಪಿನ್ನರ್‌ಗಳಿರಬೇಕು ಎಂಬ ಬಗ್ಗೆ ತಂಡದ ಚಿಂತಕರ ಚಾವಡಿ ಸ್ಪಷ್ಟ ನಿಲುವು ಹೊಂದಿತ್ತು’ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಗುರುವಾರ ಇಲ್ಲಿ ಹೇಳಿದರು.

ತಂಡದ ಆಯ್ಕೆಯಲ್ಲಿ ಐಪಿಎಲ್ ಪಾತ್ರ ಸೀಮಿತವಾಗಿತ್ತು ಎಂದೂ ಹೇಳಿದರು.

15 ಮಂದಿಯ ತಂಡದಲ್ಲಿ ಮೂವರು ವೇಗಿಗಳು ಮತ್ತು ನಾಲ್ವರು ಸ್ಪಿನ್ನರ್‌ಗಳಿಗೆ ಅವಕಾಶ ನೀಡಲಾಗಿದೆ. ಈ ಬಗ್ಗೆ ಭಿನ್ನ ಅಭಿಪ್ರಾಯಗಳು ಕೇಳಿಬಂದಿವೆ. ಕುಲದೀಪ್ ಯಾದವ್ ಮತ್ತು ಯಜುವೇಂದ್ರ ಚಾಹಲ್ ರಿಸ್ಟ್ ಸ್ಪಿನ್ನರ್‌ಗಳಾದರೆ, ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಅವರು ಎಡಗೈ ಸ್ಪಿನ್ ಆಲ್‌ರೌಂಡರ್‌ಗಳಾಗಿದ್ದಾರೆ.

‘ನಾನು ಈ ಬಗ್ಗೆ ದೀರ್ಘ ವಿವರಣೆಗೆ ಹೋಗುವುದಿಲ್ಲ. ನಾಲ್ಕು ಮಂದಿ ಸ್ಪಿನ್ನರ್‌ಗಳಿರಬೇಕೆಂದು ನಾವು ಬಯಸಿದ್ದೆವು. ಇದಕ್ಕೆ ಕಾರಣವನ್ನು ಈಗ ಬಹಿರಂಗಪಡಿಸಲಾಗದು. ಇಬ್ಬರು ಆಲ್‌ರೌಂಡರ್‌ಗಳು. ಇಬ್ಬರು ಪರಿಣತರು. ಇದು ತಂಡಕ್ಕೆ ಸಂತುಲನ ನೀಡುತ್ತದೆ’ ಎಂದರು.





ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಗುಜರಾತ್ ಟೈಟನ್ಸ್ ವಿರುದ್ಧ ಪಂದ್ಯಕ್ಕೆ ಪೂರ್ವಭಾವಿಯಾಗಿ ಗುರುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ ಬ್ಯಾಟಿಂಗ್ ತಾಲೀಮು ನಡೆಸಿದರೆ, ವೇಗಿ ಮೊಹಮ್ಮದ್ ಸಿರಾಜ್ ಬೌಲಿಂಗ್ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ದ.ಆಫ್ರಿಕಾ, ಅಮೆರಿಕ ತಂಡಕ್ಕೆ ಅಮುಲ್ ಪ್ರಾಯೋಜಕತ್ವ

ನವದೆಹಲಿ (ಪಿಟಿಐ): ಭಾರತದ ಡೇರಿ ಉದ್ಯಮದ ದಿಗ್ಗಜ ಅಮುಲ್, ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಪ್ರಾಯೋಜಕತ್ವ ವಹಿಸಲಿದೆ ಎಂದು ಆಯಾ ದೇಶಗಳ ಕ್ರಿಕೆಟ್ ಮಂಡಳಿಗಳು ಗುರುವಾರ ಪ್ರಕಟಿಸಿವೆ.

ಜಂಟಿ ಆತಿಥ್ಯ ವಹಿಸುತ್ತಿರುವ ಅಮೆರಿಕ ಮೊದಲ ಬಾರಿ ಟೂರ್ನಿಯಲ್ಲಿ ಆಡುತ್ತಿದೆ. ಅಮೆರಿಕದಲ್ಲಿ ಹೆಚ್ಚಿನ ಪಂದ್ಯಗಳು ನಡೆಯಲಿವೆ. ಕೆಲವು ಪಂದ್ಯಗಳು, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿವೆ.

ವಿದೇಶಿ ತಂಡಗಳಿಗೆ ಅಮುಲ್ ಪ್ರಾಯೋಜಕತ್ವ ನೀಡುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ, ನೆದರ್ಲೆಂಡ್ಸ್, ದಕ್ಷಿಣ ಆಫ್ರಿಕಾ ಮತ್ತು ಅಫ್ಗಾನಿಸ್ತಾನ ತಂಡಗಳ ಪ್ರಾಯೋಜಕತ್ವ ವಹಿಸಿತ್ತು.

ಅಮುಲ್ ಹಾಲು, ಈಗ ಅಮೆರಿಕದಲ್ಲೂ ಮಾರುಕಟ್ಟೆ ಕಂಡುಕೊಂಡಿದೆ.

‘ಅಮುಲ್ 2019ರ ಏಕದಿನ ಸರಣಿಯಿಂದಲೂ ದಕ್ಷಿಣ ಆಫ್ರಿಕಾ ತಂಡದ ಜೊತೆ ಸಂಬಂಧ ಹೊಂದಿದೆ. ಈಗ ಈ ಬಾಂಧವ್ಯ ಮತ್ತಷ್ಟು ಬಲಗೊಳ್ಳುತ್ತಿದೆ. ಅವರಿಗೆ ಶುಭಹಾರೈಸುತ್ತಿದ್ದೇವೆ’ ಎಂದು ಅಮುಲ್ ಆಡಳಿತ ನಿರ್ದೇಶಕ ಜೀವನ್ ಮೆಹ್ತಾ ತಿಳಿಸಿದರು. ಅಮೆರಿಕ ತಂಡಕ್ಕೂ ಅವರು ಶುಭಹಾರೈಸಿದರು.

ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚೀನಾ ವಿರುದ್ಧ ಸೋಲು

ಥಾಮಸ್ ಕಪ್: ಹೊರಬಿದ್ದ ಭಾರತ

ಚೆಂಗ್ಡು (ಚೀನಾ) (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ಎದುರು ಗುರುವಾರ 1–3 ಅಂತರದಲ್ಲಿ ಸೋಲನುಭವಿಸಿತು.

ವಿಶ್ವದ 9ನೇ ಕ್ರಮಾಂಕದ ಎಚ್‌.ಎಸ್‌. ಪ್ರಣಯ್, 3ನೇ ಕ್ರಮಾಂಕದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಹಾಗೂ ಧ್ರುವ್ ಕಪಿಲ– ಸಾಯಿ ಪ್ರತೀಕ್ ತಮ್ಮ ಪಂದ್ಯಗಳಲ್ಲಿ ಮುಗ್ಗರಿಸಿದರು. ಲಕ್ಷ್ಯ ಸೇನ್ ಮಾತ್ರ ಗೆಲುವು ಸಾಧಿಸಿದರು.


ಭಾರತ ತಂಡ ‘ಸಿ’ ಗುಂಪಿನ ಕೊನೆಯ ಪಂದ್ಯದಲ್ಲಿ ಇಂಡೊನೇಷ್ಯಾ ಎದುರು ಬುಧವಾರ 1–4 ಅಂತರದಿಂದ ಸೋತು ಎರಡನೇ ಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸಿತ್ತು. ಈ ಹಿಂದಿನ ಆವೃತ್ತಿಯ ಫೈನಲ್‌ನಲ್ಲಿ ಭಾರತ 3–0 ಯಿಂದ ಇಂಡೊನೇಷ್ಯಾ ಮೇಲೆ ಜಯಗಳಿಸಿ ಮೊದಲ ಬಾರಿ ಪ್ರಶಸ್ತಿ ಗೆದ್ದಿತ್ತು.

66 ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಎಚ್‌.ಎಸ್‌. ಪ್ರಣಯ್ 21-15, 11-21, 14-21 ಅಂತರದಲ್ಲಿ 2ನೇ ಕ್ರಮಾಂಕದ ಶಿ ಯು ಕ್ವಿ ವಿರುದ್ಧ ಸೋಲನುಭವಿಸಿದರು. ಇದರೊಂದಿಗೆ ಚೀನಾ 1–0 ಮುನ್ನಡೆ ಸಾಧಿಸಿತು.

ಸಾತ್ವಿಕ್ ಮತ್ತು ಚಿರಾಗ್ ಜೋಡಿ 15-21, 21-11, 12-21 ಅಂತರದಲ್ಲಿ ವಿಶ್ವದ ಅಗ್ರಮಾನ್ಯ ಜೋಡಿ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ ಸೋಲನುಭವಿಸಿತು. 22 ವರ್ಷದ ಲಕ್ಷ್ಯ ಸೇನ್ ಅವರು 13-21, 21-8, 21-14 ಅಂತರದಲ್ಲಿ ವಿಶ್ವದ ಆರನೇ ಕ್ರಮಾಂಕದ ಲಿ ಶಿ ಫೆಂಗ್ ವಿರುದ್ಧ ಜಯ ಸಾಧಿಸಿದರು.

ಧ್ರುವ್ ಮತ್ತು ಸಾಯಿ ಜೋಡಿ 10-21, 10-21 ಅಂತರದಲ್ಲಿ ವಿಶ್ವದ 11ನೇ ಕ್ರಮಾಂಕದ ಜೋಡಿ ರೆನ್ ಕ್ಸಿಯಾಂಗ್ ಯು ಮತ್ತು ಹೆ ಜಿ ಟಿಂಗ್ ವಿರುದ್ಧ ಸೋಲುವುದರೊಂದಿಗೆ ಭಾರತದ ಭರವಸೆಯನ್ನು ಹುಸಿಗೊಳಿಸಿತು.

‘ಕಳೆದ ರಾತ್ರಿ (ಇಂಡೊನೇಷ್ಯಾ ವಿರುದ್ಧದ ಸೋಲಿನ ನಂತರ) ಎಲ್ಲರೂ ತುಂಬಾ ನಿರಾಸೆಗೊಂಡಿದ್ದರು. ಆದರೆ, 13 ರಿಂದ 14 ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ತವರಿನ ತಂಡದ ವಿರುದ್ಧ ದೊಡ್ಡ ಪಂದ್ಯ ಆಡುವುದು ಸವಾಲಾಗಿತ್ತು’ ಎಂದು ಪಂದ್ಯದ ಬಳಿಕ ಪ್ರಣಯ್ ತಿಳಿಸಿದರು.



ಭಾರತದ ಲಕ್ಷ್ಯ ಸೇನ್ –ಎಪಿ ಚಿತ್ರ

ಉಬರ್ ಕಪ್: ಜಪಾನ್‌ಗೆ ಮಣಿದ ಭಾರತ

ಚೆಂಗ್ಡು (ಚೀನಾ) (ಪಿಟಿಐ): ಯುವ ಮತ್ತು ಅನನುಭವಿ ಆಟಗಾರ್ತಿಯರಿದ್ದ ಭಾರತ ತಂಡ ಉಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗುರುವಾರ ಪ್ರಬಲ ಜಪಾನ್ ಎದುರು 0-3 ಅಂತರದಲ್ಲಿ ಸೋಲನುಭವಿಸಿತು.

ಅನುಭವಿ ಪಿ.ವಿ.ಸಿಂಧು ಅವರ ಗೈರುಹಾಜರಿಯಲ್ಲಿ, ಗುಂಪು ಹಂತದಲ್ಲಿ ಕೆನಡಾ ಮತ್ತು ಸಿಂಗಪುರ ವಿರುದ್ಧ ಎರಡು ಗೆಲುವುಗಳೊಂದಿಗೆ ಭಾರತ ನಾಕೌಟ್‌ಗೆ ಅರ್ಹತೆ ಪಡೆದಿತ್ತು. ಆದರೆ ಗುಂಪು ಹಂತದ ಅಂತಿಮ ಲೀಗ್ ಪಂದ್ಯದಲ್ಲಿ ಬಲಿಷ್ಠ ಚೀನಾ ವಿರುದ್ಧ 0-5 ಸೋಲು ಅನುಭವಿಸಿತ್ತು.

ಗುರುವಾರ ನಡೆದ ಪಂದ್ಯದಲ್ಲಿ ಭಾರತ, ಜಪಾನ್ ವಿರುದ್ಧ ಹೋರಾಟ ನಡೆಸಿತು. ಅಶ್ಮಿತಾ ಚಾಲಿಹಾ ಮತ್ತು ಇಶಾರಾಣಿ ಬರೂವಾ ತಮ್ಮ ಸಿಂಗಲ್ಸ್ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದರು. ಅಶ್ಮಿತಾ 10-21, 22-20, 15-21 ಅಂತರದಲ್ಲಿ ಅಯಾ ಒಹೊರಿ ಎದುರು ಸೋಲನುಭವಿಸಿದರು. ಇಶಾರಾಣಿ 15-21, 12-21 ಅಂತರದಲ್ಲಿ ನೊಜೊಮಿ ಒಕುಹರಾ ವಿರುದ್ಧ ಸೋತರು.

ರಾಷ್ಟ್ರೀಯ ಚಾಂಪಿಯನ್ ಪ್ರಿಯಾ ಕೊಂಜೆಂಗ್ಬಾಮ್ ಮತ್ತು ಶ್ರುತಿ ಮಿಶ್ರಾ ಅವರು 8-21, 9-21ರಲ್ಲಿ ನಮಿ ಮತ್ಸುಯಾಮಾ ಮತ್ತು ಚಿಹಾರು ಶಿಡಾ ವಿರುದ್ಧ ಸೋಲನುಭವಿಸಿದರು.

ಕೆನಡಾ ತಂಡದಲ್ಲಿ ಭಾರತ, ಪಾಕಿಸ್ತಾನ ಮೂಲದವರೇ ಹೆಚ್ಚು

ಟೊರೆಂಟೊ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪದಾರ್ಪಣೆ ಮಾಡುತ್ತಿರುವ ಕೆನಡಾ ತಂಡಕ್ಕೆ ಪಾಕಿಸ್ತಾನ ಮೂಲದ ಆಲ್‌ರೌಂಡರ್ ಸಾದ್ ಬಿನ್ ಜಾಫರ್ ನಾಯಕರಾಗಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ಮೂಲದ ಆಟಗಾರರನ್ನು ಒಳಗೊಂಡಿರುವ ಕೆನಡಾ ತಂಡ 'ಎ' ಗುಂಪಿನಲ್ಲಿ ಅಮೆರಿಕ, ಭಾರತ, ಪಾಕಿಸ್ತಾನ ಮತ್ತು ಐರ್ಲೆಂಡ್ ತಂಡಗಳೊಂದಿಗೆ ಸ್ಥಾನ ಪಡೆದಿದೆ.

ಎಡಗೈ ಸ್ಪಿನ್ನರ್ ಆಗಿರುವ 37 ವರ್ಷದ ಸಾದ್, 38 ಟಿ20 ಪಂದ್ಯಗಳನ್ನು ಆಡಿದ್ದಾರೆ. ಕೆನಡಾ ತಂಡದ ಅತ್ಯಂತ ಅನುಭವಿ ಆಟಗಾರರಲ್ಲಿ ಒಬ್ಬರು. ಅಗ್ರ ಕ್ರಮಾಂಕದ ಬ್ಯಾಟರ್ ಆರೋನ್ ಜಾನ್ಸನ್ ಮತ್ತು ಎಡಗೈ ವೇಗಿ ಕಲೀಮ್ ಸನಾ ಅಂತಿಮ ಹನ್ನೊಂದರ ಬಳಗದಲ್ಲಿ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ.

ಸಂಕ್ಷಿಪ್ತ ಸುದ್ದಿ

ಏಷ್ಯನ್ ಬಾಕ್ಸಿಂಗ್: ನಾಲ್ವರು ಸೆಮಿಗೆ

ಅಸ್ತಾನಾ (ಕಜಕಸ್ತಾನ), (ಪಿಟಿಐ): ಭಾರತದ ಜಾದುಮಣಿ ಸಿಂಗ್, ನಿಖಿಲ್, ಅಜಯ್ ಕುಮಾರ್ ಮತ್ತು ಅಂಕುಶ್ ಅವರು ಗುರುವಾರ ಎಎಸ್‌ಬಿಸಿ ಏಷ್ಯನ್ 22 ವರ್ಷದೊಳಗಿನವರ ಮತ್ತು ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನೊಡನೆ ಸೆಮಿಫೈನಲ್‌ಗೆ ಮುನ್ನಡೆದರು.

51 ಕೆ.ಜಿ ವಿಭಾಗದ ಕ್ವಾಟರ್ ಫೈನಲ್‌ನಲ್ಲಿ ಜಾದುಮಣಿ 5–0ಯಿಂದ ಭೂತಾನ್‌ನ ಫುಂಟ್‌ಶೋ ಕಿನ್ಲೆ ಅವರನ್ನು ಮಣಿಸಿದರು. ನಿಖಿಲ್ ಅವರು 57 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಅದೇ ರೀತಿಯ ಪ್ರಾಬಲ್ಯ ಪ್ರದರ್ಶಿಸಿದರು. ಅವರು ಉಜ್ಬೇಕಿಸ್ತಾನದ ಭಕ್ತಿಯೊರೊವ್ ಆಯುಬ್‌ಖೋನ್ ಅವರನ್ನು ಸೋಲಿಸಿದರು. ಅಜಯ್ (63.5 ಕೆ.ಜಿ) ಮತ್ತು ಅಂಕುಶ್ (71 ಕೆ.ಜಿ) ತಮ್ಮ ವಿಭಾಗಗಳಲ್ಲಿ ಅಂತಿಮ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಬ್ರಿಜ್ ಪುತ್ರನಿಗೆ ಬಿಜೆಪಿ ಟಿಕೆಟ್: ಸಾಕ್ಷಿ ಆಕ್ರೋಶ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಕೈಸರ್‌ಗಂಜ್ ಕ್ಷೇತ್ರದಿಂದ ಭಾರತ ಕುಸ್ತಿ ಸಂಸ್ಥೆ ಮಾಜಿ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಪುತ್ರ ಕರಣ್‌ಗೆ ಟಿಕೆಟ್ ನೀಡಿರುವುದಕ್ಕೆ ಒಲಿಂಪಿಕ್ ಕಂಚಿನ ಪದಕ ವಿಜೇತೆ ಸಾಕ್ಷಿ ಮಲಿಕ್ ಗುರುವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಬ್ರಿಜ್ ಅವರು ಕುಸ್ತಿ ಸಂಸ್ಥೆ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಸಾಕ್ಷಿ ಸೇರಿದಂತೆ ಅಗ್ರ ಕುಸ್ತಿಪಟುಗಳು ಧರಣಿ ನಡೆಸಿದ್ದರು.

ಡೆವೊನ್‌ಗೆ ನಿಷೇಧ

ಲಂಡನ್ (ಎಎಫ್‌ಪಿ): ಭ್ರಷ್ಟಾಚಾರ ವಿರೋಧಿ ನಿಯಮಗಳ ಏಳು ಉಲ್ಲಂಘನೆಗಳನ್ನು ಒಪ್ಪಿಕೊಂಡ ಬಳಿಕ ವೆಸ್ಟ್ ಇಂಡೀಸ್ ಬ್ಯಾಟರ್ ಡೆವೊನ್ ಥಾಮಸ್ ಅವರನ್ನು ಐದು ವರ್ಷಗಳ ಕಾಲ ಕ್ರಿಕೆಟ್‌ನಿಂದ ನಿಷೇಧಿಸಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಗುರುವಾರ ಪ್ರಕಟಿಸಿದೆ.